ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಬದಲಾವಣೆ

(ಕಂಪ್ಲಿಯ ಹಕ್ಕಿಪಿಕ್ಕಿ ಕಾಲೋನಿಯನ್ನು ಅನುಲಕ್ಷಿಸಿ)

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿರುವ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ನಾಗೇಶ ಎಂ.

R.NO.KUTS/00527

ಮಾರ್ಗದರ್ಶಕರು

ಡಾ. ಚಲುವರಾಜು

ಸಹಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೧೩

ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಬದಲಾವಣೆ

(ಕಂಪ್ಲಿಯ ಹಕ್ಕಿಪಿಕ್ಕಿ ಕಾಲೋನಿಯನ್ನು ಅನುಲಕ್ಷಿಸಿ)

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿರುವ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ನಾಗೇಶ ಎಂ.

ಮಾರ್ಗದರ್ಶಕರು

ಡಾ. ಚಲುವರಾಜು

ಸಹಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೩

ಪ್ರಮಾಣ ಪತ್ರ

ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಬದಲಾವಣೆ (ಕಂಪ್ಲಿಯ ಹಕ್ಕಿಪಿಕ್ಕಿ ಕಾಲೋನಿಯನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು **ಡಾ. ಚಲುವರಾಜು** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :30-07-2013
ಸ್ಥಳ : ವಿದ್ಯಾರಣ್ಯ

(ನಾಗೇಶ ಎಂ.)
ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಬದಲಾವಣೆ (ಕಂಪ್ಲಿಯ ಹಕ್ಕಿಪಿಕ್ಕಿ ಕಾಲೋನಿಯನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ **ನಾಗೇಶ ಎಂ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.


ದಿನಾಂಕ : 30-07-2013
ಸ್ಥಳ : ವಿದ್ಯಾರಣ್ಯ

(ಡಾ ಚಲುವರಾಜು)
ಸಹಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಭಾರತ

ಹಕ್ಕಿಪಿಕ್ಕಿ ಬುಡಕಟ್ಟಿನವರು ಕರ್ನಾಟಕಕ್ಕೆ
ವಲಸೆ ಬಂದ ಮಾರ್ಗ



೧. ವಿಂದ್ಯಪರ್ವತ

೨. ರಾಜಸ್ತಾನ

೩. ಗುಜರಾತ

೪. ಮಹಾರಾಷ್ಟ್ರ

- ಸೊಲ್ಲಾಪೂರ
- ಕೊಲ್ಹಾಪುರ
- ಸಾಂಗ್ಲಿ

೫. ಆಂಧ್ರಪ್ರದೇಶ

- ಕರ್ನೂಲ

೬. ಕರ್ನಾಟಕ

ಕರ್ನಾಟಕ

ಹಕ್ಕಿಪಿಕ್ಕಿ ಸಮುದಾಯದ ನೆಲೆಗಳು



ಹೊಸಪೇಟೆ

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನ ನಕ್ಷೆ

ಕ್ಷೇತ್ರಕಾರ್ಯದ ಹಕ್ಕಿಪಿಕ್ಕಿ ಸಮುದಾಯದ ನೆಲೆಗಳು





ಕಂಪ್ಲಿ ಪಟ್ಟಣದ ನಾಕಾಶೆ, ೧೨ನೇ ವಾರ್ಡ್, ಹಕ್ಕಿಪಿಕ್ಕಿ ಕಾಲೋನಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧. ಅಧ್ಯಯನದ ವ್ಯಾಪ್ತಿ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವಿಧಾನ

೧.೪. ಅಧ್ಯಯನದ ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ

ಮಾನವ ಜನಾಂಗದ ಚರಿತ್ರೆಯು ಪುರಾತನವಾದುದು. ಪೂರ್ವದಲ್ಲಿ ಆದಿಮಸ್ಥಿತಿಯಲ್ಲಿದ್ದ ಮಾನವನು ಕಾಲಾಂತರದಲ್ಲಿ ನಾಗರೀಕತೆಯನ್ನು ಮೈಗೂಡಿಸಿಕೊಂಡು ಆಧುನಿಕ ಸ್ಥಿತಿಗೆ ಬಂದಿದ್ದಾನೆ. ಅಲೆಮಾರಿಯಾಗಿದ್ದ ಆದಿಮಾನವನು ಬೇಟೆಯನ್ನರಸುತ್ತಾ, ಕಾಡುಮೇಡು ಅಲೆಯುತ್ತಿದ್ದು ಕಾಲಕ್ರಮೇಣ ವಾಗಿ ಒಂದುಕಡೆ ನೆಲೆನಿಲ್ಲತೊಡಗಿದನು. ಮಾನವನು ಭೌತಿಕವಾಗಿ ವಿಕಾಸವಾದಂತೆ ಆತನ ಭೌದ್ಧಿಕಮಟ್ಟ ದಲ್ಲಿ ಕೆಲವೊಂದು ಪರಿವರ್ತನೆಗಳು ಕಂಡುಬಂದವು. ಪರಿಣಾಮವಾಗಿ ಕಾಡುಪ್ರಾಣಿಗಳನ್ನು ಪಳಗಿಸಿ ಸಾಕಿಸಲಹುವುದರ ಜೊತೆಗೆ ಬದುಕಿನ ಹೊಸನೆಲೆಯನ್ನು ಕಂಡುಕೊಂಡನು. ಇಂದು ಭಾರತವು ಸಾವಿರಾರು ವಿಶಿಷ್ಟ ಸಮುದಾಯಗಳ ತವರೂರಾಗಿದೆ. ಈ ಜನಸಮುದಾಯಗಳು ಜಗತ್ತಿನ ಇತರೇ ಸಮುದಾಯಗಳಿಗಿಂತ ಭಿನ್ನ ಹಾಗೂ ವಿಶಿಷ್ಟ ಸಂಸ್ಕೃತಿ ಪರಂಪರೆಯುಳ್ಳವುಗಳಾಗಿವೆ. ಇಂಥ ಸಂಕೀರ್ಣತೆ ಯಲ್ಲಿ ಹಲವು ಸಮುದಾಯಗಳು ಆಧುನಿಕತೆಯತ್ತ ಹೊರಳಿ ಮೂಲ ವೃತ್ತಿಗಳನ್ನು ಬಿಟ್ಟು ಸ್ಥಿತ್ಯಂತರ ಗೊಂಡಿವೆ. ಆದರೆ ಕೆಲವು ಸಮುದಾಯಗಳು ಇಂದಿಗೂ ತಮ್ಮ ಮೂಲವೃತ್ತಿಗಳನ್ನು ಸಾದ್ಯವಾದಷ್ಟುಮಟ್ಟಿಗೆ ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು.

ಭಾರತದಲ್ಲಿ ಇಂಥ ಸಮುದಾಯಗಳನ್ನು ಕುರಿತು ೧೯ನೇ ಶತಮಾನದಿಂದ ಈಚೆಗೆ ಸಮಾಜಶಾಸ್ತ್ರಿಯ ವಾಗಿ, ಮಾನವಶಾಸ್ತ್ರೀಯವಾಗಿ ವಿದ್ವಾಂಸರು ಅಧ್ಯಯನ ಮಾಡುತ್ತಾ ಬಂದಿರುವುದನ್ನು ಗಮನಿಸಬಹುದು. ಈಗೀಗ ಕರ್ನಾಟಕದಲ್ಲಿ ಬುಡಕಟ್ಟು ಸಮುದಾಯಗಳ ಕುರಿತು ಸಂಶೋಧನೆಗಳು ನಡೆಯುತ್ತಿವೆಯಾದರೂ ಅವುಗಳ ಸಂಖ್ಯೆ ವಿರಳವಾಗಿವೆ. ಇಂತಹ ಬೆರಳೆಣಿಕೆಯಷ್ಟು ಸಂಶೋಧನೆಗಳಲ್ಲಿ ಅಲೆಮಾರಿಗಳಾದ, ಬೇಟೆಯನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡಿರುವ ಹಕ್ಕಿಪಿಕ್ಕಿ ಸಮುದಾಯದ ಬಗ್ಗೆ ಕೆಲವೊಂದು

ಅಧ್ಯಯನಗಳು ನಡೆದಿವೆ. ಸಾಂಸ್ಕೃತಿಕವಾಗಿ ವಿಶಿಷ್ಟ ಆಚರಣೆಗಳನ್ನು ಅನುಸರಿಸುತ್ತಾ ಅಲೆಮಾರಿಗಳಾಗಿದ್ದು, ಇತ್ತೀಚಿನ ದಿನಗಳಲ್ಲಿ ಒಂದೆಡೆ ನೆಲೆನಿಲ್ಲುತ್ತಿರುವ ಈ ಸಮುದಾಯದ ಸಮಸ್ಯೆ-ಸವಾಲುಗಳೇನು? ಅವರ ಏಳಿಗೆಗಾಗಿ ಸರಕಾರ, ಸಂಘಸಂಸ್ಥೆಗಳು ಮಾಡಬೇಕಿರುವುದೇನು? ಇವರ ಪಾರಂಪರಿಕ ವೃತ್ತಿಯ ಮೇಲೆ ಆಧುನಿಕತೆ ಬೀರುತ್ತಿರುವ ಪರಿಣಾಮಗಳೇನು? ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಅಧ್ಯಯನಕ್ಕೆ 'ಹಕ್ಕಿ-ಪಿಕ್ಕಿಯರ ಸಾಮಾಜಿಕ ಬದಲಾವಣೆ' (ಕಂಪ್ಲಿಯ ಹಕ್ಕಿಪಿಕ್ಕಿ ಕಾಲೋನಿಯನ್ನು ಅನುಲಕ್ಷಿಸಿ) ಎಂಬ ವಿಷಯವನ್ನು ಆಯ್ದುಕೊಂಡು ತನ್ಮೂಲಕ ಸಮುದಾಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಸಮಸ್ಯೆ ಸವಾಲುಗಳನ್ನು ಕುರಿತು ಅಧ್ಯಯನ ಮಾಡುವುದು ಜೊತೆಗೆ ಈ ಸಮುದಾಯದ ಮೂಲ ವೃತ್ತಿಯಾದ ಬೇಟೆ, ಅರಣ್ಯ ಉತ್ಪನ್ನಗಳ ಮಾರಾಟದ ಮೇಲೆ ಆಧುನಿಕತೆಯ ಪ್ರಭಾವವನ್ನು ಕುರಿತು ಚರ್ಚಿಸಲಾಗುವುದು. ಹಿಂದೆ ಈ ಸಮುದಾಯದ ಜನರಿಗೆ ವಿಶೇಷವಾದ ಜೀವನ ವಿಧಾನವಿದ್ದು ಈಗ ಬದಲಾವಣೆಯ ಪರಿಸ್ಥಿತಿಗೆ ತಕ್ಕಂತೆ ವಿಭಿನ್ನ ಅಸ್ತಿತ್ವವನ್ನು ಪಡೆದುಕೊಂಡು ಜೀವಿಸುತ್ತಿದ್ದಾರೆ. ಅಂತಹವುಗಳನ್ನು ವರ್ತಮಾನದಲ್ಲಿ ಅವರ ಸಾಮಾಜಿಕ ಆಚರಣೆಗಳ ಮುಖಾಂತರ ಗುರುತಿಸಬಹುದಾಗಿದೆ. ಹೀಗೆ ಬದಲಾದ ಕಾಲಕ್ಕೆ ತಕ್ಕಂತೆ ಇವರ ಪಾರಂಪರಿಕ ಉತ್ಪಾದನಾ ವಿಧಾನ ಜೀವನಕ್ರಮ ಎಷ್ಟರಮಟ್ಟಿಗೆ ಬದಲಾವಣೆಗೊಂಡಿವೆ ಎನ್ನುವುದರ ಜೊತೆಗೆ ಎಷ್ಟರಮಟ್ಟಿಗೆ ಸಮುದಾಯ ಬದಲಾಗುತ್ತಿರುವ ಪರಿಸ್ಥಿತಿಯೊಂದಿಗೆ ಹೊಂದಿಕೊಂಡು ತನ್ನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುತ್ತಿದೆ ಎನ್ನುವುದು ಮುಖ್ಯವಾಗಿದೆ.

ಪ್ರಸ್ತುತ ನಿಬಂಧವು ಜಾಗತೀಕರಣದ ಸಂದರ್ಭದಲ್ಲಿ ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆಯ ಕುರಿತ ಅಧ್ಯಯನವೆಂದು ಹೇಳಬಹುದು. ಪರಿಸರದ ಜೊತೆಗಿನ ಸಂಬಂಧ ಸುತ್ತಲ ಸಮಾಜದೊಂದಿಗೆ ಬೆರತು ಅಲೆಮಾರಿ ಬದುಕಿನ ಅತಂತ್ರ ಸ್ಥಿತಿಯನ್ನು ಬಿಟ್ಟು ಜೀವಿಸುತ್ತಿರುವ ಸಮುದಾಯದ ಬದುಕಿನ ಸಾಮಾಜಿಕ ಬದಲಾವಣೆ ಮತ್ತು ಬದಲಾವಣೆಗೆ ಒತ್ತಾಸೆಯಾಗಿರುವ ಅಂಶಗಳನ್ನು ವಿವರಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಕಂಪ್ಲಿ ಪಟ್ಟಣದ ಹಕ್ಕಿಪಿಕ್ಕಿ ಸಮುದಾಯವನ್ನು ಪ್ರಧಾನವಾಗಿ ತೆಗೆದುಕೊಂಡಿದ್ದರೂ ಪಟ್ಟಣದ ಇತರ ಸಮುದಾಯಗಳ ಒಟ್ಟಾರೆ ಸ್ಥಿತಿಗತಿಗಳನ್ನು ತೌಲನಿಕವಾಗಿ ವಿವರಿಸಿ ವಿಶ್ಲೇಷಿಸಲಾಗಿದೆ.

ಹಕ್ಕಿಪಿಕ್ಕಿ ಸಮುದಾಯದ ಪದನಿಷ್ಪತ್ತಿ

ಭಾರತದಾದ್ಯಂತ ಈ ಸಮುದಾಯವನ್ನು 'ಪಾರ್ಧಿ' ಬುಡಕಟ್ಟು ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಬೇಟೆಯನ್ನೆ ತಮ್ಮ ಕಸುಬನ್ನಾಗಿಸಿಕೊಂಡಿರುವ ಇವರನ್ನು ವಿವಿಧ ಪ್ರದೇಶಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಉದಾಹರಣೆಗೆ, ಬೀದರ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ 'ಪಾರ್ಧಿ' ಎಂದು, ಬಳ್ಳಾರಿ, ಮೈಸೂರು, ಶಿವಮೊಗ್ಗ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ 'ಹಕ್ಕಿಪಿಕ್ಕಿ'ಗಳೆಂದು (ಹಕ್ಕಿಗಳನ್ನು ಬೇಟೆ ಯಾಡುವುದರಿಂದ), ಚಿತ್ರದುರ್ಗ ಜಿಲ್ಲೆಯಲ್ಲಿ ಅಡವಿಚೆಂಚರು ಎಂದು ಕರೆದರೆ, ಬಿಜಾಪುರ, ಬಾಗಲಕೋಟೆ

ಹಾಗೂ ಗದಗ ಜಿಲ್ಲೆಗಳಲ್ಲಿ 'ಹರಿಣಿಶಿಕಾರಿ' ಬೇಟೆಗಾರ, ಚಿಗರಿಕಾರ(ಜಿಂಕೆಗಳನ್ನು ಬೇಟೆಯಾಡುವುದರಿಂದ) ಎಂದು ಕರೆಯುತ್ತಾರೆ. ಆಂಧ್ರಪ್ರದೇಶದಲ್ಲಿ ಇವರನ್ನು ಪಾರದಾನ್, ನೀಲ್‌ಶಿಕಾರಿ, ಹಾಗೂ ಪೀಟಲೋಳ್ಳು ಎಂದು ಗುಜರಾತ ಮತ್ತು ರಾಜಸ್ಥಾನದಲ್ಲಿ 'ವಾಗ್ರಿ' ಎಂದು ಕರೆಯುತ್ತಾರೆ. ನರಿಗಳನ್ನು ಬೇಟೆ ಯಾಡುವುದರಿಂದ ಆಂಧ್ರಪ್ರದೇಶದಲ್ಲಿ ಇವರನ್ನು 'ನಕ್ಕಲುವಾಳ್ಳು' ಎಂದು, ಉರುಲುಹಾಕಿ ಪ್ರಾಣಿಪಕ್ಷಿಗಳನ್ನು ಹಿಡಿಯುವುದರಿಂದ 'ಪಾನ್ಸೆ ಪಾರ್ಧಿ' ಎಂದು ಕರೆಯುತ್ತಾರೆ.

ಹಕ್ಕಿಪಿಕ್ಕಿಯರಿಗೆ ಅವರ ಕಸುಬಿನ ಕಾರಣಕ್ಕಾಗಿ ಈ ಹೆಸರು ಬಂದಿದೆ. 'ಹಕ್ಕಿಯನ್ನು ಹೆಕ್ಕು' ಎಂಬ ಅರ್ಥದಿಂದ (ಹಿಕ್ಕು=ಹಿಡಿ, ಹಿಕ್ಕು>ಪಿಕ್ಕು) ನಿಷ್ಪನ್ನವಾಗಿದೆ. ಇವರ ಹೆಸರಿಗೆ ಯಾವುದೇ ಪ್ರಾಚೀನತೆ ಇರುವುದಿಲ್ಲ. ಗುಜರಾತ ಮೂಲದವರಾದ ಇವರು ಸುಮಾರು ಇನ್ನೂರು ವರ್ಷಗಳ ಹಿಂದೆಯೇ ಕರ್ನಾಟಕಕ್ಕೆ ಬಂದು ಕರ್ನಾಟಕದಾದ್ಯಂತ ನೆಲೆಸಿದ್ದಾರೆ. ಅವರಲ್ಲಿ ಕೆಲವರು ಈಗಲೂ ಸಹ ಅಲೆಮಾರಿಗಳಾಗಿದ್ದು, ಬೆಟ್ಟ, ಗುಡ್ಡ, ಬಯಲುಸೀಮೆ, ಮಲೆನಾಡು, ಹಾಗೂ ಅರೆಮಲೆನಾಡು ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ.

ಅಧ್ಯಯನದ ವ್ಯಾಪ್ತಿ

ಕರ್ನಾಟಕದಲ್ಲಿ ಹಲವಾರು ಬುಡಕಟ್ಟು ಸಮುದಾಯಗಳಿದ್ದು, ಪ್ರತಿಯೊಂದು ಬುಡಕಟ್ಟು ಮತ್ತೊಂದು ಬುಡಕಟ್ಟಿಗಿಂತ ಭಿನ್ನವಾಗಿವೆ. ಕಾರಣ ಯಾವುದೇ ಒಂದು ಬುಡಕಟ್ಟು ತಮ್ಮದೇ ಆದ ಸಂಸ್ಕೃತಿ, ಆಚಾರ, ರೂಢಿ, ಸಂಪ್ರದಾಯ, ಭಾಷೆ, ವೃತ್ತಿಯನ್ನು ಪರಂಪರಾಗತವಾಗಿ ಪಾಲಿಸಿಕೊಂಡು ಬರುತ್ತಿವೆ. ಕರ್ನಾಟಕದಲ್ಲಿನ ಬುಡಕಟ್ಟು ಸಮುದಾಯಗಳಲ್ಲಿ ಕೆಲವು ನೆಲೆನಿಂತ ಬುಡಕಟ್ಟುಗಳಾದರೆ, ಕೆಲವು ಅಲೆಮಾರಿ ಮತ್ತೆ ಕೆಲವು ಅರೆ ಅಲೆಮಾರಿ ಬುಡಕಟ್ಟುಗಳಾಗಿವೆ. ಅಂತಹ ಬುಡಕಟ್ಟುಗಳಲ್ಲಿ ತಮ್ಮದೇಯಾದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುವ ಬೇಟೆಯನ್ನೇ ತಮ್ಮ ಮೂಲ ಕಸುಬಾಗಿಸಿಕೊಂಡು ಅಲೆಮಾರಿ ಯಾಗಿದ್ದು, ಇತ್ತೀಚೆಗೆ ನೆಲೆನಿಲ್ಲುತ್ತಿರುವ ಬುಡಕಟ್ಟು ಸಮುದಾಯವೆಂದರೆ ಹಕ್ಕಿಪಿಕ್ಕಿ ಸಮುದಾಯ. ಕರ್ನಾಟಕದಾದ್ಯಂತ ಇವರನ್ನು ಕಾಣಬಹುದಾಗಿದ್ದರೂ ಪ್ರಸ್ತುತ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಈ ಸಮುದಾಯದ ಸಂಸ್ಕೃತಿಯನ್ನು ಸೂಕ್ಷ್ಮವಾಗಿ ತಿಳಿಯಲು ಕಂಪ್ಲಿ ಪಟ್ಟಣದಲ್ಲಿ ಹಕ್ಕಿಪಿಕ್ಕಿಯರು ವಾಸಿಸುತ್ತಿರುವ ಕಾಲೋನಿಯೊಂದನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಕಂಪ್ಲಿಯು ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಒಂದು ಪಟ್ಟಣವಾಗಿದ್ದು(ಹೋಬಳಿ) ಐತಿಹಾಸಿಕ, ಪ್ರೇಕ್ಷಣೀಯ ಸ್ಥಳವಾದ ಹಂಪಿಗೆ ಸಮೀಪದಲ್ಲಿದೆ ಹಾಗೂ ಹೊಸಪೇಟೆ ತಾಲ್ಲೂಕಿನ ಎರಡನೆಯ ಪ್ರಮುಖ ಚಾರಿತ್ರಿಕ ಸ್ಥಳವಾಗಿದ್ದು ಒಟ್ಟು ೨೩ ಜನವಸತಿ ಗ್ರಾಮಗಳನ್ನೊಳಗೊಂಡ ಹೋಬಳಿಯಾಗಿದೆ. ಅಲ್ಲದೆ ಪುರಸಭೆಯನ್ನು ಹೊಂದಿದೆ. ಇದು ಹೊಸಪೇಟೆಯಿಂದ ೩೫ ಕಿ.ಮೀ ಜಿಲ್ಲಾ ಕೇಂದ್ರವಾದ ಬಳ್ಳಾರಿಯಿಂದ ೫೪ ಕಿ.ಮೀ ದೂರದಲ್ಲಿದೆ. ಕಂಪ್ಲಿ ಪ್ರದೇಶದ ಉತ್ತರದಲ್ಲಿ ತುಂಗಾಭದ್ರ ನದಿಯು ಹರಿಯುತ್ತಿದ್ದು, ಪೂರ್ವಭಾಗದಲ್ಲಿ ಸೋಮಪ್ಪನ ಕೆರೆಯಿದೆ. ಸುಮಾರು ೩೮

ವಿವಿಧ ಸಮುದಾಯದವರು ಕಂಪ್ಲಿಯಲ್ಲಿದಾರೆ. ಕಂಪ್ಲಿಯ ೧೨ನೇ ವಾರ್ಡಿನಲ್ಲಿ ಒಟ್ಟು ೯೬ ಹಕ್ಕಿಪಿಕ್ಕಿಯರ ಮನೆಗಳಿದ್ದು ೫೧೮ ಜನಸಂಖ್ಯೆಯನ್ನು ಹೊಂದಿರುವ ಈ ಕಾಲೋನಿಗೆ ಹಕ್ಕಿಪಿಕ್ಕಿ ಕಾಲೋನಿ ಎನ್ನುವರು.

ಪ್ರಸ್ತುತ ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆ ಎಂಬ ಅಧ್ಯಯನ ವಿಷಯದ ವ್ಯಾಪ್ತಿಯನ್ನು ಸಮಗ್ರ ಮತ್ತು ಸೂಕ್ಷ್ಮದೃಷ್ಟಿಯಿಂದ ಕಂಪ್ಲಿಯ ಹಕ್ಕಿಪಿಕ್ಕಿ ಕಾಲೋನಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಅಲ್ಲದೆ ಹೊಸಪೇಟೆ ತಾಲೂಕಿನ ಹಕ್ಕಿಪಿಕ್ಕಿ ಸಮುದಾಯದ. ಕೆಲವು ಹಳ್ಳಿಗಳನ್ನೂ ತುಲನಾತ್ಮಕವಾಗಿ ಅಭ್ಯಸಿಸಲು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

ಯಾವುದೇ ಒಂದು ಅಧ್ಯಯನವು ತನ್ನದೇ ಆದ ನಿರ್ದಿಷ್ಟ ಉದ್ದೇಶವನ್ನು ಹೊಂದಿರುತ್ತದೆ. ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವೆಂದರೆ ಹಕ್ಕಿಪಿಕ್ಕಿಯರ ಮೂಲ ಹಾಗೂ ಚಾರಿತ್ರಕ ಹಿನ್ನೆಲೆಯನ್ನು ತಿಳಿಯುವುದು. ಅಲ್ಲದೇ ಅಧ್ಯಯನಕ್ಕೆ ಆಯ್ದುಕೊಂಡ ಕಂಪ್ಲಿ ಹಕ್ಕಿಪಿಕ್ಕಿ ಕಾಲೋನಿಯ ಹಕ್ಕಿಪಿಕ್ಕಿಯರ ಸಾಮಾಜಿಕ ಬದುಕಿನ ಸ್ಥಿತಿಯನ್ನು ವಿಸ್ತೃತವಾಗಿ ವಿಶ್ಲೇಷಿಸುವುದು ಮತ್ತು ಕಂಪ್ಲಿಯ ಭೌಗೋಳಿಕ ಪರಿಸರ ಹಾಗೂ ಅಲ್ಲಿ ವಾಸಿಸುವ ಇತರ ಜನಸಮುದಾಯಗಳ ಬಗ್ಗೆ ತಿಳಿಯುವುದು.

ಹಕ್ಕಿಪಿಕ್ಕಿಯರು ಆಚರಿಸುವ ಜಾತ್ರೆ, ಉತ್ಸವ, ಹಬ್ಬಹರಿದಿನಗಳ ಆಚರಣೆ ವಿಧಿವಿಧಾನಗಳನ್ನು ವಿವರಿಸಿ ತಮ್ಮ ಪರಂಪರಾಗತವಾದ ಸಂಸ್ಕೃತಿ, ಆಚರಣೆಗಳಿಂದ ಆಧುನಿಕತೆಯಡೆಗೆ ಹೊರಳುತ್ತಿರುವ ಈ ಸಮುದಾಯದ ಸಮಸ್ಯೆ ಸವಾಲುಗಳನ್ನು ವಿಶ್ಲೇಷಿಸುವುದು, ಇವರ ಸಾಮಾಜಿಕ ಬದಲಾವಣೆಗೆ ಕಾರಣವಾದ ಅಂಶಗಳನ್ನು ತಿಳಿಸುವುದು. ಅಲ್ಲದೆ ಆಧುನಿಕತೆಯ ಸಂದರ್ಭದಲ್ಲಿ ತಮ್ಮ ಪಾರಂಪರಿಕ ವೃತ್ತಿಯನ್ನು ತ್ಯಜಿಸಿ ಪ್ರಸ್ತುತ ಜೀವನಕ್ಕೆ ಅನುಸರಿಸುವ ಉಪಕಸುಬುಗಳಾವುವು ಎಂಬುದನ್ನು ತಿಳಿಸುವುದು, ಹಳ್ಳಿಗಳ ಹೊರಭಾಗದಲ್ಲಿ, ಪಟ್ಟಣಪ್ರದೇಶಗಳಲ್ಲಿ ವಾಸಿಸುವ ಹಕ್ಕಿಪಿಕ್ಕಿಯರು ಇಲ್ಲಿನ ಇತರ ಸಮುದಾಯದವರೊಂದಿಗೆ ನಡೆದುಕೊಳ್ಳುವ ರೀತಿ ಮತ್ತು ಇತರ ಸಮುದಾಯದವರು ಇವರನ್ನು ನಡೆಸಿಕೊಳ್ಳುವ ಬಗೆ ತಿಳಿಸುವುದು ಅಲ್ಲದೆ ಪ್ರಸ್ತುತ ಸಂದರ್ಭದಲ್ಲಿ ಇವರು ಶೈಕ್ಷಣಿಕ, ರಾಜಕೀಯ, ಆರ್ಥಿಕವಾಗಿ ಮೇಲಸ್ತರಕ್ಕೆ ಬರಲು ಇರುವ ಅಡೆತಡೆಗಳನ್ನು ಗುರುತಿಸಿ ಸಲಹೆ ಸೂಚನೆಗಳನ್ನು ನೀಡುವ ಉದ್ದೇಶ ಮತ್ತು ಕಾಲೋನಿಯವರು ಇಂದಿಗೂ ಉಳಿಸಿಕೊಂಡು ಬಂದಿರುವ ತಮ್ಮ ಜನಪದ ಕಲೆ, ವೈದ್ಯಪದ್ಧತಿ ಬಗ್ಗೆ ತಿಳಿಸಲಾಗಿದೆ.

ಕಾಲೋನಿಯ ಜನರು ಆರ್ಥಿಕ ಭದ್ರತೆ ಇಲ್ಲದೆ ಅನೇಕ ಬೇರೆ ಬೇರೆ ವೃತ್ತಿಗಳನ್ನು ಅನುಸರಿಸುತ್ತಿದ್ದಾರೆ. ತಮಗೆ ಶಾಶ್ವತ ಆರ್ಥಿಕ ಭದ್ರತೆ ಒದಗಿಸುವ ಆಸ್ತಿಯು ತಮ್ಮ ಕೈತಪ್ಪಿದ್ದು ಅದನ್ನು ಮತ್ತೆ ಪಡೆಯಲು ಇವರು ಮಾಡುತ್ತಿರುವ ಹೋರಾಟವನ್ನು ತಿಳಿಸಲಾಗಿದೆ.

ಅಧ್ಯಯನದ ವಿಧಾನ

ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆ(ಕಂಪ್ಲಿ ಹಕ್ಕಿಪಿಕ್ಕಿ ಕಾಲೋನಿಯನ್ನು ಅನುಲಕ್ಷಿಸಿ) ಎಂಬ ಈ ಅಧ್ಯಯನ ಕ್ಷೇತ್ರಕಾರ್ಯ ಆಧಾರಿತವಾದುದು. ಇನ್ನೂ ಹೆಚ್ಚಿನ ರೀತಿಯ ಅಧ್ಯಯನಕ್ಕಾಗಿ ಮೌಖಿಕ, ಪ್ರಾಥಮಿಕ ಹಾಗೂ ಅನುಷಂಗಿಕ ಆಕರಗಳ ಸಹಾಯವನ್ನು ಅಗತ್ಯವಾಗಿ ಬಳಸಿಕೊಳ್ಳಲಾಗಿದೆ. ಅಲ್ಲದೆ ಸಂದರ್ಶನ, ಗುಂಪು ಚರ್ಚೆ, ಅವಲೋಕನ, ಪ್ರಶ್ನಾವಳಿ, ಚಾರಿತ್ರಿಕ ವಿಧಾನ, ಸಾಹಿತ್ಯಿಕ ಆಕರಗಳ ಅಧ್ಯಯನ ಸಹಭಾಗಿತ್ವ ವಿಧಾನದೊಂದಿಗೆ ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಯನದ ಸ್ವರೂಪ

ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆ ಎಂಬ ಈ ನಿಬಂಧ ರಚನೆಗೆ ಕ್ಷೇತ್ರಕಾರ್ಯವೇ ಮುಖ್ಯ ಆಧಾರ. ಕ್ಷೇತ್ರಕಾರ್ಯದ ಮೂಲಕ ಸಮುದಾಯದವರ ಧಾರ್ಮಿಕ ಆಚರಣೆಗಳು, ನಂಬಿಕೆಗಳು, ವೃತ್ತಿ, ಭಾಷೆ, ಆಚಾರ ವಿಚಾರಗಳು, ಶಿಕ್ಷಣ ಮುಂತಾದ ಅಂಶಗಳು ಈ ಸಮುದಾಯದ ಸಾಂಸ್ಕೃತಿಕ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ. ಸಂದರ್ಶನ ವಿಧಾನ, ಪ್ರಶ್ನಾವಳಿ, ಛಾಯಾಚಿತ್ರ ಧ್ವನಿಮುದ್ರಣ ಇನ್ನೂ ಹಲವು ತಾಂತ್ರಿಕ ಪರಿಕರಗಳ ಮೂಲಕ ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಪ್ರಬಂಧದ ಸ್ವರೂಪವನ್ನು ಪರಿಶೀಲಿಸುವುದರೊಂದಿಗೆ ಅಧ್ಯಯನದ ಹಿನ್ನೆಲೆ ಅಂಶಗಳನ್ನು ತಿಳಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಕಂಪ್ಲಿಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನಲೆ ಹಾಗೂ ಹಕ್ಕಿಪಿಕ್ಕಿಯರ ಮೂಲನೆಲೆ, ಸಾಮಾಜಿಕ ಹಿನ್ನೆಲೆಯನ್ನು ವಿವರಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ರಚನೆ, ಜನಪದ ಕಲೆ, ಜನಪದ ವೈದ್ಯ, ಪಾರಂಪರಿಕ ಆಹಾರ ಪದ್ಧತಿ, ರಾಜಕೀಯ ಸ್ಥಿತಿಗತಿಯನ್ನು ಕುಲಕಸುಬು, ಜೀವನಾವರ್ತನ ಆಚರಣೆಗಳ ಬಗ್ಗೆ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಹಕ್ಕಿಪಿಕ್ಕಿಯರ ಆಚರಣೆ, ಸಂಪ್ರದಾಯ, ಹಬ್ಬಹರಿದಿನಗಳು ಹಾಗೂ ವೈವಾಹಿಕ ವ್ಯವಸ್ಥೆಯ ಬಗ್ಗೆ ವಿಶ್ಲೇಷಿಸಲಾಗುವುದು.

ಅಧ್ಯಾಯ ಐದರಲ್ಲಿ ಹಕ್ಕಿಪಿಕ್ಕಿ ಸಮುದಾಯದವರು ಮೂಲ ವೃತ್ತಿಯಿಂದ ಆಧುನಿಕತೆಯ ಹೊಸ ಬಗೆಯ ವೃತ್ತಿಗಳಯೆಡೆಗೆ ಹೊರಳುತ್ತಿರುವುದು ಹಾಗೂ ಈ ಸಮುದಾಯದವರ ಸಾಂಸ್ಕೃತಿಕ ಸಾಮಾಜಿಕ ರಾಜಕೀಯ ಶೈಕ್ಷಣಿಕ ಬದಲಾವಣೆಗಳನ್ನು ಮತ್ತು ಅವುಗಳಿಗೆ ಕಾರಣಗಳನ್ನು ಗುರುತಿಸಲಾಗಿದೆ.

ಅಧ್ಯಾಯ ಆರು ಅಧ್ಯಯನದ ಫಲಿತಗಳನ್ನು ಹೇಳಲಾಗುವುದು. ಹಾಗೂ ಅಧ್ಯಯನದ ಕೊನೆ ಭಾಗದಲ್ಲಿ ಅಧ್ಯಯನಕ್ಕೆ ಬಳಸಿಕೊಂಡ ಗ್ರಂಥಗಳನ್ನು, ಲೇಖನಗಳನ್ನು ಅಲ್ಲದೆ ಛಾಯಾಚಿತ್ರ, ನಕ್ಷೆಗಳನ್ನು ನೀಡಲಾಗಿದೆ.

ಅಧ್ಯಾಯ ೨

ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯದ ನೆಲೆ ಮತ್ತು ಹಿನ್ನೆಲೆ

೨.೧. ಭೌಗೋಳಿಕ ಹಿನ್ನೆಲೆ

೨.೨. ಪೌರಾಣಿಕ ಹಿನ್ನೆಲೆ

೨.೩. ಚಾರಿತ್ರಿಕ ಹಿನ್ನೆಲೆ

೨.೪. ಸಾಮಾಜಿಕ ಹಿನ್ನೆಲೆ

ಅಧ್ಯಾಯ ಎರಡು

ಕಂಪ್ಲಿಯ ಹಕ್ಕಿಪಿಕ್ಕಿ ಸಮುದಾಯದ ನೆಲೆ ಮತ್ತು ಹಿನ್ನೆಲೆ

ಔದ್ಯೋಗಿಕರಣ ಹಾಗೂ ನಗರೀಕರಣದ ಪ್ರಭಾವದಿಂದ ಆಧುನಿಕ ಸಮಾಜದ ಮಾನವನು ಜಗತ್ತಿನ ಜೀವರಾಶಿಗಳನ್ನು ನಿಯಂತ್ರಿಸುವ ಅಗಾಧವಾದ ಸಾಮರ್ಥ್ಯ ಹೊಂದಿರುವುದರ ಜೊತೆಗೆ ಪರಿಸರದ ಮೇಲೆ ಮಾನವ ತನ್ನ ಸಾರ್ವಭೌಮತ್ವವನ್ನು ಹೇರಲು ಹವಣಿಸುತ್ತಿದ್ದಾನೆ. ಹೀಗಾಗಿ ಸಮುದಾಯದ ಆರ್ಥಿಕ ಉತ್ಪಾದನೆಗೆ ಪರಿಸರದ ವ್ಯವಸ್ಥೆಯೇ ಆಧಾರಸ್ತಂಭ. ಪ್ರಾಕೃತಿಕ ಸಂಪನ್ಮೂಲವಾದ ಪರಿಸರ ಮಾನವನ ಪ್ರಾಥಮಿಕ ಅಗತ್ಯ ಎಂಬುದನ್ನು ಮರೆಯಬಾರದು. ಹೀಗಾಗಿ ಬುಡಕಟ್ಟು ಸಮುದಾಯವಾದ ಹಕ್ಕಿಪಿಕ್ಕಿಯರ ಪ್ರಕೃತಿಯ ಜೊತೆಗಿನ ಸಂಬಂಧವು ನಿರಂತರವಾದದ್ದು.

ಆರಂಭದಲ್ಲಿ ಈ ಬುಡಕಟ್ಟು ಸಮುದಾಯದ ಜೀವನ ಪರಿಸರದಿಂದಲೇ ಉತ್ತಮ ಮಟ್ಟದಿಂದ ಕೂಡಿತ್ತು. ಆದರೆ ಸುಧಾರಣೆಯ ನೆಪದಲ್ಲಿ ಪರಿಸರವನ್ನು ಹಿಂಸಾತ್ಮಕವಾಗಿ ನಾಶಪಡಿಸುವುದರಲ್ಲಿ ಇಂದಿನ ಯೋಜನೆಗಳು ಮುಂದಾಗಿವೆ. ಪರಿಣಾಮ ಅರಣ್ಯವಾಸಿಯಾಗಿದ್ದ ಬುಡಕಟ್ಟು ಜನರ ಸ್ಥಿತಿಗತಿ ತುಂಬಾ ಗಂಭೀರವೆಂದು ಹೇಳಬಹುದು. ಅಂತಹ ಸಮುದಾಯಗಳಲ್ಲಿ ಕಂಪ್ಲಿ ಪಟ್ಟಣದಲ್ಲಿ ವಾಸಿಸುವ ಹಕ್ಕಿಪಿಕ್ಕಿ ಸಮುದಾಯವೂ ಒಂದು. ಅಲ್ಲಿನ ಈ ಬುಡಕಟ್ಟು ಸಮುದಾಯ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿರುವ ಬಗೆಗೆ ಹಾಗೂ ತಮ್ಮ ಪಾರಂಪರಿಕ ಸಂಸ್ಕೃತಿಯನ್ನು ಪಟ್ಟಣ ಪ್ರದೇಶಗಳಲ್ಲಿ ಉಳಿಸಿಕೊಳ್ಳಲು ಪಡುವ ಪ್ರಯತ್ನವನ್ನು ನಾವಿಲ್ಲಿ ಕಾಣಬಹುದಾಗಿದೆ.

೨.೧ ಭೌಗೋಳಿಕ ಹಿನ್ನೆಲೆ

ಭಾರತ ದೇಶದಾದ್ಯಂತ ಪಾರ್ಧಿ ಎಂದು ಕರೆಯಲ್ಪಡುವ ಹಕ್ಕಿಪಿಕ್ಕಿ ಸಮುದಾಯವು ಬಹುತೇಕ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುವರು. ಇವರು ವಾಗ್ರಿ(ವಾಘರಿ) ಭಾಷೆಯನ್ನು

ಮಾತನಾಡುತ್ತಾರೆ ಮತ್ತು ದೇವನಾಗರಿ ಲಿಪಿಯನ್ನು ಬಳಸುತ್ತಾರೆ. ಇವರನ್ನು ಒಂದೊಂದು ರಾಜ್ಯ, ಒಂದೊಂದು ಜಿಲ್ಲೆ ಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಕರ್ನಾಟಕದಲ್ಲಿ ಇವರಿಗಿರುವ ಹೆಸರುಗಳೆಂದರೆ;

ಪಾರ್ಧಿ	ಹಕ್ಕಿಪಿಕ್ಕಿ	ಚೆಂಚರು
ಶಿಕಾರಿ	ಹರಣಿಶಿಕಾರಿ	ಚಿಗರಿಕಾರರು
ಪಿಚ್ಚೆಳ್ಳಿ	ಅಡವಿಚೆಂಚರು	ವಾಗ್ರಿ
ಪಾಶಿಪಾರ್ಧಿ	ಬೇಟೆಗಾರರು	ನೀಲ್‌ಶಿಕಾರಿ
ನರಿಶಿಕಾರಿ	ನರಿಕೊರವ	ಕುರುವಿಕಾರನ್
ಮೇಲ್‌ಶಿಕಾರಿ	ವಿಂಡಂಡೆ	ಪಿಟ್ಟಲೋಲು

ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಅಲ್ಲದೇ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಇವರ ಹೆಸರುಗಳೆಂದರೆ;

ಬೀದರ್ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ	-	ಪಾರ್ಧಿ
ಬಳ್ಳಾರಿ, ಮೈಸೂರು, ಶಿವಮೊಗ್ಗ, ಬೆಂಗಳೂರು	-	ಹಕ್ಕಿಪಿಕ್ಕಿ
ಚಿತ್ರದುರ್ಗ ಜಿಲ್ಲೆ	-	ಅಡವಿಚೆಂಚರು
ಬಿಜಾಪುರ, ಬಾಗಲಕೋಟೆ, ಗದಗ ಜಿಲ್ಲೆಗಳಲ್ಲಿ	-	ಹರಣ್‌ಶಿಕಾರಿ, ಬೇಟೆಗಾರ್, ಚಿಗರಿಕಾರ್ ಎಂಬುದಾಗಿ ಗುರುತಿಸುತ್ತಾರೆ.

ಕರ್ನಾಟಕದಾದ್ಯಂತ ಹಲವಾರು ಹೆಸರುಗಳಿಂದ ಕರೆಯಲ್ಪಡುವ ಹಕ್ಕಿಪಿಕ್ಕಿ ಸಮುದಾಯದವರು ೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ೮೪೧೪ ಜನಸಂಖ್ಯೆ ಇದ್ದರು. ಇವರಲ್ಲಿ 'ಜಾತ್' ಮತ್ತು 'ಬುಕ್ಯಾ' ಎಂಬ ಎರಡು ಪ್ರಮುಖ ಪಂಗಡಗಳಿದ್ದು ಅವುಗಳಲ್ಲಿ ಹಲವು ಗೋತ್ರಗಳು ಕಂಡುಬರುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ವಾಸಿಸುತ್ತಿರುವ ಹಕ್ಕಿಪಿಕ್ಕಿ ಸಮುದಾಯದವರಲ್ಲಿ ಮುಖ್ಯವಾಗಿ ಆರು ಬೆಡಗುಗಳಿವೆ.

೧. ಇಕೋತಿಯಾ ೨. ಕೊರಬಿಯಾ ೩. ಖೋಡಿಯಾರ

೪. ಪಿಂಪಳಜಾ ೫. ಸಾವಂಡಿಯಾ ೬. ಹರಖತಿಯಾ

ಈ ಬೆಡಗುಗಳಲ್ಲಿ ಉಪಪಂಗಡಗಳಿದ್ದು ಸಗೋತ್ರ ವಿವಾಹ ಇವರಲ್ಲಿ ನಿಷಿದ್ಧವಿದೆ.

ಕರ್ನಾಟಕದಲ್ಲಿ ಹಕ್ಕಿಪಿಕ್ಕಿ ಸಮುದಾಯದವರ ನೆಲೆಗಳು

ಜಿಲ್ಲೆಗಳು	ತಾಲೂಕುಗಳು	ನೆಲೆಗಳು
ಮೈಸೂರು	ಹುಣಸೂರು	ಪಕ್ಷಿರಾಜಪುರ
	ಚಾಮರಾಜನಗರ	ಕಚ್ಚೇನಹಳ್ಳಿ
	ಕೆ.ಆರ್. ಪೇಟೆ	ತಾಳವಾಡಿ
	ಹೆಗ್ಗಡದೇವನ ಕೋಟೆ	ಚಿನಕುರುಳಿ ಹತ್ತಿರ ಟೈಗರ್‌ಬ್ಲಾಕ್
ಬೆಂಗಳೂರು	ರಾಮನಗರ	ಹಕ್ಕಿಪಿಕ್ಕಿ ಕ್ಯಾಂಪ್
	ಬೆಂಗಳೂರು	ಬನ್ನೇರುಘಟ್ಟ ಆಂಜನೇಯ ದೇವಸ್ಥಾನ
ಮಂಡ್ಯ	ನಾಗಮಂಗಲ	ಶಿಕಾರಿಪುರ
ಹಾಸನ	ಹಾಸನ	ಹಗರೆ
ಶಿವಮೊಗ್ಗ	ಚನ್ನಗಿರಿ	ಗೊಪನಾಳು ಆಪ್ತಾನಹಳ್ಳಿ
ಬಳ್ಳಾರಿ	ಹೊಸಪೇಟೆ	ಹರಿಶ್ಚಂದ್ರ ನಗರ
		ಊರಮ್ಮನ ಬಯಲು
		ಕಾರಿಗನೂರು
		ಕಂಪ್ಲಿ ಹಕ್ಕಿಪಿಕ್ಕಿ ಕಾಲೋನಿ
		ಸಣಾಪುರ

ಅಲ್ಲದೇ ಗದಗ, ಹುಬ್ಬಳ್ಳಿ, ಚಿತ್ರದುರ್ಗ ಹೀಗೆ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ನೆಲೆಸಿದ್ದಾರೆ. ಪ್ರಸ್ತುತ ನಿಬಂಧದ ಅಧ್ಯಯನಕ್ಕೆ ಹೊಸಪೇಟೆ ತಾಲೂಕಿನ ಕಂಪ್ಲಿ ಪಟ್ಟಣದ ಕಾಲೋನಿಯೊಂದನ್ನು ಆಯ್ಕೆ ಮಾಡಿಕೊಂಡಿದ್ದು, ಇಲ್ಲಿ ಹಲವು ವರ್ಷಗಳಿಂದ ನೆಲೆನಿಂತಿರುವ ಹಕ್ಕಿಪಿಕ್ಕಿ ಸಮುದಾಯದವರ ಸಾಮಾಜಿಕ ಬದಲಾವಣೆಯನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ. ಹಕ್ಕಿಪಿಕ್ಕಿಯವರ ಸಾಮಾಜಿಕ ಬದಲಾವಣೆ ತಿಳಿಯುವ ಮೊದಲು ಅವರು ಕಂಪ್ಲಿಗೆ ಬಂದು ನೆಲೆಸಿದ ಬಗೆ ಹಾಗೂ ಅವರ ಮೂಲ ನೆಲೆಯನ್ನು ತಿಳಿಯುವುದು ಅತ್ಯಗತ್ಯವಾಗಿದೆ. ಜೊತೆಗೆ ಕಂಪ್ಲಿಯ ಭೌಗೋಳಿಕ ಪರಿಸರ ಪರಿಚಯಿಸುವುದು ಸೂಕ್ತವೆನಿಸುತ್ತದೆ.

ಗುಜರಾತ್ ಮೂಲದವರಾದ ಹಕ್ಕಿಪಿಕ್ಕಿ(ಪಾರ್ಧಿ) ಸಮುದಾಯದವರು ಸುಮಾರು ೨೦೦ ವರ್ಷಗಳ ಹಿಂದೆ ಗುಜರಾತ್‌ನಿಂದ ಮಹಾರಾಷ್ಟ್ರದ ಮೂಲಕ ಕರ್ನಾಟಕಕ್ಕೆ ವಲಸೆ ಬಂದರು. ಅಲೆಮಾರಿಗಳಾದ ಇವರು ಬೇಟೆಯನ್ನೇ ತಮ್ಮ ಜೀವನಾಧಾರವನ್ನಾಗಿಸಿಕೊಂಡು ಬೇಟೆಗೆ ಅನುಕೂಲ ವಿರುವ ಬೆಟ್ಟ, ಗುಡ್ಡ,ಕಾಡು, ಕುರುಚಲು ಪ್ರದೇಶಗಳಲ್ಲಿ ನೆಲೆಸತೊಡಗಿದರು. ಕಾಲಕ್ರಮೇಣ ಕಾಡಿನಿಂದ ನಿರ್ಗಮಿಸಿ

ಊರಾಚೆ ಗುಡಾರಗಳನ್ನು ಹಾಕಿಕೊಂಡು ಜೀವಿಸುತ್ತಿದ್ದರು. ಹಲವು ವರ್ಷಗಳ ನಂತರ ಅಲೆಮಾರಿ ಜೀವನವನ್ನು ತೊರೆದು ಒಂದು ಗುಂಪು ಕಂಪ್ಲಿಯಲ್ಲಿ ಶಾಶ್ವತವಾಗಿ ನೆಲೆಸಿದರು. ಇವರಲ್ಲಿ ಬಹುಸಂಖ್ಯಾತರು ಗುಡಾರ ಮತ್ತು ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ.

ಕಂಪ್ಲಿಯ ಭೌಗೋಳಿಕ ಪರಿಸರ

ಹಕ್ಕಿಪಿಕ್ಕಿಯರು ವಾಸವಾಗಿರುವ ಕಂಪ್ಲಿಯು ಹೊಸಪೇಟೆ ಗಂಗಾವತಿ ಮುಖ್ಯರಸ್ತೆಯಲ್ಲಿ ಹೊಸಪೇಟೆಯಿಂದ ೩೫ ಕಿ.ಮೀ. ದೂರದಲ್ಲಿದೆ. ಜಿಲ್ಲಾಕೇಂದ್ರವಾದ ಬಳ್ಳಾರಿಯಿಂದ ೫೪ ಕಿ.ಮೀ. ದೂರದಲ್ಲಿದೆ. ಕಂಪ್ಲಿಯ ಉತ್ತರದಲ್ಲಿ ತುಂಗಭದ್ರಾ ನದಿ ಹರಿಯುತ್ತಿದ್ದು ಊರಿನ ಪೂರ್ವಕ್ಕೆ ಸೋಮಪ್ಪನ ಕೆರೆಯಿದೆ. ೫೮೪೬ ಹೆಕ್ಟೇರ್ ಗ್ರಾಮ ವಿಸ್ತೀರ್ಣವಿದ್ದರೆ, ಠಾಣಾವು ೧೧೦೮೯ ಹೆಕ್ಟೇರ್ ಇದೆ. ಅಲ್ಲದೇ ೨೩ ಜನ ವಸತಿ ಗ್ರಾಮಗಳು ಮತ್ತು ಒಂದು ಬೇಚಾರಕ್ ಗ್ರಾಮವನ್ನು ಹೊಂದಿದ್ದು, ೨೩ ಗ್ರಾಮಗಳಿಗೂ ಕಂಪ್ಲಿಯು ಕೇಂದ್ರವಾಗಿದ್ದು, ೨೩ ವಾರ್ಡ್‌ಗಳನ್ನು ಹೊಂದಿದ ಪುರಸಭೆಯನ್ನು ಹೊಂದಿದೆ.

ಕಂಪ್ಲಿಯ ಬಲಭಾಗದಲ್ಲಿ ತುಂಗಭದ್ರ ನದಿಯು ಹರಿಯುತ್ತಿದ್ದು, ಸುತ್ತಮುತ್ತಲ ಹೊಲಗದ್ದೆಗಳಿಗೆ ಸಮೃದ್ಧವಾಗಿ ನೀರುಣಿಸುತ್ತಿದೆ. ಅಲ್ಲದೇ ಕಂಪ್ಲಿಯಲ್ಲಿ ವಾಸಿಸುವ ಬಹುಸಂಖ್ಯಾತ ಗಂಗಾಮತಸ್ಥರಿಗೆ ನದಿಯು ಜೀವನಾಧಾರವಾಗಿದೆ. ಕಂಪ್ಲಿಯ ಭೌಗೋಳಿಕ ಪರಿಸರವು ಫಲವತ್ತಾದ ಕಪ್ಪುಮಣ್ಣಿನಿಂದ ಕೂಡಿದ್ದು, ಬಾಳೆ ಮತ್ತು ಭತ್ತವನ್ನು ಹೆಚ್ಚಾಗಿ ಬೆಳೆಯುತ್ತಾರೆ. ಅಲ್ಲದೆ ಕಂಪ್ಲಿಯ ಸುತ್ತಮುತ್ತ ಬೆಟ್ಟ, ಗುಡ್ಡ, ಕಾಡು, ಕೆರೆ, ವನಗಳು ತುಂಬಿದ್ದು ಪಕ್ಕದಲ್ಲಿ ಹಲವಾರು ಹಳ್ಳಿಗಳಿವೆ.

ಕಂಪ್ಲಿಯ ಸ್ಥಳನಾಮವನ್ನು ಪರಿಶೀಲಿಸಲು ಸ್ಥಳೀಯ ರೂಢಿ ಕಥೆಗಳು ಮತ್ತು ಶಾಸನಗಳು ಆಧಾರವಾಗಿವೆ. ಕಂಪ್ಲಿಯ ಬಗ್ಗೆ ಇಲ್ಲಿನ ಜನರು ಹೇಳುವ ಕಥೆಗಳೆಂದರೆ "ಹಿಂದೆ ಇಲ್ಲಿ ಕಪಿಲ ಎಂಬ ಋಷಿಯು ತಪಸ್ಸು ಮಾಡುತ್ತಿದ್ದನೆಂದು ನಂತರ ಈ ಪ್ರದೇಶವನ್ನಾಳಿದ ಪ್ರಸಿದ್ಧ ಅರಸನಿಗೆ ಕಂಪಿಲರಾಯ ಎಂದು ಆ ಋಷಿಯ ಹೆಸರನ್ನಿಡಲಾಯಿತು. ಅದರಿಂದಾಗಿ ಈ ಊರಿಗೆ ಕಂಪಿಲ(ಕಂಪ್ಲಿ) ಎಂಬ ಹೆಸರು ಬಂದಿತು" ಎಂದು ಹೇಳುತ್ತಾರೆ(ಮಾಹಿತಿದಾರ: ರಾಜಕುಮಾರ (೪೫), ಕಂಪ್ಲಿ). ಅಲ್ಲದೇ ಇಲ್ಲಿ ಪ್ರಚಲಿತವಿರುವ ಮತ್ತೊಂದು ಕಥೆಯೆಂದರೆ "ಹಿಂದೆ ಈ ಪ್ರದೇಶವನ್ನಾಳುತ್ತಿದ್ದ ಒಬ್ಬ ರಾಜನು ಕೆಂಪು ಹುಲಿಯನ್ನು ಕೊಂದನಂತೆ. ಅಂದಿನಿಂದ ಆತನ ಹೆಸರು ಕೆಂಪು ಹುಲಿರಾಯ ನೆಂದು ಕರೆಯಲಾಯಿತೆಂದು, ಕೆಂಪು ಹುಲಿರಾಯನೆಂಬ ಹೆಸರು ಕ್ರಮೇಣ ಕಂಪಿಲರಾಯ ಎಂದಾಯಿತು. ನಂತರ ಆತನ ಹೆಸರೇ ಊರಿಗೆ ಕಂಪುಲಿ, ಕಂಪ್ಲಿ ಎಂದು ಬರಲು ಕಾರಣವಾಯಿತೆಂದು ತಿಳಿಸುತ್ತಾರೆ". (ರಾಜಕುಮಾರ, ೪೫, ಕಂಪ್ಲಿ) ಈ ರೀತಿಯಾಗಿ ಅಲ್ಲಿನ ಜನರು ಕಂಪ್ಲಿಯ ಸ್ಥಳನಾಮದ ಬಗ್ಗೆ ಪ್ರಚಲಿತವಿರುವ ಕಥೆಗಳನ್ನು ಹೇಳುತ್ತಾರೆ. ಅಲ್ಲದೇ ಕೆಲವು ಶಾಸನಗಳಲ್ಲೂ ಕಂಪ್ಲಿಯ ಬಗ್ಗೆ ಉಲ್ಲೇಖಗಳಿವೆ.

'ಸುಮಾರು ೧೩-೧೪ನೇ ಶತಮಾನದ ಶಾಸನಗಳು ಮೇಲಿನ ಕಥೆಯಲ್ಲಿ ಬರುವ ಕಂಪಿಲರಾಯನನ್ನು ಕುಮ್ಮಟದ ದೊರೆ ಎಂದು ಉಲ್ಲೇಖಿಸುತ್ತವೆ. ಈತನು ಕಂಪಿಲಿ ಪಟ್ಟಣದ ಸೋಮೇಶ್ವರ ದೇವರ

ವರಪ್ರಸಾದದಿಂದ ಹುಟ್ಟಲಾಗಿ ಕಂಪಿಲರಾಯನೆಂದು ಕರೆಯಲಾಗುತ್ತಿದ್ದು, ಈತನ ಮತ್ತೊಂದು ಹೆಸರು ಖಂಡೇರಾಯ ಎಂಬುದಾಗಿದೆ. ಆದರೆ ಕ್ರಿ.ಶ. ೧೦೧೪ರ ಶಾಸನವು ಕಂಪಿಲೆಯನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೦೧೮ರ ಬಾಗಳಿ ಶಾಸನ ನೊಳಂಬ ಪಲ್ಲವರ ರಾಜಧಾನಿ ಕಂಪುಲಿಯನ್ನು ಪ್ರಸ್ತಾಪಿಸುತ್ತದೆ. ನಂತರದ ಕಾಲದಲ್ಲಿ ಕುಮ್ಮಟದ ದೊರೆಗಳ ಪ್ರಮುಖ ಪಟ್ಟಣವಾಯಿತು. ೧೫೪೧ರ ಶಾಸನ ಕಂಪಿಲೆ ಎಂದು, ಕ್ರಿ.ಶ. ೧೫೫೨ರ ವಿಜಯನಗರ ಶಾಸನದಲ್ಲಿ ಕಂಪಿಲ್ಯ ಎಂದು, ಕ್ರಿ.ಶ. ೧೬೯೧ರಲ್ಲಿಯ ಶಾಸನವೊಂದರಲ್ಲಿ ಕಂಪಲೆ ಎಂದು ಉಲ್ಲೇಖಗೊಂಡಿದೆ. ಕಂಪುಲಿಯು ಕಂಪಿಲಿ, ಕಂಪ್ಲಿಯಾಗಿ ರೂಪಾಂತರಗೊಂಡಿದೆ. ಹೀಗೆ ಮೇಲಿನ ಸ್ಥಳೀಯ ಕಥೆಗಳು ಆಧಾರ ರಹಿತವಾಗಿವೆ. ಕಂಪಿಲಿಯಿಂದ ಕಂಪಿಲದೇವನೆಂಬ ಹೆಸರು ಬಂದಿತೇ ವಿನಹಃ ಕಂಪಿಲರಾಯದೇವನಿಂದ ಕಂಪಿಲಿ ಎಂಬ ಹೆಸರು ಬರಲಿಲ್ಲವೆಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ".[೧]

ಪ್ರಾಚೀನಕಾಲದಿಂದಲೂ ಉತ್ತಮ ಆಡಳಿತ ಸ್ಥಳವಾಗಿದ್ದ ಕಂಪ್ಲಿಯು ಕೃಷಿ ಪ್ರಧಾನವಾದ ಸ್ಥಳವಾಗಿದೆ. ತುಂಗಭದ್ರ ನದಿಯಿಂದ ಸಾಕಷ್ಟು ನೀರಿನ ಅನುಕೂಲತೆ ಹೊಂದಿದ್ದು ಪ್ರಾಚೀನ ಕಾಲದಿಂದಲೂ ಇಲ್ಲಿ ಕಾಲುವೆ ನೀರಾವರಿ, ಏತ ನೀರಾವರಿ ಪದ್ಧತಿ ಜಾರಿಯಲ್ಲಿದೆ. ಭತ್ತ, ಬಾಳೆ, ಕಬ್ಬು ಇಲ್ಲಿನ ಪ್ರಧಾನ ಬೆಳೆಗಳಾಗಿವೆ. "ವಿಜಯನಗರ ಕಾಲದಲ್ಲಿ ಬೆನಕನ ಕಾಲುವೆ ಮತ್ತು ಜೋಗಿ ಕಾಲುವೆ ಹಾಗೂ ವಿಜಯನಗರ ಕಾಲುವೆಗಳು ಮುಖ್ಯ ಕಾಲುವೆಗಳಾಗಿವೆ. ಇಲ್ಲಿಯ ಸೋಮನಾಥನ ಕೆರೆಯಿಂದಲೂ ಸಾಕಷ್ಟು ಭೂಮಿ ನೀರಾವರಿಗೆ ಒಳಪಟ್ಟಿತ್ತು".[೨] ಕಂಪ್ಲಿಯು ವಿಶೇಷವಾಗಿ ಸುಗಂಧಿ ಮತ್ತು ಚಿಕ್ಕಿಬಾಳೆ ಹಣ್ಣುಗಳ ಬೆಳೆಗೆ ಪ್ರಸಿದ್ಧಿಯಾಗಿದೆ. ಕಬ್ಬು ಮತ್ತು ಭತ್ತವನ್ನು ಹೆಚ್ಚಾಗಿ ಬೆಳೆಯುವುದರಿಂದ ಇಲ್ಲಿ ಸಕ್ಕರೆ ಕಾರ್ಖಾನೆ ಮತ್ತು ಅಕ್ಕಿ ಗಿರಣಿಗಳು ಕಾರ್ಯನಿರ್ವಹಿಸುತ್ತಲಿವೆ.

ಗಂಡುಗಲಿ ಕುಮಾರರಾಮನ ಹೆಸರಿನೊಡನೆ ಇತಿಹಾಸ ಪ್ರಸಿದ್ಧವಾದ ಕಂಪ್ಲಿಯಲ್ಲಿ ಅನೇಕ ಸಂಘ, ಸಂಸ್ಥೆಗಳಿವೆ. ಕನ್ನಡ ಹಿತರಕ್ಷಕ ಸಂಘ, ನಟರಾಜ ಕಲಾವಿಜಯ ಸಂಘ, ಜನಜಾಗೃತಿ ಸಂಘ, ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ, ಅಕ್ಕಿಗಿರಣಿ ಮಾಲಿಕರ ಸಂಘ, ನವಚೇತನ ಕಲಾ ಸಂಘ, ಚಿಕೇನಕೊಪ್ಪ ಚೆನ್ನವೀರ ಶರಣರ ಬಳಗ, ಯುವಜನ ಸಂಘ, ಸಿರಿಗನ್ನಡ ಬಳಗ, ಗಂಡುಗಲಿ ಕುಮಾರರಾಮ ಯುವಕ ಸಂಘ, ಶ್ರೀ ರಾಮಕೃಷ್ಣ ವಿದ್ಯಾವರ್ಧಕ ಸಂಘ, ಜೆ.ಸಿ. ಸಂಘ, ಸಾಂಗತ್ರಯ ಸಂಸ್ಕೃತ ಪಾಠಶಾಲೆ ಇತ್ಯಾದಿ ಸಂಘ ಸಂಸ್ಥೆಗಳು ಕಂಪಲಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲದೇ ಕಂಪ್ಲಿಯಲ್ಲಿ ಬಹು ಹಿಂದಿನಿಂದಲೂ ಜನಪದ ಸಾಹಿತ್ಯ, ಕಲೆ, ಕಲಾವಿದರು ನೆಲೆಸಿದ್ದಾರೆ. ಇಲ್ಲಿನ ಜನಪದ ಸಾಹಿತ್ಯ ಕಲೆಗಳೆಂದರೆ, ಕೋಲೆಬಸವನ ಆಟದ ಕಲೆ, ಚೌಡಿಕೆಯರ ಕಲೆ, ಡೊಂಬರ

---

೧. ಹೊಸಪೇಟೆ ತಾಲೂಕು ದರ್ಶನ, ಮಹಾದೇವ ಸಿ., ಸುಬ್ಬಣ್ಣ ರೈ ಎ., ಮಾಧವ ಪೆರಾಜೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨, ಪು. ೭೮-೭೯

೨. ಕಂಪ್ಲಿ, ರುದ್ರಪ್ಪ ರ.ಹ., ಬಂಗಿದೊಡ್ಡ ಮಂಜುನಾಥ, ಶ್ರೀಭುವನೇಶ್ವರಿ ಪ್ರಕಾಶನ, ಕನ್ನಡ ಹಿತರಕ್ಷಕಸಂಘ, ಕಂಪ್ಲಿ, ೨೦೦೫, ಪು. ೮೭

ಕುಣಿತ, ಹಕ್ಕಿಪಿಕ್ಕಿಯರ ರಾಮ್‌ಡೋಲ್ ಕುಣಿತ, ಕೋಲಾಟ, ಹುಲಿಯಾಟ, ನಂದಿಕೋಲು ಕುಣಿತದ ಕಲೆ, ಡೊಳ್ಳುಕುಣಿತ, ಲಾವಣಿ ಹಾಡುಗಾರಿಕೆ, ವೀರಗಾಸೆ, ಬಯಲಾಟ, ಮಣ್ಣಿನ ವಿಗ್ರಹ ತಯಾರಿಸುವ ಕಲೆಗಾರರಾದ ಶ್ರೀ ಜಿನಗಾರು ಪರುಶುರಾಮಪ್ಪ ಮತ್ತು ಬೂಸಾರೆ ಕೃಷ್ಣಮೂರ್ತಿ ಇವರು ಪ್ರಸಿದ್ಧರು. ಹಸೆ ಚಿತ್ರಕಲೆ, ಬ್ಯಾಂಡ್ ಕಲಾವಿದರು. ಈ ರೀತಿಯಾಗಿ ಕಂಪ್ಲಿಯಲ್ಲಿ ಹಲವಾರು ಜನಪದ ಕಲಾವಿದರು ಮತ್ತು ಕಲಾ ತಂಡಗಳಿವೆ. ಅಲ್ಲದೆ ಎಲ್ಲ ಬಗೆಯ ಜನಸಮುದಾಯದವರಿದ್ದಾರೆ.

ಕಂಪ್ಲಿಯಲ್ಲಿ ಹರಿಜನ, ಲಿಂಗಾಯಿತ, ಕಬ್ಬೇರು, ಬ್ರಾಹ್ಮಣ, ವೈಶ್ಯ, ನೇವಾರರು, ದೇವಾಂಗ, ಮುಸ್ಲಿಂ, ವಡ್ಡರು, ಅಕ್ಕಸಾಲಿಗರು, ಕುಂಬಾರ, ಸಮಗಾರ, ಬುಚ್ಚಿಗಾರ, ಬೇಡ, ಕುರುಬ, ಉಪ್ಪಾರ, ಸಾಲಯ, ಜೇನುಗಾರ, ಕೊರವ, ಅಡವಿ ಚೆಂಚರು, ರಜಪೂತ, ಕ್ಷತ್ರಿಯ ಮರಾಠಿ, ಕ್ರೈಸ್ತ, ಪಿಂಜಾರ, ಜೈನ, ರಾಯಕರ್, ಅಗಸ, ಹಡಪದ (ಕ್ಷೌರಿಕ), ಪಾತರದವ (ಒಣಜ), ತಮಿಳರು, ಕೊಂಡರಾಮುಡು, ಹಕ್ಕಿಪಿಕ್ಕಿ, ಈಡಿಗ, ಕಮ್ಮರೆಡ್ಡಿ, ರಾಜಲು ಮೊದಲಾದ ಜಾತಿಗಳಿವೆ. ಇವರಲ್ಲಿ ಹರಿಜನರೇ ಹೆಚ್ಚಿನ ಸಂಖ್ಯೆಯಲ್ಲಿರುವರು. ಹಲವು ಸಮುದಾಯಗಳಲ್ಲಿ ಬೇಟೆಯನ್ನೇ ತಮ್ಮ ಕಸುಬಾಗಿಸಿಕೊಂಡು ಜೀವಿಸುವ ವಿಶಿಷ್ಟ ಸಂಸ್ಕೃತಿಯನ್ನು ಅನುಸರಿಸುವ ಹಕ್ಕಿಪಿಕ್ಕಿ ಸಮುದಾಯವು ಹಲವು ವರ್ಷಗಳ ಹಿಂದೆ ವಲಸೆ ಬಂದು ಇಲ್ಲಿನ ನದಿ, ಬೆಟ್ಟ, ಗುಡ್ಡ ಪ್ರದೇಶಗಳನ್ನು ಕಂಡು ತಮ್ಮ ಪಾರಂಪರಿಕ ಬೇಟೆಗೆ ಸೂಕ್ತವಾದ ಸ್ಥಳವೆಂದು ಕೆಲವರು ಇಲ್ಲಿಯೇ ನೆಲೆಸಿದರು.

ಜನಸಂಖ್ಯೆ


ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನ ಕಂಪ್ಲಿ ಪಟ್ಟಣದ ಹಕ್ಕಿಪಿಕ್ಕಿ ಕಾಲೋನಿಯಲ್ಲಿ ಇವರು ವಾಸಿಸುತ್ತಿದ್ದು ಒಟ್ಟು ೯೬ ಕುಟುಂಬಗಳಿವೆ. ಅದರಲ್ಲಿ ೨೫೪ ಪುರುಷರು ಹಾಗೂ ೨೬೪ ಮಹಿಳೆಯರು ಹೀಗಾಗಿ ಒಟ್ಟು ೫೧೮ ಜನಸಂಖ್ಯೆಯನ್ನು ಹೊಂದಿದೆ. ಬಳ್ಳಾರಿ ಜಿಲ್ಲೆಯಲ್ಲಿ ಇವರನ್ನು ಪಾರ್ಧಿಯರೆಂದು ಕರೆಯದೇ 'ಹಕ್ಕಿಪಿಕ್ಕಿ' ಎಂಬ ಹೆಸರಿನಿಂದ ಗುರುತಿಸುತ್ತಾರೆ. ಕಂಪ್ಲಿಯಲ್ಲಿ ವಾಸಿಸುವ ಹಕ್ಕಿಪಿಕ್ಕಿಯವರನ್ನು ಬೆಡಗುವಾರು ಗಮನಿಸಿದಾಗ ಇಲ್ಲಿ ಕೇವಲ ಐದು ಮಾತ್ರ ಉಪಪಂಗಡಗಳಿವೆ. ಈ ಐದು ಉಪಪಂಗಡಗಳನ್ನೇ ನಾವು ಕ್ಷೇತ್ರಕಾರ್ಯದ ಅಂಕಿ ಅಂಶಗಳನ್ನಾಗಿ ಬಳಸಿಕೊಳ್ಳಲಾಗಿದೆ. ಕೋಷ್ಟಕ ೧ರಲ್ಲಿ ಕಾಲೋನಿಯ ಒಟ್ಟು ಜನಸಂಖ್ಯೆಯನ್ನು ಲಿಂಗವಾರು ಪ್ರತ್ಯೇಕ ಮಾಡಿ ನೀಡಲಾಗಿದೆ. ಹಾಗೂ ವೃತ್ತಚಿತ್ರ ೧ರಲ್ಲಿ ಬೆಡಗುವಾರು ಜನಸಂಖ್ಯೆ ಪ್ರಮಾಣವನ್ನು ಗಮನಿಸಬಹುದು.

ಕೋಷ್ಟಕ: ೧. ಕಂಪ್ಲಿ ಕಾಲೋನಿಯ ಹಕ್ಕಿಪಿಕ್ಕಿಯರ ಬೆಡಗುವಾರು ಕುಟುಂಬ, ಲಿಂಗವಾರು ಜನಸಂಖ್ಯೆ ಪ್ರಮಾಣ

ಕ್ರಸಂ.	ಬೆಡಗು	ಕುಟುಂಬ	ಗಂಡು	ಹೆಣ್ಣು	ಒಟ್ಟು
೧.	ಇಕೋತಿಯಾ	೫	೧೮	೧೫	೩೩
೨.	ಕೋರಬಿಯಾ	೪೧	೯೯	೧೦೪	೨೦೩

೩.	ಖೋಡಿಯಾರ್	೨೦	೫೪	೫೦	೧೦೪
೪.	ಪಿಂಪಳಾಜ	೭	೧೮	೨೩	೪೧
೫.	ಸಾವಂಡಿಯಾ	೨೩	೬೫	೭೨	೧೩೭
	ಒಟ್ಟು	೯೬	೨೫೪	೨೬೪	೫೧೮

ವೃತ್ತಚಿತ್ರ: ೧. ಹಕ್ಕಿಪಿಕ್ಕಿಯರ ಬೆಡಗುವಾರು ಜನಸಂಖ್ಯೆ ಪ್ರಮಾಣ



೨.೨. ಹಕ್ಕಿಪಿಕ್ಕಿಯರ ಪೌರಾಣಿಕ ಹಿನ್ನೆಲೆ

ಯಾವುದೇ ಸಮುದಾಯದ ಹಿನ್ನೆಲೆ ಅಥವಾ ಮೂಲವನ್ನು ಹೆಚ್ಚಾಗಿ ಪುರಾಣಗಳ ಆಧಾರದಿಂದ ಹೇಳಲಾಗುತ್ತದೆ. ಪುರಾಣವೆಂದರೆ ಅತಿ ಪ್ರಾಚೀನವಾದುದು ಎಂದರ್ಥ. ವೇದೋಪನಿಷತ್ತು ಸ್ಮೃತಿ ಹಾಗೂ ಮಹಾಕಾವ್ಯಗಳಲ್ಲಿ ಪ್ರತಿಪಾದಿತವಾದ ವಿಚಾರಗಳನ್ನು, ತತ್ವಗಳನ್ನು ಜನಸಾಮಾನ್ಯರಿಗೆ ಕೂಡಾ ತಿಳಿಯುವಂತೆ ಹೇಳುವುದೇ ಪುರಾಣದ ಉದ್ದೇಶ. ಇಲ್ಲಿ ಕಾಲ್ಪನಿಕ ಕಥೆಗಳು, ದಂತಕಥೆಗಳು ಸಹ ಪುರಾಣ ವಸ್ತುಗಳಾಗಿರುತ್ತವೆ. ಹಕ್ಕಿಪಿಕ್ಕಿ ಸಮುದಾಯದವರ ಹಿನ್ನೆಲೆ ತಿಳಿಸುವ ಅನೇಕ ಪೌರಾಣಿಕ ಕಥೆಗಳಿವೆ.

"ಒಮ್ಮೆ ದೇವರು ಆಕಾಶದಲ್ಲಿ ಬೀಜಬಿತ್ತಿದನಂತೆ ಆ ಬೀಜದಿಂದ ಒಬ್ಬ ಕನ್ಯೆ ಹುಟ್ಟಿ ಬಂದಳು. ಆ ಕನ್ಯೆಯ ಬೆವರಿನಿಂದ ಒಂದು ಮಗು ಹುಟ್ಟಿಬಂದಿತು. ಕನ್ಯೆಗೆ ಲೈಂಗಿಕ ಬಯಕೆಯಾಯಿತು. ಬಾಲಕನನ್ನು ಸಂಭೋಗಕ್ಕೆ ಕರೆಯಲು ಅವನು ತಿರಸ್ಕರಿಸುತ್ತಾನೆ. ನಂತರ ಅವಳು ಮತ್ತೊಬ್ಬ ಬಾಲಕನಿಗೆ ಜನ್ಮಕೊಟ್ಟಳು. ಆ ಎರಡನೇ ಬಾಲಕನೂ ಅವಳ ಇಚ್ಛೆಯನ್ನು ತಿರಸ್ಕರಿಸಿದನು. ಇದರಿಂದ ಕೋಪಗೊಂಡ ಆ ಕನ್ಯೆ ಮೂರನೆಯ ಮಗುವಿಗೆ ಜನ್ಮ ನೀಡಿದಳು. ಆ ಮೂರನೆಯ ಬಾಲಕನು ಅವಳ ಇಚ್ಛೆಯನ್ನು ಒಪ್ಪಿಕೊಂಡು ಅವರಿಬ್ಬರ ಸಂಭೋಗದಿಂದ ಒಂದು ಮಗುವಿನ ಜನನವಾಗುತ್ತದೆ. ಅವನೇ ಸೃಷ್ಟಿಯ ಮೊದಲ ಮಾನವ. ಅವನಿಂದ ಅನೇಕ ಜನ ಮಕ್ಕಳು ಹುಟ್ಟುತ್ತಾರೆ. ಅವರಲ್ಲಿ



ಕೊದ್ವಜನ ಮಗ ಕರ್ಣ ಒಬ್ಬ. ಅವನ ಮಗ ಕಚ್ಛಪ ಆ ಕಚ್ಛಪನ ಮಕ್ಕಳು ತೀಡಾ ಹಾಗೂ ಛಾಡಾ. ಛಾಡಾನ ಮಕ್ಕಳು ಊರವರು ಹಾಗೂ ನಗರವಾಸಿಗಳು. ತೀಡಾನಿಗೆ ನಾತಡ್, ಜೋಗಡ್, ಖೀಮಡ್, ಮೋಟಾ ಹಾಗೂ ಮೇಲಾ ಎಂಬ ಮಕ್ಕಳು ಹುಟ್ಟಿದರು. ನಾಥಡ್‌ನ ಸಂತಾನ ಬೈಲಕಮ್ಮಾರರಾದರೆ, ಜೋಗಡ್‌ನ ಸಂತಾನ ಜೋಗಿಗಳಾದರು. ಖೀಮಡ್‌ನ ಸಂತಾನ ವಾಗ್ರಿಗಳಾದರು. ಮೋಟಾನ ವಂಶಜರು ಮಾರ್ವಾಡಿಗಳಾದರೆ ಮೊಲಾನ ವಂಶಜರು ಬಂಜಾರಾ, ಲಂಬಾಣಿಗಳಾದರು ಎಂದು ಹೇಳುತ್ತಾರೆ".[೩] ಈ ರೀತಿಯಾಗಿ ಹಕ್ಕಿಪಿಕ್ಕಿ ಸಮುದಾಯದ ಹಿನ್ನೆಲೆಯನ್ನು ಪೌರಾಣಿಕ ಕಥೆಗಳ ಮೂಲಕ ಹಿರಿಯರು ತಿಳಿಸುತ್ತಾರೆ. ಅಲ್ಲದೆ ಇವರ ಹಿನ್ನೆಲೆಗೆ ಸಂಬಂಧಿಸಿದ ಅದರಲ್ಲೂ ಇವರ ಬೇಟೆಯ ವೃತ್ತಿಗೆ ಸಂಬಂಧಿಸಿದಂತೆ ಹೇಳುವ ಮತ್ತೊಂದು ಕಥೆಯಿದೆ.

ಹಕ್ಕಿಪಿಕ್ಕಿಯರು ತಮ್ಮ ಬೇಟೆಯ ವೃತ್ತಿಗೆ ಸಂಬಂಧಿಸಿದಂತೆ ಹೇಳುವ ಮತ್ತೊಂದು ಕಥೆಯೆಂದರೆ "ರಾಮಾಯಣದ ವಾಲಿ ಮಹಾರಾಜನೊಮ್ಮೆ ಬೇಟೆಗಾಗಿ ಕಾಡಿಗೆ ಹೋಗುತ್ತಾನೆ. ಬೇಟೆಯಾಡಿದ ನಂತರ ಭೋಜನದ ಸಿದ್ಧತೆ ನಡೆಯುತ್ತದೆ. ವಾಲಿಮಹಾರಾಜನು ಒಂದು ವ್ರತದಲ್ಲಿರುತ್ತಾರೆ. ಅದು ಹೆಣ್ಣು ತನ್ನ ಕೈಯಾರೆ ಬಡಿಸಿದ ಊಟದ ಹೊರತಾಗಿ ಊಟ ಮಾಡುವಂತಿಲ್ಲ. ಹೀಗಾಗಿ ವಾಲಿ ಮಹಾರಾಜನು ಊಟ ಮಾಡುವುದಿಲ್ಲ. ಈ ಸುದ್ದಿ ತಿಳಿದ ಎಲ್ಲರೂ ಚಿಂತಿಸ ತೊಡಗುತ್ತಾರೆ. ಬೇಟೆಗಾರರ ಗುಂಪಿನಲ್ಲಿದ್ದ ಕುಂಬಾರನು ಒಂದು ಮಣ್ಣಿನ ಹೆಣ್ಣುಗೊಂಬೆಯನ್ನು ತಯಾರಿಸಿ ಅದಕ್ಕೆ ತಂತ್ರಗಾರಿಕೆ ನೀಡುವುದಾಗಿ ತಿಳಿಸುತ್ತಾನೆ. ಕೊನೆಗೆ ಮಣ್ಣಿನ ಗೊಂಬೆಯಿಂದ ವಾಲಿ ಮಹಾರಾಜರಿಗೆ ಊಟ ಬಡಿಸಲಾಗುತ್ತದೆ. ಊಟದ ನಂತರ ವಿಶ್ರಾಂತಿ ಪಡೆದು ವಾಲಿಯು ಅಲ್ಲಿಂದ ತನ್ನ ದಂಡಿನೊಂದಿಗೆ ಹೊರಟು ಹೋಗುತ್ತಾನೆ. ಆಗ ಆ ಮಣ್ಣಿನ ಗೊಂಬೆ ಅನಾಥವಾಗಿ ಅಲ್ಲಿಯೇ ಉಳಿಯುತ್ತದೆ. ಕೈಲಾಸದಿಂದ ವಿಹಾರಾರ್ಥವಾಗಿ ಶಿವ ಪಾರ್ವತಿಯರು ಅಲ್ಲಿಗೆ ಬಂದಾಗ ಸುಂದರವಾದ ಮಣ್ಣಿನ ಗೊಂಬೆಯನ್ನು ಕಾಣುತ್ತಾರೆ. ಪಾರ್ವತಿಯು ಆ ಮೂರ್ತಿಗೆ ಜೀವಕಳೆ ನೀಡುವಂತೆ ಶಿವನನ್ನು ಪ್ರಾರ್ಥಿಸುತ್ತಾಳೆ. ಶಿವನು ಹಾಗೆಯೇ ಮಾಡುತ್ತಾನೆ. ಅಲ್ಲಿಗೆ ಬೇಟೆಯಾಡಲು ಬಂದ ಬೇಡನೊಬ್ಬನು ಆ ಸುಂದರ ಕನ್ಯೆಯನ್ನು ಮೋಹಿಸಿ ಮದುವೆಯಾಗುತ್ತಾನೆ. ಆ ಸುಂದರ ಕನ್ಯೆ ಹಾಗೂ ಬೇಟೆಗಾರನ ಸಂತಾನವೇ ತಾವು ತಮ್ಮನ್ನು ಮುಂದೆ ವಾಗ್ರಿ ಹರಣಿಶಿಕಾರಿಗಳೆಂದು ಕರೆಯ ತೊಡಗಿದರು" (ಮಾಹಿತಿ: ಶ್ರೀಕಾಂತ (೫೦), ಕೊರಬಿಯಾ).

ಈ ರೀತಿಯಾಗಿ ಹಕ್ಕಿಪಿಕ್ಕಿ ಸಮುದಾಯದ ಸೃಷ್ಟಿಯ ಬಗೆಗೆ ಹಲವಾರು ದಂತ ಕಥೆಗಳು ಲಭ್ಯವಾಗುತ್ತವೆ. ಇವು ಪೌರಾಣಿಕ ಹಾಗೂ ಐತಿಹಾಸಿಕ ಅಂಶಗಳನ್ನು ಒಳಗೊಂಡಿವೆ. ಯಾವುದೇ ಲಿಖಿತ ಆಧಾರಗಳಿಲ್ಲದೆ ಕೇವಲ ಮೌಖಿಕ ರೂಪದಲ್ಲಿರುವ ಇವುಗಳಲ್ಲಿ ಸಹಜವಾಗಿಯೇ ಭಿನ್ನತೆಗಳಿವೆ.

---

೩. ಕರ್ನಾಟಕ ಬುಡಕಟ್ಟುಗಳು, ಸಂಪುಟ-೨, ಲಕ್ಕಪ್ಪಗೌಡ ಎಚ್.ಜೆ., ಕರ್ನಾಟಕದ ಜಾನಪದ ಯಕ್ಷಗಾನ ಅಕಾಡೆಮಿ, ೨೦೦೦, ಪು. ೧೮೩

೨.೩. ಹಕ್ಕಿಪಿಕ್ಕಿಯರ ಚಾರಿತ್ರಿಕ ಹಿನ್ನೆಲೆ

ಹಕ್ಕಿಪಿಕ್ಕಿ ಸಮುದಾಯದ ಹಿನ್ನೆಲೆಯನ್ನು ತಿಳಿಯಲು ಕೇವಲ ಪೌರಾಣಿಕ ಕಥೆಗಳಲ್ಲದೇ ಚರಿತ್ರೆಯೂ ಸಹಾಯಕವಾಗುತ್ತದೆ. "ಚರಿತ್ರೆ ಎಂಬುದು ಒಂದು ನಿರ್ದಿಷ್ಟ ಪರಿಸರದಲ್ಲಿ ಹಿಂದೆ ಸಂಭವಿಸಿದ ಘಟನೆಗಳು ಅಥವಾ ಬದುಕಿ ಬಾಳಿದ ಜನಾಂಗಗಳ ಅಥವಾ ಸಮುದಾಯಗಳ ಅಧ್ಯಯನ. ಎಲ್ಲಾ ಕಾಲಘಟ್ಟಗಳಲ್ಲಿಯ ಮನುಷ್ಯನ ಸ್ಥಿತಿಗತಿಗಳ ಬಗೆಗಿನ ಕಾರಣ ಉದ್ದೇಶ ಹಾಗೂ ಪರಸ್ಪರ ಸಂಬಂಧಗಳನ್ನು ನಿಖರವಾಗಿ ಅರಿತುಕೊಳ್ಳುವ ಪ್ರಯತ್ನ"[೪] ಕೆಲವು ಐತಿಹ್ಯಗಳ ಪ್ರಕಾರ ಹಕ್ಕಿಪಿಕ್ಕಿಯರು ರಜಪೂತ ವಂಶಕ್ಕೆ ಸೇರಿದವರು ಎನ್ನಲಾಗಿದೆ. ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನಗಳಲ್ಲಿ ಇವರ ಸಂಬಂಧಿಗಳು ಬಹಳ ಶ್ರೀಮಂತರಿದ್ದಾರೆ ಎಂದು ಹೇಳುತ್ತಾರೆ.

ಐತಿಹ್ಯ ೧. ಇವರು "ಮಹಾರಾಣಾ ಶಿವಾಜಿ ಮಹಾರಾಜರೆ ನಮ್ಮ ಗುರುಗಳು ಎನ್ನುತ್ತಾರೆ. ಅವರು ಚಾಮುಂಡೇಶ್ವರಿಯನ್ನು ಚೆನ್ನಾಗಿ ಪೂಜಿಸಿ ಭಕ್ತರಾಗಿ ಕುಲದೇವತೆಯನ್ನಾಗಿ ಮಾಡಿಕೊಳ್ಳುತ್ತಿದ್ದರು. ಅಕ್ಬರ್ ಮತ್ತು ರಾಣಾ ಪ್ರತಾಪಸಿಂಗರ ಜಗಳದಿಂದಾಗಿ ನಾವು ಈ ಕಡೆ ಕರ್ನಾಟಕಕ್ಕೆ ಬರಬೇಕಾಯಿತು ಎಂದು ಹೇಳುತ್ತಾರೆ. ಅಕ್ಬರ್ ದೇಶವನ್ನೆಲ್ಲಾ ತನ್ನದನ್ನಾಗಿ ಮಾಡಿಕೊಳ್ಳಬೇಕೆಂದುಕೊಂಡು ರಾಣಾಪ್ರತಾಪನ ನಗರಕ್ಕೆ ಬಂದು ಬಿಡಾರವನ್ನು ಹಾಕಿದ ಆಗ ರಾಣಾ ಹೋಗಿ ಅಮ್ಮ ಅಮ್ಮ ಚಾಮುಂಡೇಶ್ವರಿ, ಅಕ್ಬರ್ ಬಂದಿದ್ದಾನೆ ಅಂತ ಕೇಳಿಕೊಂಡ ಆಗ ಅಮ್ಮ ಬಂದು ಹುಣಸೆ ಮಾವಿನ ಬೀಜಗಳೆರಡನ್ನು ಕೊಟ್ಟಳು. ಇವನ್ನು ಹಾಕಿ ಬೆಳಸು ಇವು ಬೆಳೆದು ದೊಡ್ಡವಾದರೂ ಅಕ್ಬರ್ ನಿನ್ನನ್ನು ಗೆಲ್ಲಲ್ಲಿಕ್ಕಾಗುವುದಿಲ್ಲ ಎಂದು ಆಶೀರ್ವಾದಿಸಿದಳು. ಅದೇ ರೀತಿ ಬೀಜ ಹಾಕಿ ಬೆಳೆಸಲು ಅಕ್ಬರ್ ಅಲ್ಲಿಂದ ತನ್ನ ಡೇರೆಗಳನ್ನು ಕೀಳಲಿಕ್ಕೆ ಶುರು ಮಾಡಿದ. ರಾಣಾನಿಗೆ ಅಮ್ಮ ಇನ್ನು ಒಂದು ಮಾತು ಹೇಳಿತು. ಆ ಮಾತೇನೆಂದರೆ, ಈ ಬಂಗಾರದ ಕುದುರೆ ಏರು ಇದು ಒಂದು ಹೊಡೆತಕ್ಕೆ ದೇವಕೊಂಡಕ್ಕೆ, ಇನ್ನೊಂದು ಹೊಡೆತಕ್ಕೆ ಸುರಿಸ್ ಕೊಂಡಕ್ಕೂ ಹೋಗುತ್ತೆ ಎಂದು ಹೇಳಿಕೊಟ್ಟಿತು. ಆ ಕುದುರೆಯನ್ನೇರಿದ ರಾಣಾ ಒಂದು ಹೊಡೆತಕ್ಕೆ ದೇವಕೊಂಡಕ್ಕೆ ಬಂದ. ಅಲ್ಲಿ ಸ್ನಾನ ಮಾಡಿದ. ಆ ನಂತರ ಆ ನೀರು ಹುಳವಾಯಿತು. ಇನ್ನೊಂದು ಹೊಡೆತಕ್ಕೆ ಸುರಿಸ್ ಕೊಂಡಕ್ಕೆ ಹೋದ. ಅಲ್ಲಿ ಬಾಯಿತೊಳೆದುಕೊಂಡ. ಆಗ ದೇವಿ ಮತ್ತೇ ಪ್ರತ್ಯೇಕ್ಷವಾಗಿ ಈ ಒಂದು ಕತ್ತಿ ಕೊಡ್ತೀನಿ ಈ ಕತ್ತಿಗೆ ಅಕ್ಬರನೇ ಸಿಕ್ತಾನೋ ಇಲ್ಲವೇ ಅವನ ಮಗನೇ ಸಿಕ್ತಾನೋ ಗೊತ್ತಿಲ್ಲ ಅಂತ್ಹೇಳಿ ಖಡ್ಗವನ್ನು ಕೊಟ್ಟು ಮಾಯವಾಗಿ ಬಿಟ್ಟಿತು. ಆಮೇಲೆ ಜಗಳವಾಯಿತು. ಅಕ್ಬರ್ ಸಿಗಲಿಲ್ಲ. ಅವನ ಮಗ ಸಿಕ್ಕು ಬಿಟ್ಟ ಆಗ ಅಲ್ಲಿ ರಕ್ತದ ಕೋಡಿಯೇ ಹರಿಯಿತು. ಅಮ್ಮ ಮುಂಚನೆ ಹೇಳಿತು. ಮೊದಲ ರಕ್ತ ನನಗೆ ತಗೋ ಅಮ್ಮ ಅಂತ ಕತ್ತಿಯಿಂದ ಕಾಣಿಸಬೇಕು ಅಂತ ಈ ಜಗಳದಲ್ಲಿ ರಾಣಾ ಅಮ್ಮನಿಗೆ ರಕ್ತತೋರಿಸೋದನ್ನು ಮರೆತುಬಿಟ್ಟ, ಬದಲಿಗೆ ರಕ್ತ ತೆಗೆದು ತನ್ನ ಹಣೆಗೆ ಇಟ್ಟುಕೊಂಡ. ಆಗ ದೇವಿ ಅವನಿಗೆ ಶಾಪಕೊಟ್ಟಳು. ನಿನ್ನ

---

೪. ಸ್ಥಳೀಯ ಚರಿತ್ರೆ ಅಧ್ಯಯನ ತಾತ್ವಿಕತೆ ಮತ್ತು ಸ್ವರೂಪ, ಲಕ್ಷ್ಮಣ್ ತೆಲಗಾವಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೭, ಪು. ೬

ಕತ್ತಿ ನಿನಗೆ ತಿರುಗಲಿ ಎಂದು ಆಗ ಪ್ರತಾಪನು ಸತ್ತ. ಅವನ ಹೆಂಡತಿಯು ಬಂದು ನೋಡಿದಳು. ತನ್ನ ಗಂಡ ಕಾಣಲಿಲ್ಲ. ಆಗ ಅಮ್ಮನಿಗೆ ನನ್ನ ಗಂಡನ ತಲೆ ತೋರಿಸಿಕೊಟ್ಟರೆ ನಾನು ಸತಿ ಆಗ್ತೀನಿ ಅಂತ ಬೇಡಿಕೊಂಡಳು. ಆಗ ಮುಂಡ ಎದ್ದು ನಿಂತಿತು. ಹತ್ತು ನಿಮಿಷ ಆದ ಮೇಲೆ ಕೆಳಗೆ ಬಿದ್ದಿತು. ರಾಣಿ ತನ್ನ ಮಗನಿಗೆ ಮಗನೇ, ನಿನ್ನ ಅಪ್ಪನ ಜೊತೆ ನಾನು ಸತಿ ಆಗ್ತೀನಿ ಎಂದು ತನ್ನಷ್ಟಕ್ಕೆ ತಾನು ಬೆಂಕಿ ಇಟ್ಟುಕೊಂಡು ಸತ್ತಳು. ಆಗ ಉಳಿದ ಸಣ್ಣ ಮಕ್ಕಳಾದ ನಾವು ಪಾರ್ಧಿಯರು ಗತಿಯಿಲ್ಲದೆ ಬೇಡೋದು, ತಿನ್ನೊದು ಮಾಡುತ್ತಾ ಊರೂರು ಸುತ್ತುತ್ತಾ ಕರ್ನಾಟಕಕ್ಕೆ ಬಂದೆವು ಎಂದು ತಮ್ಮ ಬುಡಕಟ್ಟಿನ ಐತಿಹಾಸಿಕ ಕತೆ ಹೇಳುತ್ತಾರೆ".[೫]

ಈ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಿದರೆ ಮತ್ತು ಪ್ರಸ್ತುತ ಹಕ್ಕಿಪಿಕ್ಕಿಯರು ಮಾತನಾಡುವ ಭಾಷೆಯನ್ನು ನೋಡಿದರೆ ಇವರು ಗುಜರಾತ್ ಮೂಲದವರೆಂದು ತಿಳಿದು ಬರುತ್ತದೆ. 'ಪಾರ್ಧಿ' ಎಂದು ಕರೆಸಿಕೊಳ್ಳುವ ಇವರು ರಾಣಾ ಪ್ರತಾಪಸಿಂಗನ ಅಂಗರಕ್ಷಕರಾಗಿದ್ದರು. 'ಪಾರ್ಧಿ' ಎಂದರೆ ಅಂಗರಕ್ಷಕ ಎಂದರ್ಥ. ರಾಣಾಪ್ರತಾಪಸಿಂಗನು ಅಕ್ಬರ್‌ನಿಂದ ಮಡಿದ ನಂತರ ಅವನ ಅನುಯಾಯಿಗಳಾದ ಇವರು ಮುಸ್ಲಿಮರ ದಾಳಿಯನ್ನು ತಪ್ಪಿಸಿಕೊಳ್ಳಲು ಕಾಡು ಸೇರಿದರು, ಕಾಡಿನಲ್ಲಿ ಹಕ್ಕಿಗಳನ್ನು ಬೇಟೆಯಾಡುತ್ತಾ ಜೀವನ ಸಾಗಿಸಿದರು. ನಂತರದ ದಿನಗಳಲ್ಲಿ ಕೆಲವರು ಊರು, ನಗರಗಳಿಗೆ ಬಂದರೆ ಮತ್ತೆ ಕೆಲವರು ಕಾಡಲ್ಲೇ ವಾಸಿಸತೊಡಗಿದರು. ಹಕ್ಕಿಪಿಕ್ಕಿಯರು ಇಂದು ಒಂದು ಕಡೆ ನೆಲೆಯೂರಿದ್ದರೂ ತಮ್ಮ ಅಲೆಮಾರಿತನವನ್ನು ಪೂರ್ಣವಾಗಿ ತೊರೆದಿಲ್ಲ ಎಂದು ಹೇಳಬಹುದು.

ಐತಿಹ್ಯ ೨. ಕರ್ನಾಟಕದಲ್ಲಿ ವಾಸಿಸುವ ಹಕ್ಕಿಪಿಕ್ಕಿ ಸಮುದಾಯದ ಹಿರಿಯರು ತಮ್ಮ ಮೂಲದ ಬಗ್ಗೆ ತಮ್ಮ ಹಿರಿಯರು ಹೇಳಿದ ಕಥೆಗಳನ್ನೇ ನಂಬಿ ಅದನ್ನೇ ತಮ್ಮ ಮಕ್ಕಳು, ಮೊಮ್ಮಕ್ಕಳಿಗೆ ಹೇಳುತ್ತಾ ಬಂದಿದ್ದಾರೆ. ಇವರು ಹೇಳುವ ಐತಿಹಾಸಿಕ ಕಥೆಗಳಿಗೆ ಆಧಾರ ಇರುವುದಿಲ್ಲ ಮತ್ತು ಲೇಖನಗಳು ಸಿಗುವುದಿಲ್ಲ. ಇದನ್ನು ಬರಿ ಮೌಖಿಕವಾಗಿ ಹೇಳುತ್ತಾ ಬರುತ್ತಿದ್ದಾರೆ. ಇವರ ಬಗ್ಗೆ ಕೆಲವು ಹಿರಿಯರು ಹೇಳಿದ ಕಥೆಗಳೆಂದರೆ "ಮೊದಲು ಬ್ರಹ್ಮಾಂಡ ಸೃಷ್ಟಿಯಾದಾಗ ಶಿವಪಾರ್ವತಿಯರು ಲೋಕಸಂಚಾರಕ್ಕಾಗಿ ಬಂದರು. ಲೊಕವೆಲ್ಲ ನಿಶ್ಯಬ್ಧವಾಗಿರುವುದನ್ನು ಕಂಡು ಭೂಮಿಯ ಮೇಲೆ ಶಿವಪಾರ್ವತಿಯರು ಇಳಿದು ಬಂದರು. ಪಾರ್ವತಿಯು ಭೂಮಿಯ ಒಂದು ಹಿಡಿ ಮಣ್ಣನ್ನು ತೆಗೆದುಕೊಂಡು ಎರಡು ಮಣ್ಣಿನ ಮೂರ್ತಿಗಳನ್ನು ಮಾಡಿದಳು. ಅದರಲ್ಲಿ ಒಂದು ಹೆಣ್ಣು ಒಂದು ಗಂಡು, ಅವುಗಳನ್ನು ಅಲ್ಲೆ ಬಿಟ್ಟು ಲೋಕಸಂಚಾರಕ್ಕೆ ಹೊರಟು ಹೋದರು. ಹೀಗೆ ದಿನಕಳೆದಂತೆ ಒಂದು ದಿನ ಶಿವಪಾರ್ವತಿಯರು ಅದೇ ಮಾರ್ಗವಾಗಿ ಲೋಕಸಂಚಾರ ಮುಗಿಸಿಕೊಂಡು ಬರುವಾಗ ತಾವು ಮಾಡಿದ ಮಣ್ಣಿನ ಮೂರ್ತಿಗಳು ಹೇಗಿದ್ದಾವೆ ಎಂದು ನೋಡಿ ಹೋಗಲು ಬಂದರು. ತಾವು ಮಾಡಿದ ಮೂರ್ತಿಗಳು ಮಾನವ ಅವತಾರ ತಾಳಿ ಕಾಡಿನಲ್ಲಿ ಅಣ್ಣ ತಂಗಿಯಾಗಿ ಬಾಳುವುದನ್ನು

---

೫. ಪಾರ್ಧಿ, ಲಕ್ಕಿಪೃಥ್ವಿರಾಜ್, ಶಿಕಾರಿರಾಮು ಎಚ್.ಪಿ., ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೮ ಪು. ೭-೮

ಕಂಡು ಶಿವಪಾರ್ವತಿಯರು ಅವರಿಬ್ಬರನ್ನು ಹತ್ತಿರ ಕರೆಯಿಸಿ ನೀವು ಈ ತರಹ ಜೀವನ ನಡೆಸಿದರೆ ಮುಂದೆ ಲೋಕ ಬೆಳೆಯುವುದಾದರೂ ಹೇಗೆ ಆದ್ದರಿಂದ ನಿಮ್ಮಿಬ್ಬರ ಸಂಬಂಧವು ಇಂದಿನಿಂದ ಗಂಡ ಹೆಂಡತಿಯಾಗಿ ಜೀವನ ಸಾಗಿಸಿ ಎಂದು ಅರಳಿ ಮರದ ಎಲೆಯನ್ನು ಇಬ್ಬರ ಹಣೆಗೆ ಕಟ್ಟಿ ಮದುವೆ ಮಾಡಿದರು. ಕಾಲಕಳೆದಂತೆ ಅವರಿಗೆ ಆರು ಜನ ಗಂಡು ಆರು ಜನ ಹೆಣ್ಣುಮಕ್ಕಳು ಜನಿಸಿದರು. ಮಕ್ಕಳು ಬೆಳೆದಂತೆ ಇವರ ತಂದೆ ತಾಯಿ ತಮಗೆ ಶಿವಪಾರ್ವತಿಯರು ಮದುವೆ ಮಾಡಿದ ಮಾರ್ಗವನ್ನೇ ತಮ್ಮ ಮಕ್ಕಳಿಗೆ ಮಾಡಿದರು. ಹೀಗೆ ತಮ್ಮ ಮಕ್ಕಳಿಗೆ ಮದುವೆ ಮಾಡಿ ಇನ್ನು ನಿಮ್ಮ ಜೀವನ ನೀವೇ ಸಾಗಿಸಿ ಎಂದು ಹೇಳಿದರು. ಅಲ್ಲಿಂದ ಅವರು ಹಿರಿಯ ಅಣ್ಣನ ಮಾರ್ಗದರ್ಶನದಲ್ಲಿ ಲೋಕಸಂಚಾರಕ್ಕೆ ಹೊರಟರು. ಹೋಗುವ ದಾರಿಯಲ್ಲಿ ಎಂಜಲ ಎಲೆಯಲ್ಲಿ ಬಿಟ್ಟ ಲಾಡನ್ನು ತಿನ್ನಲು ಆಸೆಪಟ್ಟು ತೆಗೆದುಕೊಂಡ ತಮ್ಮನನ್ನು ನೀನು ನಮ್ಮೊಡನೆ ಬರುವುದು ಬೇಡ ಇನ್ನು ನೀನು ಇಲ್ಲಿಯೇ ಇರು ಎಂದು ಅವನನ್ನು ಅಲ್ಲಿಯೇ ಬಿಟ್ಟು ಹೊರಟರು. ಅವನು ಮುಂದೆ 'ಬಾವುರ್ರಿ'ಯಾಗಿ ಜೀವಿಸಿದನು. ಅಣ್ಣನ ಜೊತೆ ಉಳಿದ ನಾಲ್ಕು ಜನ ಹೊರಟರು. ಮುಂದೆ ಹೋಗುವಾಗ ದಾರಿಯಲ್ಲಿ ಬಿದ್ದಿದ್ದ ಕಬ್ಬಿಣದ ತುಂಡನ್ನು ಕಂಡು ಅದನ್ನು ತೆಗೆದುಕೊಂಡು ಚೂರಿಯನ್ನು ತಯಾರಿಸಲು ಕೂಳಿತುಕೊಂಡನು. ಆತನಿಗೆ ಮುಂದೆ ಇದೇ ಕೆಲಸ ನಿನ್ನದು ಎಂದು ಹೇಳಿ ಮುಂದೆ ಹೊರಟರು. ಕಬ್ಬಿಣದ ಚೂರಿನಿಂದ ಚಾಕು ತಯಾರು ಮಾಡಿದ್ದರಿಂದ ಅವನು 'ಬಯಲು ಕಂಬಾರ'ನಾಗಿ ಜೀವನ ಸಾಗಿಸ ತೊಡಗಿದನು. ಮುಂದೆ ಹಿರಿಯ ಅಣ್ಣನ ಜೊತೆಯಲ್ಲಿ ಉಳಿದ ಮೂವರು ಹೊರಟರು. ಹೋಗುವ ದಾರಿಯಲ್ಲಿ ಒಂದು ಪ್ರಾಣಿಯ ಗುಂಪನ್ನು ಕಂಡು ಪಕ್ಕದಲ್ಲಿಯೇ ಬೆಳೆದುನಿಂತ ಬಿದಿರಿನ ಕೋಲಿನಿಂದ ಪ್ರಾಣಿಯನ್ನು ಕೊಂದನು. ಅವನಿಗೂ ಅದೇ ರೀತಿ ನೀನು ಇದೇ ವೃತ್ತಿಯನ್ನು ಮಾಡಿ ಕೊಂಡು ಬದುಕು ನಮ್ಮ ಜೊತೆ ಬರುವುದು ಬೇಡ ಎಂದು ಹೊರಟರು. ಅಂದಿನಿಂದ ಅವನು 'ಜೋಗಿ' ಆಗಿ ಬಾಳತೊಡಗಿದ. ಉಳಿದವರು ಹೋಗುವ ಸಂದರ್ಭದಲ್ಲಿ ಒಬ್ಬ ಕಾಡಿನಲ್ಲಿದ್ದ ಕಟ್ಟಿಗೆಗಳ ಗುಂಪನ್ನು ಕಂಡು ಕಟ್ಟಿಗೆಗಳನ್ನು ಮುರಿಯಲು ಪ್ರಾರಂಭಿಸಿದನು. ಅಲ್ಲಿಂದ ಅವನು ಕಟ್ಟಿಗೆಗಳನ್ನು ಮಾರಿ ಜೀವನ ನಡೆಸುತ್ತಾ ಅಲ್ಲಿಯೇ ಉಳಿದನು. ಅವನು 'ಲಂಬಾಣಿ'ಯಾಗಿ ಬಾಳತೊಡಗಿದನು. ಉಳಿದ ಇಬ್ಬರು ಮುಂದೆ ಹೊರಟರು. ಒಂದು ಜಾತಿಯ ಪಕ್ಷಿಯನ್ನು ಕಂಡು ಅದನ್ನು ತನ್ನ ತಲೆ ಕೂದಲೊಂದನ್ನು ಕಿತ್ತು ಒಂದು ಪಾಶಿಮಾಡಿ (ಉರುಲು) ಆ ಪಕ್ಷಿಯನ್ನು ಹಿಡಿದನು. ಅದನ್ನು ಕಂಡ ಅಣ್ಣನು ನೀನು ಇನ್ನು ಮುಂದೆ ಇದೇ ಉದ್ಯೋಗ ಮಾಡಿಕೊಂಡಿರು ಎಂದು ಹೇಳಿ ಅವನನ್ನು ಕಾಡಿನಲ್ಲಿ ಬಿಟ್ಟು ಹೊರಟು ಹೋದನು ಅಲ್ಲಿಂದ ಅವನು 'ವಾಗ್ರಿ'(ಪಾರ್ಧಿ/ಹಕ್ಕಿಪಿಕ್ಕಿ)ಯಾಗಿ ಬಾಳತೊಡಗಿದ ಮುಂದೆ ಹಿರಿ ಅಣ್ಣ. ಹಿಂದೆ ಎಲ್ಲರೂ ಎಲ್ಲ ಅಣ್ಣತಮ್ಮಂದಿರು ದುಡಿದ ಹಣದ ಗಂಟನ್ನು ತೆಗೆದು ಕೊಂಡು ನಾಡನ್ನು ಸೇರಿಕೊಂಡು ವ್ಯಾಪಾರ ಮಾಡುತ್ತಾ ಜೀವನ ಮಾಡತೊಡಗಿದನು. ಮುಂದೆ ಅವನು 'ಮಾರವಾಡಿ'ಯಾಗಿ ಬಾಳತೊಡಗಿದನು. ಹೀಗೆ ನಮ್ಮ ಹಿರಿಯರು ಜಾತಿಗಳು ಹುಟ್ಟಿದ್ದನ್ನು ಕಥೆಯಾಗಿ ಹೇಳುತ್ತಾರೆ". ಇಂತಹ ಅನೇಕ ಕಥೆಗಳನ್ನು ಹಕ್ಕಿಪಿಕ್ಕಿ ಹಿರಿಯರು ತಮ್ಮ ಮೂಲ ಹಿನ್ನೆಲೆ ಕುರಿತು ಹೇಳುತ್ತಾರೆ(ಮಾಹಿತಿದಾರರು: ಶಿಕಾರಿ ರಾಮು, ೫೦, ಸಾವಂಡಿಯಾ).

೨.೪. ಸಾಮಾಜಿಕ ಹಿನ್ನೆಲೆ

ಭಾರತೀಯ ವರ್ಣ ವ್ಯವಸ್ಥೆಯ ಸಂದರ್ಭದಲ್ಲಿ ಹಕ್ಕಿಪಿಕ್ಕಿ ಸಮುದಾಯದವರು ಶೂದ್ರರಾಗಿದ್ದು ಇತರೆ ಮೇಲ್ಜಾತಿಯವರ ಮನೆಗಳಲ್ಲಿ ಸಹಪಂಕ್ತಿ ಭೋಜನಕ್ಕೆ ಅನರ್ಹರಾಗಿದ್ದಾರೆ ಹಾಗೂ ಈ ಸಮುದಾಯ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಸ್ಥರದವರೆಂದು ಗುರುತಿಸಲ್ಪಟ್ಟಿದ್ದಾರೆ. ಆದುದರಿಂದ ಹಕ್ಕಿಪಿಕ್ಕಿ ಸಮುದಾಯವು ತುಂಬಾ ಸಂಕಷ್ಟ ಸ್ಥಿತಿಯಲ್ಲಿದೆ. ಇವರು ಊರಿಂದ ಊರಿಗೆ ದುಡಿಮೆಯನ್ನು ಹರಸಿ ಸಂಚರಿಸುವ ಸಮುದಾಯವರಾಗಿದ್ದು ಹೆಚ್ಚಾಗಿ ನಗರದ ಹೊರ ಭಾಗದ ಕೊಳಚೆ ಪ್ರದೇಶ ಅಥವಾ ಗ್ರಾಮದ ವಿಶಾಲವಾದ ಬಯಲು ಮೈದಾನಗಳಲ್ಲಿ ತಾತ್ಕಾಲಿಕವಾಗಿ ಗುಡಾರಗಳನ್ನು ಹಾಕಿಕೊಂಡು ಸುತ್ತಮುತ್ತಲಿನ ಕಾಡುಗಳಲ್ಲಿ ಬೇಟೆಯಾಡುತ್ತಾ ಅರಣ್ಯ ಉತ್ಪನ್ನಗಳನ್ನು ಸ್ಥಳೀಯರಿಗೆ ಮಾರಾಟ ಮಾಡುತ್ತಾ ಮುಂದಿನ ಊರುಗಳಿಗೆ ಅಲೆಮಾರಿಗಳಾಗಿ ಅಲೆಯುತ್ತಾ ಹೋಗುವರು.

ಮಾನವ ಮೂಲತಃವಾಗಿ ಕಾಡಿನಲ್ಲಿ ವಾಸಿಸುತ್ತಿದ್ದು, ಗೆಡ್ಡೆ ಗೆಣಸು, ಹಣ್ಣು ಹಂಪಲುಗಳನ್ನು ತಿಂದು ಬದುಕುತ್ತಿದ್ದನು. ಬೇಟೆಯನ್ನಾಡುವ ಮೂಲಕ ಆಹಾರವನ್ನು ಸಂಗ್ರಹಿಸುತ್ತಿದ್ದನು. ಮಾನವನಿಗೆ ಬೇಟೆಯು ಅಂದಿನ ಆಹಾರೋತ್ಪಾದನೆಯ ಪ್ರಮುಖ ಸಾಧನವಾಗಿತ್ತು. ಕಾಡಿನಲ್ಲಿದ್ದ ಮಾನವ ಪ್ರಾಣಿಗಳ ಜೊತೆ ಬದುಕುತ್ತಾ ಕೆಲವನ್ನು ಕೊಲ್ಲುತ್ತಾ ಕೆಲವನ್ನು ಸಾಕುತ್ತಾ ಜೀವನ ನಡೆಸುತ್ತಿದ್ದ. ಕ್ರಮೇಣ ಬೇಟೆ, ಪಶುಪಾಲನೆ, ಕೃಷಿ ಹಂತಗಳು ಮಾನವ ಬೆಳವಣಿಗೆಯ ವಿವಿಧ ಮಜಲುಗಳಾದವು. ಪ್ರಮುಖ ಉತ್ಪಾದನಾ ವಿಧಾನವಾದ ಬೇಟೆ ಮುಂದೆ ಒಂದು ಪ್ರಾಸಂಗಿಕ ಕ್ರಿಯೆಯಾಯಿತು. ಒಂದು ಕಾಲದಲ್ಲಿ ರಾಜಮಹಾರಾಜರಿಗೆ ಬೇಟೆಯಾಡುವುದು ಮನೋರಂಜನೆ ಕ್ರಿಯೆಯಾಗಿ ಪರಿವರ್ತನೆ ಹೊಂದುವಷ್ಟರ ಮಟ್ಟಿಗೆ ಬದಲಾವಣೆಯಾಯಿತು. ಮಾನವ ಸಮೂಹದಲ್ಲಿನ ವ್ಯಕ್ತಿಗಳು ತಮ್ಮದೇ ಆದ ಅನುಭವಜ್ಞಾನ ಶಿಸ್ತುಗಳನ್ನು ಬೆಳೆಸಿಕೊಳ್ಳಲು ಪ್ರಾರಂಭಿಸಿ ಅಂದರೆ ಮಣ್ಣಿನಿಂದ ಮಡಿಕೆ, ಇಟ್ಟಿಗೆಗಳು, ಕಟ್ಟಿಗೆಯಿಂದ ಕಿಟಕಿ, ಬಾಗಿಲುಗಳು, ಕಲ್ಲಿನಿಂದ ಆಯುಧಗಳು ಹಿತ್ತಾಳೆ, ತಾಮ್ರ, ಕಂಚುಗಳಿಂದ ಅಲಂಕಾರಿಕ ವಸ್ತುಗಳನ್ನು ಅದೇ ರೀತಿ ಕಬ್ಬಿಣದ ಮತ್ತು ಉಕ್ಕುಗಳಿಂದ ಕೃಷಿ ಸಲಕರಣೆಗಳನ್ನು, ನೂಲಿನಂತಹ ವಸ್ತುಗಳಿಂದ ನೇಯ್ಗೆಯಂತಹ ಕೆಲಸಗಳು, ಮಂದಿರ, ಮನೆ, ಕೋಟೆ ಕಟ್ಟಡಗಳ ರಚನೆಗಳು ಚಿತ್ರಕಲೆ ಇತ್ಯಾದಿ ಹೀಗೆ ಮಾನವ ತನ್ನದೇ ಆದಂತಹ ಜ್ಞಾನಶಿಸ್ತುಗಳನ್ನು ಬೆಳೆಸಿಕೊಳ್ಳುತ್ತಾ ಬುಡಕಟ್ಟು ಅಲೆಮಾರಿ ಸಮುದಾಯಗಳು ಹುಟ್ಟಿಕೊಂಡಿರುವುದು ಐತಿಹಾಸಿಕವಾದಂತಹ ಸತ್ಯವಾಗಿದೆ. ಇಂತಹ ಅನೇಕ ಬುಡಕಟ್ಟು ಅಲೆಮಾರಿ ಸಮುದಾಯಗಳಲ್ಲಿ ಹಕ್ಕಿಪಿಕ್ಕಿ ಸಮುದಾಯವೂ ಒಂದು. ಈ ಸಮುದಾಯವು ತನ್ನ ಮೂಲವೃತ್ತಿ ಬೇಟೆಗಾರಿಕೆಯಲ್ಲದೆ ಇತರ ಉಪಕಸುಬುಗಳನ್ನು ಅನುಸರಿಸುತ್ತಾ ಇತರ ಅಲೆಮಾರಿ ಸಮುದಾಯಗಳಂತೆ ಜೀವಿಸುತ್ತಿದ್ದಾರೆ.

ಹಕ್ಕಿಪಿಕ್ಕಿ ಸಮುದಾಯವು ಅಲೆಮಾರಿ ಜೀವನ ನಡೆಸುವುದರೊಂದಿಗೆ ತಮ್ಮದೇ ಆದಂತಹ ಭಾಷೆ ಮತ್ತು ಸಂಸ್ಕೃತಿಯನ್ನು ಹೊಂದಿದ್ದು, ಬೇಟೆ ಹಾಗೂ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಮಾರುವುದು, ಮಣಿಸರ, ಸೂಜಿ ದಾರ, ದಬ್ಬಳ ಮಾರುವುದು, ಗಿಡಮೂಲಿಕೆಗಳು, ಪ್ರಾಣಿ ಪಕ್ಷಿಗಳ

ಚರ್ಮ, ಕೊಬ್ಬಗಳನ್ನು ಮಾರಾಟ ಮಾಡಿ ದಿನನಿತ್ಯದ ಬದುಕನ್ನು ಸಾಗಿಸುತ್ತಿರುವರು. ಭಾರತೀಯ ಸಮಾಜದಲ್ಲಿ ಮುಂದುವರೆದ ಇತರ ಸಮುದಾಯಗಳೊಂದಿಗೆ ಹೋಲಿಸಿ ನೋಡಿದಾಗ ಬುಡಕಟ್ಟು ಮತ್ತು ಅಲೆಮಾರಿ ಬುಡಕಟ್ಟು ಸಮುದಾಯಗಳ ಬೆಳವಣಿಗೆಯು ಸಹಜವಾಗಿಯೇ ಅತ್ಯಂತ ಹಿಂದುಳಿದಿರುವುದು ಕಂಡುಬರುತ್ತದೆ. ಪ್ರಾಚೀನ ಆದಿವಾಸಿ ಮಾನವರಂತೆ ಅವರ ಶಾರೀರಿಕ ಚಹರೆಗಳು ವೇಷಭೂಷಣ, ಗುಡಿಸಲುಗಳು, ಗುಡಾರಗಳು ತಮ್ಮದೇ ಆದ ಸಾಂಪ್ರದಾಯಿಕ ಆಚರಣೆಗಳು ವಿಧಿ ನಿಷೇಧಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಚರಣೆಗಳು, ಕೌಟುಂಬಿಕ ರಚನೆಗಳಲ್ಲಿ ಭಿನ್ನವಾದ ಜೀವನ ವಿಧಾನವನ್ನು ಅನುಸರಿಸುವ ಅಲೆಮಾರಿ ಬುಡಕಟ್ಟು ಸಮುದಾಯ ಇದಾಗಿದೆ.

ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯದ ಹಿನ್ನೆಲೆ

ಪ್ರಸ್ತುತ ಕರ್ನಾಟಕದಾದ್ಯಂತ ನೆಲೆಸಿರುವ ಹಕ್ಕಿಪಿಕ್ಕಿ ಸಮುದಾಯವರು ಮೂಲತಃ ಮಧ್ಯಭಾರತದ ವಿಂಧ್ಯ ಪರ್ವತದವರಾಗಿದ್ದಾರೆ. ದೇಶದಾದ್ಯಂತ ಇವರನ್ನು ಪಾರ್ಧಿ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ಪಾರ್ಧಿ ಎಂದರೆ ಅಂಗರಕ್ಷಕ ಎಂದರ್ಥ. ಗುಜರಾತ್ ಮತ್ತು ರಾಜಸ್ಥಾನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಇವರು ಕಾಲಾಂತರದಲ್ಲಿ ಮಹಾರಾಷ್ಟ್ರ, ಆಂಧ್ರ, ಕರ್ನಾಟಗಳಲ್ಲಿ ಹರಡಿಕೊಂಡರು. ಗುಜರಾತ್ ಮತ್ತು ರಾಜಸ್ಥಾನದ ಮೂಲದವರಾದ ಹಕ್ಕಿಪಿಕ್ಕಿಯರು. ಅಕ್ಬರ್ ಮತ್ತು ರಾಣಾಪ್ರತಾಪಸಿಂಹನ ನಡುವೆ ನಡೆದ ಯುದ್ಧದಲ್ಲಿ ರಾಣಾಪ್ರತಾಪಸಿಂಹನು ಸಾವನ್ನಪ್ಪುತ್ತಾನೆ. ರಾಣಾನ ಸಾವಿನ ನಂತರ ಅವನ ಅಂಗರಕ್ಷಕರಾಗಿದ್ದ ಇವರು ಮುಸ್ಲಿಂರ ದಾಳಿಗೆ ಹೆದರಿ ಅಲ್ಲಿಂದ ಚದುರಿ ಕಾಡುಗಳನ್ನು ಸೇರಿದರು. ಕೆಲವು ಗುಂಪುಗಳು ಆಂಧ್ರದ ಮೂಲಕ ಕರ್ನಾಟಕಕ್ಕೆ ಬಂದರು ಕೆಲವರು ಆಂಧ್ರದಲ್ಲಿಯೇ ಉಳಿದರು. ಬೇಟೆಯನ್ನೇ ತಮ್ಮ ಜೀವನಾಧಾರವನ್ನಾಗಿ ಮಾಡಿಕೊಂಡು, ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುತ್ತಾ ಅಲೆಮಾರಿಯಾಗಿ ಜೀವಿಸುತ್ತಿದ್ದ ಇವರಿಗೆ ಇಲ್ಲಿಯ ವಾತಾವರಣ ತಮ್ಮ ಬೇಟೆ ಜೀವನಕ್ಕೆ ಹೊಂದಿಕೊಳ್ಳುವಂತಿದ್ದು ಇಲ್ಲಿಯೇ ನೆಲೆಸತೊಡಗಿದರು.

ಅಲೆಮಾರಿಗಳಾದ ಇವರು ಬೇಟೆಯನ್ನು ಅರಸುತ್ತಾ "ಸುಮಾರು ೧೯೯೧ರ ವೇಳೆಗೆ ಗುಜರಾತ್‌ದಿಂದ ಮಹಾರಾಷ್ಟ್ರಕ್ಕೆ ಬಂದು ಮಹಾರಾಷ್ಟ್ರದಿಂದ ಬಾಂಬೆ, ಸೋಲ್ಲಾಪುರ, ಕೊಲ್ಲಾಪುರದಲ್ಲಿ ಹಾಗೂ ಕರ್ನಾಟಕದ ಹುನಗುಂದ, ಮುದ್ದೇಬಿಹಾಳ್, ಬಾಗಲಕೋಟೆ, ಗದಗ, ಹುಬ್ಬಳ್ಳಿ, ಧಾರವಾಡದಲ್ಲಿ ನೆಲೆಸಿ, ೧೯೫೮ರಲ್ಲಿ ಹುಣಸೂರು ತಾಲೂಕಿನ ಪಕ್ಷಿರಾಜಪುರದಲ್ಲಿ ಹಲವರನ್ನು ನೆಲೆ ನಿಲ್ಲಿಸಲಾಯಿತು".[6] ಹೀಗೆ ವಲಸೆ ಬಂದ ಹಕ್ಕಿಪಿಕ್ಕಿ ಸಮುದಾಯದವರು ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ನೆಲೆನಿಂತರು. ಬೇಟೆ ಅಲ್ಲದೇ ಬೇರೆ ವೃತ್ತಿ ತಿಳಿಯದ ಇವರು ಕಾಡನ್ನೇ ನಂಬಿ ಜೀವಿಸುತ್ತಿದ್ದರು. ಬ್ರಿಟೀಷ್ ಸರ್ಕಾರವು ೧೮೭೧ರ Criminal Tribe Actನ ಅಡಿಯಲ್ಲಿ ಇಂತಹ ಅನೇಕ ಅಲೆಮಾರಿ ಬುಡಕಟ್ಟುಗಳನ್ನು

---

೬. ಬುಡಕಟ್ಟು ಕುಲಕಸುಬುಗಳು, ಮೈತ್ರಿ ಕೆ.ಎಂ., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨, ಪು. ೮೦

ಅಪರಾಧಿ ಬುಡಕಟ್ಟುಗಳೆಂದು ಘೋಷಿಸಿ ಸೆಟಲ್‌ಮೆಂಟ್‌ಗಳಲ್ಲಿ ಮುಳ್ಳಿನ ಬೇಲಿಯ ಮಧ್ಯದಲ್ಲಿ ಕೂಡಿ ಹಾಕಲಾಯಿತು. ಅಲ್ಲದೇ ಅಲ್ಲಿ ಇವರನ್ನು ರೈಲ್ವೆಹಳಿಗಳು ಹಾಕುವ ಕೆಲಸ ಮತ್ತು ಬಟ್ಟೆ ಮಿಲ್‌ಗಳಲ್ಲಿ ಕೂಲಿ ಕೊಡದೆ ದುಡಿಸಿ ಕೊಳ್ಳಲಾಗುತ್ತಿತ್ತು. ಸ್ವಾತಂತ್ರ್ಯ ನಂತರ ೧೯೫೨ರಲ್ಲಿ ನೆಹರೂ ಅವರು ಪ್ರಧಾನಿಯಾಗಿದ್ದ ಸಮಯದಲ್ಲಿ ಇವರನ್ನು ವಿಮುಕ್ತ ಬುಡಕಟ್ಟೆಂದು ಘೋಷಿಸಿ ಸೆಟಲ್‌ಮೆಂಟ್‌ಗಳಿಂದ ಬಿಡುಗಡೆಗೊಳಿಸಲಾಯಿತು. ಆದರೂ ಸ್ವತಂತ್ರ ಭಾರತೀಯ ಸಮಾಜ, ಅಬಕಾರಿ ಮತ್ತು ಅಬಕಾರೇತರ ಆರಕ್ಷಕರು ಎಲ್ಲಿಯೇ ಯಾವುದೇ ಅಪರಾಧವಾದರೂ ಇವರನ್ನೇ ವಿಚಾರಣೆಗೆ ಒಳಪಡಿಸುವ, ಅಮವಾಸ್ಯೆಯೆಂದು ಠಾಣೆಗಳಲ್ಲಿಯೇ ಕೂಡಿ ಹಾಕುವ ಮತ್ತು ತಾವು ಮಾಡದ ತಪ್ಪನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಿ ಹಿಂಸಿಸುವ ಕೃತ್ಯ ಇತ್ತೀಚಿನವರೆಗೂ ಇವರ ಮೇಲೆ ನಡೆಯುತ್ತಿತ್ತು. ಅರಣ್ಯ ನೀತಿ ಕಾಯಿದೆಯಿಂದಾಗಿ ತಮ್ಮ ಪಾರಂಪರಿಕ ಬೇಟೆ ಮತ್ತು ಅರಣ್ಯ ಉತ್ಪನ್ನಗಳ ಸಂಗ್ರಹ ವೃತ್ತಿಯಿಂದ ದೂರವಾದ ಇವರು ತಮ್ಮ ಜೀವನ ನಿರ್ವಹಣೆಗೆ ಪರ್ಯಾಯ ಮಾರ್ಗಗಳಾದ ವ್ಯವಸಾಯ, ಕೃಷಿಕೂಲಿ, ಸಣ್ಣಮಟ್ಟ ಗೃಹೋಪಯೋಗಿ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಇಂದು ಕಂಪ್ಲಿ ಪಟ್ಟಣದ ಕೇಂದ್ರ ಭಾಗದ ಕಾಲೋನಿಯೊಂದರಲ್ಲಿ ನೆಲೆಸಿರುವ ಹಕ್ಕಿಪಿಕ್ಕಿ ಸಮುದಾಯದವರ ಮೂಲ ನೆಲೆ ಹಾಗೂ ತಾವು ಕಂಪ್ಲಿಯಲ್ಲಿ ನೆಲೆನಿಂತ ಬಗೆಯನ್ನು ನೋಡುವುದಾದರೆ ಅವರೇ ಹೇಳುವಂತೆ ತಮ್ಮ ಪೂರ್ವಿಕರ ಗುಜರಾತ್, ರಾಜಸ್ಥಾನ ಮೂಲದವರಾಗಿದ್ದು ಮಹಾರಾಷ್ಟ್ರ, ಆಂಧ್ರ ಪ್ರದೇಶಗಳ ಮೂಲಕ ಕರ್ನಾಟಕಕ್ಕೆ ವಲಸೆ ಬಂದು ನೆಲೆಸಿದರು. ಈ ಕಾಲೋನಿಯವರ ಹಳೆಯ ಸಂಬಂಧಿಕರು ಈಗಲೂ ಮಹಾರಾಷ್ಟ್ರದ ಸೊಲ್ಲಾಪುರ, ಕೊಲ್ಲಾಪುರ, ಸಾಂಗ್ಲಿ ಹಾಗೂ ಆಂಧ್ರದ ಕರ್ನೂಲ್, ನಂದಿಕೊಟೂರ್, ಬಂಗಾರಪೇಟೆ, ತಿಪ್ಪಾಲ್, ವರೇಕಲ್, ಗಡೂರ್ ಇತ್ಯಾದಿ ಊರುಗಳಲ್ಲಿ ಹೆಚ್ಚು ಜನ ನೆಲೆಸಿದ್ದಾರೆ. ಪ್ರಸ್ತುತ ಬಳ್ಳಾರಿ ಜಿಲ್ಲಾ ಹಕ್ಕಿಪಿಕ್ಕಿ ಅಭಿವೃದ್ಧಿ ಸಂಘದ ಅಧ್ಯಕ್ಷರಾದ ಕಂಪ್ಲಿಯ ಶ್ರೀಕಾಂತ್ ಅವರ ತಾಯಿಯನ್ನು ಸಂದರ್ಶಿಸಿ ಅವರ ಮೂಲದ ಬಗ್ಗೆ ವಿಚಾರಿಸಿದಾಗ ಅವರು ಹೇಳಿದ್ದು "ನನ್ನ ತವರೂರು ಆಂಧ್ರದ ಗಡೂರು. ನಮ್ಮ ತಂದೆ ಅಮೀನಪ್ಪ ತಾಯಿ ಲಸ್ಮಕ್ಕ. ಹೊಸಪೇಟೆಯ ನಾರಾಯಣದೇವ ಕೇರಿಯಲ್ಲಿದ್ದ ಯಲ್ಲಪ್ಪ ಎಂಬುವವರನ್ನು ಮದುವೆಯಾಗಿ ಇಲ್ಲಿ ನೆಲೆಸಿದ್ದೇವೆ". ನಮ್ಮ ಹಳೆಯ ಸಂಬಂಧಿಕರೆಲ್ಲಾ ಇರುವುದು ಆಂಧ್ರದಲ್ಲೇ ಎನ್ನುತ್ತಾರೆ (ರತ್ನಮ್ಮ: ೭೦, ಖೋಡಿಯಾರ್). ಹೀಗೆ ಕಾಲೋನಿಯ ಹಿರಿಯರು ತಮ್ಮ ಮೂಲದ ಬಗ್ಗೆ ಹೇಳುವ ಕಥೆಗಳನ್ನು ಕೇಳಿದರೆ ಇವರು ಕರ್ನಾಟಕಕ್ಕೆ ವಲಸೆ ಬಂದವರೆಂದು ತಿಳಿದುಬರುತ್ತದೆ. ಅಲ್ಲದೆ ಕರ್ನಾಟಕದಲ್ಲಿನ ಹಕ್ಕಿಪಿಕ್ಕಿಯವರು ಮಾತನಾಡುವ ಭಾಷೆ ಗುಜರಾತ್, ರಾಜಸ್ಥಾನದ ಹಕ್ಕಿಪಿಕ್ಕಿಯರ ವಾಗ್ರಿ ಭಾಷೆಯೇ ಆಗಿದ್ದು ಇವರು ನಿಜಕ್ಕೂ ರಾಜಸ್ಥಾನ, ಗುಜರಾತ್ ಮೂಲದವರಾಗಿದ್ದು ಮಹಾರಾಷ್ಟ್ರ, ಆಂಧ್ರದ ಮೂಲಕ ಕರ್ನಾಟಕಕ್ಕೆ ಬಂದಿರುವುದು ಖಚಿತವಾಗುತ್ತದೆ.

ಈ ರೀತಿಯಾಗಿ ಆಂಧ್ರದ ಮೂಲಕ ಕರ್ನಾಟಕಕ್ಕೆ ವಲಸೆ ಬಂದ ಹಕ್ಕಿಪಿಕ್ಕಿ ಸಮುದಾಯದವರು ಹಲವು ಗುಂಪುಗಳಾಗಿ ರಾಜ್ಯದ ಹಲವು ಕಡೆ ಚದುರಿದರು. ಅದರಲ್ಲಿ ಈ ಸಮುದಾಯದ ನಾಲ್ಕು ಕುಟುಂಬಗಳ ಒಂದು ಗುಂಪು ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಡ್ಯಾಂ ಪ್ರದೇಶದಲ್ಲಿದ್ದ ನಾರಾಯಣ ದೇವರಕೇರಿಗೆ ಬಂದು ನೆಲೆಸಿದ್ದರು. (ಟಿ.ಬಿ.ಡ್ಯಾಂ ಕಟ್ಟುವುದಕ್ಕಿಂತ ಪೂರ್ವಾದಲ್ಲಿ) ನಂತರದ ದಿನಗಳಲ್ಲಿ ಡ್ಯಾಂ ನಿರ್ಮಾಣವಾಗುವ ಸಂದರ್ಭದಲ್ಲಿ ನಾರಾಯಣದೇವರ ಕೇರಿ ಮುಳಗಡೆಹೊಂದಿ ಅಲ್ಲಿದ್ದವರು ನಿರಾಶ್ರಿತರಾಗಿ ಹಲವು ಕಡೆ ಚದುರಿದರು. ಅಲ್ಲಿದ್ದ ಹಕ್ಕಿಪಿಕ್ಕಿ ಸಮುದಾಯದವರು ಹೊಸಪೇಟೆ ತಾಲೂಕು ಕಂಪ್ಲಿ ಪಟ್ಟಣದ ಹತ್ತಿರ ಸುಗ್ಗೇನಹಳ್ಳಿ ಬಳಿಯಿರುವ ಕೊಟಾಲ್‌ನಲ್ಲಿ ಬಂದು ನೆಲೆಸಿದರು. ಯಾವುದೇ ಆದಾಯವಿಲ್ಲದೆ ಸಣ್ಣಪುಟ್ಟ ಗುಡಿಕೈಗಾರಿಕೆ ವಸ್ತುಗಳನ್ನು ಮಾರಾಟ ಮಾಡುತ್ತಾ, ಕೃಷಿಕೂಲಿಗಳಾಗಿ, ಮಣಿಸರ ವ್ಯಾಪಾರಿಗಳಾಗಿ ಜೀವಿಸುತ್ತಿದ್ದ ಇವರನ್ನು ಕೃಷಿಕರನ್ನಾಗಿ ಮಾಡಿ ಆರ್ಥಿಕವಾಗಿ ಸಬಲರನ್ನಾಗಿಸುವ ಸದುದ್ದೇಶದಿಂದ ಸುಗ್ಗೇನಹಳ್ಳಿ ಗ್ರಾಮದ ಗೌಡರಾಗಿದ್ದ ಲಾಳಾಗೊಂಡರ ಗುರುಬಸವನ ಗೌಡರು ಫೆಬ್ರವರಿ ೨೫, ೧೯೦೮ರಲ್ಲಿ ಈ ಸಮುದಾಯದವರಿಗೆ ೭೨ ಎಕರೆ ೬೧ ಸೆಂಟ್ಸ್ ಭೂಮಿಯನ್ನು ನೀಡಿದರು. ಈ ಭೂಮಿಯನ್ನು ಆಗ ಅಲ್ಲಿ ನೆಲೆಸಿದ್ದ ಹಕ್ಕಿಪಿಕ್ಕಿ ಸಮುದಾಯದ ೭ ಕುಟುಂಬಗಳಾದ ಅವಳನಿಂಗನ ಮಕ್ಕಳು ಗಂಗಾರಾಮ ಮತ್ತು ಅಹಮ್ಮದ್‌ಷಾ, ಸರ್ಜನನ ಮಕ್ಕಳು ಚಾಂಗು ಮತ್ತು ಬಹುದ್ದೂರ್, ಕೃಷ್ಣಸಿಂಗನ ಮಗ ಫಡೇಸಿಂಗ್, ಪದ್ಮನ ಮಗ ಚಂದು, ಲಕ್ಕ್ಯಾನ ಮಗ ಗುಲಾಲ ಈ ಏಳು ಕುಟುಂಬಗಳಿಗೆ ಹಂಚಿಕೊಡಲಾಯಿತು. ಆದರೆ ಕೆಲವರು ಕ್ರಯಪತ್ರಗಳನ್ನು ಮಾಡಿಸಿಕೊಂಡರೆ ಕೆಲವರು ಹಾಗೆಯೇ ಉಳುಮೆ ಮಾಡುತ್ತಿದ್ದರು. ಇಲ್ಲಿನ ಇತರ ಪ್ರಬಲ ಸಮುದಾಯದವರು ಇವರ ಮೇಲೆ ಅಪವಾದವನ್ನು ಹೆರುವುದರ ಮೂಲಕ ಭಯಭಿತಿರನ್ನಾಗಿಸಿ ದೊಂಬಿ ಗಲಭೆಗಳನ್ನು ಮಾಡಿ ಅಲ್ಲಿಂದ ಒಕ್ಕಲೆಬ್ಬಿಸಿದರು. ಅಲ್ಲದೆ ಕೆಲವರು ಅವರ ಆಸ್ತಿಗಳನ್ನು ಅತಿಕ್ರಮ ಮಾಡಿಕೊಂಡು ತಮ್ಮ ಹೆಸರುಗಳಲ್ಲಿ ಆಸ್ತಿಗಳನ್ನು ತಮಗೆ ಈ ಸಮುದಾಯದವರು ಮಾರಿರುವ ಹಾಗೆ ಮಾಡಿಕೊಂಡಿದ್ದಾರೆ.

ಇವರಿಗೆ ನೀಡಿದ ಜಮೀನ ಸರ್ವೆ ನಂ. ೨೪೯, ೨೫೦, ೨೫೫, ೨೬೧ ಹೀಗಿದ್ದು, ಕಂಪ್ಲಿಯಲ್ಲಿನ ಹಕ್ಕಿಪಿಕ್ಕಿ ಸಮುದಾಯದವರ ಕೆಲವರ ಹೆಸರಲ್ಲಿ ಸ್ವಲ್ಪ ಆಸ್ತಿ ಇದ್ದರೆ ಉಳಿದ ಆಸ್ತಿಯನ್ನು ಬೇರೆ ಸಮುದಾಯದವರು ಬೇರೆಯವರು ತಮ್ಮ ಹೆಸರುಗಳಿಗೆ ಮಾಡಿಕೊಂಡು ಕೃಷಿ ಮಾಡುತ್ತಿದ್ದಾರೆ. ಹಕ್ಕಿಪಿಕ್ಕಿ ಸಮುದಾಯದವರು ಈಗಲೂ ತಮ್ಮ ಆಸ್ತಿ ಪಡೆಯಲು ಹೋರಾಡುತ್ತಿದ್ದಾರೆ.

ಸುಗ್ಗೇನಹಳ್ಳಿ ಕೊಟಾಲ್‌ನಿಂದ ಓಡಿಸಲ್ಪಟ್ಟ ಹಕ್ಕಿಪಿಕ್ಕಿ ಸಮುದಾಯದವರು ಕಂಪ್ಲಿ ಪಟ್ಟಣದ ಹೊರವಲಯದಲ್ಲಿ ಬಂದು ಗುಡಾರಗಳನ್ನು ಹಾಕಿಕೊಂಡು ವಾಸಿಸತೊಡಗಿದರು. ಇವರನ್ನು ಗಮನಿಸಿದ ಅಂದಿನ ತಹಸಿಲ್ದಾರರು ಈ ಸಮುದಾಯವನ್ನು ಇಲ್ಲಿಯೇ ಶಾಶ್ವತವಾಗಿ ನೆಲೆಸುವಂತೆ ಮಾಡಬೇಕೆಂದು ನಿರ್ಧರಿಸಿ, ಸರ್ಕಾರದಿಂದ ಇವರಿಗೆ ೧೯೭೧ರಲ್ಲಿ ಕಂಪ್ಲಿಯ ಊರಾಚೆಗಿನ ೩.೫ ಹೆಕ್ಟೇರ್ ಖಾಲಿ ಜಾಗವನ್ನು ನೀಡುವಂತೆ ಮಾಡಿದರು. ಸರ್ಕಾರದಿಂದ ಜಾಗವನ್ನು ಪಡೆದ ಹಕ್ಕಿಪಿಕ್ಕಿಯರು ಅಲ್ಲಿ

ಮನೆಗಳನ್ನು ಕಟ್ಟಿಕೊಂಡು ಉಳಿದ ಜಾಗವನ್ನು ತಮ್ಮ ವಂಶಜರು ಅಥವಾ ತಮ್ಮ ಸಮುದಾಯದ ಇತರ ವಲಸಿಗರಿಗೆ ಮನೆ ಕಟ್ಟಿಕೊಳ್ಳಲು ಕಾಯ್ದಿರಿಸಲಾಯಿತು. ಈ ಮೊದಲು ಈ ಸ್ಥಳವನ್ನು 'ಸಜ್ಜೆ ಹೊಲ' ಎಂದುಕರೆಯುತ್ತಿದ್ದರು ಎಂದು ಹಕ್ಕಿಪಿಕ್ಕಿ ಸಮುದಾಯದ ಶಿಕಾರಿ ರಾಮು ಅವರು ಹೇಳುತ್ತಾರೆ. ಕಂಪ್ಲಿ ಪಟ್ಟಣದ ೧೨ನೇ ವಾರ್ಡಿನಲ್ಲಿ ಇರುವ ಈ ಕಾಲೋನಿಯಲ್ಲಿ ಇಂದು ಒಟ್ಟು ೯೬ ಮನೆಗಳಿದ್ದು ಈ ಕಾಲೋನಿಯನ್ನು ಹಕ್ಕಿಪಿಕ್ಕಿ ಕಾಲೋನಿ ಎನ್ನುತ್ತಾರೆ. ಇಲ್ಲಿ ೧೫೦ಕ್ಕೂ ಹೆಚ್ಚು ಕುಟುಂಬಗಳು ಇಂದು ವಾಸಿಸುತ್ತಿವೆ.

ಹಕ್ಕಿಪಿಕ್ಕಿಯವರು ೧೯೭೧ನೇ ಇಸ್ವಿಯಿಂದಲೂ ಇಲ್ಲಿಯೇ ಸ್ಥಿರವಾಗಿ ನೆಲೆನಿಂತು ಜೀವನ ವಿಧಾನವನ್ನು ರೂಪಿಸಿಕೊಂಡಿದ್ದಾರೆ. ಹೀಗಾಗಿ ಬೆಟ್ಟ, ಗುಡ್ಡ, ಕಾಡು, ನದಿ ವನಗಳಿಂದ ತುಂಬಿದ ಮತ್ತು ಪಕ್ಕದಲ್ಲಿಯೇ ಸುಮಾರು ಹಳ್ಳಿಗಳಿಂದ ಕೂಡಿರುವ ಈ ಪ್ರದೇಶವನ್ನು ಬಹುವಾಗಿ ಇಷ್ಟಪಡುವರು. ಇವರು ಮನೆಗಳನ್ನು ನಿರ್ಮಿಸಿಕೊಂಡು ಕೃಷಿಕೂಲಿ ಮಾಡಿಕೊಂಡು ಜೀವನವನ್ನು ರೂಪಿಸಿಕೊಂಡಿದ್ದಾರೆ. ಪ್ರಕೃತಿಯ ದಟ್ಟತೆಯ ನಡುವೆ ಕುರುಚಲು ಗುಡ್ಡಗಳಲ್ಲಿನ ಆರಂಭದ ವಾಸ ಈಗ ಬದಲಾಗಿದೆ. ಅಲೆಮಾರಿತನವನ್ನು ತೊರೆದು ಪಾರಂಪರಿಕ ಬೇಟೆ ವೃತ್ತಿಯನ್ನು ಬಿಟ್ಟು ಆಧುನಿಕತೆ ಸೃಷ್ಟಿಸಿರುವ ಹೊಸ ಹೊಸ ಅವಕಾಶಗಳನ್ನು ಪಡೆದುಕೊಳ್ಳುತ್ತಾ ಬದಲಾವಣೆಯತ್ತ ಸಾಗುತ್ತಿದ್ದರೂ ತಮ್ಮ ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಂಡು ಸ್ಥಿರವಾಗಿ ನೆಲೆನಿಲುತ್ತಿರುವ ಸಮುದಾಯವಾಗಿದೆ.

ಇವರು ಪ್ರತ್ಯೇಕವಾಗಿ ವಾಸಿಸುವುದರ ಜೊತೆಗೆ ತಮ್ಮದೇ ಆದ ಸಾಮಾಜಿಕ ವ್ಯವಸ್ಥೆಯನ್ನು ಕಟ್ಟಿಕೊಂಡು ತಮ್ಮ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಇಂದು ಕಂಪ್ಲಿ ಹಕ್ಕಿಪಿಕ್ಕಿ ಕಾಲೋನಿಯಲ್ಲಿ ಒಟ್ಟು ೯೬ ಮನೆಗಳಿದ್ದು, ೫೧೮ ಜನಸಂಖ್ಯೆ ಹೊಂದಿದೆ. ಇದರಲ್ಲಿ ಪುರುಷರು ೨೫೪ ಮತ್ತು ಮಹಿಳೆಯರು ೨೬೪ ಸಂಖ್ಯೆ ವಾಸಿಸುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರುವ ಹಕ್ಕಿಪಿಕ್ಕಿ ಸಮುದಾಯ ದವರಲ್ಲಿ ಮುಖ್ಯವಾಗಿ ಎರಡು ಪಂಗಡಗಳಿದ್ದು (ಜಾತ್ ಮತ್ತು ಬುಕ್ಯಾ) ಆರು ಪ್ರಮುಖ ಒಳಪಂಗಡ ಗಳನ್ನು ಹೊಂದಿದೆ. ಪ್ರತಿಯೊಂದು ಬೆಡಗಿನವರೂ ತಮ್ಮದೇ ಆದ ಕುಲದೈವವನ್ನು ಹೊಂದಿದ್ದಾರೆ. ಕಾಲೋನಿಯ ಒಟ್ಟು ಜನಸಂಖ್ಯೆಯನ್ನು ವಯೋಮಾನ ಲಿಂಗವಾರು ಪ್ರತೇಕ ಮಾಡಿ ಕೋಷ್ಟಕ:೨ರಲ್ಲಿ ತೋರಿಸಲಾಗಿದೆ.

ಕೋಷ್ಟಕ: ೨. ಹಕ್ಕಿಪಿಕ್ಕಿಯರ ಬೆಡಗುವಾರು, ಲಿಂಗವಾರು ವಯೋಮಾನ ಪ್ರಮಾಣ

	ಇಕೋತಿಯಾ			ಕೊರಬಿಯಾ			ಖೋಡಿಯಾರ			ಪಿಂಪಳಜಾ			ಸಾವಂಡಿಯಾ		
ವಯೋಗುಂಪು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
0-5	೭	೩	೧೦	೧೩	೧೫	೨೮	೪	೫	೧೦	೫	೫	೧೦	೧೧	೧೩	೨೪
6-17	೪	೫	೯	೨೦	೩೨	೫೨	೨೨	೧೫	೩೭	೫	೯	೧೪	೧೮	೧೬	೩೪
18-40	೫	೮	೧೩	೫೨	೪೭	೯೯	೨೧	೨೩	೪೪	೫	೭	೧೨	೨೭	೩೪	೬೧
41-60	೧		೧	೧೦	೭	೧೭	೬	೫	೧೧	೩	೨	೫	೯	೮	೧೭
61+above	೧		೧	೩	೪	೭		೨	೨				೧		೧
Total	೧೮	೧೬	೩೪	೯೮	೧೦೫	೨೦೩	೫೩	೫೦	೧೦೪	೧೮	೨೩	೪೧	೬೬	೭೧	೧೩೭

ಹಕ್ಕಿಪಿಕ್ಕಿ ಸಮುದಾಯದ ಬಗ್ಗೆ ಇರುವ ಇಂತಹ ಕಥೆಗಳು, ಐತಿಹಾಸಿಕ ಮತ್ತು ಪೌರಾಣಿಕ ಕತೆಗಳ ಮಿಶ್ರಣವಾಗಿವೆ. ಇವು ಮುಖ್ಯವಾಗಿ ಜನರ ಮೌಖಿಕ ಪರಂಪರೆಯಲ್ಲೆ ರೂಢಿ ಇರುವಂಥವು ಗಳು. ಅವರ ಬಗ್ಗೆ ದಾಖಲಾತಿಗಳು ಆಧಾರ ಇಲ್ಲದಿರುವುದರಿಂದ ಮತ್ತೆ ತಮ್ಮ ಜನಾಂಗದ ಬಗ್ಗೆ ಒಂದೊಂದು ಊರುಗಳಲ್ಲಿರುವ ಹಕ್ಕಿಪಿಕ್ಕಿಯರೂ ಒಂದೊಂದು ಬಗೆಯ ಕಥೆಗಳನ್ನು ಹೇಳುವುದರಿಂದ ಐತಿಹಾಸಿಕ ಅಂಶಗಳೊಂದಿಗೆ ಪೌರಾಣಿಕ ಅಂಶಗಳು ಬೆರೆತು ಹೋಗಿವೆಯೆಂದು ಹೇಳಬಹುದು. ಸಾಮಾಜಿಕವಾಗಿ ಹಕ್ಕಿಪಿಕ್ಕಿಯರು ಬಹಳ ಅಸಡ್ಡೆಗೆ ಒಳಗಾಗಿದ್ದಾರೆ. ಅವರನ್ನು ಬೇರೆ ಜಾತಿಗಳ ವ್ಯಕ್ತಿಗಳು ಅಲಕ್ಷತೆಯಿಂದ ಕಾಣುತ್ತಾರೆ. ಈ ಬುಡಕಟ್ಟು ಸಮುದಾಯದ ಸೃಷ್ಟಿ ಪುರಾಣಗಳನ್ನು ನೋಡಿದರೆ ಇವರ ಸೃಷ್ಟಿಯ ಮೊದಲ ವ್ಯಕ್ತಿ ಮಹಿಳೆಯಾಗಿರುತ್ತಾಳೆ ಹಾಗೂ ಇವರ ಕೌಟುಂಬಿಕ ವ್ಯವಸ್ಥೆಯು ಮಾತೃ ಮೂಲದ್ದು ಎಂದು ತಿಳಿದುಬರುತ್ತದೆ. ಈಗಲೂ ಸಹ ಹಕ್ಕಿಪಿಕ್ಕಿ ಸಮುದಾಯದ ಕುಟುಂಬಗಳಲ್ಲಿ ಮಹಿಳೆಗೆ ತುಂಬಾ ಪ್ರಾಮುಖ್ಯತೆ ಇರುವುದು ಗಮನಿಸಬಹುದು.

ಅಧ್ಯಾಯ ೩

ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಸಂರಚನೆ

೩.೧. ಸಮುದಾಯದ ಸಾಮಾಜಿಕ ವ್ಯವಸ್ಥೆ

೩.೨. ನ್ಯಾಯ ಪದ್ಧತಿ

೩.೩. ಪಾರಂಪರಿಕ ವೈದ್ಯ ಪದ್ಧತಿ

೩.೪. ಆಹಾರ ಪದ್ಧತಿ

೩.೪. ರಾಜಕೀಯ ಸ್ಥಿತಿಗತಿ

ಅಧ್ಯಾಯ ಮೂರು

ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಸಂರಚನೆ

ಮಾನವನು ಮೂಲತಃ ಸಂಘಜೀವಿ ಎಂಬ ಅರಿಸ್ಟಾಟಲ್ ಅವರ ಮಾತು ಅಕ್ಷರ ಸಹ ಸತ್ಯ. ಮನುಷ್ಯ ಒಂಟಿಯಾಗಿ ಜೀವಿಸಲಾರ, ಒಂಟಿ ಜೀವನ ಅವನಿಗೆ ಯಾವುದೇ ಭದ್ರತೆಯನ್ನು ನೀಡುವುದಿಲ್ಲ. ಪ್ರಾಚೀನ ಕಾಲದಲ್ಲಿ ಅಲೆಮಾರಿಯಾಗಿದ್ದ ಮಾನವನು ಪ್ರಾಣಿಗಳಂತೆ ಕಾಡಿನಲ್ಲಿ ಒಂಟಿಯಾಗಿ ಜೀವಿಸುತ್ತಿದ್ದನು. ಅಂತಹ ಸಂದರ್ಭದಲ್ಲಿ ಅವನಿಗೆ ಒಂಟಿ ಜೀವನ ಬೇಸರವೆನಿಸಿತು. ಅಲ್ಲದೆ ಭದ್ರತೆ ಇಲ್ಲವೆನ್ನಿಸಿ ಸಂಘಜೀವಿಯಾಗಿ ಬಾಳಲು ಕಲಿತನು. ಹೀಗೆ ಮಾನವನ ಸಂಘಜೀವನ ಅಥವಾ ಸಮೂಹ ಜೀವನ ಶುರುವಾಯಿತು. ನಂತರ ಮಾನವನು ತನ್ನದೇ ಆದ ನೀತಿ ನಿಯಮ, ಸಂಪ್ರದಾಯಗಳನ್ನು ರಚಿಸಿಕೊಂಡು ಒಂದು ವ್ಯವಸ್ಥಿತ ಸಮಾಜವನ್ನು ರೂಪಿಸಿಕೊಂಡನು.

ಖ್ಯಾತ ಸಮಾಜಶಾಸ್ತ್ರಜ್ಞರಾದ ಮೆಕೈವರ್ ಮತ್ತು ಪೇಜ್‌ರವರು ಹೇಳುವಂತೆ "ಸಮಾಜವೆಂಬುದು ಸಾಮಾಜಿಕ ಸಂಬಂಧಗಳ ಒಂದು ಬಲೆ"[೧] ಎಂಬ ಮಾತಿನಂತೆ ಇಲ್ಲಿ ಸಾಮಾಜಿಕ ಸಂಬಂಧಗಳ ಬಲೆ ಎಂಬ ಪದವನ್ನು ಗಮನಿಸಿದಾಗ ಸಮಾಜದಲ್ಲಿರುವ ಪ್ರತಿಯೊಂದು ಜೀವಿಯ ಮಧ್ಯೆ ಒಂದಿಲ್ಲೊಂದು ರೀತಿಯ ಸಂಬಂಧ ಇದ್ದೆ ಇರುತ್ತದೆ. ಹಾಗಿದ್ದರೆ ಮಾತ್ರ ಅದು ಸಮಾಜವೆನ್ನಿಸಿಕೊಳ್ಳುತ್ತದೆ. ಸಾಮಾಜಿಕ ರಚನೆ ಎನ್ನುವುದು ಹಲವಾರು ಬಗೆಯ ಕುಟುಂಬಗಳು, ಕುಲಬಳ್ಳಿಗಳು, ಸಮುದಾಯಗಳು ವಿವಿಧ ಬಗೆಯ ಸಂಬಂಧಗಳು ಸೇರಿ ರೂಪಗೊಂಡಿರುವ ಒಂದು ಆಂತರಿಕ ವ್ಯವಸ್ಥೆಯಾಗಿದೆ.

ಸಮಾಜದಲ್ಲಿ ಪ್ರತಿಯೊಂದು ಸಮುದಾಯಗಳು ತನ್ನದೇ ಆದ ಸಾಮಾಜಿಕ ಸಂರಚನೆಯನ್ನು ಹೊಂದಿರುತ್ತವೆ. ಅದರಂತೆಯೇ ಹಕ್ಕಿಪಿಕ್ಕಿಯರ ಸಾಮಾಜಿಕ ಸಂರಚನೆಯನ್ನು ನೋಡುವುದಾದರೆ

---

೧. ಸಮಾಜಶಾಸ್ತ್ರದ ಮೂಲತತ್ವಗಳು, ಚ.ನಾ.ಶಂಕರರಾವ್, ಜೈಭಾರತ್ ಪ್ರಕಾಶನ, ೨೦೧೦, ಪು.೩೮

ಅವರಲ್ಲಿ ಸಂಘಟನೆಯು ಆದಿಮ ಕಾಲದಿಂದ ಬೆಳೆದು ಬಂದಿದೆ. ಯಾವುದೇ ಇತರೆ ಸಮುದಾಯಗಳ ಪ್ರಭಾವಕ್ಕೆ ಒಳಗಾಗದೇ ತಮ್ಮ ಸಂಪ್ರದಾಯದಂತೆ ಜೀವನ ನಿರ್ವಹಿಸುವ ಬುಡಕಟ್ಟು ಸಮುದಾಯ ಇದಾಗಿದೆ. ಇವರು ಆದಿಮ ಕಾಲದಿಂದ ಮಾನವನ ದಿನನಿತ್ಯದ ಆಹಾರಕ್ಕಾಗಿ ಕಾಡುಮೇಡು, ಗುಡ್ಡಗಳನ್ನು ಸುತ್ತಾಡಿ ಬೇಟೆ ಮತ್ತು ಆಹಾರ ಸಂಗ್ರಹಣೆಯ ಮೂಲಕ ವ್ಯವಸ್ಥಿತವಾಗಿ ಸಂಘಟಿತವಾಗುತ್ತಾ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋಗುತ್ತಾ ಜೀವನ ರೂಪಿಸಿಕೊಂಡು ಬರತೊಡಗಿದ ಸಮಯದಲ್ಲಿ ಶುದ್ಧ ಅಲೆಮಾರಿಗಳಾಗಿದ್ದರು. ಬೇಟೆಯಿಂದ ಕೃಷಿ, ವ್ಯಾಪಾರಕ್ಕೆ ಮಾರ್ಪಾಡಾದ ನಂತರ ನೆಲೆನಿಂತು ಒಟ್ಟಾಗಿ ಬಾಳುವುದರೊಂದಿಗೆ ಮೂಲಭೂತ ಅವಶ್ಯಕತೆಗಳನ್ನು ಪೂರೈಕೆ ಮಾಡಿಕೊಳ್ಳುವುದರಿಂದ ತಮ್ಮದೇ ಆದ ಸಾಮಾಜಿಕ ವ್ಯವಸ್ಥೆಯನ್ನು ಕಾಲಾಂತರದಲ್ಲಿ ರೂಪಿಸಿಕೊಂಡರು. ಇವರು ವಿಶೇಷವಾಗಿ ಹಳ್ಳಿಗಳ ಮತ್ತು ನಗರಗಳ ಲಕ್ಷಣಗಳನ್ನು ಸಮ್ಮಿಳಿಸಿಕೊಂಡು ಬದಲಾದ ವ್ಯವಸ್ಥೆಯಲ್ಲಿ ವ್ಯವಸ್ಥಿತವಾದ ಸಾಮಾಜಿಕ ಸಂರಚನೆಯನ್ನು ರಚಿಸಿಕೊಂಡಿರುವುದನ್ನು ಇಂದು ಕಾಣಬಹುದು.

೩.೧ ಹಕ್ಕಿಪಕ್ಕಿ ಸಮುದಾಯದ ಸಾಮಾಜಿಕ ವ್ಯವಸ್ಥೆ

ಬೇಟೆಯನ್ನೇ ವೃತ್ತಿಯನ್ನಾಗಿಸಿಕೊಂಡು ಜೀವಿಸುತ್ತಿದ್ದ ಅಲೆಮಾರಿ ಹಕ್ಕಿಪಿಕ್ಕಿ ಸಮುದಾಯವು ಬ್ರಿಟಿಷರ ಅರಣ್ಯ ನೀತಿ ಕಾಯ್ದೆ ಮತ್ತು ರಸ್ತೆ ಅಭಿವೃದ್ಧಿಯಿಂದಾಗಿ ಆಘಾತಗೊಂಡು ತೀವ್ರ ನಿರುದ್ಯೋಗ ಸಮಸ್ಯೆಗೆ ಒಳಗಾಯಿತು. ಈ ಸಂದರ್ಭದಲ್ಲಿ ಹೊಟ್ಟೆಪಾಡಿಗಾಗಿ ಕಾಡುಮೇಡುಗಳಲ್ಲಿ ಅಲೆಯುತ್ತಿದ್ದ ಬುಡಕಟ್ಟುಗಳನ್ನು ಹತ್ತಿಕ್ಕಲು ಬ್ರಿಟೀಷ್ ಸರ್ಕಾರವು ೧೮೭೧ರಲ್ಲಿ ಕ್ರಿಮಿನಲ್ ಟ್ರೈಬ್ ಆಕ್ಟ್‌ನ್ನು ಜಾರಿಗೆ ತಂದಿತು. ಈ ಕ್ರಿಮಿನಲ್ ಟ್ರೈಬ್ ಆಕ್ಟ್‌ನಲ್ಲಿ ಹಕ್ಕಿಪಿಕ್ಕಿ ಸಮುದಾಯದವರನ್ನಷ್ಟೇ ಅಲ್ಲದೇ ಅನೇಕ ಬುಡಕಟ್ಟುಗಳನ್ನು ಸೇರಿಸಿ ಅವುಗಳನ್ನು ಪ್ರತ್ಯೇಕವಾಗಿ ಸೆಟಲ್‌ಮೆಂಟ್‌ಗಳಲ್ಲಿ ಇಡಲಾಯಿತು. ಇಂತಹ ಅಪರಾಧಿ ಬುಡಕಟ್ಟುಗಳನ್ನು ರಸ್ತೆ ನಿರ್ಮಾಣ, ರೈಲ್ವೆಹಳಿ ಹಾಕಲು, ಗಣಿಗಳ ಶ್ರಮದಾಯಕ ಕೆಲಸಕ್ಕೆ ಹಾಗೂ ಬಟ್ಟೆ ಮಿಲ್ಲುಗಳಲ್ಲಿ ಪುಕ್ಕಟೆಯಾಗಿ ದುಡಿಸಿಕೊಳ್ಳಲಾಗುತ್ತಿತ್ತು. ನಂತರ ಇದರಿಂದ ಮುಕ್ತರಾದ ಬುಡಕಟ್ಟುಗಳು ತಮ್ಮದೇ ಆದ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿ ಒಂದು ಕಡೆ ನೆಲೆ ನಿಲ್ಲತೊಡಗಿದವು. ಇಂತಹ ಬುಡಕಟ್ಟುಗಳಲ್ಲಿ ಹಕ್ಕಿಪಿಕ್ಕಿ ಸಮುದಾಯವೂ ಒಂದು.

ಕಂಪ್ಲಿ ಪಟ್ಟಣದ ಕಾಲೋನಿಯೊಂದರಲ್ಲಿ ವಾಸಿಸುತ್ತಿರುವ ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ವ್ಯವಸ್ಥೆಯನ್ನು ನೋಡುವುದಾದರೆ, ಇವರ ಸಾಮಾಜಿಕ ಜೀವನದಲ್ಲಿ ತಮ್ಮದೇ ಆದ ಕುಟುಂಬ ಪದ್ಧತಿ, ಮನೆ ನಿರ್ಮಾಣ, ಗೃಹ ಪ್ರವೇಶ, ನ್ಯಾಯಪದ್ಧತಿ, ಆಹಾರಪದ್ಧತಿ, ಉಡುಗೆ ತೊಡುಗೆ, ವೈದ್ಯ ಪದ್ಧತಿ, ಬೇಟೆಗಾರಿಕೆ, ಜಾತಿ ಬಹಿಷ್ಕಾರ, ಜಾತಿಗೆ ಸೇರಿಸಿಕೊಳ್ಳುವ ಕ್ರಮ, ಮಹಿಳೆಯರ ಸ್ಥಾನಮಾನ, ಸಾಮಾಜಿಕ ಸಂಘ-ಸಂಸ್ಥೆಗಳು, ನಂಬಿಕೆ ಮತ್ತು ವಿಧಿ ನಿಷೇಧಗಳು, ಭವಿಷ್ಯ ವಾಚಕಗಳು, ಕಟ್ಟೆಮನೆ ಪದ್ಧತಿ, ಕಲೆ ಮತ್ತು ಕ್ರೀಡೆ ಮುಂತಾದವುಗಳಲ್ಲಿ ವೈವಿಧ್ಯತೆಯನ್ನು ಹೊಂದಿದೆ.

ಪ್ರಾಚೀನ ಕಾಲದಿಂದಲೂ ಯಾವುದೇ ಬುಡಕಟ್ಟು ಸಮುದಾಯಗಳ ಸಾಮಾಜಿಕ ವ್ಯವಸ್ಥೆಯು ಮಾತೃಪ್ರಧಾನವಾಗಿದ್ದು, ಇಂದಿನ ಆಧುನಿಕತೆಯ ಸಂದರ್ಭದಲ್ಲಿ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಾಗಿ ರೂಪಾಂತರಗೊಂಡಿವೆ. ಆದರೆ ಹಕ್ಕಿಪಿಕ್ಕಿ ಸಮುದಾಯದವರು ಇಂದಿಗೂ ಮಾತೃಪ್ರಧಾನತೆ ಯನ್ನು ಉಳಿಸಿಕೊಂಡು ಬಂದಿರುವುದು ತುಂಬಾ ವಿಶೇಷ ಅಲೆಮಾರಿಗಳಾದ ಈ ಜನರು ಇನ್ನೂ ಅಲೆಮಾರಿತನವನ್ನು ಸಂಪೂರ್ಣವಾಗಿ ಬಿಡದೇ ಇರುವುದು ಕಂಡುಬರುತ್ತದೆ.

ಬದಲಾದ ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕಾಲೋನಿಯ ಜನರಲ್ಲಿ ಸಾಂಪ್ರದಾಯಿಕ ಆಚರಣೆಗಳಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ಕಂಡುಬರುತ್ತದೆ. ಎಷ್ಟೋ ಜನರು ಕನ್ನಡವನ್ನು ಮಾತೃ ಭಾಷೆಯಾಗಿ ಪರಿಗಣಿಸುವವರಾಗಿದ್ದಾರೆ. ತಮ್ಮ ವೇಷಭೂಷಣ, ಆಹಾರ ಪದ್ಧತಿ, ಆಚರಿಸುವ ಹಬ್ಬ ಆಚರಣೆಗಳಲ್ಲಿ ಸುತ್ತಲ ಹಳ್ಳಿಗಳ ಹಾಗೂ ಕಂಪ್ಲಿ ಪಟ್ಟಣದ ಇತರ ಸಮುದಾಯಗಳ ಪ್ರಭಾವ ಎದ್ದುಕಾಣುತ್ತದೆ. ಕಾಲೋನಿಯಲ್ಲಿ ಒಟ್ಟು ೯೬ ಮನೆಗಳಿದ್ದು ೧೫೦ಕ್ಕೂ ಹೆಚ್ಚು ಕುಟುಂಬಗಳಿವೆ. ಕಂಪ್ಲಿ ಪಟ್ಟಣದ ಕೇಂದ್ರ ಭಾಗದಲ್ಲಿರುವ ಹಕ್ಕಿಪಿಕ್ಕಿ ಕಾಲೋನಿಯ ಜನರು ಇಂದು ಹಳ್ಳಿಗಳ ವಾತಾವರಣವನ್ನೇ ಸೃಷ್ಟಿಸಿಕೊಂಡು ಅವರುಗಳಲ್ಲಿಯೇ ಗುಂಪುಗಳಾಗಿ ಪ್ರತಿಯೊಂದು ಆಗು ಹೋಗುಗಳಿಗೆ ಅವರುಗಳೇ ಹೋರಾಟ ಮಾಡಿಕೊಳ್ಳು ವಂತಾಗಿದ್ದಾರೆ. ತಮ್ಮ ಸಮುದಾಯದಲ್ಲಿನ ವ್ಯಾಜ್ಯಗಳನ್ನು ಸಮುದಾಯದ ಹಿರಿಯ ಕಟ್ಟೆಮನೆ ಗೌಡನೇ ಬಗೆಹರಿಸುತ್ತಾನೆ. ಇವರಲ್ಲಿ ಮಹಿಳೆಯರೇ ಹೆಚ್ಚು ಶ್ರಮಜೀವಿಗಳಾಗಿದ್ದು, ಕೃಷಿ, ಕೂಲಿ ಹಾಗೂ ಮನೆ ಕೆಲಸಗಳನ್ನು ನಿರ್ವಹಿಸುವವರಾಗಿದ್ದಾರೆ. ಪಟ್ಟಣ ಪ್ರದೇಶದಲ್ಲಿ ನೆಲೆಸಿದ್ದರೂ ಈ ಹಕ್ಕಿಪಿಕ್ಕಿಯರ ಕಾಲೋನಿಯು ಹಳ್ಳಿಯ ಲಕ್ಷಣಗಳನ್ನು ಉಳಿಸಿಕೊಂಡು ಬಂದಿರುವುದೂ ಅಲ್ಲದೇ ಈಗಲೂ ತಮ್ಮ ಬುಡಕಟ್ಟು ಲಕ್ಷಣಗಳನ್ನು ಉಳಿಸಿಕೊಂಡು ನಗರ ವಾತಾವರಣಕ್ಕೆ ತಕ್ಕಂತೆ ಹೊಂದಿ ಕೊಳ್ಳುತ್ತಿದ್ದಾರೆ.

ವಸತಿ

ಮೂಲತಃ ಅಲೆಮಾರಿಗಳಾದ ಹಕ್ಕಿಪಿಕ್ಕಿ ಸಮುದಾಯದವರು ಕಾಲಾಂತರದಲ್ಲಿ ಅಲೆಮಾರಿತನವನ್ನು ತೊರೆದು ಕಾಡಿನಿಂದ ನಾಡಿಗೆ ಬಂದು ಊರಾಚೆ ಬಯಲಿನಲ್ಲಿ ಟೆಂಟು, ಗುಡಾರಗಳನ್ನು ನಿರ್ಮಿಸಿಕೊಂಡು ಜೀವನ ಸಾಗಿಸತೊಡಗಿದರು. ಆದರೂ ತಮ್ಮ ಅಲೆಮಾರಿತನವನ್ನು ಸಂಪೂರ್ಣವಾಗಿ ಬಿಡದೆ ಕೆಲವು ಕಾಲ ಒಂದು ಕಡೆ ನೆಲೆಸಿದರೆ, ಮತ್ತೆ ಕೆಲ ಕಾಲ ಬೇರೆ ಕಡೆಗೆ ಹೋಗುತ್ತಿದ್ದರಿಂದ ಈ ಸಮುದಾಯದವರು ತಮ್ಮ ವಾಸದ ಗುಡಾರಗಳನ್ನು ತುಂಬಾ ಸರಳವಾಗಿ ಕಟ್ಟಿಕೊಳ್ಳುತ್ತಿದ್ದರು. ಆ ಗುಡಾರಗಳನ್ನು ಬಿಚ್ಚಿ ಮತ್ತೊಂದು ಕಡೆಗೆ ಹೊತ್ತುಯ್ಯುವಂತೆ ಇರುತ್ತಿದ್ದವು. ಹಿಂದೆ ಇವರು ತಮ್ಮ ಗುಡಾರಗಳ ನಿರ್ಮಾಣಕ್ಕೆ ಪ್ರಕೃತಿಯಲ್ಲಿ ಸಿಗುವ ವಸ್ತುಗಳನ್ನೇ ಬಳಸಿಕೊಳ್ಳುತ್ತಿದ್ದರು. ಹಳ್ಳಗಳಲ್ಲಿ ಸಿಗುತ್ತಿದ್ದ ಆಪಿನ ಕಡ್ಡಿಗಳನ್ನು ಕೊಯ್ದು, ಆಯ್ದು ತಂದು ಅದನ್ನು ಚೆನ್ನಾಗಿ ಒಣಗಿಸಿ ಒಂದಕ್ಕೊಂದು ಸೇರಿಸಿ ದಬ್ಬಣದಿಂದ ಹೊಲೆದು ಉದ್ದನೆಯ ಚಾಪೆಯ ರೀತಿ ತಟ್ಟಿಗೆ ತಯಾರಿಸಿ ನೆಟ್ಟಿರುವ ಗೂಟಗಳಿಗೆ ಅಡ್ಡಲಾಗಿ


ಹಾಕಿದ್ದ ಬಿದಿರುಗಳ ಮೇಲೆ ಬಿಚ್ಚಿ ಹರಡಿದರೆ ಅದು ಗುಡಿಸಲು ಅಥವಾ ಗುಡಾರವಾಗುತ್ತಿತ್ತು. ಟೆಂಟು ಅಥವಾ ಗುಡಾರಗಳನ್ನು ತಯಾರಿಸಲು ಎರಡು ಬಿದಿರಿನ ಗಳಗಳು ಅವೆರಡನ್ನು ಕೂಡಿಸಲು ಒಂದು ಅಡ್ಡ ಗಳ ಮತ್ತು ನಾಲ್ಕು ಸಣ್ಣ ಗಳಗಳು ಇವುಗಳಿಗೆ ಮೇಲೆ ಆಪಿನ ಕಡ್ಡಿಯನ್ನು ಅಥವಾ ಗೊಬ್ಬರದ ಪ್ಲಾಸ್ಟಿಕ್ ಚೀಲಗಳು, ತೆಂಗಿನ ಗರಿಯನ್ನು ಹೊದಿಸಿರುತ್ತಾರೆ. ಗುಡಾರಗಳನ್ನು ಹಾಕುವಾಗ ಎದುರು ಬದುರಾಗಿ ಹಾಕಿಕೊಳ್ಳುವರು.

ಇತ್ತೀಚಿನ ದಿನಗಳಲ್ಲಿ ಈ ರೀತಿಯ ಗುಡಿಸಲುಗಳು ಹಕ್ಕಿಪಿಕ್ಕಿಯರಲ್ಲಿ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆಯಾಗಿವೆ. ಕಾರಣ ಈ ಬಗೆಯ ಸಾಮಗ್ರಿಗಳನ್ನು ಊರಿಂದ ಊರಿಗೆ ಬಸ್ಸು, ರೈಲುಗಳಲ್ಲಿ ಸಾಗಿಸುವುದು ತುಂಬಾ ಕಷ್ಟದ ಕೆಲಸವಾಗಿದ್ದರಿಂದ ಅಂದಿನ ಸಾರಿಗೆಯ ಸಾಧ್ಯತೆಗಳನ್ನು ಅನುಸರಿಸಿ ಅವರ ವ್ಯವಸ್ಥೆಯ ಸಾಮಗ್ರಿಗಳು ಬಗೆಬಗೆಯಾಗಿ ಬದಲಾಗಿವೆ. ಅಪಿನ, ಬಿದಿರಿನ ಗುಡಿಸಲುಗಳಿಂದ ಮುಂದುವರಿದು ಕೌದಿ ಹೊದಿಸಿದ, ತಾಡಪಾಲು ಹೊದಿಸಿದ ಗುಡಾರಗಳನ್ನು ಕಾಣಬಹುದಾಗಿದೆ. ಪ್ರಸ್ತುತ ಕಂಪ್ಲಿ ಪಟ್ಟಣದಲ್ಲಿ ವಾಸಿಸುವ ಹಕ್ಕಿಪಿಕ್ಕಿ ಸಮುದಾಯದ ಬೆಡಗು ಕಳ್ಳುಬಳ್ಳಿ, ಕುಟುಂಬ, ಮನೆಗಳ ರಚನೆಗಳನ್ನು ಈ ಕೆಳಗಿನ ಕೋಷ್ಟಕಗದಲ್ಲಿ ತೋರಿಸಲಾಗಿದೆ.

ಕೋಷ್ಟಕ ೨.೧ ಹಕ್ಕಿಪಿಕ್ಕಿ ಸಮುದಾಯದ ಬೆಡಗುವಾರು,ಕುಟುಂಬವಾರು ಮನೆಗಳ ಮಾದರಿ

ಬೆಡಗುಗಳು	ಕುಟುಂಬ	ಗುಡಾರ	ಗುಡಿಸಲು	ಟಿನ್	ಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಜನತಾ	ಬಾಡಿಗೆ
ಇಕೋತಿಯಾ	೫		೧				೪		
ಕೊರಬಿಯಾ	೪೧	೪	೧೨		೧	೨	೨೦		೨
ಖೋಡಿಯಾರ	೨೦	೩			೧	೧೧	೩		೨
ಪಿಂಪಳಜಾ	೬		೨		೨	೧	೨		
ಸಾವಂಡಿಯಾ	೨೩	೧	೫		೧	೩	೧೦		೩
Total	೯೬	೮	೨೦		೫	೧೬	೩೯		೬

ವೃತ್ತಚಿತ್ರ ೨.೧ ಹಕ್ಕಿಪಿಕ್ಕಿ ಸಮುದಾಯದ ಕುಟುಂಬವಾರು ಮನೆಗಳ ಪ್ರಮಾಣ





ಪ್ರಸ್ತುತ ಕಾಲೋನಿಯಲ್ಲಿ ೯೬ ಮನೆಗಳಿದ್ದು, ಅದರಲ್ಲಿ ಹೆಂಚಿನ ಮತ್ತು ಗುಡಿಸಲು ಮನೆಗಳು ಹೆಚ್ಚಾಗಿವೆ. ಸಾಮಾನ್ಯವಾಗಿ ಗುಡಿಸಲುಗಳನ್ನು ತೆಂಗಿನಗರಿ, ಬಿದಿರು, ಇತರೆ ಗಿಡಮರಗಳನ್ನು ಬಳಸಿಕೊಂಡು ಚಿಕ್ಕದಾಗಿ ಕಟ್ಟಿಕೊಂಡಿರುವರು. ಹೆಂಚಿನ ಮನೆಗಳೂ ಇದ್ದು, ಅವು ಯಾವುದೇ ಕೋಣೆಗಳನ್ನು ಹೊಂದಿರದೆ ಕೇವಲ ಒಂದೇ ವರಾಂಡದಲ್ಲಿ ಎಲ್ಲಾ ವ್ಯವಸ್ಥೆ ಮಾಡಿಕೊಂಡಿರುವ ಸ್ಥಿತಿಯಿದೆ. ಕಾಲೋನಿಯಲ್ಲಿ ಒಂದೆರಡು ಆರ್.ಸಿ.ಸಿ. ಮನೆಗಳನ್ನು ಕಟ್ಟಿಕೊಂಡಿರುವುದನ್ನು ನೋಡಬಹುದು. ಉಳಿದಂತೆ ಎಲ್ಲ ಮನೆಗಳು ಗುಡಿಸಲು ಮತ್ತು ಹೆಂಚಿನ ಮನೆಗಳಾಗಿವೆ. ಕೆಲವೇ ಮನೆಗಳನ್ನು ಹೊರತುಪಡಿಸಿ ಪ್ರತಿಶತ ಶೇ. ೯೦ರಷ್ಟು ಮನೆಗಳಿಗೆ ಶೌಚಾಲಯ ವ್ಯವಸ್ಥೆ ಇರುವುದಿಲ್ಲ. ಯಾವುದೇ ಗುಡಿಸಲು, ಹೆಂಚಿನ ಮನೆಗಳಲ್ಲಿ ಅಡುಗೆ ಕೋಣೆ, ಮಲಗುವ ಕೋಣೆ, ಸ್ನಾನಗೃಹ ಹೀಗೆ ಹಲವು ಕೊಠಡಿಗಳನ್ನು ಹೊಂದಿರದೆ ಸುತ್ತಲೂ ಗರಿ, ಗಳ ಅಥವಾ ಲೆಕ್ಕಲಿಗಿಡದ ಸೊಪ್ಪನ್ನು ಬಳಸಿಕೊಂಡು ಗೋಡೆ ರೀತಿಯಲ್ಲಿ ಕಟ್ಟಿಕೊಂಡು ಅದಕ್ಕೆ ಮಣ್ಣು ಮೆತ್ತಿ ಗಟ್ಟಿಗೊಳಿಸುತ್ತಾರೆ. ಒಂದು ಮೂಲೆಯಲ್ಲಿ ಅಡುಗೆ ಮಾಡಿದರೆ ಮತ್ತೊಂದು ಮೂಲೆಯಲ್ಲಿ ದೇವರ ಜಗಲಿ ಇದ್ದು, ನಡುಮನೆಯಲ್ಲಿ ಎಲ್ಲರೂ ಮಲಗುತ್ತಾರೆ. ಸ್ನಾನಗೃಹವು ಮನೆಯ ಮುಂದೆ ಬಯಲಿನಲ್ಲಿ ಎರಡು ಗರಿಗಳನ್ನು ಕಟ್ಟಿಕೊಂಡು ಹಳೆಸೀರೆಯನ್ನು ಅದಕ್ಕೆ ಸುತ್ತಲೂ ಕಟ್ಟಿಕೊಂಡು ಸ್ನಾನ ಮಾಡುತ್ತಾರೆ. ಇವರು ತಮ್ಮ ಗುಡಿಸಲು ಅಥವಾ ಗುಡಾರಗಳನ್ನು ಎದುರುಬದಿರಾಗಿ ಹಾಕಿಕೊಳ್ಳುತ್ತಾರೆ. ಕಾರಣ ಗುಡಾರಗಳ ಹಿಂದೆ ಗುಡಾರ ಹಾಕಿದರೆ ಮಲಗುವಾಗ ಎದಿರುಬದರು ಮಲಗಿದರೆ ಕಾಲು ಕಡೆಯಲ್ಲಿ ತಲೆಮಾಡಿ ಮಲಗಿರುವವನು ತಾನು ಕೀಳೆಂದು ಭಾವಿಸುತ್ತಿದ್ದನು. ಇಂದು ಇದಾವುದನ್ನು ಇವರು ನಂಬುತ್ತಿಲ್ಲ. ತಮಗೆ ಮನಬಂದಂತೆ ಮನೆ ಅಥವಾ ಗುಡಾರ, ಗುಡಿಸಲುಗಳನ್ನು ಕಟ್ಟಿಕೊಳುತ್ತಿದ್ದಾರೆ.

ಕೌಟುಂಬಿಕ ಪದ್ಧತಿ

ಗಂಡ ಹೆಂಡತಿ ಮತ್ತು ಮಕ್ಕಳನ್ನೊಳಗೊಂಡ ಜೈವಿಕ, ಸಾಮಾಜಿಕ ಘಟಕವೇ ಕುಟುಂಬ. ಕುಟುಂಬವು ಒಂದು ಸಾರ್ವತ್ರಿಕವಾದ ಸಂಸ್ಥೆಯಾಗಿದೆ. "ಸಾಮಾಜಿಕ ಸಂಸ್ಥೆಗಳಲ್ಲಿ ಅತ್ಯಂತ ಮೂಲಭೂತ ಸ್ವರೂಪದ ಹಾಗೂ ಮಹತ್ವ ಪೂರ್ಣವಾದ ಪಾತ್ರವನ್ನು ನಿರ್ವಹಿಸುವ ಸಂಸ್ಥೆ ಎಂದರೆ ಕುಟುಂಬ. ಜಗತ್ತಿನ ಎಲ್ಲ ಜನಸಮುದಾಯಗಳಿಗೂ ಕುಟುಂಬ ಬೇಕು".[೨] ಪ್ರತಿಯೊಂದು ಸಮುದಾಯದಲ್ಲಿ ಸಾರ್ವತ್ರಿಕವಾಗಿ ಕಂಡುಬರುವ ಹಾಗೂ ವ್ಯಕ್ತಿಯ ಸಾಮಾಜೀಕರಣದ ಮೊದಲ ಪಾಠಶಾಲೆ ಎನಿಸಿಕೊಳ್ಳುವ ಕುಟುಂಬ ಬಂಧುತ್ವ(Kinship)ದ ಮೂಲಕವೇ ನಿರ್ಧಾರವಾಗುತ್ತದೆ. ಸಮ್ನರ್ ಮತ್ತು ಕೆಲ್ಲರ್ ಅವರು ಹೇಳುವಂತೆ ರಕ್ತಸಂಬಂಧಗಳಿಂದ ಕೂಡಿದ ಮತ್ತು ಕನಿಷ್ಟ ಎರಡು ತಲೆಮಾರುಗಳನ್ನು ಒಳಗೊಂಡಿರುವ ಅತಿಸೂಕ್ಷ್ಮ ಸಾಮಾಜಿಕ ಸಂಘಟನೆಯೇ ಕುಟುಂಬ. ಈ ಹೇಳಿಕೆಗೆ ಪುಷ್ಠಿಕೊಡುವಂತೆ ಹಕ್ಕಿಪಿಕ್ಕಿಯರ ಕೌಟುಂಬಿಕ ವ್ಯವಸ್ಥೆಯು ಅವರಲ್ಲಿನ ವಿವಾಹಗಳ ಮೂಲಕವೇ ನಿರ್ಧಾರವಾಗುತ್ತದೆ. ಅದರಲ್ಲೂ ತಾಯಿಯ ಕಡೆಯಿಂದಲೇ ಹೆಚ್ಚಾಗಿ ರಕ್ತಸಂಬಂಧಗಳು ಏರ್ಪಡುತ್ತವೆ.

---

೨. ಸಮಾಜಶಾಸ್ತ್ರದ ಮೂಲತತ್ವಗಳು, ಚ.ನಾ.ಶಂಕರರಾವ್, ಜೈಭಾರತ್ ಪ್ರಕಾಶನ, ೨೦೧೦, ಪು.೨೦೩

ಕಾಲೋನಿಯ ಹಕ್ಕಿಪಿಕ್ಕಿಯವರ ಕೌಟುಂಬಿಕ ವ್ಯವಸ್ಥೆಯು ಮಾತೃಪ್ರಧಾನ ಅಂಶವನ್ನು ಹೊಂದಿದ್ದು ತಾಯಿಯ ಕಡೆಯಿಂದಲೇ ಹೆಚ್ಚಿನ ಸಂಬಂಧಗಳು ಏರ್ಪಡುತ್ತವೆ. ಇವರಲ್ಲಿ ಕೇಂದ್ರ ಕುಟುಂಬಗಳು ಹೆಚ್ಚಾಗಿ ಕಂಡುಬರುತ್ತವೆ. ಯಾವುದೇ ಕುಟುಂಬದ ಸದಸ್ಯ ಮದುವೆಯಾದ ತಕ್ಷಣ ಆ ದಂಪತಿಗಳು ಬೇರೆ ಮನೆಯಲ್ಲಿ ವಾಸಿಸುವುದು ಇವರಲ್ಲಿ ಸರ್ವೇಸಾಮಾನ್ಯ. ಕಾರಣ ಆರ್ಥಿಕ ಭದ್ರತೆ ಇಲ್ಲದೆ ಇವರು ಚಿಕ್ಕ ಮನೆಗಳಲ್ಲಿ ಅಥವಾ ಗುಡಿಸಲುಗಳಲ್ಲಿ ವಾಸಿಸುವುದರಿಂದ ಹೆಚ್ಚು ಜನರು ಅಂತಹ ಮನೆ, ಗುಡಿಸಲುಗಳಲ್ಲಿ ವಾಸಿಸುವುದು ಕಷ್ಟಸಾಧ್ಯ. ಆದ್ದರಿಂದ ಹಿರಿಯರು, ಗಂಡ ಹೆಂಡತಿಯನ್ನು ಪ್ರತ್ಯೇಕವಾಗಿ ಗುಡಿಸಲು ಕಟ್ಟಿಕೊಂಡು ಅದರಲ್ಲಿ ವಾಸಿಸುತ್ತಾ ದುಡಿದು ಜೀವಿಸಲು ಬಿಟ್ಟುಬಿಡುತ್ತಾರೆ. ಇವರಲ್ಲಿ ಸಾವಂಡಿಯಾ, ಪಿಂಪಳಾಜಾ, ಇಕೋತಿಯಾ, ಹರ್‌ಖತಿಯಾ, ಕೊರಬಿಯಾ ಮತ್ತು ಖೋಡಿಯರ್ ಎಂಬ ಆರು ಪ್ರಮುಖ ಬೆಡಗುಗಳಿವೆ. ಇವರಲ್ಲಿ ಸಗೋತ್ರ ವಿವಾಹ ನಿಷಿದ್ಧವಿದ್ದು, ಅನ್ಯ ಬೆಡಗಿನವರೊಡನೆ ವಿವಾಹವಾಗುತ್ತಾರೆ.

ಜನನ

ಹಕ್ಕಿಪಿಕ್ಕಿಯರು ಹುಟ್ಟು ಮತ್ತು ಸಾವುಗಳನ್ನು ಗಂಭೀರವಾಗಿಯೇ ಪರಿಗಣಿಸುತ್ತಾರೆ. ಈ ಸಂದರ್ಭಗಳಲ್ಲಿ ಸೂತಕವನ್ನು ಬಹು ಕಟ್ಟುನಿಟ್ಟಿನಿಂದ ಪಾಲಿಸುತ್ತಾರೆ. ಗರ್ಭಿಣಿಯನ್ನು ಹಿಂದಿನ ಕಾಲದಲ್ಲಿ ಹೆರಿಗೆಯಾಗುವವರೆಗೆ ಪ್ರತ್ಯೇಕ ಗುಡಿಸಲಿನಲ್ಲಿ ಬಿಡುತ್ತಿದ್ದರು. ಅವಳ ಜೊತೆಗೆ ಸಹಾಯಕ್ಕಾಗಿ ಹಿರಿಯ ಮಹಿಳೆಯನ್ನು ಅಥವಾ ಚಿಕ್ಕ ಹುಡುಗಿಯನ್ನು ಬಿಡುತ್ತಿದ್ದರು. ಆಗ ಗರ್ಭಿಣಿಯು ತನ್ನ ಹೆರಿಗೆಯನ್ನು ತಾನೇ ಮಾಡಿಕೊಳ್ಳಬೇಕಾಗುತ್ತಿತ್ತು. ಹೆರಿಗೆಯು ಸುಲಭವಾಗಿ ಆಗಲು ಹೆಣ್ಣಿಗೆ ಹಡೆಯುವ ಸಮಯದಲ್ಲಿ ಕೊತ್ತಂಬರಿ ಕಾಳು, ಜೀರಿಗೆ ಹುರಿದು ಪುಡಿ ಮಾಡಿ ಕಷಾಯ ಮಾಡಿ ಕುಡಿಸುತ್ತಾರೆ. ಇಲ್ಲವೇ ಹಾಲು ಹಾಕದ ಟೀಯನ್ನು ೨-೩ ಬಾರಿ ಕುಡಿಸುತ್ತಾರೆ. ಹೀಗೆ ಮಾಡುವುದರಿಂದ ಹೆರಿಗೆ ಸುಲಭವಾಗುತ್ತದೆ ಎನ್ನುತ್ತಾರೆ.

ಮಗು ಹುಟ್ಟಿದ ಮೇಲೆ ಹೊಕ್ಕಳು ಬಳ್ಳಿಯನ್ನು ಮರದ ತುಂಡು ಇಲ್ಲವೆ ಬಳೆಯ ಚೂರಿನಿಂದ ತಾನೇ ಕೊಯ್ದು ಸೀರೆಯ ನೂಲಿನಿಂದ ಹೊಕ್ಕಳ ಬಳ್ಳಿಯನ್ನು ಕಟ್ಟಿಕೊಳ್ಳುತ್ತಿದ್ದಳು. ಸೂತಕ ಕಳೆಯುವವರೆಗೂ ಅವಳನ್ನು ಯಾರೂ ಮುಟ್ಟುವಂತಿಲ್ಲ. ಬಾಣಂತಿಯು ಎಲ್ಲಾ ಕೆಲಸಗಳನ್ನು ತಾನೇ ಮಾಡಿಕೊಳ್ಳಬೇಕಾಗುತ್ತದೆ. ಮಾಸ ಮತ್ತು ಮಣ್ಣಿನಿಂದ ಕೂಡಿದ ಮಗುವನ್ನು ಹಸಿ ಬಾಣಂತಿಯೇ ತನ್ನ ಕಾಲುಗಳ ಮೇಲೆ ಹಾಕಿಕೊಂಡು ದನದ ಸಗಣಿಯಿಂದ ಮಗುವನ್ನು ಸ್ನಾನ ಮಾಡಿಸಿ ತಾನೂ ನೀರು ಇರುವಲ್ಲಿಗೆ ಹೋಗಿ ಸ್ನಾನ ಮಾಡಿ ಬಟ್ಟೆ ತೊಳೆದುಕೊಂಡು ಬರುತ್ತಿದ್ದಳು. ಆಗ ಅಕ್ಕಪಕ್ಕದ ಮನೆಯವರು ಅಥವಾ ಗಂಡನು, ಮಗು ಮತ್ತು ಹಸಿ ಬಾಣಂತಿಯು ಮೈಕಾಯಿಸಿಕೊಳ್ಳಲು ಬೆಂಕಿ ಹಾಕಿ ಕೊಡುತ್ತಿದ್ದರು. ನಂತರ ಅವಳ ಗಂಡ ಅಕ್ಕಿ ಹುಗ್ಗಿಯನ್ನು ಮಾಡಿ ಮುತ್ತುಗದ ಎಲೆಯಲ್ಲಿ ಹಾಕಿ ನೀಡಲಾಗುತ್ತಿತ್ತು. (ಮಾಹಿತಿ: ಗಿರಿಜಮ್ಮ ೫೮, ಕಂಪ್ಲಿ) ಮಗುವಿನ ಆರೋಗ್ಯ ರಕ್ಷಣೆಗೆ ಅಂದಿನ

ಕಾಲದ ಜನ ತಮ್ಮ ಸುತ್ತಲಿನ ಪರಿಸರದಿಂದಲೇ ಔಷಧಯುಕ್ತ ಗುಣವನ್ನು ಕಂಡುಕೊಂಡಿದ್ದರು. ಇಂದಿನಂತೆ ಯಾವುದೇ ಇ.ಸಿ.ಜಿ., ಪೋಲಿಯೋ ಲಸಿಕೆ, ಚಿಕಿತ್ಸೆಗಳಂತಹ ವೈದ್ಯಕೀಯ ಪರಿಚಯವಿಲ್ಲದ ಅಂದಿನ ಬುಡಕಟ್ಟುಗಳು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಸಿಗುವ ಗಿಡಮೂಲಿಕೆಗಳಿಂದ ತಮಗೆ ಉಪಯುಕ್ತವಾಗುವ ರೀತಿಯಲ್ಲಿ ಔಷಧಿ ತಯಾರಿಕೊಂಡು ಬಳಸಿಕೊಳ್ಳುತ್ತಿದ್ದರು. ಮುಂದೆ ತಮ್ಮ ಮಕ್ಕಳಿಗೆ ಯಾವುದೇ ಕಾಯಿಲೆ, ಚರ್ಮರೋಗ ಬಾರದಿರಲೆಂದು ಔಷಧಿಗುಣವುಳ್ಳ ದನದ ಸಗಣಿಯಿಂದ ಹಸಿಗೂಸಿಗೆ ಸ್ನಾನ ಮಾಡಿಸುತ್ತಿದ್ದ ಬಗೆ ಇಂದಿನ ವೈದ್ಯರನ್ನು ಸಹ ಮೆಚ್ಚಿಸುವಂತದ್ದಾಗಿದೆ. ಹೆರಿಗೆಯಾದ ನಂತರ ತಾಯಿ ಮಗುವಿನ ಸ್ನಾನವಾದ ಮೇಲೆ ಮನೆಯವರು ಬಾಣಂತಿಗೆ ಗೋಧಿನುಚ್ಚಿನ ಗಂಜಿ ಅಥವಾ ಪಾಯಸ ಮಾಡಿ ಅವಳಿಗೆ ಪ್ರತ್ಯೇಕವಾಗಿ ಕೊಟ್ಟಿದ್ದ ತಟ್ಟೆಯಲ್ಲಿ ಮೇಲಿಂದ ಹಾಕುವರು. ಇದರಂತೆ ಮೂರು ದಿನಗಳ ಕಾಲ ಗಂಜಿಯನ್ನು ಕೊಡುವರು. ಮೂರನೆಯ ದಿನದಿಂದ ಬಿಳಿ ಜೋಳದ ರೊಟ್ಟಿ, ಗೋಧಿ ಚಪಾತಿ, ತಲೆ ಮಾಂಸದ ಊಟ ಮಾಡಿ ಕೊಡುವರು. ಇವಳು ಹೆರಿಗೆಯಾದ ದಿನದಿಂದ ಮೂರು ತಿಂಗಳವರೆಗೆ ಮನೆಯೊಳಗೆ ಹೋಗುವಂತಿಲ್ಲ. ಮನೆಯ ಯಾವುದೇ ವಸ್ತುಗಳನ್ನು ಮುಟ್ಟುವಂತಿಲ್ಲ ಮತ್ತು ಕಾಲೋನಿಯವರ ಯಾವುದೇ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಿಲ್ಲ. ಹೀಗೆ ಇವರು ಮೂರು ತಿಂಗಳವರೆಗೆ ಕಟ್ಟುನಿಟ್ಟಿನಿಂದ ಸೂತಕವನ್ನು ಆಚರಿಸಲಾಗುತ್ತದೆ.

ಹಕ್ಕಿಪಿಕ್ಕಿಯವರು ಮಗು ಹುಟ್ಟಿದ ಐದನೆಯ ದಿನ ನಾಮಕರಣಶಾಸ್ತ್ರ (ಛಟ್ಟಿಪೂಜಿಹೊ) ಮಾಡುತ್ತಾರೆ. ಬಾಣಂತಿಯ ಸೂತಕ ಕಳೆಯಲು ಮಗು ಜನಿಸಿದ ಐದನೆಯ ದಿನಕ್ಕೆ ಅಕ್ಕಿ ಹುಗ್ಗಿಯನ್ನು ಮಾಡಿ ಕಾಲೋನಿಯ ಮಕ್ಕಳು ಹಾಗೂ ಹೆಣ್ಣು ಮಕ್ಕಳಿಗೆ ಹಂಚುತ್ತಾರೆ. ಗಂಡಸರು ಈ ಹುಗ್ಗಿಯನ್ನು ತಿನ್ನುವಂತಿಲ್ಲ. ಈ ಶಾಸ್ತ್ರದ ದಿನ ಮಗುವಿಗೆ ಹೆಸರಿಡುವ ಶಾಸ್ತ್ರ(ನಾಮಕರಣ) ಮಾಡುತ್ತಾರೆ. ಇವರಲ್ಲಿ ತಾಯಿ ಅಥವಾ ತಂದೆಯೇ ಮಗುವಿಗೆ ಹೆಸರಿಡುತ್ತಾರೆ. ಅಲ್ಲದೇ ತಾಯಿಯೇ ತನ್ನ ಮಗುವಿನ ಮೊದಲ ತಲೆ ಕೂದಲನ್ನು ಕತ್ತರಿಸುತ್ತಾಳೆ. ಆದರೆ ಇತರ ಸಮುದಾಯಗಳಲ್ಲಿ ಮಗುವಿನ ಮೊದಲ ತಲೆಗೂದಲನ್ನು ಸೋದರ ಮಾವ ತೆಗೆಯುತ್ತಾನೆ. ಅಲ್ಲದೆ ಆ ಮಗುವಿನ ಸೋದರಮಾವ ಅಥವಾ ಸೋದರಅತ್ತೆಯೇ ನಾಮಕರಣ ಮಾಡುತ್ತಾರೆ. ಈ ಪದ್ಧತಿಗೆ ಭಿನ್ನವೆಂಬಂತೆ ಹಕ್ಕಿಪಿಕ್ಕಿ ಸಮುದಾಯದವರಲ್ಲಿ ತಾಯಿಯೇ ಮಗುವಿನ ಮೊದಲ ತಲೆಕೂದಲನ್ನು ತೆಗೆದು ಅವಳೇ ಮಗುವಿಗೆ ಹೆಸರಿಡುವ ಪದ್ಧತಿಯನ್ನು ಕಾಣಬಹುದಾಗಿದೆ.

ಸೂತಕ ನಿವಾರಣೆ : ಹೆರಿಗೆಯಾದ ಮೂರು ತಿಂಗಳಾದ ಮೇಲೆ ಬಾಣಂತಿಯು ತಾನು ಧರಿಸಿದ ಎಲ್ಲಾ ಹಳೆಯ ಬಟ್ಟೆ, ಆಭರಣಗಳನ್ನು ಎಸೆದು ಸ್ನಾನ ಮಾಡಿಕೊಂಡು ಹೊಸಬಟ್ಟೆ, ಆಭರಣಗಳನ್ನು ಧರಿಸುತ್ತಾಳೆ. ಹಿರಿಯರಿಗೆ ನಮಸ್ಕರಿಸಿ ಅಂದು ಮನೆಯನ್ನು ಪ್ರವೇಶ ಮಾಡಿ ಎಲ್ಲರಿಗೂ ಸಿಹಿ ಅಡುಗೆ ಮಾಡಿ ಬಡಿಸುತ್ತಾಳೆ. ಅಂದಿಗೆ ಅವಳ ಸೂತಕ ಕಳೆದಂತೆ.

ಇಂದಿನ ದಿನಮಾನಗಳಲ್ಲಿ ಕಾಲೋನಿಯ ಜನರು ಜನನದ ಸಂದರ್ಭದ ಆಚರಣೆಗಳನ್ನು ಅಷ್ಟೊಂದು ಕಟ್ಟುನಿಟ್ಟಿನಿಂದ ಆಚರಿಸುತ್ತಿಲ್ಲ. ಅಲ್ಲದೇ ನಾಮಕರಣದ ದಿನ ಅಕ್ಕಿ ಹುಗ್ಗಿಯನ್ನು ಮಾಡುವುದಿಲ್ಲ ಮತ್ತು ಬಾಣಂತಿಯನ್ನು ಹಿಂದಿನಂತೆ ಮೂರು ತಿಂಗಳು ಭಿಕ್ಷೆಗೆ ಕಳುಹಿಸುವುದಿಲ್ಲ. ತಮ್ಮ ಹೆರಿಗೆಯನ್ನು ತಾವೇ ಮಾಡಿಕೊಳ್ಳದೇ ಆಸ್ಪತ್ರೆಗಳಿಗೆ ಹೋಗುತ್ತಿದ್ದಾರೆ. ಈಗಲೂ ಮಗು ಹುಟ್ಟಿದ ಐದನೆಯ ದಿನದಂದು ಕೂದಲು ತೆಗೆಯುವ ಶಾಸ್ತ್ರ ಮಾಡುತ್ತಾರೆ. ಆದರೆ ತಾಯಿಯೇ ಕೂದಲು ತೆಗೆಯದೆ ಕ್ಷೌರಿಕನನ್ನು ಕರೆಯಿಸಿ ಮಗುವಿನ ತಲೆಗೂದಲನ್ನು ತೆಗೆಸುತ್ತಾರೆ. ಈ ಕಾಲೋನಿಯ ಜನ ಈಗಲೂ ತಮ್ಮ ಮಕ್ಕಳಿಗೆ ತಮ್ಮ ಪೂರ್ವಜರ ಹೆಸರುಗಳನ್ನೇ ನಾಮಕರಣ ಮಾಡುತ್ತಾರೆ. ಮಗು ಗಂಡಾಗಲೀ, ಹೆಣ್ಣಾಗಲಿ ಲಿಂಗಭೇದವಿಲ್ಲದೆ ಸಮಾನವಾಗಿ ಸಂತೋಷಿಸುತ್ತಾರೆ. ಹೆಣ್ಣಾದರೆ ಹೆಚ್ಚು ಸಂಭ್ರಮಿಸುತ್ತಾರೆ. ಕಾರಣ ಇವರಲ್ಲಿ ಮದುವೆಯ ಸಂದರ್ಭದಲ್ಲಿ 'ತೆರ ಪದ್ಧತಿ' (ವಧುದಕ್ಷಿಣೆ) ಜಾರಿಯಲ್ಲಿರುವುದರಿಂದ ಹೆಣ್ಣಾದರೆ ಲಾಭವೆಂದು ಭಾವಿಸುತ್ತಾರೆ.

ಋತುಮತಿ ಆಚರಣೆ

ಬಾಲೆಯರು ಕನ್ನೆಯಾಗುವ ಪ್ರಕ್ರಿಯೆಯನ್ನು ಬುಡಕಟ್ಟು ಸಮುದಾಯಗಳು ಅತೀ ಸಂಭ್ರಮದಿಂದ ಎದುರುಗೊಳ್ಳುತ್ತಾರೆ. ಈ ಕಾರ್ಯವನ್ನು ಒಂದೊಂದು ಬುಡಕಟ್ಟುಗಳಲ್ಲಿ ಒಂದೊಂದು ರೀತಿಯಲ್ಲಿ ಆಚರಿಸುತ್ತಾರೆ. ಇವರು ಈ ಕಾರ್ಯವನ್ನು ಹೆಣ್ಣಿನ ಜೀವನದ ಅತಿಮುಖ್ಯ ಘಟ್ಟ ಎಂದು ಭಾವಿಸುತ್ತಾರೆ. ಮೈನೆರೆದ ಹೆಣ್ಣಿಗೆ ಮೊದಲು ತನ್ನ ಸೋದರತ್ತೆಯಾಗಲಿ ಅಥವಾ ಮನೆಯ ಯಜಮಾನಿಯಾಗಲೀ ಇಲ್ಲವೇ ಸೋದರ ಮಾವನಾಗಲಿ ಮೊದಲ ಮುಟ್ಟು ನೀರನ್ನು ಹಾಕುತ್ತಾರೆ. ಋತುಮತಿಯಾದ ಹೆಣ್ಣಿನ ಮನೆಯನ್ನು ಏಳು ದಿನಗಳವರೆಗೆ ಸೂತಕದ ಮನೆಯೆಂದು ಕರೆಯುತ್ತಾರೆ. ಆ ಸಮಯದಲ್ಲಿ ಯಾರೂ ಅವರ ಮನೆಗೆ ಹೋಗುವಂತಿಲ್ಲ. ಇವರು ಸಹ ಬೇರೆಯವರ ಮನೆಗೆ ಹೋಗುವಂತಿಲ್ಲ. ಋತುಮಾತಿಯಾದ ಹೆಣ್ಣನ್ನು ಐದು ಅಥವಾ ಏಳು ದಿನಗಳವರೆಗೆ ಪ್ರತ್ಯೇಕವಾಗಿ ಇರಿಸುತ್ತಾರೆ. ಅವಳ ಊಟದ ತಟ್ಟೆ, ನೀರಿನ ಲೋಟ ಸಹ ಪ್ರತ್ಯೇಕವಾಗಿರುತ್ತವೆ. ಅವಳು ಏಳು ದಿನಗಳವರೆಗೆ ದಿನಾಲು ಸ್ನಾನ ಮಾಡಬೇಕು.

"ಹಕ್ಕಿಪಿಕ್ಕಿಯರಲ್ಲಿ ಈ ಹಿಂದೆ ಹೆಣ್ಣು ಮೈನೆರೆದ ಮೂರು ಅಥವಾ ಐದನೆಯ ದಿನಕ್ಕೆ ಹುಡುಗಿ ಕುಳಿತ ಮೂಲೆಯನ್ನು ಆ ಹುಡುಗಿಯ ಕೈಯಿಂದಲೇ ಸಗಣಿಯಿಂದ ಸಾರಿಸಿ ಪೂಜೆ ಸಲ್ಲಿಸುತ್ತಿದ್ದರು. ನಂತರ ಹುಡುಗಿಯನ್ನು ದೇವರ ಮನೆಗೆ ಕರೆದುಕೊಂಡು ಹೋಗಿ ಮನೆದೇವತೆಗೆ ಪೂಜೆ ಮಾಡಿಸುತ್ತಿದ್ದರು. ಈ ಎಲ್ಲ ಕ್ರಿಯೆಗಳ ನಂತರ ಹುಡುಗಿಗೆ ಧಾನ್ಯ, ಚಿಗಳಿ ಮತ್ತು ಫಲ ತಾಂಬೂಲಗಳನ್ನು ಐದು ಜನ ಮುತ್ತೈದೆಯರು ಉಡಿ ತುಂಬುತ್ತಾರೆ. ಅಂದು ಋತುಮತಿ ಹೆಣ್ಣಿಗೆ ಸ್ನಾನ ಮಾಡಿಸಿ ಹೂವು ಮುಡಿಸಿ ಮುಖಕ್ಕೆ ಕೆಂಪು ಬಣ್ಣ ಹಚ್ಚುತ್ತಾರೆ. ಸಂಬಂಧಿಕರನ್ನು ಕರೆದು ಸಿಹಿ ಊಟ ಹಾಕಿಸುತ್ತಾರೆ" (ಮಾಹಿತಿ: ಲೇಖು ೬೫, ಕೊರಬಿಯಾ, ಕಂಪ್ಲಿ). ಆದರೆ ಈ ಪದ್ಧತಿಗೆ ವ್ಯತಿರಿಕ್ತವೆಂಬಂತೆ ಕಂಪ್ಲಿಯ

ಹಕ್ಕಿಪಿಕ್ಕಿಯರು ತಮ್ಮ ಮೈನೆರೆದ ಹೆಣ್ಣನ್ನು ಏಳು ದಿನಗಳವರೆಗೆ ಪ್ರತ್ಯೇಕ ಕೋಣೆಯಲ್ಲಿರಿಸುತ್ತಾರೆ. ಏಳನೆಯ ದಿನ ಸ್ನಾನ ಮಾಡಿಸಿ ಮನೆಯೊಳಗೆ ಬರಮಾಡಿಕೊಳ್ಳುತ್ತಾರೆ. ಅಂದು ಅವಳ ಮುಖಕ್ಕೆ ಕೆಂಪು ಬಣ್ಣ ಹಚ್ಚುವುದಾಗಲಿ, ಸಂಬಂಧಿಕರನ್ನು ಕರೆಯಿಸಿ ಸಿಹಿ ಊಟ ಹಾಕಿಸುವುದಾಗಲಿ, ಮುತ್ತೈದೆಯರಿಂದ ಉಡಿ ತುಂಬಿಸುವುದಾಗಲಿ, ಆರತಿ ಮಾಡುವ ಶಾಸ್ತ್ರಗಳನ್ನಾಗಲಿ ಇವರು ಮಾಡುವುದಿಲ್ಲ. ಈ ಕಾಲೋನಿಯ ಜನರು ಎಂದೂ ಋತುಮತಿ ಶಾಸ್ತ್ರವನ್ನು ಮಾಡಿದ ನೆನಪು ಇಲ್ಲವೆಂದು ಹೇಳುತ್ತಾರೆ. ಇತ್ತೀಚೆಗೆ ಬೇರೆ ಬೇರೆ ಕಡೆಯಲ್ಲಿ ಋತುಮತಿ ಶಾಸ್ತ್ರವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರೂ ಈ ಕಾಲೋನಿಯ ಜನರು ಋತುಮತಿಶಾಸ್ತ್ರವನ್ನು ಮಾಡುವುದಿಲ್ಲ.

ಮದುವೆ

ಗಂಡು-ಹೆಣ್ಣು ಗಂಡ-ಹೆಂಡತಿಯಾಗುವ ಧಾರ್ಮಿಕ ವಿಧಾನವನ್ನು ವಿವಾಹ ಅಥವಾ ಮದುವೆ ಎನ್ನುವರು. ವಿವಾಹ ಮತ್ತು ಕುಟುಂಬ ಸಮಾಜದ ಎರಡು ಕೇಂದ್ರ ಬಿಂದುಗಳಾಗಿವೆ. ವಿವಾಹ ಆದಿಕಾಲದಿಂದಲೂ ಪೃಥ್ವಿಯ ಮೇಲೆ ನಡೆದು ಬಂದ ಪದ್ಧತಿಯಾಗಿದೆ. ಇಂಗ್ಲಿಷ್‌ನ 'Marriage' ಎಂಬುದು ಮದುವೆ ಎಂಬ ಅರ್ಥ ಕೊಡುತ್ತದೆ. "Marriage ಈ ಪದವು ಲ್ಯಾಟಿನ್ ಭಾಷೆಯ Marris or Mas ಎನ್ನುವ ಪದದಿಂದ ಉತ್ಪತ್ತಿಯಾಗಿದೆ. Marris or Mas ಅಂದರೆ ಜೋಡಿಯಾಗು. ಆದ್ದರಿಂದ ಈ ಪದಕ್ಕೆ ಹೆಣ್ಣಿಗೆ ಗಂಡನ್ನು ಜೋಡಿಸುವುದು ಎಂಬ ಅರ್ಥವು ಹೊಂದುತ್ತದೆ".[೩] ಬುಡಕಟ್ಟು ಸಮುದಾಯಗಳು ವೈವಾಹಿಕ ಜೀವನಕ್ಕೆ ಸಾಕಷ್ಟು ಪ್ರಾಮುಖ್ಯತೆ ನೀಡಿರುವುದರಿಂದ ವಿವಾಹವು ಅವರಲ್ಲಿ ಸಾರ್ವತ್ರಿಕವಾಗಿದೆ. ವಿವಾಹದ ವಯಸ್ಸು, ಸಂಗಾತಿಗಳ ಆಯ್ಕೆ ಕ್ರಮ, ವಿವಾಹದ ಸಮಾರಂಭದ ಸ್ವರೂಪ, ವಿವಾಹ ವಿಚ್ಛೇದನ, ಲೈಂಗಿಕ ನಿಯಮಗಳು ಇವುಗಳ ಬಗ್ಗೆ ಬುಡಕಟ್ಟುಗಳಲ್ಲಿ ತಮ್ಮದೇ ಆದ ನಿಯಮಗಳಿವೆ.

ಕರ್ನಾಟಕದಲ್ಲಿನ ಹಲವು ಬುಡಕಟ್ಟುಗಳಲ್ಲಿ ಮದುವೆ ಎಂಬ ಸಂಸ್ಕಾರ ಹಲವಾರು ಬಗೆಗಳಲ್ಲಿ ಜರುಗುತ್ತದೆ. ವಿವಾಹವೆಂಬುದು ಎಲ್ಲ ಸಮುದಾಯಗಳಲ್ಲೂ ಸಹಜವಾಗಿದ್ದರೂ ವಿವಾಹದ ಪ್ರಕಾರಗಳು ಒಂದೊಂದು ಸಮುದಾಯದಲ್ಲಿ ಒಂದೊಂದು ರೀತಿಯಲ್ಲಿರುವುದು, ಸಾಂಸ್ಕೃತಿಕವಾಗಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡಿರುವ ಹಕ್ಕಿಪಿಕ್ಕಿ ಸಮುದಾಯದಲ್ಲಿ ಮದುವೆಯ ರೀತಿ ರಿವಾಜು, ವಿಧಿನಿಷೇಧಗಳು ಅನ್ಯ ಸಮುದಾಯಗಳಿಗೆ ಹೋಲಿಸಿದರೆ ತುಂಬಾ ವಿಭಿನ್ನ ಎನ್ನಬಹುದು. ಕಂಪ್ಲಿ ಕಾಲೋನಿಯ ಹಕ್ಕಿಪಿಕ್ಕಿಯರಲ್ಲಿ ಪ್ರಮುಖ ಆರು ಬೆಡಗುಗಳಲ್ಲಿ ವೈವಾಹಿಕ ವ್ಯವಸ್ಥೆಯು ಯಾವುದೇ ಬೆಡಗಿನವರಾದರೂ ತಮ್ಮ ಬೆಡಗಿಗಿಂತ ಭಿನ್ನವಾದ ಬೆಡಗಿನವರೊಂದಿಗೆ ವಿವಾಹ ಸಂಬಂಧ ಬೆಳೆಸುತ್ತಾರೆ. ಇವರಲ್ಲಿ ಸ್ವಗೋತ್ರ ವಿವಾಹ ನಿಷಿದ್ಧ. ಅನ್ಯ ಬೆಡಗುಗಳೊಂದಿಗಿನ ವಿವಾಹಗಳನ್ನು ಇವರು ಸ್ವಾಗತಿಸುತ್ತಾರೆ.

---

೩. ಕರ್ನಾಟಕ ಬುಡಕಟ್ಟು ಸಮುದಾಯಗಳು, ತಾರಿಹಳ್ಳಿ ಹನುಮಂತಪ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೧೦, ಪು. ೬೫

ಇವರಲ್ಲಿ ಮದುವೆಯ ಸಂದರ್ಭದಲ್ಲಿ ತೆರ ಕೊಡುವ ಪದ್ಧತಿ ಇರುವುದರಿಂದ ಗಂಡಿನ ಕಡೆಯವರಿಗಿಂತ ಹೆಣ್ಣಿನ ಕಡೆಯವರಿಗೇ ಆದಾಯ ಹೆಚ್ಚು. ಮದುವೆ ನಿಶ್ಚಯವಾದ ಮೇಲೆ ಗಂಡಿನ ತಂದೆ ಇಲ್ಲವೇ ಅವನ ಕಡೆಯವರು ಹೆಣ್ಣಿಗೆ ತೆರವು ಕೊಟ್ಟು ಕುಲಸ್ಥರ ಸಮ್ಮುಖದಲ್ಲಿ ಕನ್ಯೆಯನ್ನು ಖಾತ್ರಿ ಮಾಡಿಕೊಳ್ಳುವುದುಂಟು. ನಂತರ ಮದುವೆಯ ದಿನ ಗೊತ್ತು ಮಾಡಿಕೊಳ್ಳುತ್ತಾರೆ. ಇವರ ಮದುವೆಯ ಸಂದರ್ಭದಲ್ಲಿ ಮುಖ್ಯಸ್ಥ ಸಾರಥಿಯು ಪ್ರಮುಖ ಪಾತ್ರವಹಿಸುತ್ತಾನೆ. ಮದುವೆಯು ನಿಶ್ಚಯವಾದಾಗಿನಿಂದ ಮದುವೆ ಮುಗಿಯವವರೆಗೆ ಇವನ ಮುಂದಾಳತ್ವದಲ್ಲೆ ಮದುವೆ ನಡೆಯುತ್ತದೆ. "ಮಧ್ಯಸ್ಥರು ಅಂದರೆ ಸಾರಥಿಯು ಪ್ರಮುಖ ಪಾತ್ರವನ್ನು ವಹಿಸುತ್ತಾನೆ. ದೇವರಿಗೆ ಏಳು ಸಲ ಎರಡು ಹೆಬ್ಬಟ್ಟುಗಳಿಂದ ಅರಿಷಿಣದ ಬೊಟ್ಟು ಇಡುತ್ತಾರೆ. ಈ ಸಮಯದಲ್ಲಿ ವಧುವನ್ನು ಕುರಿತು. 'ಠಿಕದಾರ್‌ನಿ' ಎಂದು ಸಾರುವುದುಂಟು".[೪] ಅಂದರೆ ದೇವರಿಗೆ ಅರ್ಪಿತವಾದ ಈ ಹೆಣ್ಣು ಪವಿತ್ರವಾಗಿದೆ ಎಂದರ್ಥ.

ಹಕ್ಕಿಪಿಕ್ಕಿಯರಲ್ಲಿ ಹಿಂದೆ ವಧುವಿಗೆ ಮಾಂಗಲ್ಯಧಾರಣೆಯನ್ನು ವರನ ತಂದೆ ಇಲ್ಲವೇ ಸಾರಥಿಯು ಅಥವಾ ಯಾರಾದರೂ ವರನ ಕಡೆಯವರು ಮಾಡುತ್ತಿದ್ದರು. ಆದರೆ ಇಂದು ಈ ಸಮುದಾಯದವರ ವೈವಾಹಿಕ ಪದ್ಧತಿಗಳಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ. ಬಾಲ್ಯವಿವಾಹ ಕಡಿಮೆಯಾಗಿದೆ. ಈ ಹಿಂದೆ ಐದು, ಆರು ದಿನಗಳ ಕಾಲ ನಡೆಯುತ್ತಿದ್ದ ಮದುವೆ ಇತ್ತೀಚೆಗೆ ಒಂದು ಅಥವಾ ಎರಡು ದಿನಗಳಲ್ಲಿ ಮುಗಿಸುತ್ತಿದ್ದಾರೆ. ಹೆಣ್ಣಿಗೆ ತಾಳಿಯನ್ನು ವರನೆ ಕಟ್ಟುವ ಪದ್ಧತಿ ರೂಢಿಸಿಕೊಂಡಿದ್ದಾರೆ. ವರದಕ್ಷಿಣೆ ಪದ್ಧತಿ ಇವರಲ್ಲಿ ಇಲ್ಲವೇ ಇಲ್ಲ. ಆದರೆ 'ತೆರ' ಕೊಡುವ ಪದ್ಧತಿ ಇನ್ನು ಕಟ್ಟುನಿಟ್ಟಿನಿಂದ ನಡೆಸಿಕೊಂಡು ಬರುತ್ತಿದ್ದಾರೆ. 'ತೆರ' ಎಂದರೆ ಈ ಸಮುದಾಯದಲ್ಲಿ ಮದುವೆಯ ಸಂದರ್ಭದಲ್ಲಿ ಹೆಣ್ಣು ಕೊಟ್ಟ ಮನೆಗೆ ವರನ ಕಡೆಯಿಂದ ಒಂದು ಹೆಣ್ಣು ಕೊಟ್ಟು ಮದುವೆ ಮಾಡಬೇಕು, ಇದನ್ನು ಎದುರು ಮದುವೆ ಎನ್ನುವರು. ಒಂದು ವೇಳೆ ಗಂಡಿನವರ ಮನೆಯಲ್ಲಿ ಹೆಣ್ಣು ಇಲ್ಲದಿದ್ದರೆ ತಾವು ಕೊಟ್ಟ ಹೆಣ್ಣಿನ ಹೊಟ್ಟೆಯಲ್ಲಿ ಹುಟ್ಟುವ ಹೆಣ್ಣನ್ನು ತವರು ಮನೆಯವರಿಗೆ ಮದುವೆ ಮಾಡಿಕೊಡಬೇಕು. ಒಂದು ವೇಳೆ ತಾವು ತಮ್ಮ ಮಗಳನ್ನು ಬೇರೆ ಕಡೆಗೆ ಕೊಡುವುದಾದರೆ ಹುಡುಗಿಯ ತಂದೆ ತನ್ನ ಅತ್ತೆ ಮಾವರನ್ನು ಕೇಳಿ ಅವರು ಒಪ್ಪಿಗೆ ಕೊಟ್ಟರೆ ಬೇರೆ ಕಡೆಗೆ ಮದುವೆ ಮಾಡಿ ಕೊಡಬಹುದು. ಇಲ್ಲದಿದ್ದರೆ ಇವರು ಹೇಳಿದವರಿಗೆ ತಮ್ಮ ಮಗಳನ್ನು ಕೊಡಬೇಕು. ಇದು ಯಾವುದೂ ಜರುಗದಿದ್ದರೆ ಗಂಡಿನ ಕಡೆಯವರು ಹೆಣ್ಣಿನ ಕಡೆಯವರಿಗೆ ತೆರವಾಗಿ (ಕನ್ಯಾಶುಲ್ಕ) ೬೦-೧೦೦೦ ರೂಪಾಯಿಗಳವರೆಗೆ ಒಂದಿಷ್ಟು ಹಣವನ್ನು ಕೊಡಬೇಕಾಗುತ್ತದೆ.

ಮದುವೆ ಆಚರಣೆ

ಇವರಲ್ಲಿ ಮದುವೆ ನಿಶ್ಚಯವಾದಾಗ ಮೊದಲಿಗೆ ಸಮುದಾಯದ ಕಟ್ಟೆಮನೆ ಗೌಡನಿಗೆ ವಿಷಯ ತಿಳಿಸುತ್ತಾರೆ. ಇವರು ಮದುವೆಗೆ ಪುರೋಹಿತರನ್ನು ಕರೆಯಿಸುವುದಿಲ್ಲ. ಎಲ್ಲ ಕಾರ್ಯಗಳನ್ನು

---

೪. ಕರ್ನಾಟಕ ಬುಡಕಟ್ಟುಗಳು, ಸಂಪುಟ ೨, ಲಕ್ಕಪ್ಪಗೌಡ ಎಚ್.ಜೆ., ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೨೦೦೦, ಪು.೧೯೩

ಕಟ್ಟೆಮನೆ ಗೌಡನು ನೆರವೇರಿಸುತ್ತಾನೆ. ಗಂಡು ಹೆಣ್ಣಿನ ಮನೆಯವರು ಕಟ್ಟೆಮನೆ ಗೌಡನಿಗೆ ಬಾಬ್ತು ಕೊಟ್ಟು ವಧುವರರ ಮನೆಯ ಮುಂದೆ ದೇವರ ಹೆಸರಿನಲ್ಲಿ ಹುಗ್ಗಿ ಮತ್ತು ಅನ್ನದ ಎಡೆಯನ್ನು ಮಣ್ಣಿನ ಪಾತ್ರೆಯಲ್ಲಿಟ್ಟು ತಮ್ಮ ದೇವರಿಗೆ ಸಲ್ಲಿಸುವರು. ತುಪ್ಪ ಅಥವಾ ಎಣ್ಣೆಯ ದೀಪವನ್ನು ಹಚ್ಚಿ ಹಿರಿಯರು ಅಥವಾ ಪೂಜಾರಿಯು ವಧುವರರಿಗೆ ಒಳ್ಳೆಯದಾಗಲಿ ಎಂದು ಮನೆದೇವರನ್ನು ಬೇಡಿಕೊಂಡು ಆಶೀರ್ವಾದಿಸುತ್ತಾರೆ. ನಂತರ ಸೂತ್ರಧಾರಿಗಳು ರಾತ್ರಿ ಅರಳಿ ಮರಕ್ಕೆ ಪೂಜೆ ಮಾಡಿ ಎರಡು ಕೊಂಬೆಗಳನ್ನು ಮುರಿದು ತಂದು ಹೆಣ್ಣಿನ ಮನೆಯಲ್ಲೊಂದು ಗಂಡಿನ ಮನೆಯಲ್ಲೊಂದು ಇಡುತ್ತಾರೆ. ಮರುದಿನ ಗಂಡು, ಹೆಣ್ಣಿಗೆ ಆ ಅರಳಿಮರದ ಎಲೆಯಿಂದಲೇ ಬಾಸಿಂಗವನ್ನು ಕಟ್ಟುತ್ತಾರೆ. ಎರಡು ಗಿಟುಕ ತೆಂಗಿನ ಕಾಯಿ ತೆಗೆದುಕೊಂಡು ಬಿಳಿದಾರದಿಂದ ಕಾಯಿ ಕಾಣದಂತೆ ದಾರವನ್ನು ಸುತ್ತಿ ಆ ದಾರಕ್ಕೆ ಅರಿಷಿಣ ಹಚ್ಚಿ ಒಂದು ಮಣ್ಣಿನ ಪರಾಣಿಯಲ್ಲಿ ಬಾಸಿಂಗ ಮತ್ತು ದಾರ ಸುತ್ತಿದ ಕಾಯಿಯನ್ನು ಇಡುತ್ತಾರೆ. ನಂತರ ಕರಿಮಣಿಯನ್ನು ಪೋಣಿಸಿ ಆ ಪರಾಣಿಯಲ್ಲಿಟ್ಟು ಬೆಳಗಿನ ಜಾವ ನಾಲ್ಕು ಗಂಟೆಗೆ ಗಂಡಿನ ಮನೆಯವರು ವರನನ್ನು ಒನಕೆಯ ಮೇಲೆ ಕೂರಿಸಿ ತಮ್ಮ ಮನೆಯ ದೇವರನ್ನು ನೆನೆದು ಒಬ್ಬೊಬ್ಬರಾಗಿ ಒಂದು ಮಣ್ಣಿನ ಮಗಿಯಿಂದ ನೀರನ್ನು ಗಂಡಿನ ಮೇಲೆ ಹಾಕುತ್ತಾರೆ. ಅದೇ ರೀತಿ ಹೆಣ್ಣಿನ ಮನೆಯಲ್ಲೂ ನಡೆಯುತ್ತದೆ. ನಂತರ ಬೆಳಗಿನ ಆರು ಗಂಟೆ ಸುಮಾರಿಗೆ ಗಂಡಿನವರು ವರನಿಗೆ ಅರಶಿಣ ಹಚ್ಚಿ ಸೂತ್ರಧಾರಿಗಳು ವರನ ಮೈಮೇಲೆ ಒಂದು ಹೊಸ ಟವಲನ್ನು ಹಾಕಿ ಆ ಟವಲ್‌ನ್ನು ವಧುವಿಗೆ ಹೊದಿಸಿಕೊಂಡು ಗಂಡಿನ ಮನೆಗೆ ಕರೆದುಕೊಂಡು ಬರುತ್ತಾರೆ. ನಂತರ ವಧುವರರನ್ನು ಒನಕೆಯ ಮೇಲೆ ಕೂರಿಸಿ ಅರಿಶಿನದ ನೀರನ್ನು ಹಾಕುತ್ತಾರೆ. ನೀರು ಹಾಕುವ ಶಾಸ್ತ್ರ ಮುಗಿದ ಮೇಲೆ ವಧುವನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಾರೆ. ಗಂಡಿನ ಮನೆಯೊಳಗೆ ಮದ್ದಿಂಗನ ಮಾಡಿ ಬಿಳಿದಾರದ ಹಾರವನ್ನು ಕೊರಳಲ್ಲಿ ಹಾಕಿ ಬಿಳಿ ಅಂಗಿ, ಬಿಳಿ ಧೋತರ ತೊಡಿಸಿ ತಲೆಗೆ ಟವಲ್‌ನ್ನು ಕಟ್ಟಿಸಿ ತಮ್ಮ ಮನೆಯ ದೇವರ ಮುಂದೆ ಕೂಡಿಸಿ ಕಟ್ಟೆಮನೆ ಗೌಡರು ದೇವರ ಹೆಸರನ್ನು ಕೂಗಿ ಎಣ್ಣೆಯ ಅಥವಾ ತುಪ್ಪದ ದೀಪವನ್ನು ಹಚ್ಚಿ ಅರಳಿ ಮರದ ಎಲೆಯ ಬಾಸಿಂಗವನ್ನು ಹಣೆಗೆ ಕಟ್ಟುತ್ತಾರೆ. ದೇವರ ಮುಂದೆ ದೇವರ ಹೆಸರು ಹೇಳಿ ದಾರ ಸುತ್ತಿದ ಕಾಯಿಯನ್ನು ವರನ ಎರಡು ಕೈಗಳ ಬೊಗಸೆಯಲ್ಲಿಟ್ಟು ಎಣ್ಣೆ ಅಥವಾ ತುಪ್ಪದ ದೀಪಗಳನ್ನು ತೆಗೆದುಕೊಂಡು ಹೆಣ್ಣಿನ ಮನೆಗೆ ಹೋಗುತ್ತಾರೆ. ಅಲ್ಲಿ ವಧುವಿನ ಹಣೆಗೆ ಅರಳಿಮರದೆಲೆಯ ಬಾಸಿಂಗವನ್ನು ಕಟ್ಟುತ್ತಾರೆ. ನಂತರ ತಾವು ತೆಗೆದುಕೊಂಡು ಹೋದ ದೀಪವನ್ನು ತೋರಿಸಿ ಗಂಡಿನಿಂದ ಹೆಣ್ಣಿನ ಕೊರಳಿಗೆ ತಾಳಿಯನ್ನು ಕಟ್ಟಿಸುತ್ತಾರೆ. ಹೆಣ್ಣಿನ ಮನೆಯ ಮುಂದೆ ಗಂಡಿನ ಮನೆಯಲ್ಲಿ ತಯಾರಿಸಿದ ಶ್ಯಾವಿಗೆ ಪಾಯಸವನ್ನು ಗಂಡು ಹೆಣ್ಣಿಗೆ, ಹೆಣ್ಣು ಗಂಡಿಗೆ ಕುಡಿಸುತ್ತಾರೆ. ನಂತರ ಒಬ್ಬರ ಮುಖವನ್ನೊಬ್ಬರು ತೊಳೆಯುತ್ತಾರೆ. ಅಲ್ಲಿಂದ ಗಂಡಿನ ಮನೆಗೆ ಕರೆತಂದು ಗಂಡಿನ ಮನೆದೇವರ ಮುಂದೆ ಇಬ್ಬರಿಗೆ ಕಟ್ಟಿದ್ದ ಬಾಸಿಂಗಗಳನ್ನು ಬಿಚ್ಚಿ ಗೌಡರ ಬಾಬ್ತು ಕೊಟ್ಟು ಕಳುಹಿಸುತ್ತಾರೆ. ಅಲ್ಲಿಗೆ ಮದುವೆಯ ಕಾರ್ಯ ಮುಗಿದಂತೆ.

ಭಾರತದ ಸಾಮಾಜಿಕ ವ್ಯವಸ್ಥೆಯನ್ನು ನೋಡುವುದಾದರೆ ಬಹುಹಿಂದಿನಿಂದಲೂ ವಿವಾಹದಲ್ಲಿ ಏಕಪತ್ನಿತ್ವ, ಬಹುಪತ್ನಿತ್ವ, ಬಹುಪತಿತ್ವ, ಸಮೂಹ ವಿವಾಹ ಹೀಗೆ ಹಲವು ವಿವಾಹ ಪ್ರಕಾರಗಳನ್ನು ಕಾಣಬಹುದಾಗಿದ್ದು, ಬುಡಕಟ್ಟುಗಳಲ್ಲಿ ಅದರಲ್ಲೂ ಹಕ್ಕಿಪಿಕ್ಕಿಯರಲ್ಲಿ ಈ ವಿವಾಹ ಪದ್ಧತಿಗಳಂತೆ ಅಲ್ಲದೇ ಹೋದರೂ ತಮ್ಮದೇ ಆದ ಅನೇಕ ಪ್ರಕಾರದ ವಿವಾಹಗಳನ್ನು ಈಗಲೂ ಅನುಸರಿಸಿಕೊಂಡು ಬಂದಿರುವುದನ್ನು ಕಾಣಬಹುದು. ಇವರಲ್ಲಿ ಸಾಮಾನ್ಯವಾಗಿ ಮೈದುನ ವಿವಾಹ ರೂಢಿಯಲ್ಲಿದೆ.

ಮೈದುನ ವಿವಾಹ : ಒಬ್ಬ ತಮ್ಮ ವಿಧವೆಯಾದ ತನ್ನ ಅಣ್ಣನ ಹೆಂಡತಿಯನ್ನು ಮದುವೆಯಾಗುವ ಪದ್ಧತಿಯಾಗಿದೆ. ಕೆಲವು ಬುಡಕಟ್ಟುಗಳಲ್ಲಿ ವಿಧವೆಯಾದ ತಮ್ಮನ ಹೆಂಡತಿಯನ್ನು ಅಣ್ಣನಾದವನು ಮದುವೆಯಾಗುವ ಪದ್ಧತಿ ಇದೆಯಾದರೂ ಹಕ್ಕಿಪಿಕ್ಕಿಗಳಲ್ಲಿ ತಮ್ಮನ ಹೆಂಡತಿಯನ್ನು ಅಣ್ಣನು ವರಿಸುವಂತಿಲ್ಲ. ಇದನ್ನು ಅವರು ಅಪರಾಧವೆಂದು ಭಾವಿಸುತ್ತಾರೆ. ಇವರಲ್ಲಿ ಅಣ್ಣನ ವಿಧವೆ ಹೆಂಡತಿಯನ್ನು ತಮ್ಮನಾದವನು ವರಿಸಲು ಅವಕಾಶವಿದೆ. ಹೆಣ್ಣಿಗೆ ರಕ್ಷಣೆ ಹಾಗೂ ಕುಟುಂಬದ ಗೌರವ ಕಾಪಾಡುವ ಉದ್ದೇಶದಿಂದ ಈ ರೀತಿಯ ವಿವಾಹ ನೆರವೇರಿಸುತ್ತೇವೆ ಎನ್ನುತ್ತಾರೆ. ಕಾರಣ ವಿಧವೆಯು ಅನ್ಯ ಪುರುಷನೊಂದಿಗೆ ಲೈಂಗಿಕ ಸಂಬಂಧ ಬೆಳೆಸಿದರೆ ತಮ್ಮ ಮನೆಯ ಮಾರ್ಯಾದೆ ಜೊತೆಗೆ ಅವಳಿಗೆ ಸೇರಬೇಕಾದ ಅಣ್ಣನ ಆಸ್ತಿ ಪೋಲಾಗುವುದೆಂಬ ಕಾರಣಕ್ಕಾಗಿ ಈ ವಿವಾಹಪದ್ಧತಿ ಜಾರಿಗೆ ಬಂದಿರಬಹುದು.

ನಾದಿನಿ ವಿವಾಹ : ಈ ಸಮುದಾಯದವರಲ್ಲಿ ಒಬ್ಬ ಪುರುಷನು ತನ್ನ ಹೆಂಡತಿಯು ತೀರಿದಾಗ ಅಥವಾ ಅವಳು ಇದ್ದಾಗಲೇ ಆಕೆಯ ತಂಗಿಯನ್ನು ಮದುವೆಯಾಗಬಹುದಾಗಿದೆ. ಈ ತರಹದ ಮದುವೆ ಸಾಮಾನ್ಯವಾಗಿ ವಿರಳವಾಗಿಯಾದರೂ ಎಲ್ಲಾ ಸಮುದಾಯಗಳಲ್ಲಿ ಜರಗುತ್ತವೆ. ಈ ರೀತಿಯ ಮದುವೆಯಿಂದ ಅಕ್ಕ ತಂಗಿ ಹೊಂದಿಕೊಂಡು ಹೋಗುತ್ತಾರೆ ಎಂದು ನಂಬುತ್ತಾರೆ. ಇವರು ಅಪರಿಚಿತರೂ ಅಥವಾ ದೂರದ ಊರಿನವರಿಗಿಂತಲೂ ಹೆಚ್ಚಾಗಿ ಪರಿಚಿತರನ್ನು ಅಂದರೆ ಹತ್ತಿರದ ಬಂಧುಗಳನ್ನೇ ಮದುವೆಯಾಗಲು ಇಷ್ಟಪಡುತ್ತಾರೆ. ಸಾಮಾನ್ಯವಾಗಿ ಈ ತರಹದ ಮದುವೆಗಳು ಮೊದಲ ಹೆಂಡತಿ ತೀರಿದ್ದರೆ, ಅಥವಾ ಆಕೆ ಬಂಜೆಯಾಗಿದ್ದರೆ, ಇಲ್ಲವೇ ಆಕೆ ಹೆರಿಗೆಯಾದ ಸಂದರ್ಭದಲ್ಲಿ ಅವಳಿಂದ ದೂರವಿರುವ ಪತಿ ಅವಳ ತಂಗಿಯೊಡನೆ ಅನುರಕ್ತನಾದಾಗ ಈ ರೀತಿಯ ಮದುವೆ ನಡೆಯುತ್ತದೆ. ಇವರಲ್ಲಿ ಮಹಿಳೆಯರ ಸಂಖ್ಯೆ ಅಧಿಕವಿರುವುದರಿಂದ ನಾದಿನಿ ವಿವಾಹ ಸಾಮಾನ್ಯವಾಗಿದೆ. ಅಲ್ಲದೆ ಮದುವೆಯ ಸಮಯದಲ್ಲಿ ತೆರಕೊಡುವ ಪದ್ಧತಿ ಇದೆ. ಇವರಲ್ಲಿ ಯಾರೂ ವಿಧವೆ ಅಥವಾ ವಿಧುರರು ಒಂಟಿಯಾಗಿ ಜೀವಿಸುವುದಿಲ್ಲ. ಅಂಥವರಿಗೆ ಕಾಲೋನಿಯವರೇ ಮರುಮದುವೆ ಮಾಡುತ್ತಾರೆ. ಕಾಲೋನಿಯಲ್ಲಿನ ವಿವಾಹಿತ ಅವಿವಾಹಿತರ ವೈವಾಹಿಕ ಸ್ಥಾನಮಾನ ಪ್ರಮಾಣವನ್ನು ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾಗಿದೆ.

ಕೋಷ್ಟಕ: ೩. ಹಕ್ಕಿಪಿಕ್ಕಿಯರ ಬೆಡಗುವಾರು, ಲಿಂಗವಾರು ವೈವಾಹಿಕ ಸ್ಥಾನಮಾನ ಪ್ರಮಾಣ

ವೈವಾಹಿಕ ಸ್ಥಾನಮಾನ	ಇಕೋತಿಯಾ			ಕೊರಬಿಯಾ			ಖೋಡಿಯಾರ			ಪಿಂಪಳಜಾ			ಸಾವಂಡಿಯಾ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಅವಿವಾಹಿತರು	೧೩	೧೦	೨೩	೫೭	೫೫	೧೧೨	೩೪	೨೩	೫೭	೧೦	೧೪	೨೪	೩೫	೩೬	೭೧
ವಿವಾಹಿತರು	೫	೫	೧೦	೪೦	೪೦	೮೦	೨೦	೨೦	೪೦	೭	೭	೧೪	೨೮	೨೮	೫೬
ವಿಧವೆ/ವಿದುರರು				೨	೯	೧೧		೭	೭	೧	೨	೩	೨	೮	೧೦
Total	೧೮	೧೫	೩೩	೯೯	೧೦೪	೨೦೩	೫೪	೫೦	೧೦೪	೧೮	೨೩	೪೧	೬೫	೭೨	೧೩೭

ಸೀರುಡಿಕೆ : ಹಕ್ಕಿಪಿಕ್ಕಿಯರಲ್ಲಿ ಒಂದು ಗಂಡಿಗೆ ಎಷ್ಟು ಬೇಕಾದರೂ ಮದುವೆಯಾಗುವ ಸ್ವಾತಂತ್ರ್ಯವಿರುವ ಹಾಗೆ ಹೆಣ್ಣಿಗೂ ಈ ಸ್ವಾತಂತ್ರ್ಯ ಇದೆ. ಆದರೆ ಹೆಣ್ಣಿಗೆ ಮದುವೆಶಾಸ್ತ್ರದ ಯೋಗ ಮೊದಲ ಮದುವೆಯಾಗಿದ್ದಾಗ ಮಾತ್ರ ಲೆಕ್ಕಕ್ಕೆ ಬರುತ್ತದೆ. ಸೀರುಡಿಕೆ ಎಂದು ಕರೆಯಿಸಿಕೊಳ್ಳುವ ಈ ಪದ್ಧತಿಯು ಕೇವಲ ಕೂಡಾವಳಿ ಎನಿಸಿಕೊಳ್ಳುತ್ತದೆ. ಒಂದು ಹೆಣ್ಣಿಗೆ ಮದುವೆಯ ಸಂದರ್ಭದಲ್ಲಿ ಮೀಸೆ(ಹಲ್ಲಿಟ್ಟು) ಹಲ್ಲಿಗೆ ತಿಕ್ಕುತ್ತಾರೆ. ಮೀಸೆ ತಿಕ್ಕುವುದರಿಂದ ಅವಳ ಹಲ್ಲಿನ ಸಂಧಿಯಲ್ಲಿ ಅದು ಸೇರಿ ಕಪ್ಪು ಬಣ್ಣ ಆಗುತ್ತದೆ. ಇದರಿಂದ ಅವಳ ಮದುವೆಯಾಗಿದೆಯೋ ಅಥವಾ ಇಲ್ಲವೋ ಎಂಬುದನ್ನು ಪತ್ತೆ ಹಚ್ಚುತ್ತಾರೆ. ಒಂದು ವೇಳೆ ಅವಳಿಗೆ ಮದುವೆ ಆಗಿದ್ದರೆ ಅವಳನ್ನು ಮದುವೆ ಮಾಡಿಕೊಳ್ಳದೆ ಕೂಡಾವಳಿ ಮಾಡಿಕೊಳ್ಳುತ್ತಾರೆ. ಇಲ್ಲಿ ಹೆಣ್ಣು ತನಗೆ ಬೇಕಾದವರೊಂದಿಗೆ ಸೀರುಡಿಕೆ ಮಾಡಿಕೊಳ್ಳುವ ಸ್ವಾತಂತ್ರವಿದೆ. ಎಷ್ಟು ಜನರನ್ನಾದರೂ ಸೀರುಡಿಕೆ ಮಾಡಿಕೊಳ್ಳಬಹುದು. ಹಕ್ಕಿಪಿಕ್ಕಿಯರಲ್ಲಿ ಸೀರುಡಿಕೆಯಾದ ಮನೆತನವನ್ನು ಉಡಿಕೆ ಮನೆತನ ಎನ್ನುವರು. ಸೀರುಡಿಕೆ ಸಮಾರಂಭವು ಸರಳವಾಗಿರುತ್ತದೆ. ವಿಧವೆ ಹೆಣ್ಣಿಗೆ ಮತ್ತೊಮ್ಮೆ ಮೀಸಿ ಹಚ್ಚುತ್ತಾರೆ. ಅವಳು ಎಲೆ ಅಡಿಕೆಯನ್ನು ವಿನಿಮಯ ಮಾಡಿಕೊಳ್ಳುತ್ತಾಳೆ. ಇದೆಲ್ಲಾ ಗುಂಪಿನ ಹಿರಿಯರ ಸಮ್ಮುಖದಲ್ಲಿ ನಡೆಯುತ್ತದೆ. ಆ ಸಂದರ್ಭದಲ್ಲಿ ಒಂದು ಸಣ್ಣ ಔತಣವನ್ನ ಏರ್ಪಡಿಸುತ್ತಾರೆ. ಈ ಕಾರ್ಯಕ್ರಮದಲ್ಲಿ ಹೆಂಗಸರು ಮಾತ್ರ ಇರುತ್ತಾರೆ. ಗಂಡಸರು ಭಾಗಿಯಾಗುವುದಿಲ್ಲ. ಈ ಮದುವೆಯಿಂದ ಆ ಹೆಣ್ಣು ಇತರ ಹೆಣ್ಣುಗಳಂತೆಯೇ ಸ್ಥಾನಮಾನ ಪಡೆಯುತ್ತಾಳೆ. ಒಂದು ವೇಳೆ ಇವಳಿಗೆ ಮಕ್ಕಳಿದ್ದರೆ ಆ ಮಕ್ಕಳು ಅಜ್ಜನ ಮನೆ ಅಥವಾ ಚಿಕ್ಕಪ್ಪನ ಮನೆ ಸೇರುತ್ತವೆ. ತಾಯಿಯ ಹಿಂದೆ ಬರುವಂತಿಲ್ಲ.

ಕಂಪ್ಲಿಯ ಹಕ್ಕಿಪಿಕ್ಕಿಯರಲ್ಲಿ ಈ ತರಹದ ವಿವಾಹ ಪದ್ಧತಿ ಇರುವುದಿಲ್ಲ. ಪ್ರೇಮವಿವಾಹ ಇರುವುದಾದರೂ ಅದಕ್ಕೆ ಹಿರಿಯರ ಒಪ್ಪಿಗೆ ಸಿಕ್ಕರೆ ಮಾತ್ರ ಮದುವೆ ಆಗುತ್ತದೆ. ಇಲ್ಲದಿದ್ದರೆ ಇಲ್ಲ.

ವಿವಾಹ ವಿಚ್ಛೇದನ : ಹಕ್ಕಿಪಿಕ್ಕಿಯರಲ್ಲಿ ವಿಚ್ಛೇದನೆ ಕೋರ್ಟ್ ಕಚೇರಿಗಳಲ್ಲಿ ಜರುಗದೇ ತಮ್ಮಲ್ಲೇ ತುಂಬಾ ಸರಳ ರೀತಿಯಲ್ಲಿ ನಡೆಯುತ್ತದೆ. ಗಂಡ ಮತ್ತು ಹೆಂಡತಿ ಇಬ್ಬರೂ ವಿಚ್ಛೇದನೆ ಬಯಸಲು ಸಕಾರಣ ತಿಳಿಸಬೇಕು. ನಂತರ ಕಾಲೋನಿಯ ಪಂಚರ ಸಮ್ಮುಖದಲ್ಲಿ ವಾದ ಪ್ರತಿವಾದಗಳು ನಡೆದು ಪಂಚರು ವಿಚ್ಛೇದನೆಯನ್ನು ನಿರ್ಧರಿಸುತ್ತಾರೆ. ವಿಚ್ಛೇದನೆ ಪಡೆದ ಹೆಣ್ಣಾಗಲಿ, ಗಂಡಾಗಲಿ

ಪುನಃ ಮತ್ತೊಂದು ಮದುವೆಯಾಗುವಂತೆ ಅವಕಾಶ ಮಾಡಿಕೊಡುತ್ತಾರೆ. ಒಂದು ವೇಳೆ ಇವರಿಬ್ಬರಿಗೆ ಮಕ್ಕಳಾಗಿದ್ದರೆ ವಿಚ್ಛೇದನೆಯ ನಂತರ ಮಕ್ಕಳು ತಂದೆಯ ಕಡೆ ಸೇರುತ್ತಾರೆ.

ಸಾವು

ಈ ಹಿಂದೆ ಹಕ್ಕಿಪಿಕ್ಕಿ ಸಮುದಾಯದವರಲ್ಲಿ ಯಾರಾದರೂ ಸತ್ತರೆ ಸತ್ತವನ ಸಂಬಂಧಿಕರನ್ನು ಬಿಟ್ಟು ಉಳಿದ ಎಲ್ಲರೂ ತಮ್ಮ ಗುಡಾರಗಳನ್ನು ಕಿತ್ತುಕೊಂಡು ಕಾಲೋನಿಯಿಂದ ಬೇರೆಕಡೆಗೆ ವಲಸೆ ಹೋಗುತ್ತಿದ್ದರು. ಕಾರಣ ಸತ್ತ ವ್ಯಕ್ತಿ ಭೂತವಾಗುತ್ತಾನೆ ಎಂಬುದು ಅವರ ಬಲವಾದ ನಂಬಿಕೆಯಾಗಿತ್ತು. ಮತ್ತೆ ಮೂರು ವರ್ಷಗಳವರೆಗೆ ಆ ಸ್ಥಳಕ್ಕೆ ಬರುತ್ತಿರಲಿಲ್ಲ. ಹೆಣವನ್ನು ಮೊದಲು ಇಬ್ಬರೇ ಹೊರುತ್ತಿದ್ದರಂತೆ. ಕಾರಣ ಸಾವಿಗೆ ಹೆದರಿ ಶವಸಂಸ್ಕಾರಕ್ಕೆ ಯಾರೂ ಬರುತ್ತಿರಲಿಲ್ಲ. "ಸತ್ತವರು ಹಾಸಿಕೊಳ್ಳುತ್ತಿದ್ದ ಚಾಪೆಯಲ್ಲಿಯೇ ಹೆಣವನ್ನು ಸುತ್ತಿಕೊಂಡು ಕಟ್ಟುಗಳಿಂದ ಬಿಗಿಯಾಗಿ ಕಟ್ಟಿ ಆ ಕಟ್ಟುಗಳಿಗೆ ಒಂದು ಗಳವನ್ನು ಏರಿಸಿ ಇಬ್ಬರೇ ಹೆಣವನ್ನು ಹೊತ್ತುಕೊಂಡು ಹೋಗುತ್ತಿದ್ದರು".[೫] ಇತ್ತೀಚೆಗೆ ಕಾಲೋನಿಯಲ್ಲಿ ಯಾರಾದರೂ ಸತ್ತರೆ ಸತ್ತ ವ್ಯಕ್ತಿಯನ್ನು ಗುಡಾರದ ಅಥವಾ ಗುಡಿಸಲ ಅಂಗಳದಲ್ಲಿ ಪೂರ್ವಕ್ಕೆ ಕಾಲುಮಾಡಿ ಮಲಗಿಸುತ್ತಾರೆ. ಸತ್ತ ವ್ಯಕ್ತಿ ಹಿರಿಯ ಅಥವಾ ಮನೆದೇವರ ಪೂಜಾರಿಯಾಗಿದ್ದರೆ ಅಂಥವರಿಗೆ ದೇವರ ಬಟ್ಟೆಯನ್ನು ಶವದ ಮೇಲೆ ಹೊದಿಸುತ್ತಾರೆ. ಕಳ್ಳಿ ಕಟ್ಟಿಗೆ ಅಥವಾ ಬೇರೆ ಯಾವುದೇ ಮರದ ಕಟ್ಟಿಗೆಯಿಂದ ಚಟ್ಟವನ್ನು ಕಟ್ಟುತ್ತಾರೆ. ಸಂಬಂಧಿಕರೆಲ್ಲಾ ಬಂದನಂತರ ಶವವನ್ನು ಚಟ್ಟದ ಮೇಲಿಟ್ಟು ಎತ್ತಿಕೊಂಡು ಹೊರಡುತ್ತಾರೆ. ಮೊದಲು ಪೂರ್ವದಿಕ್ಕಿಗೆ ಹೋಗುತ್ತಾರೆ. ನಂತರ ಯಾವ ದಿಕ್ಕಿಗಾದರೂ ಹೋಗಬಹುದು. ಚಟಕ್ಕೆ ಮೊದಲು ಹೆಗಲು ಕೊಡುವವರು ಸತ್ತ ವ್ಯಕ್ತಿಯ ಮನೆಯವರೇ ಆಗಬೇಕು. ನಂತರ ಕಾಲೋನಿಯವರು ಅಥವಾ ಸಂಬಂಧಿಕರು ಯಾರಾದರೂ ಹೆಗಲು ಕೊಡಬಹುದು.

ಶವವನ್ನು ರುದ್ರಭೂಮಿಯಗೆ ತಂದ ನಂತರ ಚಟ್ಟವನ್ನು ಇಳಿಸಿ ಎಲ್ಲರೂ ಬಂದು ಸೇರಿದ ಮೇಲೆ ಮನೆಯ ಹಿರಿಯ ಮಗ ಒಂದು ಗಡಿಗೆಯಲ್ಲಿ ನೀರನ್ನು ತಂದು ಶವದ ಮೈಯನ್ನು ತೊಳೆದು ನಂತರ ಸುಡುವ ಇಲ್ಲವೇ ಹೂಳುವ ಕಾರ್ಯ ಮಾಡುತ್ತಾರೆ. ಶವಕ್ಕೆ ಮನೆಯ ಹಿರಿಯ ಮಗ ಅಥವಾ ಕಿರಿಯ ಮಗ ಕೊಳ್ಳಿ ಇರಿಸುತ್ತಾನೆ. ಮಣ್ಣು ಮಾಡಿದರೂ ಸಹ ಮೊದಲ ಮಣ್ಣು ಹಿರಿಯ ಮಗ ಇಲ್ಲವೇ ಕಿರಿಯ ಮಗ ಹಾಕುತ್ತಾನೆ. ಶವ ಸಂಸ್ಕಾರವಾದ ನಂತರ ಸತ್ತ ವ್ಯಕ್ತಿಯ ಬೆಡಗಿನ ಪೂಜಾರಿ ಶವದ ತಲೆಯ ಭಾಗದ ಕಡೆ ನಿಂತು ಆತ್ಮವನ್ನು ಬರಮಾಡಿಕೊಳ್ಳುತ್ತಾನೆ. ಸತ್ತವರು ಪೂಜಾರಿಯ ಮೈಯಲ್ಲಿ ಬಂದು ತಾನು ಸತ್ತ ಬಗೆ ಮತ್ತು ಮನೆತನದ ಬಗ್ಗೆ ಎರಡು ಮಾತನಾಡಿ ಹೋಗುತ್ತಾನೆ ಎಂಬುದು ಅವರ ನಂಬಿಕೆ.

---

೫. ಹಕ್ಕಿಪಿಕ್ಕಿಯರ ಸಂಸ್ಕೃತಿ, ರಾಜಪ್ಪದಳವಾಯಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩, ಪು. ೮೦

ನಂತರ ಶವದ ಹಿಂದೆ ಬಂದವರು ಮನೆಯ ಕಡೆ ಹೊರುಡುತ್ತಾರೆ. ದಾರಿಯಲ್ಲಿ ಮುಳ್ಳಿನ ಗಿಡವೊಂದನ್ನು ಸುತ್ತು ಹಾಕಿ ಹೋಗುತ್ತಾರೆ. ಕಾರಣ ಸತ್ತವರ ಆತ್ಮ ದೆವ್ವವಾಗಿ ಬಂದರೆ ನಮ್ಮ ಮನೆಗೆ ಬರಬೇಕೆಂದರೆ ಈ ಮುಳ್ಳಿನ ಗಿಡದ ಎಲ್ಲಾ ಎಲೆಗಳನ್ನು, ಮುಳ್ಳುಗಳನ್ನು ಎಣಿಸಿ ಬರಬೇಕು ಅಷ್ಟರೊಳಗೆ ಬೆಳಗಾಗುತ್ತದೆ ದೆವ್ವ ಮರಳಿ ಸ್ಮಶಾನ ಸೇರುತ್ತದೆ. ನಮ್ಮ ಮನೆಗೆ ಬರಲು ಆಗುವುದಿಲ್ಲ ಎಂಬುದು ಇವರ ನಂಬಿಕೆ. ಮನೆಗೆ ಹೋಗುವ ಮಾರ್ಗ ಮಧ್ಯದಲ್ಲಿ ಎಲ್ಲಾದರೂ ನೀರು ಇರುವ ಕಡೆ ಸ್ನಾನಮಾಡಿಕೊಂಡು ಸತ್ತವರ ಮನೆಗೆ ಹೋಗಿ ಆ ಮನೆಯವರಿಂದ ನೀರು ಅಥವಾ ಮೊಸರು ಇಲ್ಲವೇ ಸಾರಾಯಿ ಪಡೆದು ಕುಡಿದು ನಂತರ ತಮ್ಮ ಮನೆಗಳಿಗೆ ಹೊರಡುತ್ತಾರೆ. ಮರುದಿನ ಬೆಳಗಿನ ಜಾವ ಮನೆಯವರು ಶವಸಂಸ್ಕಾರ ಮಾಡಿದ ಸ್ಥಳಕ್ಕೆ ಸತ್ತವನಿಗೆ ಇಷ್ಟವಾಗಿದ್ದ ತಿಂಡಿ ತಿನಿಸುಗಳು, ಬೀಡಿ, ಸಿಗರೇಟು, ಎಲೆ ಅಡಿಕೆ, ಸಾರಾಯಿ ತೆಗೆದುಕೊಂಡು ಹೋಗಿ ಶವ ಹೂಳಿದ ತಲೆಯ ಭಾಗಕ್ಕೆ ತಂದ ಎಲ್ಲಾ ತಿಂಡಿ ತಿನಿಸುಗಳನ್ನು ಇಟ್ಟು ನಿಶ್ಯಬ್ಧವಾಗಿ ಕೂತಿರುತ್ತಾರೆ. ಯಾವುದಾದರೂ ಪ್ರಾಣಿ ಅಥವಾ ಪಕ್ಷಿ ಬಂದು ಆ ತಿಂಡಿಯನ್ನು ತಿಂದರೆ ಸತ್ತವರೇ ಬಂದು ತಿಂದರು ಎಂದುಕೊಂಡು ಕೈ ಮುಗಿದು ಮನೆಗೆ ಬರುತ್ತಾರೆ. ಸತ್ತವನ ಮನೆಯವರು ಆರು ದಿನಗಳವರೆಗೆ ಯಾವುದೇ ಮಾಂಸದ ಅಡುಗೆ ತಿನ್ನುವಂತಿಲ್ಲ. ಹನ್ನೆರಡನೇ ದಿನ ದಿವಸವನ್ನು ಮಾಡುತ್ತಾರೆ. ಒಂದು ವೇಳೆ ೧೨ನೇ ದಿನ ದೊಡ್ಡ ದಿವಸ ಮಾಡದಿದ್ದರೆ ಯಾವಾಗಲಾದರೂ ಮಾಡಬಹುದು. ಆದರೆ ದಿವಸ ಮಾಡುವವರೆಗೆ ಮನೆಯಲ್ಲಿ ಯಾವುದೇ ಮಂಗಳ ಕಾರ್ಯ ಮಾಡುವಂತಿಲ್ಲ. ಸತ್ತದಿನ ಕಾಲೋನಿಯಲ್ಲಿ ಯಾರ ಮನೆಯಲ್ಲೂ ಅಡುಗೆ ಮಾಡುವಂತಿಲ್ಲ. ಹಾಗೇನಾದರೂ ಮಾಡಿದರೆ ಅಂಥವರಿಗೆ ದಂಡ ಹಾಕುತ್ತಾರೆ. ಅಲ್ಲದೆ ಮಾಡಿದ ಅಡುಗೆಯನ್ನು ಬೀದಿಗೆ ಚೆಲ್ಲುತ್ತಾರೆ. ಹೆಣವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೊದನಂತರ ಮನೆಯಲ್ಲಿ ಅಡುಗೆ ಮಾಡಬಹುದು. ಅಲ್ಲಿಯವರೆಗೆ ಹೋಟೆಲ್‌ನಲ್ಲಿ ತಿಂಡಿ ತಿನ್ನಬಹುದು.

ದಿವಸ ಕಾಲ : ವ್ಯಕ್ತಿ ಸತ್ತ ಹನ್ನೆರಡನೇ ದಿನಕ್ಕೆ ದೊಡ್ಡ ದಿವಸ ಮಾಡುತ್ತಾರೆ. ಅಂದು ಕುಂಬಾರರ ಮನೆಯಿಂದ ಆರು ಗಡಿಗೆ, ಒಂದು ಮಗಿ, ಒಂದು ದೊಡ್ಡ ಗಡಿಗೆ, ಎರಡು ಪರಾಣಿ, ೨೦ ಸಣ್ಣ ಮಗಿಗಳನ್ನು ತರುತ್ತಾರೆ. ಅಂದಿನ ದಿನ ಊರ ಹೊರಗಿನ ಬಯಲು ಪ್ರದೇಶಕ್ಕೆ ಹೋಗಿ ದೇವರ ಪೆಟ್ಟಿಗೆಯನ್ನು ಒಂದು ಕಡೆ ಇಟ್ಟು ಸತ್ತವನು ಇಷ್ಟಪಡುತ್ತಿದ್ದ ತಿಂಡಿಗಳನ್ನು ಅಂಗಡಿಯಿಂದ ತಂದು ಒಂದು ಪಾವು ನವಣೆ ಅಕ್ಕಿ, ೨೫೦ಗ್ರಾಂ ಗೋದಿಹಿಟ್ಟು ತಂದು ಸಂಜೆ ಏಳು ಗಂಟೆ ಸುಮಾರಿಗೆ ಸತ್ತವನ ಬೆಡಗಿನ ಹಿರಿಯರು ನೀರು ತರಲು ಹೋಗುತ್ತಾರೆ. ನೀರು ತುಂಬಿಕೊಂಡು ಹೊತ್ತು ಬರುವಾಗ ಆತನ ಜೊತೆ ಇದ್ದವನು ಗಡಿಗೆಗೆ ತೂತು ಮಾಡುತ್ತಾನೆ. ಗಡಿಗೆಯಲ್ಲಿ ನೀರು ಮುಗಿಯುವುದರೊಳಗೆ ಪೂಜೆಗೆ ಸಿದ್ಧಗೊಂಡಿರುವ ಸ್ಥಳಕ್ಕೆ ಬಂದು ತಲುಪಬೇಕು. ನೀರು ತರಲು ಹೋಗಿರುವ ವ್ಯಕ್ತಿ ಬರುವುದರೊಳಗೆ ಪೂಜಾ ಸ್ಥಳದಲ್ಲಿ ತಂದಿರುವ ೧೨ ಮಗಿಗಳನ್ನು ಎರಡು ಸಾಲಿನಲ್ಲಿ ಆರು ಆರು ಮುಖಾಮುಖಿಯಾಗಿ ಇರಿಸಿದರೆ ಉಳಿದ ಎಂಟು ಮಗಿಗಳನ್ನು ಸ್ವಲ್ಪ ದೂರದಲ್ಲಿ ಸಾಲಾಗಿ ಜೋಡಿಸಿರುತ್ತಾನೆ. ನೀರು ಹೊತ್ತು ತಂದು ಗಡಿಗೆಯಲ್ಲಿನ ನೀರನ್ನು ಮಗಿಗಳಿಗೆ

ಹಾಕಬೇಕು. ಇದಾದ ಮೇಲೆ ಹನ್ನೆರಡು ಗುಂಪಿನ ಮಗಿಗಳಿಗೆ ಏಳು ಸುತ್ತು ಸುರುಗಿ ದಾರವನ್ನು ಸುತ್ತಲಾಗುತ್ತದೆ. ಆ ದೊಡ್ಡ ಗಡಿಗೆಗಳನ್ನು ಬೇರೆ ಕಡೆ ಇರಿಸಿ ಅವಕ್ಕೂ ಸಹ ನೀರು ತುಂಬಿಸಲಾಗುತ್ತದೆ. ಆ ಆರು ಗಡಿಗೆಗಳ ಬಾಯಿಗೆ ಎಡಗೈಯಿಂದ ಮಾಡಿದ ರೊಟ್ಟಿಯನ್ನು ಒಂದೊಂದಾಗಿ ಇರಿಸಬೇಕು. ನಂತರ ಆ ಗಡಿಗೆಗಳನ್ನು ಮೂರು ಕೆಳಗೆ ಮೂರು ಮೇಲೆ ಎಂಬಂತೆ ಒಂದರ ಮೇಲೊಂದು ಇರಿಸಬೇಕು.

ನಂತರ ತಂದಿರುವ ದೊಡ್ಡ ಪಾರಾಣಿಯಲ್ಲಿ ಎಡೆಗಾಗಿ ಸಿದ್ಧಪಡಿಸಿದ ನವಣೆ ಅಕ್ಕಿ ಅನ್ನ ಮಾಡಿ ಅದರೊಳಗೆ ಬೆಲ್ಲವನ್ನು ಸೇರಿಸಿ ಪಾರಾಣಿಯಲ್ಲಿ ಹಾಕಿ ಅದರ ಮೇಲೆ ತಂದಿರುವ ಎಲ್ಲಾ ತಿಂಡಿ ತಿನಿಸುಗಳನ್ನು, ಹಣ್ಣುಹಂಪಲಗಳನ್ನು ಇರಿಸುತ್ತಾರೆ. ಮೂರು ಕೆಳಗೆ ಮೂರು ಮೇಲೆ ಇರುವ ಗಡಿಗೆಗಳಿಗೂ ೭ ಸಾರಿ ದಾರದಿಂದ ಸುರಿಗೆ ಸುತ್ತಲಾಗುತ್ತದೆ. ನಂತರ ನೀರು ತಂದಿರುವ ಮಡಕೆಗೆ ಒಂದು ರೋಟ್ಟಿಯನ್ನು ಇರಿಸಿ ಪೂಜಾ ಸ್ಥಳದಿಂದ ಸ್ವಲ್ಪ ದೂರದಲ್ಲಿ ಇಡಲಾಗುತ್ತದೆ. ಎಲ್ಲಾ ಸಿದ್ಧತೆಗಳು ಮುಗಿದ ನಂತರ ಇವುಗಳ ಸ್ವಲ್ಪ ದೂರದಲ್ಲಿ ದೇವರ ಪೆಟ್ಟಿಗೆಯನ್ನು ಇರಿಸಿ ರಾತ್ರಿ ೧೨ ಗಂಟೆಗೆ ಪೂಜೆ ಮಾಡಲಾಗುತ್ತದೆ. ತರುವಾಯ ಎಲ್ಲರು ನಿಶ್ಯಬ್ದವಾಗಿ ಕುಳಿತುಕೊಂಡು ಪೂಜೆಗೆ ಇರಿಸಿದ ಎಡೆಯನ್ನು ಯಾವುದಾದರೂ ಪ್ರಾಣಿ ಬಂದು ಮುಟ್ಟಿದರೆ ಸತ್ತ ವ್ಯಕ್ತಿಯ ಆತ್ಮವೇ ಬಂದು ಮುಟ್ಟಿತು ಎಂಬುದಾಗಿ ತಿಳಿಯಲಾಗುತ್ತದೆ. ಮರುದಿನ ಮಧ್ಯಾಹ್ನ ೧೨ ಗಂಟೆಗೆ ಎಲ್ಲಾ ಗಡಿಗೆಗಳನ್ನು ಒಡೆಯಲಾಗುತ್ತದೆ ನಂತರ ಎಲ್ಲ ಗಡಿಗೆಯ ಚೂರುಗಳನ್ನು ಚೀಲಗಳಲ್ಲಿ ತುಂಬಿ ಹರಿಯುವ ನೀರಿನಲ್ಲಿ ಬಿಸಾಡುತ್ತಾರೆ. ನಂತರ ದೇವರ ಪೆಟ್ಟಿಗೆಯನ್ನು ಹೊಳೆಗೆ ಹೋಗಿ ಪೂಜೆಮಾಡಿ ಮನೆಗೆ ತೆಗೆದುಕೊಂಡು ಬರುತ್ತಾರೆ. ಈ ಎಲ್ಲಾ ಕಾರ್ಯಕ್ರಮ ಮುಗಿಯುವವರೆಗೆ ಸತ್ತ ವ್ಯಕ್ತಿಯ ಹೆಣವನ್ನು ಎತ್ತಿದ ನಾಲ್ಕು ಜನರು ಊಟ ಮಾಡುವಂತಿಲ್ಲ. ಇಷ್ಟಾದರೆ ಎಲ್ಲಾ ಕಾರ್ಯ ಮುಗಿದಂತೆ. ಇವರಲ್ಲಿ ಮಹಿಳೆಯಾರೂ ಸಹ ಹೆಣ ಹೊರುತ್ತಾರೆ (ಮಾಹಿತಿ: ಶಿಕಾರಿರಾಮು, ಸಾವಂಡಿಯಾ, ಕಂಪ್ಲಿ).

೩.೨. ಉಡುಗೆ ತೊಡುಗೆ

ವೇಷಭೂಷಣವನ್ನು ನೋಡಿ ಇತರ ಸಮುದಾಯಗಳನ್ನು ಗುರುತಿಸುವಂತೆ ಇವರನ್ನು ಗುರುತಿಸಲಾಗದು. ಏಕೆಂದರೆ ಇತರ ಬುಡಕಟ್ಟುಗಳ ರೀತಿ ಒಂದು ನಿಗದಿತವಾದ ಚೌಕಟ್ಟಿಗೆ ಇವರ ಉಡುಗೆ ತೊಡುಗೆ ಒಳಪಟ್ಟಿರುವುದಿಲ್ಲ. ಕಾರಣ ಇವರ ಅಲೆಮಾರಿತನ. ವಯಸ್ಸು, ಲಿಂಗ, ಸಂದರ್ಭ, ಹವಾಗುಣ, ಸಾಮಾಜಿಕ ಸ್ಥಾನಮಾನ ಮತ್ತು ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಬಗೆ ಬಗೆಯ ಉಡುಗೆಗಳನ್ನು ತೊಡುತ್ತಾರೆ.

ಗಂಡಸರ ಉಡುಗೆ ತೊಡುಗೆ

ಹಕ್ಕಿಪಿಕ್ಕಿ ಸಮುದಾಯದ ಗಂಡಸರು ಅಂಗಿ, ಲುಂಗಿಗಳನ್ನು ಯುವಕರು ಪ್ಯಾಂಟು, ಶರ್ಟ್, ಟೀ ಶರ್ಟ್, ಜೀನ್ಸ್ ಪ್ಯಾಂಟ್‌ಗಳನ್ನು ಉಡುತ್ತಾರೆ. ಮದುವೆಯ ಸಂದರ್ಭದಲ್ಲಿ ವರನು ಬಿಳಿಯ

ಅಂಗಿ, ಬಿಳಿಯ ಪಂಚೆ, ಕೊರಳಲ್ಲಿ ಬಿಳಿಯದಾರವನ್ನು ಧರಿಸುತ್ತಾನೆ. ಈ ಮೊದಲೇ ಹೇಳಿದಂತೆ ಇಂತಹದ್ದೇ ಉಡುಗೆ ತೊಡುಗೆ ಎಂಬ ನಿಯಮ ಇವರಿಗಿಲ್ಲ. ಜಾಗತೀಕರಣ ಒದಗಿಸುತ್ತಿರುವ ಎಲ್ಲಾ ತರಹದ ಬಟ್ಟೆಗಳನ್ನು ತೊಡುತ್ತಿದ್ದಾರೆ. ಇವರ ಪೂಜಾರಿಯು ದೇವರನ್ನು ಪೂಜಿಸುವ ಸಂದರ್ಭದಲ್ಲಿ ದಪ್ಪನೆಯ ಕೆಂಪು ಬಣ್ಣದ ಬಟ್ಟೆಯನ್ನು ಲಂಗದ ರೀತಿಯಲ್ಲಿ ತೊಡುತ್ತಾನೆ. ಈ ಹಿಂದೆ ಹಕ್ಕಿಪಿಕ್ಕಿ ಕಾಲೋನಿಯ ಗಂಡಸರು ತಲೆಕೂದಲನ್ನು ಕತ್ತರಿಸಿಕೊಳ್ಳುತ್ತಿರಲಿಲ್ಲ. ಹಾಗೆಯೇ ಜಡೆ ಬಿಡುತ್ತಿದ್ದರು. ಆದರೆ ಇಂದಿನ ದಿನಮಾನಗಳಲ್ಲಿ ಪೂಜಾರಿ ಮಾತ್ರ ಜಡೆಬಿಟ್ಟು ಇತರರು ಕ್ಷೌರ ಮಾಡಿಸಿಕೊಳ್ಳುತ್ತಿದ್ದಾರೆ.

ಮಹಿಳೆಯರ ಉಡುಗೆ ತೊಡುಗೆ

ಹಕ್ಕಿಪಿಕ್ಕಿ ಹೆಣ್ಣಿಗೆ ಒಂದು ಸೀರೆಯನ್ನು ಕೊಟ್ಟರೆ ಅದನ್ನು ನಾಲ್ಕು ತುಂಡುಗಳನ್ನಾಗಿ ಮಾಡಿಕೊಂಡು ಒಂದು ತುಂಡನ್ನು ಸೊಂಟದ ಕೆಳಭಾಗಕ್ಕೆ ಲಂಗವಾಗಿಯೂ ಒಂದು ತುಂಡನ್ನು ಎದೆಗೆ ಜಾಕೆಟ್ ಆಗಿಯೂ ಒಂದು ತುಂಡನ್ನು ಹಣೆ ಸೇರಿದಂತೆ ತಲೆಗೆ ಕಟ್ಟುತ್ತಾರೆ. ಕೊನೆಯ ತುಂಡನ್ನು ಮಗುವಿಗೆ ಜೋಳಿಗೆಯಾಗಿ ಬಳಸುತ್ತಾರೆ. ಹಿಂದೆ ಈ ರೀತಿಯಾದಂತಹ ಉಡುಪನ್ನು ತೊಡುತ್ತಿದ್ದ ಮಹಿಳೆಯರು ತಮ್ಮ ಉಡುಗೆಯನ್ನು ತಾವೇ ಹೊಲಿದು ಕೊಳ್ಳುತ್ತಿದ್ದರು. ಇತ್ತೀಚೆಗೆ ಹೆಂಗಸರು ಸೀರೆ, ರೇಷ್ಮೆಸೀರೆ, ನೈಟಿಗಳನ್ನು ತೊಡುತ್ತಿದ್ದು ಹುಡುಗಿಯರು ಚೂಡಿದಾರ, ನೈಟಿ ಅಲ್ಲದೇ ಜೀನ್ಸ್‌ಪ್ಯಾಂಟು, ಟೀ ಶರ್ಟ್‌ಗಳನ್ನು ಸಹ ತೊಡುತ್ತಿದ್ದಾರೆ.

ಹಕ್ಕಿಪಿಕ್ಕಿಯರು ತುಂಬಾ ಸರಳವಾದ ಆಭರಣಗಳನ್ನು ಧರಿಸುತ್ತಾರೆ. ವಿವಾಹಿತ ಮಹಿಳೆಯರ ಕೊರಳಲ್ಲಿ ತಾಳಿ (ಕಾಲಿಪಟ್ಟು) ಕಿವಿಗೆ ಬೆಂಡೋಲೆ, ಸರ, ಝುಮಕಿ, ಕೈಬಳೆಗಳು, ಕಾಲುಂಗುರ, ಬೆಳ್ಳಿ ಕಾಲಚೈನ್, ಕಡಗ, ಮೂಗುತಿ, ಬಂಗಾರದ ಗುಂಡುಗಳನ್ನು ಸೇರಿಸಿ ಮಾಡಿದ ಸರವನ್ನು ಧರಿಸುತ್ತಾರೆ. ಆರ್ಥಿಕವಾಗಿ ಸಬಲರಿದ್ದವರು. ಇನ್ನು ಹೆಚ್ಚಿನ ಬಂಗಾರದ ಒಡವೆಗಳನ್ನು ಬಳಸುತ್ತಾರೆ. ಇವರು ಆಭರಣಗಳನ್ನು ಅಲಂಕಾರಕ್ಕಾಗಿ ಧರಿಸದೆ ತಮ್ಮನ್ನು ತಾವು ಗುರುತಿಸಿಕೊಳ್ಳಲು ಮತ್ತು ಮದುವೆಯ ಧಾರ್ಮಿಕ ಸಂಬಂಧಗಳ ಘನತೆಯನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಬಳಸುತ್ತಾರೆ.

೩.೩. ನ್ಯಾಯ ಪದ್ಧತಿ

ಯಾವುದೇ ಬುಡಕಟ್ಟು ಜನರು ತಮ್ಮ ತಮ್ಮಲ್ಲೇ ನಡೆಯುವ ವ್ಯಾಜ್ಯಗಳು, ಜಗಳಗಳು, ಆಸ್ತಿ ವ್ಯವಹಾರ ಮುಂತಾದವುಗಳನ್ನು ಬಗೆಹರಿಸಿಕೊಳ್ಳಲು ತಮ್ಮದೇ ಆದ ನ್ಯಾಯ ಪದ್ಧತಿಯನ್ನು ಅನುಸರಿಸುತ್ತವೆ. ಅದಕ್ಕೆ ಒಂದು ಕಟ್ಟೆಮನೆ ಎಂದು ಒಬ್ಬ ಮುಖಂಡನ ಮನೆಯನ್ನು ನೇಮಿಸಿ ಕೊಂಡಿರುತ್ತಾರೆ. ಹಕ್ಕಿಪಿಕ್ಕಿಗಳಲ್ಲಿ ಸಾಮಾನ್ಯವಾಗಿ ಕಟ್ಟಮನೆ ಗೌಡರು ಎಲ್ಲಾ ಕಡೆಯೂ ಪಿಂಪಳಜಾ ಬೆಡಗಿನವರಾಗಿರುತ್ತಾರೆ. ಕಟ್ಟೆಮನೆ ಗೌಡನಿಗೆ ಸಹಾಯಕರಾಗಿ ಉಳಿದ ಬೆಡಗಿನ ಹಿರಿಯರು ಇರುತ್ತಾರೆ, ಇವರನ್ನು ಪಂಚರು ಎನ್ನುತ್ತಾರೆ. ಕಂಪ್ಲಿಯಲ್ಲಿನ ಹಕ್ಕಿಪಿಕ್ಕಿಗಳು ತಮ್ಮ ಕಾಲೋನಿಯಲ್ಲೇ ಕಟ್ಟೆಮನೆಯನ್ನು ಹೊಂದಿದ್ದಾರೆ. ಪ್ರಸ್ತುತ ಗಂಗಪ್ಪ ಎಂಬುವರ ಮುಖಂಡತ್ವದಲ್ಲಿ ಭೂಮಿ, ಹಣಕಾಸು, ಸಣ್ಣಪುಟ್ಟ

ಕಳವು, ಸ್ತ್ರೀ ಪುರುಷರ ಸಮಸ್ಯೆಗಳು, ಅಂತರ್‌ಜಾತಿಯ ವಿವಾಹ, ಹಬ್ಬ, ಜಾತ್ರೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಪಂಚಾಯ್ತಿ ನಿಷ್ಪಕ್ಷಪಾತವಾಗಿ ನಡೆಯುತ್ತಿವೆ. ಸಾಮಾನ್ಯವಾಗಿ ಇವರು ಪಂಚಾಯ್ತಿಯ ಸಂದರ್ಭದಲ್ಲಿ ಹಿರಿಯರೆಲ್ಲರ ಅಭಿಪ್ರಾಯ ತಿಳಿದುಕೊಂಡು ನಂತರ ಎಲ್ಲಾ ಬೆಡಗಿನ ಹಿರಿಯರುಗಳು ಪರಿಷ್ಕರಿಸುತ್ತಾರೆ. ಇವರೆಲ್ಲರ ಅಭಿಪ್ರಾಯದ ಮೇರೆಗೆ ಕಟ್ಟೆಮನೆಗೌಡನು ತಿರ್ಮಾನ ಕೈಗೊಳ್ಳುತ್ತಾನೆ.

ಹಕ್ಕಿಪಿಕ್ಕಿಗಳು ವಲಸೆ ಹೋಗುವ ತಂಡದಲ್ಲಿ ಸಾಮಾನ್ಯವಾಗಿ ಎಲ್ಲಾ ಗೊತ್ರದವರೂ ಇರುವುದುಂಟು. ಪ್ರತಿ ತಂಡದಲ್ಲಿ ನಾಯಕ(ಮುಖ್ಯಸ್ಥ), ಕಾರಭಾರಿ(ಕಾರ್ಯದರ್ಶಿ) ಹಾಗೂ ಡಾವ್(ಹಿರಿಯ ದೈವದವರು) ಗಳೆಂದು ಪ್ರಮುಖರಿರುತ್ತಾರೆ. ತಂಡದ ನಾಯಕನ ಹುದ್ದೆಯು ವಂಶಪಾರಂಪರ್ಯವಾಗಿ ಬಂದಿರುತ್ತದೆ. ಹಿರಿಯ ಮಗನಿಗೆ ಇದು ತಂದೆಯಿಂದ ಬಳುವಳಿಯಾಗಿ ಬಂದಿರುತ್ತದೆ. ಕಾರಭಾರಿ ಹುದ್ದೆಯು ತಂದೆಯಿಂದ ಕೊನೆಯ ಮಗನಿಗೆ ಬಳುವಳಿಯಾಗಿ ಬರುತ್ತದೆ. ಬಹುಪಾಲು ಜನಸಂಖ್ಯೆ ಇರುವ ವೀರರೂ ಚತುರರೂ ಆದವರು ಈ ಹುದ್ದೆಗಳನ್ನು ಹೊಂದುತ್ತಾರೆ.

"ಹಟ್ಟಿಯ ಪ್ರಮುಖ ಹಿರಿಯರನ್ನು 'ಡಾವ್' ಅಂದರೆ ದೈವದವರೆಂದು ಕರೆಯುವುದುಂಟು. ತಂಡದ ಒಳಾಡಳಿತವನ್ನು ಇವರೆಲ್ಲರೂ ಸೇರಿ ನಿಯಂತ್ರಿಸುತ್ತಾರೆ".[೬] ಕಾಲೋನಿಯ ಸಾಮಾಜಿಕ ಹೊಣೆಗಾರಿಕೆ ಸಂಪೂರ್ಣವಾಗಿ ನಾಯಕನದ್ದಾಗಿರುತ್ತದೆ. ಸಭೆ ಸಮಾರಂಭಗಳಲ್ಲಿ ಜೋರು ಮಾಡಿ ಗಲಾಟೆಯನ್ನು ನಿಯಂತ್ರಿಸುವ, ಜನಸಮೂಹವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವ ಸಾಮರ್ಥ್ಯವನ್ನು ಈತ ಹೊಂದಿರುತ್ತಾನೆ. 'ಕಾರಭಾರ' ಹಾಗೂ 'ಡಾವ್'ರು ನಾಯಕನ ಕೆಲಸದಲ್ಲಿ ಸಹಕಾರಿಯಾಗಿ ಕೆಲಸ ನಿರ್ವಹಿಸುತ್ತಾರೆ. ಬಳಗದ ಯಾವುದೇ ಸಮಸ್ಯೆ ಇದ್ದರೂ ಅದು ಪಂಚಾಯ್ತಿ ಮೂಲಕವೇ ಬಗೆಹರಿಸಿಕೊಳ್ಳುವುದುಂಟು. ಪ್ರಸ್ತುತ ಕಾಲೋನಿಯ ಕಟ್ಟೆಮನೆ ಒಡೆಯ ಗಂಗು ಅವರನ್ನು ಸಂದರ್ಶಿಸಿ ತಮ್ಮ ಅನುಭವದಲ್ಲಿ ಯಾವ ತರಹದ ವ್ಯಾಜ್ಯಗಳು ಅಥವಾ ಜಗಳಗಳು ಕಟ್ಟೆಮನೆಗೆ ಹೆಚ್ಚು ಬಂದಿವೆ ಎಂದು ಕೇಳಿದಾಗ ಅವರು ಹೇಳುವಂತೆ ತಮ್ಮಲ್ಲಿ ಯಾರೂ ಆಸ್ತಿ ಹೊಂದಿಲ್ಲದ ಕಾರಣ ಅಸ್ತಿಗೆ ಸಂಬಂಧಿಸಿದ ಜಗಳಗಳು. ನಮ್ಮಲ್ಲಿ ಬರುವುದಿಲ್ಲ. ಸಾಮಾನ್ಯವಾಗಿ ಗಂಡ ಹೆಂಡತಿಯರ ಜಗಳ, ಸ್ತ್ರೀ ಪುರುಷರ ಅನೈತಿಕ ಸಂಬಂಧಗಳಿಗೆ ಸಂಬಂಧಿಸಿದಂತೆ ಹೆಚ್ಚು ಜಗಳಗಳು ಕಟ್ಟೆಮನೆಯಲ್ಲಿ ಇತ್ಯರ್ಥವಾಗುತ್ತವೆ ಎನ್ನುತ್ತಾರೆ. (ಮಾಹಿತಿ: ಗಂಗು; ೫೫, ಕೊರಬಿಯಾ, ಕಂಪ್ಲಿ)

ಕಟ್ಟೆಮನೆಯವರು ತಪಿತಸ್ಥರಿಗೆ ವಿಧಿಸುವ ಶಿಕ್ಷೆಗಳು

೧. ಇವರು ಮಾದಿಗರು ಮತ್ತು ಮುಸ್ಲಿಂರ ಮನೆಗಳಲ್ಲಿ ನೀರು ಕುಡಿಯುವ ಹಾಗಿಲ್ಲ. ಹಾಗೇನಾದರೂ ಯಾರಾದರೂ ಕುಡಿದರೆ ಅಂಥವರಿಗೆ ೨೧ ರೂಪಾಯಿಗಳಿಂದ ೧೦೧ ರೂ.ಗಳವರೆಗೆ ದಂಡ ವಿಧಿಸುತ್ತಾರೆ.

---

೬. ಕರ್ನಾಟಕ ಬುಡಕಟ್ಟುಗಳು, ಸಂಪುಟ ೨, ಲಕ್ಕಪ್ಪಗೌಡ ಎಚ್.ಜೆ., ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೨೦೦೦, ಪು.೨೦೬

೨. ಇವರಲ್ಲಿ ಚಪ್ಪಲಿಯಿಂದ ಹೊಡೆದವನಿಗೂ ಹಾಗೂ ಹೊಡೆಸಿಕೊಂಡವನಿಗೆ ಇಬ್ಬರಿಗೂ ದಂಡವನ್ನು ಹಾಕುತ್ತಾರೆ. ತಪ್ಪಿಲ್ಲದೇ ಹೊಡೆಸಿಕೊಂಡವನಿಗೆ ಐದು ರೂ.ಗಳ ದಂಡ ವಿಧಿಸಿದರೆ, ಚಪ್ಪಲಿಯಿಂದ ಹೊಡೆದವನಿಗೆ ನೂರು ರೂಪಾಯಿ ದಂಡವನ್ನು ವಿಧಿಸುತ್ತಾರೆ. ಹಾಗೆಯೇ ತಪ್ಪು ಮಾಡಿ ಹೊಡೆಸಿಕೊಂಡವನಿಗೆ ನೂರು ರೂ.ಗಳ ದಂಡ ವಿಧಿಸಿದರೆ ಹೊಡೆದವನಿಗೆ ಐದು ರೂಪಾಯಿ ದಂಡವನ್ನು ಹಾಕಿ ಕೈತೊಳೆಸುತ್ತಾರೆ.

೩. ಹೆಂಗಸು ತಾನು ಉಟ್ಟು ಬಿಟ್ಟ ಲಂಗವನ್ನು ಗಂಡನಿಗೆ ಅಥವಾ ಬೇರೆ ಪುರುಷರಿಗೆ ತಾಗುವಂತೆ ಇಟ್ಟರೆ ಅಂಥಹ ಹೆಂಗಸರಿಗೆ ೧೦೧ ರೂ. ದಂಡ ಹಾಕುತ್ತಾರೆ. ಇನ್ನೂ ಪ್ರಾಯದ ಹುಡುಗಿಯಾಗಿದ್ದರೆ ಅವಳಿಗೆ ಯಾವುದೇ ದಂಡ, ಶಿಕ್ಷೆ ಇರುವುದಿಲ್ಲ. ಮದುವೆಯಾದವರಿಗೆ ಈ ನಿಯಮ ಕಡ್ಡಾಯವಾಗಿದೆ.

೪. ಗಂಡ ಹೆಂಡತಿಯ ಜಗಳವಾದಾಗ ಆಕಾಸ್ಮತ್ ಹೆಂಡತಿ ತನ್ನ ಗಂಡನ ತಲೆಕೂದಲನ್ನು ಹಿಡಿದರೆ ಅಂತಹ ಹೆಣ್ಣನ್ನು ಜಾತಿಯಿಂದ ಹೊರ ಹಾಕುತ್ತಾರೆ. ಮತ್ತೆ ಆ ಹೆಣ್ಣು ಜಾತಿಗೆ ಸೇರಬೇಕಾದರೆ ೧೦೧ ರೂ. ದಂಡವನ್ನು ಪಂಚಾಯ್ತಿಗೆ ಕಟ್ಟಬೇಕು.

೫. ಒಬ್ಬ ಗಂಡಸು ಅಪ್ಪಿತಪ್ಪಿ ತನ್ನ ತಂಗಿ ಅಥವಾ ಅಕ್ಕ, ಚಿಕ್ಕಮ್ಮ, ದೊಡ್ಡಮ್ಮ, ಅತ್ತೆ, ಅತ್ತಿಗೆ ಇಂಥವರೊಂದಿಗೆ ಲೈಂಗಿಕ ಸಂಬಂಧವನ್ನಿಟ್ಟುಕೊಂಡರೆ ಅವರನ್ನು ತೀವ್ರವಾದ ದಂಡನೆಗೆ ಒಳಪಡಿಸುತ್ತಾರೆ. ಏಕೆಂದರೆ ಈ ತರಹದ ಸಂಬಂಧಗಳಿಗೆ ಇವರಲ್ಲಿ ತುಂಬಾ ಕಟ್ಟುನಿಟ್ಟಿನ ನಿಷೇಧವಿದೆ. ಇಂತವರಿಗೆ ದಂಡ ಮತ್ತು ದೈಹಿಕ ಶಿಕ್ಷೆ ಎರಡನ್ನು ವಿಧಿಸಬಹುದು. ಇಲ್ಲವೆ ಕುಲದಿಂದ ಹೊರಹಾಕಬಹುದು.

೬. ಮುಟ್ಟಾದ ಹೆಂಗಸನ್ನು ಏಳು ದಿನಗಳವರೆಗೆ ಮುಟ್ಟುವಂತಿಲ್ಲ. ಹಾಗೇನಾದರೂ ಮುಟ್ಟಿದರೆ ಅಂಥವನಿಗೆ ೨೦೦ ರೂಪಾಯಿ ದಂಡ ಹಾಗೂ ಜಾತಿಯಿಂದ ಒಂದು ತಿಂಗಳು ಹೊರಹಾಕುತ್ತಾರೆ. (ಮಾಹಿತಿ: ಕಸ್ತೂರಿ, ೬೫,ಕಂಪ್ಲಿ)

೭. "ಹೆಂಡತಿಯ ಬಾಣಂತಿತನ ಮುಗಿಯುವ ಮೊದಲೇ ಸುಮಾರು ಮೂರು ತಿಂಗಳಿನ ಒಳಗಾಗಿ ಆಕೆಯೊಂದಿಗೆ ಸಂಭೋಗಕ್ಕೆ ತೊಡಗಿದ ಗಂಡಸನ್ನು ಲೊಹೊವ್ ವಾಳೂವ್ ಎಂದು ಕರೆಯುತ್ತಾರೆ. ಇದರ ಅರ್ಥ ಹೆಂಡತಿಯ ರಕ್ತದೊಳಗೆ ಕಲಸಿಬಿಟ್ಟೆ ಎಂದು".[೭]

ಹಕ್ಕಿಪಿಕ್ಕಿಯರಲ್ಲಿ ಲೈಂಗಿಕತೆಗೆ ಸಂಬಂಧಿಸಿದಂತೆ ತುಂಬಾ ಕಟ್ಟುನಿಟ್ಟಿನ ನಿಯಮಗಳಿವೆ. ಈ ರೀತಿ ಬಾಣಂತಿಯೊಂದಿಗೆ ಸಂಭೋಗ ಮಾಡಿದವನು ಕೋಣ ಅಥವಾ ಹೊತವನ್ನು ಕಡಿದು ಸಮುದಾಯದವರಿಗೆ ಊಟಕ್ಕೆ ಹಾಕಿಸಬೇಕು.

---

೭. ಹಕ್ಕಿಪಿಕ್ಕಿಯರ ಸಂಸ್ಕೃತಿ, ರಾಜಪ್ಪದಳವಾಯಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩, ಪು. ೪೪

೯. ಬೇಟೆಗೆ ಹೋದಾಗ ಒಬ್ಬನಿಗಾಗುತ್ತಿದ್ದ ಬೇಟೆಯನ್ನು ಮತ್ತೊಬ್ಬನು ಅಡ್ಡ ಬಂದು ತಾನು ಆ ಬೇಟೆಯನ್ನು ಮಾಡಿದರೆ ಆ ಬೇಟೆಯು ಇಬ್ಬರಿಗೂ ದಕ್ಕದೆ ಕುಲಾಚಾರ ಪಾಲಾಗುತ್ತದೆ. ಕೂಲಾಚಾರರು ಆ ಬೇಟೆಯನ್ನು ಪಾಲು ಮಾಡಿ ಮಾರಿ ಬಂದ ಹಣದಿಂದ ಮಧ್ಯಸೇವಿಸುತ್ತಾರೆ.

೧೦. ಕೂಡು ಬೇಟೆಗೆ ಹೋದಾಗ ಏನಾದರೂ ಮಾರುವ ಸಾಮಾನುಗಳಿದ್ದರೆ ಅವುಗಳಲ್ಲಿ ಪಾಲು ಮಾಡಿಕೊಳ್ಳುವ ಪದ್ಧತಿ ಇರುವುದಿಲ್ಲ. ಅದು ಅವರಿಬ್ಬರಿಗೂ ಪ್ರತ್ಯೇಕವಾಗಿ ಸೇರಿದ್ದುದ್ದಾಗಿದೆ. ಆದರೆ ಮನೆಗೆ ತಂದು ತಿನ್ನುವ ಸಾಮಗ್ರಿಯಲ್ಲಿ ಮಾತ್ರ ಸ್ವಲ್ಪವೂ ವ್ಯತ್ಯಾಸ ಆಗುವಂತಿಲ್ಲ. ಬೇಟೆಗೆ ಹೋಗದೇ ಇದ್ದರೂ ಸರಿ ಅವರಿಗೆ ಸಿಗಬೇಕಾದ ಪಾಲನ್ನು ಕೊಡಬೇಕು. ಯಾರಿಗೆ ಪಾಲು ಸಿಕ್ಕಿರುವುದಿಲ್ಲವೊ ಅಂಥವನು ಪಂಚಾಯಿತಿಯನ್ನು ಸೇರಿಸಿ ದಂಡವನ್ನು ಹಾಕಿಸುತ್ತಾನೆ.

೧೧. "ತಮ್ಮ ಸಮಾಜದಲ್ಲಿ ಯಾರಾದರೂ ತಪ್ಪು ಮಾಡಿದರೆ, ಅಂಥವರನ್ನು ಪತ್ತೆ ಹಚ್ಚಲು ಅಥವಾ ಶಿಕ್ಷಿಸುವ ನಿಟ್ಟಿನಲ್ಲಿ ಕೊಡಲಿಯನ್ನು ಕೆಂಪಗೆ ಕಾಯಿಸಿ ಅಪರಾಧಿ ಎನ್ನುವವರ ಅಂಗೈಯ ಮೇಲೆ ಒಂದು ವಿಳೆದಲೆ ಇಟ್ಟು ಅದರ ಮೇಲೆ ಕೊಡಲಿ ಇಡುತ್ತಾರೆ. ಆ ವ್ಯಕ್ತಿ ತಪ್ಪು ಮಾಡಿರದಿದ್ದರೆ ಕೈ ಸುಡುವುದಿಲ್ಲ. ಒಂದು ವೇಳೆ ಅವನು ತಪ್ಪು ಮಾಡಿದ್ದರೆ ಕೂಡಲೇ ಕೈ ಸುಟ್ಟು ಬಿಡುತ್ತದೆ. ಇದು ಅಲ್ಲದೆ. ಒಲೆಯ ಮೇಲೆ ಕಡಾಯಿ ಒಂದನ್ನು ಇಟ್ಟು ಅದರಲ್ಲಿ ಎಣ್ಣೆಯನ್ನು ಹಾಕಿ ಚೆನ್ನಾಗಿ ಕಾಯಿಸುತ್ತಾರೆ. ಇಲ್ಲಿಯು ಸಹ ಅವರ ತಪ್ಪನ್ನು ಪರೀಕ್ಷಿಸುವ ನಿಟ್ಟಿನಲ್ಲಿ ಆ ಎಣ್ಣೆಯಲ್ಲಿ ತಪ್ಪಿತಸ್ಥನನ್ನು ಕೈ ಹಾಕಲು ಹೇಳುತ್ತಾರೆ. ಆತ/ಆಕೆ ತಪ್ಪು ಮಾಡದಿದ್ದಲಿ ಅವರ ಕೈ ಸುಡುವುದಿಲ್ಲ. ಒಂದು ವೇಳೆ ತಪ್ಪು ಮಾಡಿದ್ದರೆ. ಅವರ ಕೈ ಕೂಡಲೇ ಸುಟ್ಟು ಹೋಗಿ ಬಿಡುತ್ತದೆ ಎಂದು ಇವರು ಬಲವಾಗಿ ನಂಬಿರುತ್ತಾರೆ. (ಶ್ರೀಮತಿ ಲತಾ ಗಂಡ ಮೋಹನ್; ೪೦, ಕಂಪ್ಲಿ)

ಪ್ರಸ್ತುತ ದಿನಗಳಲ್ಲಿ ಹಕ್ಕಿಪಿಕ್ಕಿ ಸಮುದಾಯದವರಲ್ಲಿ ನ್ಯಾಯಪಂಚಾಯ್ತಿಗಳು ಅಷ್ಟೊಂದು ಕಟ್ಟುನಿಟ್ಟಿನಿಂದ ನಡೆಯುತ್ತಿಲ್ಲ. ಕಂಪ್ಲಿ ಹಕ್ಕಿಪಿಕ್ಕಿಯರು ತಮ್ಮ ಕಾಲೋನಿಯಲ್ಲೇ ಕಟ್ಟೆಮನೆಯನ್ನು ಹೊಂದಿದ್ದಾರೆ. ಕೊರಬಿಯಾ ಬೆಡಗಿನವರಾದ ಗಂಗಪ್ಪ ಎಂಬುವರು ಇಲ್ಲಿನ ಕಟ್ಟೆಮನೆ ಒಡೆಯರಾಗಿದ್ದು ಇವರ ಮುಖಂಡತ್ವದಲ್ಲೇ ಎಲ್ಲಾ ಪ್ರಮುಖ ಕೆಲಸ ಕಾರ್ಯಗಳು ನಡೆಯುತ್ತವೆ. ಇವರಲ್ಲಿ ಅಲ್ಲದೆ ತಮ್ಮ ವ್ಯಾಜ್ಯಗಳನ್ನು ತಮ್ಮ ಊರಲ್ಲೇ ಇತ್ಯರ್ಥ ಮಾಡಿಕೊಳ್ಳಬೇಕೆಂಬ ನಿಯಮವಿಲ್ಲ. ತಮ್ಮ ಸಮುದಾಯ ದವರಿರುವ ಯಾವುದೇ ಊರು ಕಾಲೋನಿಯಾದರೂ ಅಲ್ಲಿಗೆ ಹೋಗಿ ನ್ಯಾಯ ಬಗೆಹರಿಸಿಕೊಳ್ಳಬಹುದು. ಯಾವುದೇ ಒಂದು ಕಟ್ಟೆಮನೆಗೆ ಇಂತಿಷ್ಟು ಊರುಗಳು ಸೇರಿವೆ ಎಂಬ ನಿಯಮ ಇವರಲ್ಲಿಲ್ಲ. ಆಯಾ ಕಾಲೋನಿಯಲ್ಲೇ ಕಟ್ಟೆಮನೆ ಇದ್ದು ಅಲ್ಲೇ ನ್ಯಾಯ ತೀರ್ಮಾನ ಮಾಡಿಕೊಳ್ಳುತ್ತಾರೆ. ಪಂಚಾಯಿತಿ ಮಾಡಲು ಇಂತಹದ್ದೆ ಸ್ಥಳ ಬೇಕೆಂಬ ನಿಯಮವಿಲ್ಲ. ಸಾಮಾನ್ಯವಾಗಿ ಬಯಲು ಇರುವ ಕಡೆಯಲ್ಲೇ ಪಂಚಾಯಿತಿ ಸೇರುತ್ತಾರೆ.

೩.೪. ಪಾರಂಪರಿಕ ವೈದ್ಯ ಪದ್ಧತಿ

ಪ್ರಪಂಚದಲ್ಲಿನ ಇಂದಿನ ವೈದ್ಯ ಪದ್ಧತಿಗಳಿಗೆ ತಾಯಿ ಬೇರು ಜನಪದ ವೈದ್ಯ. ಪ್ರಕೃತಿಯಲ್ಲಿ ಮಾನವನಿಗೆ ನಿರಂತರವಾಗಿ ಕಾಡುವ ಒಂದಿಲ್ಲೊಂದು ರೋಗ ರುಜಿನಗಳಿವೆ. ಜನಪದ ವೈದ್ಯವು ಆಯಾ ಪರಿಸರ ಬುಡಕಟ್ಟು ಸಮುದಾಯಗಳಲ್ಲಿ ಭಿನ್ನ ಭಿನ್ನವಾದ ರೀತಿಯಲ್ಲಿ ಬಳಕೆಗೊಳ್ಳುತ್ತದೆ. ಕಾಲೋನಿಯ ಜನಪದರು ತಮಗೆ ಬರುವ ರೋಗರುಜನಿಗಳಿಂದ ಮುಕ್ತರಾಗಲು ತಮ್ಮ ಪರಿಸರದಲ್ಲಿ ಸಿಗುವ ಕೆಲವು ನೈಸರ್ಗಿಕ ವಸ್ತುಗಳನ್ನು ಉಪಯೋಗಿಸುವುದು ಕಾಣಬಹುದಾಗಿದೆ. ಚೇಳು ಕಡಿದರೆ, ಹಾವು ಕಡಿದರೆ, ಮಕ್ಕಳಿಗೆ ಮುಟ್ಟುದೋಷವಾದರೆ, ಹೊಟ್ಟೆನೋವು, ಗರ್ಭಪಾತಕ್ಕೆ ಇಂತಹ ಇನ್ನು ಅನೇಕ ಕಾಯಿಲೆಗಳಿಗೆ ಯಾವುದೇ ಸಂಭಾವನೆ ಪಡೆಯದೆ ಔಷಧಿ ಕೊಡುವವರು ಕಾಲೋನಿಯಲ್ಲಿದ್ದಾರೆ. ಇಂತಹ ಔಷಧಿಕೊಡುವವರು ಪ್ರಾಮಾಣಿಕ, ಪರಿಶುದ್ಧನಾಗಿರಬೇಕು. ಹಣದಾಸೆಗೆ ಕೆಲಸ ಮಾಡುವವ ನಾಗಿರಬಾರದು. ಈ ವೈದ್ಯಕೀಯ ಪದ್ಧತಿ ಸಾಮಾನ್ಯವಾಗಿ ತಮ್ಮ ಹಿರಿಯರಿಂದ ಬಂದ ತಲೆಮಾರುಗಳ ಬಳುವಳಿಯಾಗಿರುತ್ತದೆ.

ನಮ್ಮ ನಾಗರೀಕ ಸಮಾಜದವರಿಗೆ ಪರಿಚಯವಿಲ್ಲದ ಎಷ್ಟೋ ಔಷಧಿಯನ್ನು ಇವರು ಮಾಡುವುದುಂಟು. ರೋಗದ ಲಕ್ಷಣವನ್ನು ತಿಳಿಯಲು ದೈಹಿಕ ಲಕ್ಷಣಗಳನ್ನು ಅವಲೋಕಿಸುವುದುಂಟು. ನಾಡಿಮಿಡಿತ, ಕಣ್ಣು ಪರೀಕ್ಷೆ ಮಾಡಿ ರೋಗ ಪತ್ತೆಹಚ್ಚುತ್ತಾರೆ. ತಮಗೆ ತಿಳಿದ ಸಸ್ಯ ಔಷಧಗಳನ್ನು ಪ್ರಯೋಗ ಮಾಡಿ ಕಾಯಿಲೆ ವಾಸಿ ಮಾಡುತ್ತಾರೆ. ಕಂಪ್ಲಿ ಕಾಲೋನಿಯಲ್ಲಿ ಶ್ರೀಕಾಂತ್ ಎಂಬುವರು ಗಿಡಮೂಲಿಕೆಗಳಿಂದ, ಪ್ರಾಣಿ ಪಕ್ಷಿಗಳ ಕೊಬ್ಬಿನಿಂದ ಅನೇಕ ಕಾಯಿಲೆಗಳಿಗೆ ಮದ್ದುಮಾಡಿಕೊಡುತ್ತಾರೆ. ಕಾಲೋನಿಯ ಜನ ತಮಗೆ ಬಂದ ಸಣ್ಣಪುಟ್ಟ ಕಾಯಿಲೆಗಳನ್ನು ಗುಣಪಡಿಸಿಕೊಳ್ಳಲು ಇವರ ಬಳಿ ಬರುವುದುಂಟು. ಶ್ರೀಕಾಂತ್ ಅವರು ತಿಳಿಸುವಂತೆ ಹಲವು ರೋಗಗಳನ್ನು ಗುಣಪಡಿಸಲು ಇರುವ ಸರಳ ಗಿಡಮೂಲಿಕೆಗಳೆಂದರೆ,

ದಮ್ಮುಕೆಮ್ಮಿಗೆ : ಇಲಿಚಿ(ಚುಚುಂದ್ರಿ) ಮತ್ತು ಕರಿಕೋಗಿಲೆ(ಕರಿಕೋಯಿಲಿ) ಮಾಂಸವನ್ನು ತಿನ್ನಬೇಕು ಎನ್ನುತ್ತಾರೆ. ಇವುಗಳ ಮಾಂಸ ತಿನ್ನುವುದರಿಂದ ದಮ್ಮುಕೆಮ್ಮು ಹೊರಟು ಹೋಗುತ್ತದೆ. ದಮ್ಮು ಇಲ್ಲದವರು ತಿಂದರೆ ಮುಂದೆ ಆ ಕಾಯಿಲೆ ಬರುವುದಿಲ್ಲ ಎಂದು ಹೇಳುತ್ತಾರೆ. ಇದನ್ನು ತಾವು ಕಂಡುಕೊಂಡ ಸತ್ಯ ಎಂದು ಹೇಳುತ್ತಾರೆ.

ಪುರುಷತ್ವ ಹೆಚ್ಚಿಸಲು : ಲಗ್ಗಲಿ ಮುಳ್ಳಿನ ಗಿಡದ ಬೇರನ್ನು ಅರೆದು ಅದರ ರಸವನ್ನು ಹಾಲಿನೊಂದಿಗೆ ಬೆರೆಯಿಸಿ ಪ್ರತಿದಿನ ಮುಂಜಾನೆ ಸೇವಿಸಬೇಕು. ಮತ್ತೊಂದು ವಿಧಾನವೆಂದರೆ, ಊರಗುಬ್ಬ ಅದರಲ್ಲೂ ಗಂಡು ಗುಬ್ಬಿಯ ಮಾಂಸವನ್ನು ಮಸಾಲೆ ಹಾಕಿ ಸ್ವಲ್ಪ ಖಾರ ಹಾಕಿ ಅರೆಬರೆ ಬೇಯಿಸಿ ತಿನ್ನಬೇಕು. ಹೀಗೆ ನಿರಂತರವಾಗಿ ತಿನ್ನುತ್ತಿದ್ದರೆ ಮುಂದೆ ನರರೋಗಗಳು ಬರುವುದಿಲ್ಲ ಎಂಬುದು ಇವರ ಅಭಿಪ್ರಾಯವಾಗಿದೆ. ಅಲ್ಲದೆ ಅಡವಿ ಹಂದಿಯ ಮಾಂಸ ತಿನ್ನುವುದರಿಂದ

ಪುರುಷತ್ವ ಹೆಚ್ಚುತ್ತದೆ ಎನ್ನುತ್ತಾರೆ. "ಕೋಟಿ ಕೊಟ್ಟಾದರೂ ಗೂಟಿ ತಿನ್ನು"[೮] ಎಂಬ ಜನಪದ ಗಾದೆಯಂತೆ ಹಂದಿಮಾಂಸದ ಭಕ್ಷಣೆಯಿಂದ ಮಾನವ ಆರೋಗ್ಯವಂತನಾಗಿ ಗಟ್ಟಿ ಮುಟ್ಟಾಗಿ ಇರುತ್ತಾನೆ ಎಂಬುದು ಇವರ ಅಭಿಪ್ರಾಯವಾಗಿದೆ.

ಭೇದಿ : ಭೇದಿಯಾಗುತ್ತಿದ್ದರೆ ಎಳೆಯ ತೆಂಗಿನ ಗುಳ್ಳನ್ನು (ಚಿಕ್ಕ ತೆಂಗಿನ ಕಾಯಿ) ಜಜ್ಜಿ ಅದರ ರಸವನ್ನು ಹಾಲಿನಲ್ಲಿ ಬೆರೆಸಿ ಕುಡಿಯಲು ಕೊಡುತ್ತಾರೆ. ಇದರಿಂದ ಬೇದಿಯು ನಿಲ್ಲುತ್ತದೆ.

ಪಾರ್ಶ್ವವಾಯು (ಲಕ್ವಾ) : ಈ ರೋಗಕ್ಕೆ ಪಾರಿವಾಳ, ರತ್ನಪಕ್ಷಿಯ ರಕ್ತ ತೆಗೆದು ಲಕ್ವಾ ಹೊಡೆದ ಭಾಗಕ್ಕೆ ಹಚ್ಚಬೇಕು ಅದರ ಮಾಂಸವನ್ನು ವಾಸನೆ ಹೋಗದೆ ಅರೆಬರೆ ಬೆಂದ ಪಾರಿವಾಳ, ರತ್ನಪಕ್ಷಿಯ ಮಾಂಸವನ್ನು ತಿನ್ನುವುದರಿಂದ ಈ ಕಾಯಿಲೆ ಬಹುಬೇಗ ಗುಣವಾಗುತ್ತದೆ.

ನಾಯಿಕಚ್ಚಿದರೆ : ಯಾರ ಮನೆಯ ನಾಯಿ ಕಚ್ಚಿರುತ್ತದೆಯೋ ಅವರ ಮನೆಯಿಂದಲೇ ನೀರು ಕುಡಿಯಬೇಕು ಎನ್ನುತ್ತಾರೆ.

ಗರ್ಭಪಾತಕ್ಕೆ : ಹಸಿರು ಔಷಧಿಯನ್ನು ಕೊಡುತ್ತಾರೆ. ಬಿದಿರು ಸೂಪ್ಪನ್ನು ಅರೆದು ಬೇಯಿಸಿ, ಹಾಲು, ಇಂಗು, ತಟ್ಟೆಬೆಲ್ಲ, ಸೊಂಟಿ, ಎಳ್ಳು ಇವುಗಳನ್ನು ಅರೆದು ಪಾತ್ರೆಯಲ್ಲಿ ಹಾಕಿ ಪಾಯಸದ ರೀತಿ ಬೇಯಿಸಿ ಮೂರು ದಿವಸ ಕುಡಿಯಬೇಕು. ಎರಡು ಮೂರು ತಿಂಗಳ ಫಲವಾಗಿದ್ದರು ಗರ್ಭಪಾತವಾಗಿ ಬಿಡುತ್ತದೆ. ಮತ್ತೊಂದು ಔಷಧಿ ಎಂದರೆ ಪರಂಗಿ ಕಾಯಿಯನ್ನು ತಿನ್ನಲು ಹೇಳುತ್ತಾರೆ.

ಮೂರ್ಚೆರೋಗ : ಬಂದರೆ ಕೈಯಿಂದ ತೆಗೆದ ಬೇವಿನ ಎಣ್ಣೆ ಹಾಗೂ ಗೋರಂಜನವನ್ನು ಮಿಶ್ರಮಾಡಿ, ೨೧ ದಿವಸ ಎರಡು ಹೊತ್ತು ಕೊಟ್ಟರೆ ಜನ್ಮಾಂತರ ಈ ರೋಗ ಬರುವುದಿಲ್ಲವಂತೆ. ಈ ಅವಧಿಯಲ್ಲಿ ವರ್ಷಗಟ್ಟಲೆ ಹಸಿಕೊಬ್ಬರಿ, ಎಣ್ಣೆ ಬದನೆಕಾಯಿ ಹಾಗೂ ಮುಂತಾದ ಶಲದಿ ಪದಾರ್ಥಗಳನ್ನು ತಿನ್ನಲು ಕೊಡಬಾರದು. ಅಂದಾಗ ಮಾತ್ರ ಈ ಮೂರ್ಚೆರೋಗ ಮತ್ತೆಂದು ಕಾಣಿಸುವದಿಲ್ಲ.

ಕಿವಿಸೋರುವಿಕೆ : ಯಾರಿಗಾದರೂ ಕಿವಿ ಸೋರುತ್ತಿದ್ದರೆ ಅಂಥವರ ಕಿವಿಯಲ್ಲಿ ಇಂಕ್ರ ಉಪ್ಪಿನ ಹರಳನ್ನು ಎದೆ ಹಾಲಿನೊಂದಿಗೆ ಸೇರಿಸಿ ಕಿವಿಯಲ್ಲಿ ಬಿಟ್ಟರೆ ಕಿವಿ ಸೋರುವುದು ನಿಲ್ಲುತ್ತದೆ.

ಹೆರಿಗೆ ಬೇನೆಗೆ (ನೋವಿಗೆ) : ಹಡೆಯಲು ಸಿದ್ಧವಾಗಿರುವ ಮಹಿಳೆಗೆ ಕೋತಂಬರಿ ಜೀರಿಗೆ ಹುರಿದು ಪುಡಿಮಾಡಿ ಅದರ ಕಸಾಯವನ್ನು ಕುಡಿಸುತ್ತಾರೆ. ಇಲ್ಲವೆ ಹಾಲು ಹಾಕದ ಟೀ ಯನ್ನು ೩-೪ ಬಾರಿ ಕೊಟ್ಟರೆ ಹೆರಿಗೆ ಸುಲಭವಾಗಿ ಆಗುತ್ತದೆ.

---

೮. ಶಿಕಾರಿ ಪರಂಪರೆ, ರಮೇಶ್ ಸ.ಚಿ., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೫, ಪು. ೧೯

ಶೀತ ನೆಗಡಿ : ಶೀತವಾದರೆ ಬೆಳ್ಳುಳ್ಳಿಯನ್ನು ಕೊರಳಿಗೆ ಆಗುವಷ್ಟನ್ನು ದಾರಕ್ಕೆ ಪೋಣಿಸಿ ಕಟ್ಟುತ್ತಾರೆ. ಆ ರೀತಿಯಲ್ಲಿ ಕಟ್ಟಿದ ಬೆಳ್ಳುಳ್ಳಿ ಒಣಗಿ ಹೋಗುವ ಹೊತ್ತಿಗೆ ಶೀತವೆಲ್ಲಾ ಸರಿಹೋಗುತ್ತದೆ.

ತಲೆನೋವನ್ನು ಹೋಗಲಾಡಿಸುವುದು : ಕೆರೆಯಲ್ಲಿಯ ಕೆಂಪು ಸೀಗಡಿಗಳನ್ನು ತಂದು ಅದರಿಂದ ರಸ ತೆಗೆದು ಕುಡಿಸಿ ನಿಂಬೆ ಹಣ್ಣನ್ನು ನೆತ್ತಿಗೆ ಹಾಕಿ ಉಜ್ಜಿ, ಅದನ್ನು ಕುಡಿಸಿ ನಂತರ ಮಜ್ಜಿಗೆಯನ್ನು ಕುಡಿಸಬೇಕು. ಏಳು ಮಡಿಕೆಗಳಿಂದ ನೀರನ್ನು ತಲೆಯ ಮೇಲೆ ಸುರಿಯಬೇಕು. ಆಗ ತಲೆ ನೋವು ಹುಷಾರು ಆಗುತ್ತದೆ ಎನ್ನುತ್ತಾರೆ.

ಹೊಟ್ಟೆನೋವು : ದೊಡ್ಡವರಿಗೇನಾದರೂ ಹೊಟ್ಟೆ ನೋವು ಬಂದರೆ ಅವರ ಕೈರಟ್ಟೆ ಮತ್ತು ತೊಡೆಗಳನ್ನು ಬಿಗಿಯಾಗಿ ಕಟ್ಟಿ ಅವರ ಮುಖ ಅಡಿ ಹಾಕಿ ತಲೆದಿಂಬು ಅಥವಾ ಸಿಂಬಿ ಹಾಕಿ ಮಲಗಿಸಿದರೆ, ಎಲ್ಲಾ ಸರಿಹೋಗುತ್ತದೆ.

ಹಲ್ಲುನೋವು, ತಲೆನೋವು ಹೊಟ್ಟೆನೋವು, ಹಾವುಕಚ್ಚಿದರೆ ಹೀಗೆ ಹತ್ತು ಹಲವು ಕಾಯಿಲೆಗಳಿಗೆ ವೈದ್ಯ ಮಾಡುವುದಾಗಿ ಶ್ರೀಕಾಂತ್ ಅವರು ತಿಳಿಸುತ್ತಾರೆ.

೩.೫. ಆಹಾರ ಪದ್ಧತಿ

ಹಕ್ಕಿಪಿಕ್ಕಿಯರ ಆಹಾರಪದ್ಧತಿ ಬಹಳ ಸರಳವಾದುದು. ಕಾರಣ ಮೂಲತಃ ಇವರು ಅಲೆಮಾರಿಗಳಾಗಿ ರುವುದರಿಂದ ಆಯಾ ಪ್ರದೇಶದಲ್ಲಿ ದೊರೆಯುವ ಎಲ್ಲಾ ತರಹದ ಆಹಾರ ಸೇವಿಸುವುದನ್ನು ರೂಢಿಸಿ ಕೊಂಡಿರುತ್ತಾರೆ. ಶಿಕಾರಿ ಪ್ರಿಯರಾದ ಇವರು ಎಲ್ಲಾ ತರಹದ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡಿ ತಿನ್ನುತ್ತಾರೆ. ಇವರು ತಿನ್ನದಿರುವ ಪ್ರಾಣಿ ಪಕ್ಷಿಗಳೇ ಇಲ್ಲ ಎನ್ನಬಹುದು. ಅಷ್ಟೊಂದು ಬಗೆಯ ಪ್ರಾಣಿ ಪಕ್ಷಿಗಳ ಮಾಂಸವನ್ನು ತಿನ್ನುತ್ತಾರೆ. ಆದರೆ ಅರಣ್ಯ ಕಾಯಿದೆ ಬೇಟೆಯಾಡುವುದುನ್ನು ನಿಷೇಧಿಸಿರುವುದರಿಂದ ಇಂದು ಇವರು ಬೇಟೆಗೆ ಹೋಗುತ್ತಿಲ್ಲ. ಆದರೂ ಮಾಂಸ ಪ್ರಿಯರಾದ ಇವರು ಇಂದು ವಾರಕ್ಕೆ ಎರಡು ಬಾರಿಯಾದರೂ ಮಾಂಸದ ಅಂಗಡಿಯಿಂದ ಮಾಂಸವನ್ನು ಕೊಂಡು ತಂದು ತಿನ್ನುತ್ತಿದ್ದಾರೆ. ಪ್ರತಿ ಭಾನುವಾರ ಕಾಲೋನಿಯ ಎಲ್ಲರ ಮನೆಯಲ್ಲೂ ಮಾಂಸದ ಅಡುಗೆ ಮಾಡಿರುತ್ತಾರೆ. ಸಮಾಜದ ಇತರರು ತಿನ್ನುವಂತಹ ಸಾಮಾನ್ಯ ಅಡುಗೆಗಳನ್ನು ಮಾಡುತ್ತಾರೆ. ಮುದ್ದೆ, ಅನ್ನ, ಇಡ್ಲಿ, ರೊಟ್ಟಿ, ಪಾಯಸ, ಚಿತ್ರನ್ನಾ ಇತ್ಯಾದಿ ಇವರ ಅಡುಗೆಗಳಲ್ಲಿ ವಿಶೇಷತೆಯೆಂದರೆ ಉಪ್ಪು ಖಾರ ಹೆಚ್ಚಿಗೆ ಇರುವುದಿಲ್ಲ. ಅಡುಗೆ ಸಪ್ಪೆಯಾಗಿರುತ್ತದೆ.

ಇವರ ಅಲೆಮಾರಿ ಜೀವನವು ಹಲವು ಸೊಪ್ಪುಗಳನ್ನು ತಿನ್ನುವಂತೆ ಮಾಡಿದೆ ಎನಿಸುತ್ತದೆ. ಮಾರುಕಟ್ಟೆಯಲ್ಲಿ ಸಿಗುವ ಎಲ್ಲಾ ತರಕಾರಿ, ಕಾಯಿಪಲ್ಯವನ್ನು ಅಡುಗೆಗೆ ಬಳಸುತ್ತಾರೆ. ಜೊತೆಗೆ ಜೋಳ, ಗೋಧಿ, ನವಣೆ, ರಾಗಿ, ಸಜ್ಜೆ, ಅಕ್ಕಿ ಇತ್ಯಾದಿ ಆಹಾರ ಧಾನ್ಯಗಳನ್ನು ಬಳಸುತ್ತಿದ್ದಾರೆ. ಬೇಟೆಗೆ ಹೋದ ಸಂದರ್ಬದಲ್ಲಿ ದೊಡ್ಡ ಬೇಟೆಯಾದರೆ ಕಾಲೋನಿಗೆ ತಂದು ಕೊಯ್ದು ಎಲ್ಲರೂ ಹಂಚಿಕೊಂಡು ತಿನ್ನುತ್ತಾರೆ. ಇವರು ತಮ್ಮ ಬಳಕೆಗೆ ಸ್ವತಃ ಪಾನೀಯ ತಯಾರಿಸಿಕೊಳ್ಳುತ್ತಾರೆ.

* **ಪಾರಂಪರಿಕ ಪಾನೀಯ ಸೇವನೆ ಹಾಗೂ ತಯಾರಿಸುವ ವಿಧಾನ**

ತಮಗೆ ಲಭ್ಯವಿರುವ ನೈಸರ್ಗಿಕ ವಸ್ತುಗಳಿಂದ ಪಾರಂಪರಿಕ ಪಾನೀಯ ತಯಾರಿಸಿಕೊಳ್ಳುತ್ತಾರೆ. ಇದನ್ನು ಕಾಲೋನಿಯವರು ತಮ್ಮ ತಮ್ಮ ಮನೆಗಳಲ್ಲೇ ತಯಾರಿಸಿಕೊಂಡು ಕುಟುಂಬದ ಎಲ್ಲ ಸದಸ್ಯರು ಸೇರಿ ಕುಡಿಯುತ್ತಾರೆ. ಇವರು ತಯಾರಿಸಿಕೊಳ್ಳುವ ಪಾನೀಯವು ಗುಣಮಟ್ಟದ್ದಾಗಿದ್ದು ತಮ್ಮ ಚಿಕ್ಕ ಮಕ್ಕಳಿಗೂ ಸಹ ಇದನ್ನು ಕುಡಿಸುತ್ತಾರೆ. ಅಲ್ಲದೇ ಮಹಿಳೆಯರೂ ಸಹ ದಿನನಿತ್ಯ ಕುಡಿಯುತ್ತಾರೆ. ಯಾವುದೇ ಕೆಮಿಕಲ್ ಮಿಶ್ರಣವಿಲ್ಲದ ಇವರ ಪಾನೀಯವನ್ನು ಕುಡಿಯುವುದರಿಂದ ಆರೋಗ್ಯಕ್ಕೆ ಯಾವುದೇ ಕೆಟ್ಟ ಹಾನಿಯಾಗುವುದಿಲ್ಲ. ಇವರು ಪಾನೀಯವನ್ನು ಕೇವಲ ತಮ್ಮ ಬಳಕೆಗಷ್ಟೇ ತಯಾರಿಸಿಕೊಳ್ಳುತ್ತಾರೆಯೇ ವಿನಹಃ ಮಾರಾಟ ಮಾಡುವುದಿಲ್ಲ.

ತಯಾರಿಸುವ ವಿಧಾನ: ನಾಯಿ ಬೇಲದ ಮರದ ಚಕ್ಕೆ, ಏಲಕ್ಕಿ ಬಾಳೆಹಣ್ಣಿನ ಸಿಪ್ಪೆ, ಮೊಸಂಬಿ ಹಣ್ಣಿನ ಸಿಪ್ಪೆ, ಅಲಗೆ ಬೆಲ್ಲ, ಉಪ್ಪು, ಹಿಪ್ಪೆ ಹೂ ಇವಿಷ್ಟನ್ನು ನೀರಿನಲ್ಲಿ ಹಾಕಿ ಮಣ್ಣಿನ ಸೊರೆಯಲ್ಲಿ ಎಂಟು ದಿನ ಕೊಳೆ ಹಾಕುತ್ತಾರೆ. ನಂತರ ಆ ಕೊಳೆತ ದ್ರವವನ್ನು ಬೇರೆ ಸೋರೆಯಲ್ಲಿ ಹಾಕಿ ಚೆನ್ನಾಗಿ ಕಾಯಿಸುತ್ತಾರೆ. ಕಾದ ಆವಿಯನ್ನು ಮತ್ತೊಂದು ಗಡಿಗೆಯಲ್ಲಿ ಸಂಗ್ರಹಿಸಲು ಕೊಳವೆಯನ್ನು ಇಟ್ಟಿರುತ್ತಾರೆ. ಆವಿಯು ಆ ಕೊಳವೆಯ ಮುಖಾಂತರ ಮತ್ತೊಂದು ಗಡಿಗೆಯಲ್ಲಿ ಸಂಗ್ರಹವಾಗುತ್ತದೆ. ಮಧ್ಯೆ ಮಧ್ಯೆ ಆ ಗಡಿಗೆಯ ಮೇಲೆ ನೀರು ಹಾಕುತ್ತಿರುತ್ತಾರೆ. ಹೀಗೆ ಸಂಗ್ರಹವಾದ ದ್ರವಕ್ಕೆ ಅಷ್ಟೇ ಪ್ರಮಾಣದ ನೀರು ಬೆರೆಸುತ್ತಾರೆ. ಬೇರೆಯಾವುದೇ ರಾಸಾಯನಿಕ ವಸ್ತುಗಳನ್ನು ಬೆರಸದೆ ಈ ರೀತಿಯಾಗಿ ಹಕ್ಕಿಪಿಕ್ಕಿ ಜನರು ಪಾನೀಯವನ್ನು ಶುದ್ಧರೀತಿಯಲ್ಲಿ ತಯಾರಿಸಿಕೊಂಡು .ಹೆಣ್ಣು, ಗಂಡು, ಮಕ್ಕಳು ಎನ್ನದೆ ಎಲ್ಲರೂ ಕುಡಿಯುತ್ತಾರೆ.

* **ಊಟೋಪಚಾರಕ್ಕೆ ಸಂಬಂಧಿಸಿದ ವಿಧಿ ನಿಷೇಧಗಳು**

ಶಿಕಾರಿ ರಾಮು ಅವರು ಹೇಳುವಂತೆ ತಮ್ಮಲ್ಲಿ ಊಟೋಪಚಾರಗಳಿಗೆ ಸಂಬಂಧಿಸಿದಂತೆ ತುಂಬಾ ಕಟ್ಟುನಿಟ್ಟಿನ ನಿಮಯಗಳಿವೆ.

- ಸಾಂವಡಿಯಾ ಬೆಡಗಿನಿವರು ತಮ್ಮ ಮನೆಯ ಒಲೆಯ ಮೇಲೆ ಗೋಧಿ ಹುಗ್ಗಿ ಮಾಡುವಂತಿಲ್ಲ. ಆಡು ಹಾಗೂ ಹೊತಿನ ಮಾಂಸವನ್ನು ತಿಂದವರು ಸಾರಾಯಿ ಕುಡಿಯುವಂತಿಲ್ಲ.

- ಸಾವಂಡಿಯಾ ಹೆಣ್ಣುಮಕ್ಕಳು ಸಾರಾಯಿ ಕುಡಿಯುವಂತಿಲ್ಲ.

- ಖೋಡಿಯಾರ್ ಬೆಡಗಿನವರನ್ನು ಬಿಟ್ಟು ಉಳಿದ ಬೆಡಗಿನವರು ಆಡು ಹಾಗೂ ಹೊತಿನ ಮಾಂಸವನ್ನು ಸೇವಿಸಿದರೆ ಸಾರಾಯಿ ಕುಡಿಯುವಂತಿಲ್ಲ. ಹೆಣ್ಣುಮಕ್ಕಳು ಕುರಿ ಅಥವಾ ಟಗರಿನ ಮಾಂಸ ಸೇವಿಸುವಂತಿಲ್ಲ.

- ಪಿಂಪಳಾಜಾ ಬೆಡಗಿನವರು ಸಾರಾಯಿ ಕುಡಿದರೆ ಅಕ್ಕಿ ಅನ್ನ ತಿನ್ನುವಂತಿಲ್ಲ.

• ಹಕ್ಕಿಪಿಕ್ಕಿ ಮಹಿಳೆಯರು ಯಾವುದೇ ವಸ್ತುವನ್ನು ಮಡಿಲಲ್ಲಿ ಕಟ್ಟಿಕೊಂಡು ತರಬಾರದು. ಹಾಗೆನಾದರೂ ತಂದದ್ದನ್ನು ಹಿರಿಯ ಗಂಡಸರು ಸೇವಿಸುವುದಿಲ್ಲ. ಕಾರಣ ಉಡಿಯನ್ನು ಸೊಂಟದ ಮುಂಭಾಗದಲ್ಲಿ ಕಟ್ಟುವುದರಿಂದ ಹೆಣ್ಣಿನ ಮರ್ಮಾಂಗಕ್ಕೆ ತಾಗುವುದರಿಂದ ಗಂಡಸರು ತಿನ್ನಲು ಅದು ಯೋಗ್ಯವಲ್ಲ ಅಪವಿತ್ರವಾಗಿದೆ ಎಂದು ಭಾವಿಸುತ್ತಾರೆ. (ಶಿಕಾರಿರಾಮು, ೫೦, ಸಾವಂಡಿಯಾ) ಇವರು ತಿನ್ನುವಂತಹ ಬಗೆ ಬಗೆಯ ಆಹಾರವನ್ನು ಬಹುಶಃ ಬೇರಾವಾ ಜನಾಂಗವೂ ತಿನ್ನಲಾರದು. ಅವರ ಸಸ್ಯಾಹಾರಪದ್ಧತಿ ಮುಖ್ಯವಾಗಿ ಔಷಧಿಯುಕ್ತವಾದುದು. ಇದಕ್ಕೆ ಕಾರಣ ಹಕ್ಕಿಪಿಕ್ಕಿಯರ ಮುಖ್ಯ ಕಸುಬುಗಳಲ್ಲಿ ವೈದ್ಯ ಪದ್ಧತಿಯೂ ಒಂದಾಗಿರುವುದು.

೩.೬. ರಾಜಕೀಯ ಸ್ಥಿತಿಗತಿ

ಬುಡುಕಟ್ಟು ಸಮುದಾಯಗಳಲ್ಲೊಂದಾದ ಹಕ್ಕಿಪಿಕ್ಕಿ ಸಮುದಾಯದವರ ರಾಜಕೀಯ ಸ್ಥಿತಿಗತಿ ನೋಡುವುದಾದರೆ ಮೊದಲು ಬುಡಕಟ್ಟು ಪದದ ಅರ್ಥ ತಿಳಿಯುವುದು ಸೂಕ್ತ ಟ್ರೈಬ್(Tribe) ಎಂಬ ಇಂಗ್ಲಿಷ್ ಶಬ್ದವು ಲ್ಯಾಟಿನ್ ಭಾಷೆಯ ಟ್ರೈಬಸ್(Tribes) ಎಂಬ ಮೂಲ ಪದದಿಂದ ಉತ್ಪತ್ತಿ ಹೊಂದಿರುವುದು ಟ್ರೈಬಸ್ ಎಂಬುದಕ್ಕೆ ಪ್ರಾಚೀನ ರೋಮ್ ಜನತೆಯ ಪ್ರಕಾರ ರಾಜಕೀಯ ಭಾಗ ಅಥವಾ ಆಡಳಿತ ಪ್ರಾಂತ್ಯ ಅಥವಾ ಮಂಡಲ ಎಂಬ ಅರ್ಥವಿದ್ದು ಕಾಲಾಂತರದಲ್ಲಿ ಟ್ರೈಬ್ ಎಂಬ ಪದವನ್ನು ಪಶ್ಚಿಮ ಜಗತ್ತಿನಲ್ಲಿ ಸಮುದಾಯವಾಗಿ ರೂಪ ತಳೆಯುವ ಕುಟುಂಬಗಳ ಸಂಕಲನ ಎಂದು ಅರ್ಥೈಸಲಾಯಿತು.

ನಾಗರೀಕ ಸಮಾಜದಲ್ಲಿ ನಾವು ಕಾಣುವಂತಹ ವ್ಯವಸ್ಥಿತವಾದ ಹಾಗೂ ಸಂಕೀರ್ಣವಾದ ರಾಜಕೀಯ ಜೀವನ ಆದಿವಾಸಿಗಳ ಕುಲಪಂಚಾಯಿತಿಗಳ ಫಲಿತಾಂಸವಾಗಿದೆ. ಏಕೆಂದರೆ ಹಲವಾರು ವರ್ಷಗಳ ಹಿಂದಿನಿಂದಲೂ ಆದಿವಾಸಿಗಳು ತಾವು ಸಮುದಾಯದ ಸಂರಕ್ಷಣೆಯ ದೃಷ್ಟಿಯಿಂದ ಅಂದರೆ ಆಂತರಿಕ ಕಲಹ ಹಾಗೂ ಬಾಹ್ಯ ಆಕ್ರಮಣಗಳಿಂದ ರಕ್ಷಿಸಿಕೊಳ್ಳಲು ಪ್ರತಿಯೊಂದು ಆದಿವಾಸಿ ಸಮುದಾಯವು ತನ್ನದೇ ಆದ ರಕ್ಷಣಾವ್ಯೂಹವೊಂದನ್ನು ಹೊಂದಿರುತ್ತಿತ್ತು. ಇಂತಹ ರಕ್ಷಣಾವ್ಯೂಹಕ್ಕೆ ಸಹಜವಾಗಿ ಬಲಿಷ್ಠರಾದವನ್ನು ನೇಮಿಸುತ್ತಿದ್ದರು. ಆತನ ನೇತೃತ್ವದಲ್ಲಿ ತಮ್ಮ ಸಮುದಾಯವನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಿದ್ದವು.

ಪ್ರಜಾಪ್ರಭುತ್ವ ಹುಟ್ಟಿದ್ದು ಮೊದಲು ಗ್ರೀಕ್ ದೇಶಗಳಲ್ಲಿ. ಆದರೆ ಅದಕ್ಕಿಂತ ಪೂರ್ವದಲ್ಲಿ ಹಲವಾರು ಬುಡಕಟ್ಟುಗಳು ಭಾರತದಲ್ಲಿ ಪ್ರಜಾಪ್ರಭುತ್ವ ರೀತಿಯ ಪಂಚಾಯತ್ ವ್ಯವಸ್ಥೆಗಳನ್ನು ಹೊಂದಿದ್ದವು ಎನ್ನುವುದಕ್ಕೆ ಹಲವಾರು ಪುರಾವೆಗಳು ಕಂಡುಬಂದಿವೆ. ಭಾರತ ದೇಶದಲ್ಲಿ ಇಂದಿನ ಪ್ರಜಾಪ್ರಭುತ್ವ ಮಾದರಿಯ ಜಾತಿ ಪಂಚಾಯಿತಿ ಇದ್ದು ಆಯಾ ಬುಡಕಟ್ಟುಗಳು ತಮ್ಮ ನೆಲೆಯ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಮತ್ತು ಇತರ ನೆಲೆಗಳ ಆಕ್ರಮಣದಿಂದ ರಕ್ಷಣೆ ಪಡೆದುಕೊಳ್ಳಲು ಹಲವಾರು ಬುಡಕಟ್ಟುಗಳು ಈಗಿನ ಗ್ರಾಮಪಂಚಾಯಿತಿಯನ್ನು ಹೋಲುವ ಮಾದರಿಯಲ್ಲಿ

ಕುಲಪಂಚಾಯಿತಿ ವ್ಯವಸ್ಥೆ ಅಥವಾ ಕಟ್ಟೆಮನೆ ಪಂಚಾಯಿತಿ ವ್ಯವಸ್ಥೆ ಇದ್ದದ್ದು ತಿಳಿದು ಕೊಳ್ಳಬಹುದು. ಅಂದರೆ ಇಂದಿನ ರಾಜಕೀಯ ವ್ಯವಸ್ಥೆ ಭಾರತಕ್ಕೆ ಹೊಸದಾಗಿರದೆ ಪ್ರಾಚೀನ ಕಾಲದಿಂದಲೂ ಅಂದರೆ ಕಾಡಿನಲ್ಲಿ ವಾಸಾಸಿಸುವ ಮಾನವನು ಇಂತಹ ವ್ಯವಸ್ಥೆಯ ಮಹತ್ವವನ್ನು ತಿಳಿದುಕೊಂಡಿದ್ದನು.

ಇಂದಿನ ಸರ್ಕಾರ ಬುಡಕಟ್ಟು ಸಮುದಾಯಗಳ ಬಗ್ಗೆ ವಿಶೇಷವಾದ ರಾಜಕೀಯ ನಿಲುವುಗಳನ್ನು ೧೯೫೨ರಿಂದಲೇ ಪ್ರಾರಂಭಗೊಳಿಸಿದ್ದರೂ ಅವುಗಳ ಸಂಪೂರ್ಣ ಬಳಕೆ ಇನ್ನು ಅಷ್ಟಾಗಿ ಆಗಿಲ್ಲ. ಅಲ್ಪಸಂಖ್ಯಾತರಾದ ಹಕ್ಕಿಪಿಕ್ಕಿ ಸಮುದಾಯದವರು ರಾಜ್ಯದಲ್ಲಿ ಕೇವಲ ಮತಚಲಾಯಿಸಲು ಮತದಾರರ ಪಟ್ಟಿಯಲ್ಲಿ ಹೆಸರನ್ನು ನೊಂದಾಯಿಸಿದ್ದಾರೆಯೇ ವಿನಹಃ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿಲ್ಲ. ಕಾರಣ ತಮ್ಮಲ್ಲಿನ ಶಿಕ್ಷಣದ ಕೊರತೆ. ಚುನಾವಣೆಯಲ್ಲಿ ಮತಚಲಾಯಿಸುವ ಹಕ್ಕನ್ನು ಇವರು ಹೊಂದಿರುವರು. ಆದರೆ ರಾಜಕೀಯದ ಚುಕ್ಕಾಣಿ ಹಿಡಿದು ಆಡಳಿತ ನಡೆಸುವಲ್ಲಿ ವಿಫಲರಾಗಿದ್ದಾರೆ. ಆದ್ದರಿಂದ ಹಕ್ಕಿಪಿಕ್ಕಿ ಬುಡಕಟ್ಟು ಜನರಿಗೆ ರಾಜಕೀಯ ತರಬೇತಿಯು ದೊರೆಯಬೇಕು. ಇದರಿಂದ ಅವರಲ್ಲಿ ರಾಜಕೀಯ ಪ್ರಜ್ಞೆ ಬೆಳೆಯಲು ಸಾಧ್ಯವಾಗಬಹುದು. ಪ್ರಜಾಪ್ರಭುತ್ವದ ತಿಳುವಳಿಕೆ ರಾಜಕೀಯವಾಗಿ ಭಾಗವಹಿಸುವುದು, ನಿರ್ಧಾರಗಳನ್ನು ಕೈಗೊಳ್ಳುವಿಕೆಯಲ್ಲಿ ಪಾತ್ರವಹಿಸುವುದು. ಮತ ಚಲಾಯಿಸುವುದರ ಪ್ರಾಮುಖ್ಯತೆಗಳನ್ನು ಗ್ರಹಿಸುವುದರ ಮೂಲಕ ರಾಜಕೀಯವಾಗಿ ಇವರು ಸಶಕ್ತರಾಗಲು ಪ್ರಯತ್ನಿಸ ಬಹುದಾಗಿದೆ.

ಇಂದು ಕಾಲೋನಿಯಲ್ಲಿನ ಹಕ್ಕಿಪಿಕ್ಕಿ ಸಮುದಾಯದವರು ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಆದರೆ ಸಕ್ರಿಯ ರಾಜಕೀಯದಲ್ಲಿ ಕಾಲೋನಿಯ ಯಾರೂ ಬೆಳೆದಿಲ್ಲ. ಸುತ್ತಮುತ್ತಲಿನ ಅನ್ಯ ಪ್ರಬಲ ಸಮುದಾಯದವರು ಸಂಘಟಿತವಾದ ಈ ಜನರಲ್ಲಿ ಬಿರುಕಿನ ಗುಂಪುಗಳಾಗಿ ಮಾರ್ಪಡಿಸಿ ತಮ್ಮ ಆಶಯಗಳನ್ನು ಈಡೇರಿಸಿಕೊಳ್ಳಲೂ ಸಹ ವಿಫಲರಾಗುವಂತೆ ಮಾಡಿದ್ದಾರೆ. ರಾಜಕೀಯ ಪ್ರವೇಶದ ಹಕ್ಕು ಸಂವಿಧಾನದಿಂದ ದೊರೆಯುತ್ತಿದ್ದರೂ ಕಾಲೋನಿಯ ಜನರಿಗೆ ಇನ್ನು ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ವಿಫಲವಾಗಿರುವುದು ಕಾಣಬಹುದು.

ಕಂಪ್ಲಿ ಪುರಸಭೆ ಚುನಾವಣೆಗಳಿಗೆ ಈ ಹಿಂದೆ ಈ ಕಾಲೋನಿಯಿಂದ ಅಂಜಿನಮ್ಮ ಎಂಬುವರು ಸ್ಪರ್ಧಿಸಿ ಸೋತಿದ್ದರು. ನಂತರ ಶ್ರೀಕಾಂತ್ ಎಂಬುವರು ೨೦೧೩ರಲ್ಲಿ ನಡೆದ ಕಂಪ್ಲಿ ಪುರಸಭೆ ಚುನಾವಣೆಗೆ ಸ್ಪರ್ಧಿಸಿದ್ದರು. ಆದರೆ ಅಲ್ಪಸಂಖ್ಯಾತರಾದ ಇವರು ಚುನಾವಣೆಗಳಲ್ಲಿ ಗೆಲ್ಲುತ್ತಿಲ್ಲ. ಅಲ್ಲದೇ ತಮ್ಮ ಸಮುದಾಯದವರಲ್ಲಿ ಸಂಘಟಿತ ಮನೋಭಾವನೆ ಇಲ್ಲದಿರುವುದು ಸಹ ಸೋಲಿಗೆ ಕಾರಣ ಎಂದು ಶ್ರೀಕಾಂತ್ ಅವರು ಹೇಳುತ್ತಾರೆ. ಯಾವ ಪಕ್ಷದವರು ಹೆಚ್ಚು ಕುಡಿಸುತ್ತಾರೋ ಅವರಿಗೆ ಮತ ನೀಡುತ್ತಾರೆ. ವ್ಯಕ್ತಿಗೆ, ಸಮುದಾಯಕ್ಕೆ, ಪಕ್ಷಕ್ಕೆ ಇವರು ಗಮನ ಕೊಡುವುದಿಲ್ಲ. ಇವರ ದಡ್ಡತನವನ್ನು ಸ್ಥಳೀಯ ನಾಯಕರುಗಳು ತಮಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದಾರೆ. ನಮ್ಮ

ಸಂವಿಧಾನ ಎಸ್.ಸಿ., ಎಸ್.ಟಿ., ಗಳಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಮೀಸಲಾತಿ ನೀಡಿದ್ದರೂ ಸಹ ಇವರು ಸ್ಪರ್ಧಿಸುತ್ತಿಲ್ಲ. ಕಾರಣ ಶಿಕ್ಷಣದ ಕೊರತೆ, ಹಣದ ಕೊರತೆ, ಅಲ್ಲದೆ ಕನಿಷ್ಠ ರಾಜಕೀಯ ಜ್ಞಾನ ಇಲ್ಲದಿರುವುದೇ ಕಾರಣ.

ಕಾಲೋನಿಯಲ್ಲಿ ಇತ್ತೀಚೆಗೆ ಆಧುನಿಕತೆಯ ಸ್ಪರ್ಷಕ್ಕೆ ಒಳಗಾದ ಯುವಜನತೆ ರಾಜಕೀಯದಲ್ಲಿ ದುಮುಕಲು ಯತ್ನಿಸುತ್ತಿದ್ದಾರೆ. ಆದರೆ ಅಲ್ಲಿನ ಜನತೆ ಅಲ್ಪಸಂಖ್ಯಾತ, ಹಿಂದುಳಿದ ಸಮುದಾಯದವರಾದ ಇವರನ್ನು ಕೇವಲ ಮತದಾರರನ್ನಾಗಿ ಮಾಡಲು ಯತ್ನಿಸುತ್ತಿವೆ. ತಮ್ಮ ಸಮುದಾಯದ ಸುಶಿಕ್ಷಿತ ಶ್ರೀಕಾಂತ್, ಅಂಜಿನಮ್ಮ ನವರಂಥವರನ್ನು ಚುನಾವಣೆಗಳಲ್ಲಿ ಗೆಲ್ಲಿಸಿ ತಮ್ಮ ಸಮುದಾಯವನ್ನು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಬೆಳೆಸುವ ಕೆಲಸ ನಡೆಯಬೇಕಿದೆ. ಹೊಸಪೇಟೆಯ ಸುತ್ತಮುತ್ತಲ ಹಳ್ಳಿಗಳಲ್ಲಿ ವಾಸಿಸುತ್ತಿರುವ ಹಕ್ಕಿಪಿಕ್ಕಿ ಸಮುದಾಯದವರಿಗೆ ಹೋಲಿಸಿದರೆ ಕಂಪ್ಲಿಯಲ್ಲಿನ ಹಕ್ಕಿಪಿಕ್ಕಿಯರು ಸ್ವಲ್ಪ ರಾಜಕೀಯವಾಗಿ ಬೆಳೆಯುತ್ತಿರುವುದು ಕಂಡುಬರುತ್ತದೆ. ಕಾರಣ ಪಟ್ಟಣ ಪ್ರದೇಶದಲ್ಲಿ ಶಾಶ್ವತವಾಗಿ ಒಂದೆಡೆ ನೆಲೆನಿಂತು ಜೀವನ ಸಾಗಿಸುತ್ತಿರುವುದು. ಇದರಿಂದ ಆಧುನಿಕತೆ ಒದಗಿಸುತ್ತಿರುವ ಎಲ್ಲಾ ಅವಕಾಶಗಳನ್ನು ಪಡೆದುಕೊಳ್ಳುವಲ್ಲಿ ಈ ಸಮುದಾಯ ಮುಂದಾಗುತ್ತಿದೆ.

೩.೭. ಆರ್ಥಿಕ ಸ್ಥಿತಿಗತಿ

ಈ ಹಿಂದೆ ಬುಡಕಟ್ಟು ಜನರು ತಮ್ಮ ಆರ್ಥಿಕ ವ್ಯವಹಾರವನ್ನು ವಸ್ತುವಿನಿಮಯದ ಮೂಲಕ ನಡೆಸುತ್ತಿದ್ದರು. "ಇಡೀ ಜಗತ್ತಿನಲ್ಲಿ ಕೃಷಿಕರನ್ನು ಬಿಟ್ಟರೆ ತಮ್ಮ ಸಾಂಪ್ರದಾಯಿಕ ಆರ್ಥಿಕ ಮೂಲಗಳನ್ನು ಉಳಿಸಿಕೊಂಡು ಬಂದವರೆಂದರೆ ಅಲೆಮಾರಿಗಳು ಮಾತ್ರ"[9] ಅಲೆಮಾರಿ ಸಮುದಾಯವಾದ ಹಕ್ಕಿಪಿಕ್ಕಿಯರು ಬೇಟೆಯನ್ನೇ ತಮ್ಮ ಆರ್ಥಿಕ ಮೂಲವನ್ನಾಗಿಸಿಕೊಂಡು ಬದುಕುತ್ತಿದ್ದ ಜನ. ಬೇಟೆಯ ಜೊತೆಗೆ ಕಾಡಿನಲ್ಲಿ ಸಿಗುವ ಗಿಡಮೂಲಿಕೆ, ಪ್ರಾಣಿಪಕ್ಷಿಗಳ ರಕ್ತ ಮತ್ತು ಕೊಬ್ಬಿನಿಂದ ಕೆಲವು ಕಾಯಿಲೆಗಳಿಗೆ ಮದ್ದು ಮಾಡಿ ಕೊಡುತ್ತಿದ್ದರು. ಹೀಗೆ ಬೇಟೆ ಮತ್ತು ಅರಣ್ಯ ಉತ್ಪನ್ನಗಳನ್ನೇ ತಮ್ಮ ಜೀವನಕ್ಕೆ ದಾರಿಯನ್ನಾಗಿಸಿಕೊಂಡಿದ್ದ ಹಕ್ಕಿಪಿಕ್ಕಿಯರು ೧೯೬೩ರ ಅರಣ್ಯನೀತಿ ಕಾಯ್ದೆಯಿಂದ ಕಾಡನ್ನು ಬಿಟ್ಟು ನಾಡುಸೇರುವಂತಾಯಿತು. ಬೇಟೆಯನ್ನು ಬಿಟ್ಟರೆ ಬೇರೆ ಉದ್ಯೋಗ ತಿಳಿಯದ ಹಕ್ಕಿಪಿಕ್ಕಿಯರು ಆಧುನಿಕತೆ ಒದಗಿಸುವ ಹಲವಾರು ಉದ್ಯೋಗಾವಕಾಶಗಳನ್ನು ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ.

ಕನಿಷ್ಠ ಶಿಕ್ಷಣದಿಂದ ವಂಚಿತರಾದ ಈ ಕಾಲೋನಿಯ ಜನರು ಆಧುನಿಕ ಸಂದರ್ಭದಲ್ಲಿ ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಯಾವುದೇ ಒಂದು ಸಮುದಾಯ ಸಮಾಜದ ಮುಖ್ಯವಾಹಿನಿಯ ಜೊತೆಗೆ ಮುಖಾಮುಖಿಯಾಗಿ ಸಮರ್ಥವಾದ ಬದುಕನ್ನು ನಡೆಸಬೇಕಾದರೆ ಆರ್ಥಿಕ ಮಟ್ಟದಲ್ಲಿ

---

೯. ಅಲೆಮಾರಿಗಳ ಸ್ಥಿತಿಗತಿ, ರಮೇಶ ಸ.ಚಿ., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೫, ಪು. ೮೯

ಸುಧಾರಣೆಯಾಗಬೇಕು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಾಲೋನಿಯಲ್ಲಿ ಗಮನಿಸಿದಂತೆ ಇವರ ಆರ್ಥಿಕ ಸ್ಥಿತಿ ಕೆಳಮಟ್ಟದಲ್ಲಿರುವುದು ಕಂಡುಬಂದಿತು. ಕುಟುಂಬದಲ್ಲಿ ಒಬ್ಬರಿಗಿಂತ ಹೆಚ್ಚು ಜನ ದುಡಿಯುವವರಿದ್ದರೂ ಸಹ ಅವರ ಆರ್ಥಿಕಮಟ್ಟ ಸುಧಾರಿಸಿಲ್ಲ. ಇದಕ್ಕೆ ಕಾರಣ ದುಡಿದುದ್ದನ್ನು ಕೂಡಿಡಬೇಕೆಂಬ ಆಲೋಚನೆ ಅವರಲ್ಲಿಲ್ಲದಿರುವುದು. ಕಾಲೋನಿಯ ಜನರು ತಮ್ಮ ಜೀವನ ನಿರ್ವಹಣೆಗೆ ಹೆಚ್ಚಾಗಿ ಕೃಷಿಕೂಲಿ ಕೆಲಸವನ್ನೇ ಅವಲಂಬಿಸಿದ್ದಾರೆ. ಗಾರೆಕೆಲಸ, ಆಟೋಚಾಲಕರಾಗಿ, ದಿನಗೂಲಿಗಳಾಗಿ ವಿವಿಧ ರೀತಿಯ ಕೆಲಸಗಳನ್ನು ಮಾಡಿ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕೆಲವರು ಕಲಾತಂಡಗಳನ್ನು ರಚಿಸಿಕೊಂಡು ತಮ್ಮ ನೃತ್ಯಕಲೆಗಳನ್ನು ಸರ್ಕಾರಿ ಕಾರ್ಯಕ್ರಮಗಳಲ್ಲಿ ಹಬ್ಬ, ಜಾತ್ರೆ, ಉತ್ಸವ ಇತರ ಕಾರ್ಯಕ್ರಮಗಳಲ್ಲಿ ಪ್ರದರ್ಶಿಸಿ ಹಣ ಪಡೆಯುತ್ತಿದ್ದಾರೆ.

ಹಲವಾರು ಕುಟುಂಬಗಳು ತಿಂಗಳಾನುಗಟ್ಟಲೆ ಹೊಲಗದ್ದೆ, ತೋಟಗಳ ಕಾವಲು ಕಾಯಲು ಹೋಗುತ್ತಾರೆ. ಗಿರಿಜಮ್ಮ (೫೫) ಗಂಡ ಕಸ್ತೂರಿ (೬೫) ಈ ದಂಪತಿಗಳನ್ನು ಸಂದರ್ಶಿಸಿ ನಿಮ್ಮ ಜೀವನಕ್ಕೆ ಏನು ಮಾಡಿಕೊಂಡಿದ್ದೀರಿ ಎಂದು ಕೇಳಿದರೆ ಗಿರಿಜಮ್ಮ ಹೇಳಿದ್ದು ಹೀಗೆ, "ನಮಗೆ ಇದ್ದ ಇಬ್ಬರು ಹೆಣ್ಣುಮಕ್ಕಳನ್ನು ಮದುವೆಮಾಡಿಕೊಟ್ಟಿದ್ದೇವೆ. ಈಗ ಗಂಡ ಹೆಂಡತಿ ಪ್ರತ್ಯೇಕವಾಗಿ ಜೀವಿಸುತ್ತಿದ್ದೇವೆ. ನಾವು ಬೇರೆಯವರ ಹೊಲಗದ್ದೆಗಳನ್ನು ಕಾಯಲು ಹೋಗುತ್ತೇವೆ. ಒಂದು ಬೆಳೆ ನಾಟಿಯಾದಾಗಿನಿಂದ ಕಟಾವು ಮಾಡುವವರೆಗೆ ನಾವು ಅಲ್ಲೆ ಇರುತ್ತೇವೆ. ಈ ಕೆಲಸಕ್ಕೆ ಕೂಲಿಯಾಗಿ ತಿಂಗಳಿಗೆ ತಲಾ ಮೂರು ಸಾವಿರ ಕೊಡುತ್ತಾರೆ. ಅಲ್ಲದೆ ಹಗಲಿನಲ್ಲಿ ಅವರದೇ ಹೊಲಗಳಿಗೆ ಕೂಲಿ ಕೆಲಸಕ್ಕೆ ಹೊಗುತ್ತೇವೆ. ಇದಕ್ಕೆ ದಿನಕ್ಕೆ ೧೦೦ ರೂ. ಕೂಲಿ ಸಿಗುತ್ತದೆ. ಹೀಗೆ ಬೆಳೆ ಕಟಾವು ಆಗುವವರೆಗೆ ಇದ್ದು ನಂತರ ಕಾಲೋನಿಗೆ ಬರುತ್ತೇವೆ. ಮತ್ತೆ ಮತ್ತೊಂದು ಬೆಳೆಗೆ ಕಾವಲು ಕೆಲಸಕ್ಕೆ ಯಾರಾದರೂ ಕರೆಯುವವರೆಗೆ ಆ ಹಣವನ್ನು ಬಳಸುತ್ತಾ ಜೀವನ ಸಾಗಿಸುತ್ತೇವೆ ಎನ್ನುತ್ತಾರೆ".(ಗಿರಿಜಮ್ಮ, ೫೮ ಕಂಪ್ಲಿ)

ಕೆಲವು ಮಹಿಳೆಯರು ಮನೆ ಕೆಲಸಗಳಿಗೆ ಹೋಗುತ್ತಿದ್ದಾರೆ. ಆದರೆ ಇಲ್ಲಿ ಗಮನಿಸಬೇಕಾದ ಅತಿಮುಖ್ಯ ಅಂಶವೆಂದರೆ ಹೊಟ್ಟೆಪಾಡಿಗಾಗಿ ಮನೆಕೆಲಸಗಳಿಗೆ ಹೊದರು ಸಹ ಅಲ್ಲಿ ಬಟ್ಟೆಗಳನ್ನು ಮಾತ್ರ ತೊಳೆಯುವುದಿಲ್ಲ, ಬಂಡೆ ತೊಳೆಯುವುದು, ಪಾತ್ರೆ ಬೆಳಗುವುದು, ನೀರು ತರುವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆಯೇ ವಿನಹ ಬಟ್ಟೆಗಳನ್ನು ಮಾತ್ರ ತೊಳೆಯುವುದಿಲ್ಲ. ಈ ಕೆಲಸವನ್ನು ಇವರು ತುಂಬಾ ಕೀಳು ಕೆಲಸವೆಂದು ಭಾವಿಸುತ್ತಾರೆ. ಪ್ರಸ್ತುತ ಕಾಲೋನಿಯವರು ಅನುಸರಿಸುತ್ತಿರುವ ಯಾವುದೇ ಕೆಲಸಗಳು ಅವರಿಗೆ ಶಾಶ್ವತ ಆರ್ಥಿಕ ಭದ್ರತೆಯನ್ನು ಒದಗಿಸುವಂತವುಗಳಲ್ಲ. ಈ ಸಮುದಾಯಕ್ಕೆ ಶಾಶ್ವತ ಆರ್ಥಿಕ ಭದ್ರತೆ ಒದಗಿಸುವ ಮತ್ತು ಅವರ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುವ ಸಂಪತ್ತೆಂದರೆ ಅದು ಆಸ್ತಿ. ಆದಿವಾಸಿ ಬುಡಕಟ್ಟು ಸಮುದಾಯಗಳು ಭೂಮಿಯ ಸಂಬಂಧಗಳನ್ನು ತನ್ನ ಸೃಷ್ಟಿಪುರಾಣದ ಐತಿಹಾಸಿಕ ಮತ್ತು ಪೌರಾಣಿಕ ಕಥೆಗಳಲ್ಲೂ ಕಟ್ಟಿಕೊಂಡು ಬಂದಿವೆ. ಭೂಮಿಯು ಸಮುದಾಯದ ಒಟ್ಟು ಆಶಯಗಳನ್ನು ಪ್ರತಿನಿಧಿಸುತ್ತದೆ. ಹಾಗಾಗಿ ಭೂಮಿ

ಎಂದರೆ ಒಂದು ಪಾರಂಪರಿಕ ಸಂಪನ್ಮೂಲ ಎಂದೇ ನಮಗೆ ಭಾಸವಾಗುತ್ತದೆ. ಇನ್ನು ಹಕ್ಕಿಪಿಕ್ಕಿಯಂತಹ ಬುಡಕಟ್ಟು ಸಮುದಾಯಗಳಿಗೆ ಭೂಮಿಯ ಕಲ್ಪನೆಯೇ ಬೇರೆಯಾಗಿದೆ. ಭೂಮಿ ಆರ್ಥಿಕಭದ್ರತೆಯನ್ನು ಒದಗಿಸುವ ಗಣಿಯೂ ಆಗಿದೆ.

ಕಾಲೋನಿಯ ಬಹುತೇಕ ಜನರು ಆಸ್ತಿಯನ್ನು ಹೊಂದುವಲ್ಲಿ ವಿಫಲರಾಗಿದ್ದಾರೆ. ಕಂಪ್ಲಿಗೆ ವಲಸೆ ಬಂದು ನೆಲೆಸಿರುವ ಇವರ ಪೂರ್ವಿಕರು ಹಲವು ಕಾಲ ಸುಗ್ಗೇನಹಳ್ಳಿಯಲ್ಲಿ ನೆಲೆಸಿದ್ದರು. ಆಗ ಅಲ್ಲಿ ೧೯೦೮ರಲ್ಲಿ ಲಾಳಗೊಂಡರ ಗುರುಬಸವನಗೌಡರಿಂದ ೭ ಎಕರೆ ೬೧ ಸೆಂಟ್ಸ್ ಜಮೀನು ಪಡೆದಿದ್ದರು. ಅಲ್ಲದೆ ಅಲ್ಲಿ ಕೃಷಿ ಮಾಡಿಕೊಂಡು ಉತ್ತಮ ಜೀವನ ಸಾಗಿಸುತ್ತಿದ್ದರು. ಅನಕ್ಷರಸ್ಥರಾದ ಇವರ ಹಿರಿಯರು ಅಂದಿನ ತಮ್ಮ ಆಸ್ತಿಯನ್ನು ತಮ್ಮ ತಮ್ಮ ಹೆಸರುಗಳಲ್ಲಿ ಕ್ರಯಪತ್ರ ಮಾಡಿಸಿಕೊಳ್ಳದೆ ಹೋದರು. ಅಲ್ಲದೆ ಇವರನ್ನು ಅಲ್ಲಿಂದ ಬಲವಂತವಾಗಿ ಒಕ್ಕಲೆಬ್ಬಿಸಿ ಇಂದು ಇವರ ಜಮೀನಿನಲ್ಲಿ ಬೇರೆ ಪ್ರಬಲ ಸಮುದಾಯದವರು ವ್ಯವಸಾಯ ಮಾಡುತ್ತಿದ್ದಾರೆ. ಇಂದು ಕಾಲೋನಿಯ ಕೆಲವೇ ಕೆಲವು ಕುಟುಂಬಗಳು ಮಾತ್ರ ಆಸ್ತಿಯನ್ನು ಹೊಂದಿವೆಯಾದರೂ ಅಲ್ಲಿ ಕೃಷಿ ಮಾಡುತ್ತಿಲ್ಲ.

ಆರ್ಥಿಕ ಭದ್ರತೆ ಇಲ್ಲದ ಹಲವು ವೃತ್ತಿಗಳನ್ನು ಅನುಸರಿಸುವ ಜನರು ಇಂದು ಬೆಸತ್ತು ತಮ್ಮ ಆಸ್ತಿಯನ್ನು ಮತ್ತೆ ಪಡೆಯಲು ಹಾಗೂ ಕೃಷಿ ಮಾಡಬೇಕೆಂಬ ಆಶಯದಿಂದ ತಮ್ಮ ಆಸ್ತಿಗಾಗಿ ಹೋರಾಟಕ್ಕಿಳಿದಿದ್ದಾರೆ. ಕೋರ್ಟ್ ಕಚೇರಿಗಳ ಮೋರೆ ಹೋಗಿದ್ದಾರೆ. ಕಾಲೋನಿಯ ಒಬ್ಬಿಬ್ಬರು ಹಂದಿ, ಮೇಕೆಗಳಂತಹ ಪಶುಪಾಲನೆಯಲ್ಲಿ ತೊಡಗಿದ್ದಾರೆ. ಉಳಿದಂತೆ ಎಲ್ಲರೂ ವಿವಿಧ ವೃತ್ತಿಗಳನ್ನು ಮಾಡಿ ಜೀವನಸಾಗಿಸುತ್ತಿದ್ದಾರೆ. ನಮ್ಮ ಜಮೀನು ನಮಗೆ ದೊರೆತರೆ ಸಂತೋಷದಿಂದ ವ್ಯವಸಾಯ ಮಾಡಿಕೊಂಡು ಜೀವಿಸುತ್ತೇವೆ ಎನ್ನುತ್ತಾರೆ.


ಇವರಲ್ಲಿ ಜೀತಪದ್ಧತಿ ಕಂಡುಬರುವುದಿಲ್ಲ. ಅನೇಕ ಬುಡಕಟ್ಟುಗಳು ಸಮಾಜದಲ್ಲಿ ಉತ್ತಮ ಸ್ಥಾನ ಪಡೆಯಲು ಅನ್ಯ ಧರ್ಮಕ್ಕೆ ಮತಾಂತರಗೊಳ್ಳುತ್ತಿವೆ. ಆದರೆ ಕಾಲೋನಿಯ ಹಕ್ಕಿಪಿಕ್ಕಿಯರು ಮಾತ್ರ ಸಮಾಜದ ಇತರ ಸಮುದಾಯದವರು ತಮ್ಮನ್ನು ಎಷ್ಟೇ ಅಲಕ್ಷ್ಯದಿಂದ ಕಂಡರೂ ಸಹ ಆಧುನಿಕತೆಯ ಲಾಭ ಪಡೆದು ಅನ್ಯ ಸಮುದಾಯದವರೊಂದಿಗೆ ಹೊಂದಿಕೊಳ್ಳುವಲ್ಲಿ ಪ್ರಯತ್ನಿಸುತ್ತಿದ್ದಾರೆಯೇ ಹೊರತು ಮತಾಂತರಗೊಳ್ಳುತ್ತಿಲ್ಲ. ಇವರು ಮತಾಂತರವನ್ನು ವಿರೋಧಿಸುತ್ತಾರೆ.

ಕಾಲೋನಿಯ ಬಹುತೇಕ ಜನರು ತಮ್ಮ ಜೀವನ ನಿರ್ವಹಣೆಗೆ ಕೃಷಿಕೂಲಿಯನ್ನು ಅನುಸರಿಸಿದ್ದಾರೆ. ಅಲ್ಲದೆ ಇತರೇ ಕೆಲಸಗಳನ್ನು ಮಾಡುವವರು ಸಹ ಕಾಲೋನಿಯಲ್ಲಿದ್ದಾರೆ ಇವರು ಅನುಸರಿಸುವ ಕೆಲಸಗಳು ಮತ್ತು ಶೇಕಡವಾರು ಪ್ರಮಾಣಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ: ೪. ಹಕ್ಕಿಪಿಕ್ಕಿಯರ ಬೆಡಗುವಾರು, ಲಿಂಗವಾರು ಕಸುಬುಗಳು

ಕಸುಬುಗಳು	ಇಕೋತಿಯಾ			ಕೊರಬಿಯಾ			ಬೋಡಿಯಾರ			ಪಿಂಪಳಜಾ			ಸಾವಂಡಿಯಾ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಕೃಷಿಕೂಲಿ	೬	೭	೧೨	೪೩	೬೩	೧೦೬	೧೮	೨೭	೪೫	೬	೧೧	೧೭	೨೮	೪೬	೭೪
ಧಾರ್ಮಿಕ ಭಿಕ್ಷಾಟನೆ		೨	೨	೨	೩	೫		೧	೧		೨	೨			
ದಿನಗೂಲಿ				೩		೩	೧		೧						
ಗಾರೆಕೆಲಸ				೨೨	೧	೨೩	೮		೮	೨		೨	೧೨		೧೨
ಹಂದಿ ಸಾಕಣಿಕೆ							೧	೧	೨						
ಸರ್ಕಾರಿ							೨		೨				೧		೧
ತಾತ್ಕಾಲಿಕ	೧		೧												
ಇತರೆ					೧	೧									
Total	೭	೯	೧೫	೭೦	೬೮	೧೩೮	೩೦	೨೯	೫೯	೮	೧೩	೨೧	೪೧	೪೬	೮೭

ಕೋಷ್ಟಕ: ೨. ಹಕ್ಕಿಪಿಕ್ಕಿಯರ ಕಸುಬುಗಳ ಪ್ರಮಾಣ



ಅಧ್ಯಾಯ ೪

ಕಂಪ್ಲಿ ಹಕ್ಕಿಪಿಕ್ಕಿಯರ ಆಚರಣೆ ಹಾಗೂ ಸಂಪ್ರದಾಯಗಳು

೪.೧. ಜಾತ್ರೆ-ಉತ್ಸವ ಹಾಗೂ ಹಬ್ಬ ಹರಿದಿನಗಳು

೪.೨. ಜನಪದ ಕಲೆ ಹಾಗೂ ಸಂಪ್ರದಾಯಗಳು

ಅಧ್ಯಾಯ ನಾಲ್ಕು

ಕಂಪ್ಲಿ ಹಕ್ಕಿಪಿಕ್ಕಿಯರ ಆಚರಣೆ ಹಾಗೂ ಸಂಪ್ರದಾಯಗಳು

ಹಕ್ಕಿಪಿಕ್ಕಿ ಸಮುದಾಯದವರು ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ. ಜೊತೆಗೆ ತಮ್ಮದೇ ಆದ ವಿಶಿಷ್ಟ ಜಾತ್ರಾಮಹೋತ್ಸವಗಳನ್ನು ನೆರವೇರಿಸುತ್ತಾರೆ. ವೈಯಕ್ತಿಕವಾಗಿ ಕೆಲವೊಂದು ಕುಟುಂಬಗಳು ಅಥವಾ ಕೆಲವು ಬೆಡಗುಗಳು ಮಾತ್ರ ಆಚರಿಸುವ ಹಬ್ಬಗಳು ಕೆಲವಾದರೆ, ಸಮುದಾಯದ ಎಲ್ಲಾ ಜನರು ಒಟ್ಟಿಗೆ ಸೇರಿ ಆಚರಿಸುವ ಕೆಲವು ಜಾತ್ರೆಗಳಿವೆ. ಈ ಸಂಪ್ರದಾಯಗಳನ್ನು ಇವರು ಬಹು ಹಿಂದಿನಿಂದಲೂ ರೂಢಿಸಿಕೊಂಡು ಬಂದಿದ್ದಾರೆ. "ಒಂದು ಸಾಮಾಜಿಕ ವರ್ಗ ಪರಂಪರಾನುಗತವಾಗಿ ಅನುಸರಿಸುತ್ತಾ ಬಂದಿರುವ ಕ್ರಿಯಾ ವಿನ್ಯಾಸವನ್ನು ಸಂಪ್ರದಾಯ (Custom) ಎಂದು ಕರೆಯಬಹುದು. ಒಬ್ಬ ವ್ಯಕ್ತಿಯ ಅಭ್ಯಾಸ ಸಂಪ್ರದಾಯ ಎನಿಸಿಕೊಳ್ಳುವುದಿಲ್ಲ. ಅಂದರೆ ಸಂಪ್ರದಾಯ ಎನ್ನುವುದು ವೈಯಕ್ತಿಕವಾದುದಲ್ಲ, ಸಾಮೂಹಿಕವಾದುದು. ಜನರು ಮಾಡುವುದು ಏನು ಎಂಬುದನ್ನು ತಿಳಿಸುವುದೇ ಸಂಪ್ರದಾಯ, ಅದನ್ನು ಏಕೆ ಮಾಡಬೇಕೆಂದು ಅವರು ತಿಳಿದಿದ್ದಾರೋ ಅದೇ ನಂಬಿಕೆ ಅಥವಾ ಜನರು ಏನು ಮಾಡುತ್ತಾರೆ ಎಂಬುದನ್ನು ತಿಳಿಸುವುದು ಸಂಪ್ರದಾಯ".[೧] ಆಚರಣೆ ಸಂಪ್ರದಾಯವೆಂಬುದು ಪ್ರತಿಯೊಂದು ಸಮುದಾಯದಲ್ಲೂ ರೂಢಿಯಲ್ಲಿದ್ದರೂ, ಅವುಗಳಿಗೆ ತಮ್ಮದೇ ಆದ ವಿಶಿಷ್ಟತೆ ಇರುತ್ತದೆ. ಒಂದು ಸಮುದಾಯದ ಸಂಪ್ರದಾಯಕ್ಕೂ ಮತ್ತೊಂದು ಸಮುದಾಯದ ಸಂಪ್ರದಾಯಕ್ಕೂ ಸಾಕಷ್ಟು ವ್ಯತ್ಯಾಸವಿರುತ್ತದೆ.

---

೧. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಶಂಕರನಾರಾಯಣ ತಿ.ನಂ., ೧೯೮೨, ಪು. ೧೨೭

ಹಕ್ಕಿಪಿಕ್ಕಿ ಸಮುದಾಯವು ತನ್ನದೇ ಆದ ವಿಶಿಷ್ಟ ಸಂಪ್ರದಾಯವನ್ನು ಹೊಂದಿದ್ದು, ಅವರ ಹಬ್ಬ ಆಚರಣೆಗಳಲ್ಲಿ ತುಂಬಾ ವೈಶಿಷ್ಟ್ಯತೆಯನ್ನು ಕಾಣಬಹುದು. ಇವರು ಇಂದು ಇತರ ಸಮುದಾಯದವರು ಆಚರಿಸುವ ಎಲ್ಲಾ ಹಬ್ಬಗಳನ್ನು ಆಚರಿಸುವುದರ ಜೊತೆಗೆ ತಮ್ಮ ಸಮುದಾಯದವರಷ್ಟೇ ಅನ್ಯ ಸಮುದಾಯದವರ ಹಬ್ಬಗಳಿಗಿಂತ ಭಿನ್ನವಾದ, ತಮ್ಮ ಪರಂಪರೆ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಹಬ್ಬಗಳನ್ನು ಆಚರಿಸುತ್ತಾರೆ.

ಹಕ್ಕಿಪಿಕ್ಕಿಯರು ಆರಾಧಿಸುವ ದೈವಗಳು

ಹಕ್ಕಿಪಿಕ್ಕಿ ಸಮುದಾಯದವರ ಹಬ್ಬ, ಜಾತ್ರೆ ಹಾಗೂ ಆಚರಣೆಗಳನ್ನು ನೋಡುವುದಾದರೆ ಮೊದಲು ಅವರು ಆರಾಧಿಸುವ ದೈವಗಳ ಬಗ್ಗೆ ತಿಳಿಯುವುದು ಸೂಕ್ತ. ಸಾಮಾನ್ಯವಾಗಿ ಹಕ್ಕಿಪಿಕ್ಕಿಯರು ಮಾತೃದೇವತಾ ಆರಾಧಕರು ಹಾಗೂ ಕೆಲವು ಪಿತೃದೈವಗಳನ್ನು ಸಹ ಪೂಜಿಸುವವರಾಗಿದ್ದಾರೆ. ಡೋಮೆನಿಕ್ ಎಂಬುವರು ಜಾಗತೀಕರಣದ ಸಂದರ್ಭದಲ್ಲಿ ದೇವರುಗಳ ಕುರಿತು ಹೇಳುವಂತೆ,

"ದೇವರು ಶ್ರೀಮಂತರಿಗೆ ಸುಖಭೋಗ
ದೇವರು ಮಧ್ಯಮ ವರ್ಗದವರಿಗೆ ಒಂದು ಸರಕು
ದೇವರು ಬಡವರಿಗೆ ಒಂದು ಜೀವನೋಪಾಯ"[೨]

ಎಂಬ ಮಾತಿನಲ್ಲಿ ದೇವರು ಬಡವರಿಗೆ ಅಂದರೆ ಬುಡಕಟ್ಟು ಜನರಿಗೆ ಜೀವನವೇ ಆಗಿದ್ದು, ಅವರು ತಮ್ಮ ದೈವಗಳನ್ನು ಅಪಾರ ಭಯ ಭಕ್ತಿಯಿಂದ ಪೂಜಿಸುತ್ತಿದ್ದಾರೆ. ಸಾಮಾನ್ಯವಾಗಿ ಹಕ್ಕಿಪಿಕ್ಕಿ ಸಮುದಾಯದವರು ಮಾತೃ ಮೂಲ ದೈವಗಳನ್ನು ಹೆಚ್ಚಾಗಿ ಆರಾಧಿಸುವವರಾಗಿದ್ದಾರೆ.

ಮಾತೃಮೂಲ ದೈವಗಳು

ಮಾರ್ಕ್ಸ್‌ವಾದಿ ಚಿಂತಕರು ಮಾತೃಪ್ರಧಾನತೆ ಎಂಬ ಸಂಕಥನವನ್ನು ರೂಪಿಸಿ ಅದಕ್ಕೆ ಒಂದು ತಾತ್ವಿಕ ಚೌಕಟ್ಟನ್ನು ಹಾಕಿದರು. ಅದಕ್ಕೂ ಮೊದಲು "ಲೂಯಿ ಎಚ್. ಮಾರ್ಗನ್ ಎಂಬ ಅಮೇರಿಕಾದ ವಿದ್ವಾಂಸ ತನ್ನ 'Ancient Societies' ಎಂಬ ಪುಸ್ತಕದಲ್ಲಿ ಮಾತೃಪ್ರಧಾನತೆಯನ್ನು ಕುರಿತು ಪ್ರಸ್ತಾಪಿಸುತ್ತಾರೆ".[೩] ಯಾವುದೇ ಬುಡಕಟ್ಟುಗಳ ಇಂದಿನ ಆಚರಣೆ, ಆರಾಧನಾ ದೈವಗಳನ್ನು ನೋಡಿದರೆ ಈ ಸಮುದಾಯಗಳಲ್ಲಿ ಹಿಂದಿನಿಂದಲೂ ಮಾತೃಪ್ರಧಾನತೆ ಇರುವುದು ಕಂಡುಬರುತ್ತದೆ. ಅಲ್ಲದೇ ಯಾವುದೇ ಬುಡಕಟ್ಟುಗಳ ಸೃಷ್ಟಿ ಪುರಾಣಗಳನ್ನು ತೆಗೆದುಕೊಂಡರೂ ಅವರ ಸೃಷ್ಟಿಯು ಮಹಿಳೆ ಇಲ್ಲವೇ ಮಣ್ಣಿನಿಂದಲೇ ಆಗಿರುವುದು ತಿಳಿದುಬರುತ್ತದೆ. ಹಾಗೆಯೇ ಹಕ್ಕಿಪಿಕ್ಕಿ ಸಮುದಾಯದ

---

೨. ಜಾಗತೀಕರಣ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು, ಡೋಮನಿಕ್, ಪು. ೨೭

೩. ಬುಡಕಟ್ಟು ಅಧ್ಯಯನ ಸಂಪುಟ ೫, ಕೇಶವನ್ ಪ್ರಸಾದ್ ಕೆ. ಮರಟ್ಟಿ, ಡಾ. ಗಂಗಾಧರ ದೈವಜ್ಞೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಪಿ, ೨೦೧೩, ಪು. ೪೨

ಸೃಷ್ಟಿಯೂ ಸಹ ಹೆಣ್ಣು, ಮಣ್ಣಿನಿಂದ ಆಗಿರುವ ಪುರಾಣ ಕಥೆಗಳಿವೆ. ಇಲ್ಲಿ ಹೆಣ್ಣು ಹಾಗೂ ಮಣ್ಣು ಎರಡೂ ಸಹ ಫಲವಂತಿಕೆಯ ಗುಣ ಇರುವಂತವುಗಳಾಗಿವೆ. ಇವರ ಸೃಷ್ಟಿಗೆ ಸಂಬಂಧಿಸಿದಂತೆ ರೂಢಿಯಲ್ಲಿರುವ ಕಥೆ ಎಂದರೆ ಒಮ್ಮೆ ಶಿವನು ಆಕಾಶದಲ್ಲಿ ಬೀಜ ಬಿತ್ತಿದನಂತೆ. ಆ ಬೀಜದಿಂದ ಒಬ್ಬ ಕನ್ಯೆ ಹುಟ್ಟಿ ಬಂದಳಂತೆ. ಆ ಕನ್ಯೆಯ ಬೆವರಿನಿಂದ ಒಂದು ಮಗು ಜನಿಸಿತು. ಆಗ ಕನ್ಯೆಗೆ ಲೈಂಗಿಕ ಬಯಕೆಯಾಗಿ ಆ ಬಾಲಕನನ್ನು ಪ್ರಚೋದಿಸಲು ಅವನು ತಿರಸ್ಕರಿಸುತ್ತಾನೆ. ನಂತರ ಅವಳು ಇನ್ನೊಂದು ಮಗುವಿಗೆ ಜನನ ಕೊಟ್ಟಳು. ಆ ಬಾಲಕನೂ ಸಹ ಅವಳ ಇಚ್ಛೆಯನ್ನು ತಿರಸ್ಕರಿಸಿದನು. ಕೊನೆಗೆ ಕೋಪಗೊಂಡು ಮೂರನೇ ಮಗುವಿಗೆ ಜನ್ಮಕೊಟ್ಟಳು. ಆ ಬಾಲಕನು ಅವಳ ಇಚ್ಛೆಯನ್ನು ಒಪ್ಪಿ ಇವರಿಬ್ಬರ ಲೈಂಗಿಕ ಸಂಬಂಧದ ಫಲವಾಗಿ ಹಕ್ಕಿಪಿಕ್ಕಿ ಸಮುದಾಯ ಸೃಷ್ಟಿಯಾಯಿತು ಎಂದು ಹೇಳಲಾಗುತ್ತದೆ. ಇಲ್ಲಿ ಮಹಿಳೆ ಮತ್ತು ಅವಳ ಮೈಯಲ್ಲಿನ ಮಣ್ಣಿನಿಂದ ಮನುಷ್ಯ ಸೃಷ್ಟಿಯಾದ ಬಗೆಯನ್ನು ಗಮನಿಸಬಹುದು. ಹಾಗಾಗಿ ಈ ಸಮುದಾಯದವರಿಗೆ ಮಹಿಳೆಯೆ ಪ್ರಮುಖವಾಗಿದ್ದು, ಇವರ ಎಲ್ಲಾ ಬೆಡಗಿನವರೂ ಮಾತೃ ಮೂಲ ದೈವಗಳನ್ನೇ ಆರಾಧಿಸುತ್ತಿದ್ದಾರೆ. ಕಂಪ್ಲಿ ಕಾಲೋನಿಯಲ್ಲಿನ ಹಕ್ಕಿಪಿಕ್ಕಿ ಸಮುದಾಯದವರಲ್ಲಿ ಆರು ಕುಲಗಳಿದ್ದು, ಆ ಕುಲಗಳನ್ನು ಕಾಯುವ ಕುಲದೇವತೆಗಳು ಮಾತೃದೈವಗಳಾಗಿವೆ. ಇವರ ಪ್ರಮುಖ ಮಾತೃ ದೈವಗಳೆಂದರೆ,

- ಸಾವಂಡಿಯಾ ಕುಲದವರ ಅಡ್ಡ ಹೆಸರು 'ಚಾವ್ಹಾಣ' ಎಂದು ಕರೆಯುವರು ಇವರ ಪ್ರಮುಖ ಕುಲದೈವ ಸರಕ್ ಸಾವಂಡಿಯಾ ದೇವಿ
- ಖ್ಟೋಡಿಯಾರ ಕುಲದವರ ಅಡ್ಡ ಹೆಸರು 'ಕಾಳೇ' ಎಂದು ಇವರ ಕುಲದೈವ **ಖೋಡಿಯಾರ್ ದೇವಿ**
- ಪಿಂಪಳಾಜಾ ಕುಲದವರನ್ನೂ ಸಹ 'ಕಾಳೇ' ಎಂಬ ಅಡ್ಡ ಹೆಸರಿನಿಂದ ಕರೆಯುವರು. ಇವರು ಉಳಿದ ಐದು ಬೆಡಗಿನವರಿಗಿಂತ ಶ್ರೇಷ್ಠ ಎಂದು ಹೇಳುತ್ತಾರೆ. ಇವರ ದೈವ **ಪಿಂಪಳಾದೇವಿ.**
- ಇಕೋತಿಯಾ ಕುಲದವರ ಅಡ್ಡ ಹೆಸರು 'ಪವಾರ್' ಇವರ ದೈವ **ಇಕೋತಿಯಾದೇವಿ.**
- ಕೊರಬಿಯಾ ಕುಲದವರ ಅಡ್ಡ ಹೆಸರು 'ರಾಠೋಡ್' ಮತ್ತು 'ಪವಾರ್' ಇವರ ಕುಲದೈವ **ಪಾರ್ಥನ್ ದೇವಿ** (ಗಂಗಮ್ಮ ದೇವಿ)
- ಹರ್‌ಖತಿಯಾ ಕುಲದವರನ್ನು 'ಭಾನುಡೋಕ್ರಿ', 'ಭಾನು' ಎಂತಲೂ ಕರೆಯುತ್ತಾರೆ. ಇವರ ಕುಲದೈವ **ಭಾನುದೇವಿ**ಯಾಗಿದ್ದಾಳೆ. ಹೀಗೆ ಹಕ್ಕಿಪಿಕ್ಕಿಯರು ಆರಾಧಿಸುವ ದೈವಗಳನ್ನು ಗಮನಿಸಿದರೆ ಖುದ್ಧಾ(ಶಿವ)ನನ್ನು ಬಿಟ್ಟರೆ ಉಳಿದಂತೆ ಮಾತೃದೇವತೆಗಳನ್ನೇ ತಮ್ಮ ಕುಲದೈವ ಮತ್ತು ಆರಾಧ್ಯ ದೈವಗಳನ್ನಾಗಿರಿಸಿಕೊಂಡಿರುವುದು ಕಂಡುಬರುತ್ತದೆ.

ಪಿತೃಮೂಲ ದೈವಗಳು

ಹಕ್ಕಿಪಿಕ್ಕಿಯರು ಸಾಮಾನ್ಯವಾಗಿ ಮಾತೃಮೂಲ ದೈವಗಳನ್ನೇ ಹೆಚ್ಚು ಶ್ರದ್ಧಾಭಕ್ತಿಯಿಂದ ಆರಾಧಿಸುತ್ತಾರೆ. ಆದರೂ ಸಹ ಖುದ್ಧಾ(ಶಿವ)ನನ್ನು ತಮ್ಮ ಎಲ್ಲಾ ಹಬ್ಬಗಳಲ್ಲೂ ಪೂಜಿಸುವುದುಂಟು. ಇವರ ಪ್ರಕಾರ ಶಿವನೂ ಸಹ ತಮ್ಮ ಸಮುದಾಯದ ಪ್ರಮುಖ ದೈವವಾಗಿದ್ದು ಇವರ ಸ್ತ್ರೀ ದೈವವಾದ ಜೊಡಿಲಾದೇವಿಯ ಮಗ ಖುದ್ಧಾ ಎಂಬ ನಂಬಿಕೆ ಇವರದ್ದು, ಆದ್ದರಿಂದ ತಮ್ಮ ಪ್ರತಿ ಹಬ್ಬಗಳಲ್ಲೂ ಖುದ್ಧಾನನ್ನು ಮಾತೃ ದೈವಗಳ ಜೊತೆಯಲ್ಲಿಯೇ ಅದರಲ್ಲೂ ಮೊದಲಿಗೆ ಪೂಜಿಸುವುದುಂಟು. ಮೊದಲು ಖುದ್ಧಾನಿಗೆ ಬಲಿ ಕೊಡುವುದನ್ನು ಪ್ರತಿ ಹಬ್ಬದಲ್ಲೂ ನೋಡಬಹುದಾಗಿದೆ. ಖುದ್ಧಾನನ್ನು ಬಿಟ್ಟರೆ ಬೇರೆ ಯಾವುದೇ ಪಿತೃದೈವಗನ್ನು ಅಷ್ಟಾಗಿ ಭಕ್ತಿಯಿಂದ ಆಚರಿಸದ ಇವರು ಇತ್ತೀಚೆಗೆ ಅನ್ಯ ಸಮುದಾಯದವರಂತೆ ಆಂಜನೇಯ ಸ್ವಾಮಿ, ಮಂಜುನಾಥ ಸ್ವಾಮಿ, ವೆಂಕಟೇಶ್ವರ ಸ್ವಾಮಿ ಹೀಗೆ ಹಲವು ಪಿತೃ ದೈವಗಳನ್ನು ಪೂಜಿಸುತ್ತಿದ್ದಾರೆ.

೪.೧ ಜಾತ್ರೆ ಉತ್ಸವ ಹಾಗೂ ಹಬ್ಬಹರಿದಿನಗಳು

ಜಾತ್ರೆ ಎಂಬ ಪದವು ಯಾತ್ರೆ ಎಂಬ ಸಂಸ್ಕೃತ ತದ್ಭವವಾಗಿದೆ ಎಂಬುದು ಡಾ. ಬರಗೂರು ರಾಮಚಂದ್ರಪ್ಪನವರ ಅಭಿಪ್ರಾಯವಾಗಿದೆ. ವಿಶಿಷ್ಟ ಸಂಸ್ಕೃತಿಯುಳ್ಳ ಹಕ್ಕಿಪಿಕ್ಕಿ ಸಮುದಾಯದವರು ತಮ್ಮ ತಮ್ಮಲ್ಲಿ ವೈಯಕ್ತಿಕವಾಗಿ ಆಚರಿಸುವ ಹಬ್ಬಗಳಲ್ಲದೇ ಎಲ್ಲರೂ ಒಟ್ಟುಗೂಡಿ ಸಾಮೂಹಿಕವಾಗಿ ಆಚರಿಸುವ ಜಾತ್ರೆಗಳೂ ಇವೆ. "ಅತ್ಯಂತ ಆಕರ್ಷಕವಾದ ಜನಪದೀಯ ಆಚರಣೆ ಜಾತ್ರೆ ಜಾತಿ ವರ್ಗಗಳ ಮೇಲು ಕೀಳು, ಮಡಿ ಮೈಲಿಗೆಯನ್ನು ಮೀರಿ ಜನಸಮುದಾಯ ಮತೀಯ ವಿಧಿಯಾಚರಣೆಯ ನೆಪದಲ್ಲಿ ದೈವವೊಂದರ ಸುತ್ತ ನಿರ್ದಿಷ್ಟ ದಿನಗಳಂದು ನೆರೆಯುವುದನ್ನು ಜಾತ್ರೆಯೆನ್ನಬಹುದು".[೪] ಹಕ್ಕಿಪಿಕ್ಕಿಯರು ತಮ್ಮ ಕಾಲೋನಿಯಲ್ಲಿ ಪ್ರತಿ ವರ್ಷ ಮಾಡುವ ಹಬ್ಬಗಳು ಕೆಲವಾದರೆ ಐದು ಅಥವಾ ಹತ್ತು ವರ್ಷಕ್ಕೊಮ್ಮೆ ಆಚರಿಸುವ ಹಬ್ಬಗಳೂ ಕೆಲವು ಇವೆ. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ನೆಲೆಸಿರುವ ಈ ಸಮುದಾಯದವರ ಅತಿಮುಖ್ಯ ಜಾತ್ರೆ ಎಂದರೆ ಗದುಗಿನ ದಂಡಿನ ದುರುಗಮ್ಮನ ಜಾತ್ರೆ.

ಈ ಜಾತ್ರೆಗೆ ದೇಶದ ಎಲ್ಲಾ ಹಕ್ಕಿಪಿಕ್ಕಿಯರು ಬಂದು ಸೇರುತ್ತಾರೆ. ಮತ್ತೆ ಕೆಲವು ಹಬ್ಬಗಳೆಂದರೆ ತಮ್ಮ ತಮ್ಮ ಬೆಡಗಿನ ಕುಲದೇವರುಗಳ ಹಬ್ಬ. ಇವುಗಳನ್ನು ಪ್ರತಿವರ್ಷ ಮಾಡುವುದಿಲ್ಲ. ಆಯಾ ಬೆಡಗಿನ ದೇವರು ಪೂಜಾರಿಯ ಮೈಯಲ್ಲಿ ಬಂದು ಹಬ್ಬ ಮಾಡಲು ಸೂಚಿಸಿದರೆ ಮಾತ್ರ ಈ ಹಬ್ಬಗಳನ್ನು ಮಾಡುತ್ತಾರೆ. ಕೆಲವೊಂದು ವೇಳೆ ಒಂದೇ ವರ್ಷದಲ್ಲಿ ಎರಡು ಬಾರಿಯೂ ಮಾಡಬಹುದು. ಕೆಲವು ವೇಳೆ ದೇವರು ಹತ್ತು ವರ್ಷಗಳಾದರೂ ಹಬ್ಬ ಮಾಡಲು ಅಪ್ಪಣೆ ಕೊಡದಿರಬಹುದು. ಈ ಹಬ್ಬಗಳನ್ನು ಹಕ್ಕಿಪಿಕ್ಕಿಯರು ಯಾವ ವರ್ಷವೇ ಮಾಡಿದರೂ ಯುಗಾದಿ ಹಬ್ಬದ ಸಂದರ್ಭದಲ್ಲಿಯೇ ಮಾಡುತ್ತಾರೆ.

---

೪. ಕರ್ನಾಟಕ ಸಂಗಾತಿ, ಪ್ರೊ. ಬರಗೂರು ರಾಮಚಂದ್ರಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೦೨, ಪು. ೩೬೧

ದಂಡಿನ ದುರುಗಮ್ಮನ ಜಾತ್ರೆ ಮತ್ತು ಹಿನ್ನೆಲೆ

ಉತ್ತರ ಕರ್ನಾಟಕದ ಹಕ್ಕಿಪಿಕ್ಕಿ(ಪಾರ್ಧಿ)ಯರ ಪವಿತ್ರ ಯಾತ್ರಾಸ್ಥಳ ಗದಗ. ಅಲ್ಲಿ ದುರುಗಮ್ಮನ ಜಾತ್ರೆಯನ್ನು ಪ್ರತಿವರ್ಷ ತಪ್ಪದೇ ದವನದ ಹುಣ್ಣಿಮೆಯಾದ ಮೇಲೆ ಮಾಡುತ್ತಾರೆ. ದುರುಗಮ್ಮ ದೇವಿಯು ನೆಲೆಸಿರುವ ಸ್ಥಳವು ಗದಗಿನಿಂದ ಸುಮಾರು ಆರು ಕಿ.ಮೀ. ದೂರದಲ್ಲಿರುವ ರೋಣ ರಸ್ತೆಯ ನಾಗಸಮುದ್ರ ಎಂಬ ಗ್ರಾಮದ ಹತ್ತಿರದ ಒಂದು ಬಯಲಿನಲ್ಲಿದೆ. ಈ ಜಾತ್ರೆಯು ಪ್ರತಿವರ್ಷ ದವನದ ಹುಣ್ಣಿಮೆ ಆದ ನಂತರ ಬರುವ ಭಾನುವಾರ, ಸೋಮವಾರ, ಮಂಗಳವಾರ ಮತ್ತು ಬುಧವಾರ ದಿನದಂದು ತುಂಬಾ ವಿಜೃಂಭಣೆಯಿಂದ ಜರುಗುವುದು. ಈ ಹಬ್ಬಕ್ಕೆ ದೇಶದ ಎಲ್ಲಾ ಭಾಗದಲ್ಲಿರುವ ಹಕ್ಕಿಪಿಕ್ಕಿಯರು ದೇವಿಯ ದರ್ಶನಕ್ಕೆ ಬಂದು ತಾಯಿಯ ದರ್ಶನದ ಜೊತೆಗೆ ತಮ್ಮ ಬಂಧುಬಳಗದವರನ್ನು ಸೇರಿ ಕಷ್ಟಸುಖಗಳನ್ನು ವಿಚಾರಿಸಿ ಹೋಗುವರು.

ಹಿನ್ನೆಲೆ : ದುರುಗಮ್ಮ ದೇವಿಯು ಇಲ್ಲಿ ನೆಲೆಸಿದ ಬಗೆಯ ಕುರಿತು ಹಿರಿಯರು ಕತೆಯನ್ನು ಹೇಳುತ್ತಾರೆ. ಒಮ್ಮೆ ಗದಗಿನ ಬೆಟಗೇರಿ ಸುತ್ತಮುತ್ತ ವಾಸವಾಗಿದ್ದ ಪಾರ್ಧಿ(ಹಕ್ಕಿಪಿಕ್ಕಿ) ಬುಡಕಟ್ಟಿನವರು ನಾಗಸಮುದ್ರದ ಸುತ್ತಮುತ್ತ ಚಿಗರಿ ಬೇಟೆಗೆ ಬಂದಿದ್ದರು. ಅವರಲ್ಲಿ ಅವಲಿ ಎಂಬುವನಿಗೆ ದಂಡಿನ ದುರುಗಮ್ಮ ಅಜ್ಜಿಯ ವೇಷದಲ್ಲಿ ಪ್ರತ್ಯಕ್ಷವಾಗಿ ಹೇ ಅವಲಿ ನೀನು ಈ ದುಗ್ಗಾಣೆಯನ್ನು ತೆಗೆದುಕೊಂಡು ನನ್ನ ಸೇವೆಯನ್ನು ಮಾಡೆಂದು, ನಾನು ಬೇರೆ ಕಡೆ ಹೋಗಬೇಕಿತ್ತು. ಆದರೆ ಈ ಸ್ಥಳ ಬಿಟ್ಟು ಹೋಗಲು ಮನಸ್ಸಾಗಲಿಲ್ಲವೆಂದು ನಾನು ಇಲ್ಲಿಯೇ ನೆಲೆಸುತ್ತೇನೆಂದು ಹೇಳಿತು. ಆದರೆ ಅವಲಿಯು ಅವಳ ಪೂಜೆ ಮಾಡಲು ಆಗುವುದಿಲ್ಲ ಎನ್ನುತ್ತಾನೆ. ಕಾರಣ ನಮ್ಮ ಮನೆದೇವರು ಒಪ್ಪುವುದಿಲ್ಲ ಎನ್ನುತ್ತಾನೆ. ಮರುದಿನ ಬೇಟೆಗೆ ಬಂದ ಹಕ್ಕಿಪಿಕ್ಕಿ ಸಮುದಾಯದ ಗೋವಿಂದು ಎಂಬುವನಿಗೆ ತಾಯಿಯು ಅಂದಿನಂತೆ ಅಜ್ಜಿಯ ವೇಷದಲ್ಲಿ ಪ್ರತ್ಯಕ್ಷಳಾಗಿ ಅವಲಿಗೆ ಹೇಳಿದ ಮಾತನ್ನೇ ಹೇಳಿತು. ಅವನು ಸಹ ತಿರಸ್ಕರಿಸಲು ಕೋಪಗೊಂಡು ಅವನನ್ನು ಅದೃಶ್ಯ ಮಾಡಿದಳು. ಗಂಡನು ಕಾಡಿನಿಂದ ಮರಳಿ ಬಾರದಿರುವುದನ್ನು ಕಂಡ ಗೋವಿಂದನ ಹೆಂಡತಿ ಕಾಡಿಗೆ ಗಂಡನನ್ನು ಹುಡುಕುತ್ತಾ ಬಂದಳು. ಅಲ್ಲಿಯೇ ಇದ್ದ ಅಜ್ಜಿಯನ್ನು ವಿಚಾರಿಸಲು ಅಜ್ಜಿಯು ಅವರಿಬ್ಬರಿಗೆ ಹೇಳಿದ ಮಾತನ್ನು ಹೇಳಿ ನಿನ್ನ ಗಂಡನನ್ನು ನನ್ನ ಪೂಜೆಗೆ ಒಪ್ಪಿಸಿದರೆ ಅವನನ್ನು ತೋರಿಸುತ್ತೇನೆ ಎಂದು ಹೇಳಿತು. ಅದಕ್ಕೆ ಅವಳು ಒಪ್ಪಿದಳು. ನಂತರ ಗೋವಿಂದನನ್ನು ತೋರಿಸಿತು. ಆಗ ನಡೆದ ವಿಷಯವನ್ನೆಲ್ಲಾ ಹೆಂಡತಿಯು ಗಂಡನ ಮುಂದೆ ತಿಳಿಸಿದಳು. ಆಗ ಅವಲಿಯು ತಾಯಿ ನಿನ್ನ ಸೇವೆ ಮಾಡುತ್ತೇನೆ ನಮಗೆ ಏನು ದಾರಿ ತೋರಿಸುತ್ತೀಯಾ ಅದನ್ನು ಪಾಲಿಸಿಕೊಂಡು ಹೋಗುತ್ತೇವೆ ಎಂದು ತಾಯಿಯ ಸನ್ನಿದಾನದಲ್ಲಿ ಒಪ್ಪಿಕೊಂಡಾಗ ತಾಯಿಯು ನಿಮ್ಮ ಮನೆತನ ಇರುವವರೆಗೆ ನನ್ನ ಸೇವೆಯನ್ನೇ ಮಾಡುತ್ತಾ ಇರಿ, ನಿಮ್ಮ ಮನೆತನದವರಿಗೆ ಯಾವುದೇ ಕಷ್ಟ ಬಾರದಂತೆ ನಾನು ನೋಡಿಕೊಳ್ಳುತ್ತೇನೆ. ಮತ್ತು ನಿಮ್ಮ ಸಮುದಾಯದವರು ನನ್ನ ಹತ್ತಿರ ಬಂದು ಹೋಗುವವರೆಗೆ ಅವರ ಕಷ್ಟ ಪರಿಹರಿಸುತ್ತೇನೆಂದು ಗೋವಿಂದನ ಕೈಗೆ ದುಗ್ಗಾಣಿಯನ್ನು ಕೊಟ್ಟು ತಾನು ಸ್ಥಾಪನೆಯಾಗುವ ಸ್ಥಳವನ್ನು ತೋರಿಸಿ ಮಾಯವಾದಳು.

ಇದನೆಲ್ಲಾ ಕೇಳಿದ ಸಮುದಾಯದ ಹಿರಿಯರು ನಿನಗೆ ನಿಜವಾಗಿಯೂ ತಾಯಿ ಪ್ರತ್ಯಕ್ಷಳಾಗಿದ್ದರೆ ನಾವು ಮಾಡುವ ಪರೀಕ್ಷೆಯಲ್ಲಿ ನೀನು ಗೆದ್ದರೆ ನಂಬುತ್ತೇವೆ ಎಂದು ಹೇಳಿ ಮರುದಿನ ಪರೀಕ್ಷೆಗೆ ಸಿದ್ಧನಾಗಲು ಹೇಳಿದರು. ಪರೀಕ್ಷೆಗೆ ಒಂದು ಕುಪ್ಪೆ ತೆಂಗಿನಕಾಯಿಗಳ ರಾಶಿ ಇನ್ನೊಂದು ಕಡೆ ಕುಂಕುಮ ಭಂಡಾರದ ಚೀಟಿಗಳನ್ನು ಕಟ್ಟಿ ಒಂದು ಕಡೆ ಕುಪ್ಪೆ ಹಾಕಿದರು ಆ ಕುಂಕುಮದ ಚೀಟಿಯಲ್ಲಿ ಒಂದು ಬೇವಿನ ಕಡ್ಡಿಯಿಂದ ಉಂಗುರ ಮಾಡಿ ಚೀಟಿಯಲ್ಲಿ ಕಟ್ಟಿ ರಾಶಿಯಲ್ಲಿ ಸೇರಿಸಿದರು. ಕಾಯಿಗಳ ರಾಶಿಯಲ್ಲಿ ಎರಡು ಕೊಳೆತ ತೆಂಗಿನಕಾಯಿ ಸೇರಿಸಿ ಅವುಗಳನ್ನು ಪತ್ತೆ ಹಚ್ಚಲು ಹೇಳಿದರು. ಗೋವಿಂದನ ಮೈಯಲ್ಲಿ ದೇವಿ ಬಂದು ಈ ಪರೀಕ್ಷೆಯಲ್ಲಿ ಅವನನ್ನು ಗೆಲಿಸುತ್ತಾಳೆ. ಅಲ್ಲದೇ ಗೋವಿಂದ ತೆಂಗಿನಕಾಯಿಗಳನ್ನು ತನ್ನ ತಲೆಗೆ ಒಡೆದುಕೊಂಡು ಚೂರು ಮಾಡುತ್ತಾನೆ. ತಲೆಗೆ, ಕೈಕಾಲಿಗೆ ಹೀಗೆ ವಿವಿಧ ಅಂಗಗಳಿಗೆ ಕಾಯಿಗಳನ್ನು ಹೊಡೆದು ಚೂರು ಮಾಡುತ್ತಾನೆ. ಇದನ್ನು ಕಂಡು ಸಮುದಾಯದ ಹಿರಿಯರೆಲ್ಲಾ ಕೈಮುಗಿದು ಇಂದಿನಿಂದ ನಿನ್ನ ದರ್ಶನಕ್ಕೆ ನಾವು ಮತ್ತು ನಮ್ಮ ಜಾತಿಯ ಎಲ್ಲರೂ ನಿನ್ನ ಕೀರ್ತಿಯನ್ನು ಹಬ್ಬಿಸುತ್ತಾ ಪ್ರತಿವರ್ಷ ದವನದ ಹುಣ್ಣಿಮೆಯ ನಂತರ ನಿನ್ನ ಜಾತ್ರೆ ಆಚರಿಸುತ್ತೇವೆ ಎಂದು ಅಂದಿನಿಂದ ಈ ಜಾತ್ರೆಯನ್ನು ತಪ್ಪದೇ ಮಾಡುತ್ತಾ ಬಂದಿದ್ದಾರೆ. (ಮಾಹಿತಿ: ಯಮುನವ್ವ, ೫೦, ಗದಗ)

ಜಾತ್ರೆ ಆಚರಣೆ ವಿಧಾನ

ಹಕ್ಕಿಪಿಕ್ಕಿ ಸಮುದಾಯದವರು ಆಚರಿಸುವ ಜಾತ್ರೆಗಳಲ್ಲಿ ಅತಿಮುಖ್ಯ ಮತ್ತು ಪ್ರಮುಖವಾದ ಜಾತ್ರೆಯೆಂದರೆ ಗದಗಿನ ದಂಡಿನದುರುಗಮ್ಮನ ಜಾತ್ರೆ ಈ ಜಾತ್ರೆಯು ಪ್ರತಿವರ್ಷ ದವನದ ಹುಣ್ಣಿಮೆ ನಂತರ ನಡೆಯುತ್ತದೆ. ಜಾತ್ರೆ ನಡೆಯುವ ಸ್ಥಳ ದಂಡಿನ ದುರ್ಗಾದೇವಿ ನೆಲೆಸಿದ ಸ್ಥಳ. ಅದು ಗದಗನಿಂದ ಆರು ಕಿ.ಮೀ. ದೂರದಲ್ಲಿರುವ ರೋಣ ರಸ್ತೆಯ ನಾಗಸಮುದ್ರ ಎಂಬ ಗ್ರಾಮದ ಹತ್ತಿರದ ಒಂದು ಬಯಲಿನಲ್ಲಿ ನಡೆಯುತ್ತದೆ.

ಈ ಜಾತ್ರೆಗೆ ದೇಶದ ಎಲ್ಲಾ ಹಕ್ಕಿಪಿಕ್ಕಿ ಸಮುದಾಯದವರೂ ಬಂದು ಸೇರುತ್ತಾರೆ. ಇಲ್ಲಿಗೆ ಬರಲು ಉತ್ತಮ ರಸ್ತೆ ಇದ್ದು, ವಾಹನಗಳು ವಿರಳವಾಗಿ ಓಡಾಡುತ್ತವೆ. ಈ ವರ್ಷ ೨೦೧೩ ಮೇ ತಿಂಗಳಲ್ಲಿ ೨೦ನೇ ತಾರಿಖಿನಿಂದ ಮೂರು ದಿನಗಳ ಕಾಲ ನಡೆದ ಜಾತ್ರೆಯ ಸಮಯದಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಕೆಲವು ಅಂಶಗಳನ್ನು ಗಮನಿಸಿದಂತೆ ಹಬ್ಬಕ್ಕೆ ಎಲ್ಲಾ ಕಡೆಯಿಂದಲೂ ಸಮುದಾಯದವರು ಒಂದೆರಡು ದಿನ ಮುಂಚಿತವಾಗಿ ಬಂದು ಬಯಲಿನಲ್ಲಿ ಗುಡಾರಗಳನ್ನು ಹಾಕಿಕೊಳ್ಳುತ್ತಾರೆ. ಜಾತ್ರೆಯು ಭಾನುವಾರದಿಂದಲೇ ಪ್ರಾರಂಭವಾಗುತ್ತದೆ. ಭಾನುವಾರದಂದು ತಾಯಿಯ ಪಲ್ಲಕ್ಕಿಯನ್ನು ಮುಳಗುಂದದಿಂದ ಗದಗ, ಬೆಟಗೇರಿ ಸೆಟ್ಲ್‌ಮೆಂಟ್‌ಗೆ ತಂದು ಮರುದಿನ ಸೋಮವಾರ ಸಂಜೆ ಆರು ಗಂಟೆಯ ವೇಳೆಗೆ ಸೆಟ್ಲಮೆಂಟ್ ಕಾಲೋನಿಯಿಂದ ರೋಣ ರಸ್ತೆಯ ಮೂಲಕ ಡೊಳ್ಳು, ತಮಟೆ, ಕರಡಿ ಮಜಲು ವಾದ್ಯಗಳನ್ನು ಭಾರಿಸುತ್ತಾ ಆ ಸದ್ದಿಗೆ ತಕ್ಕಂತೆ ಹಕ್ಕಿಪಿಕ್ಕಿಯ ಎಲ್ಲಾ

ಗಂಡು ಹೆಣ್ಣುಗಳು ಕುಣಿಯುತ್ತಾ ಕೇಕೆ ಹಾಕುತ್ತಾ ಮೆರವಣಿಗೆಯಲ್ಲಿ ಸಾಗುತ್ತಾರೆ. ಪಲ್ಲಕ್ಕಿಯನ್ನು ರಾತ್ರಿ ೯-೧೦ ಗಂಟೆಯ ವೇಳೆಗೆ ದುರ್ಗಾದೇವಿ ನೆಲೆಸಿದ ಸ್ಥಳವಾದ ನಾಗಸಮುದ್ರ ಹತ್ತಿರದ ಬಯಲಿನಲ್ಲಿ ಬೇವಿನ ಮರದ ಕಟ್ಟೆಯ ಮೇಲೆ ಇಳಿಸುತ್ತಾರೆ.

ಅಂದು ರಾತ್ರಿ ಬೆಳಗಿನ ಜಾವ ಮೂರು ಗಂಟೆಯವರೆಗೆ ದೇವಿಯ ಮುಂದೆ ಎಲ್ಲಾ ಹಕ್ಕಿಪಿಕ್ಕಿಯರು ಡೊಳ್ಳುಗಳನ್ನು ಬಾರಿಸುತ್ತಾ ಅದರ ಸದ್ದಿಗೆ ತಕ್ಕಂತೆ ಕುಣಿಯುತ್ತಾರೆ. ಇವರು ವಾದ್ಯದ ಸದ್ದಿಗೆ ತಕ್ಕಂತೆ ಹೆಜ್ಜೆಗಳನ್ನು ಬದಲಿಸಿಕೊಂಡು ಕುಣಿಯುವ ಭಂಗಿ ಅದ್ಭುತ ಎನ್ನಬಹುದು ಹಾಗೂ ಗಂಡು ಹೆಣ್ಣುಗಳು ಸಂಪೂರ್ಣ ಸ್ವೇಚ್ಛೆಯಿಂದ ವರ್ತಿಸುವರು. ಹೀಗೆ ಬೆಳಗಿನ ಜಾವ ಮೂರು ಗಂಟೆಯವರೆಗೆ ಕುಣಿಯುತ್ತಾರೆ. ಮಂಗಳವಾರ ಬೆಳಗಿನ ಜಾವ ಮೂರು-ನಾಲ್ಕು ಗಂಟೆಯಿಂದ ಕುರಿ, ಕೋಳಿ, ಮೇಕೆಗಳನ್ನು ಬಲಿ ಕೊಡುತ್ತಾರೆ. ಈ ಹಿಂದೆ ಮಂಗಳವಾರ ಮಧ್ಯಾಹ್ನ ಬಲಿಕೊಡುತ್ತಿದ್ದರು. ಅದು ದೇವಿ ನೆಲಸಿದ ಬೇವಿನ ಮರದ ಕಟ್ಟೆಯ ಬಳಿಯಲ್ಲೇ. ಆದರೆ ಈಗ ಸರ್ಕಾರ ಪ್ರಾಣಿ ಬಲಿಯನ್ನು ನಿಷೇಧಿಸಿರುವುದರಿಂದ ಮಂಗಳವಾರ ಗೌಪ್ಯವಾಗಿ ಬೆಳಗಿನ ಜಾವ ನಾಲ್ಕು ಗಂಟೆಯಿಂದ ದೇವರ ಕಟ್ಟೆಯ ಎದುರು ನೇರವಾಗಿ ಸ್ವಲ್ಪ ದೂರದಲ್ಲಿ ಕುರಿ, ಕೋಳಿಗಳನ್ನು ಬಲಿಕೊಟ್ಟು ಅವುಗಳ ತಲೆಯನ್ನು ಅಲ್ಲಿಯೇ ಬಿಟ್ಟು ಬರುತ್ತಾರೆ. ಆ ತಲೆಗಳನ್ನು ಅದೇ ಸಮುದಾಯದವರು ತೆಗೆದುಕೊಂಡು ಹೋಗಿ ಅಡುಗೆ ಮಾಡಿಕೊಂಡು ತಿನ್ನುತ್ತಾರೆ. ಅಲ್ಲದೆ ಬಲಿಕೊಟ್ಟ ಪ್ರಾಣಿಯ ಚರ್ಮವನ್ನು ದೇವರಿಗೆ ಅರ್ಪಿಸುತ್ತಾರೆ. ಮೊದ ಮೊದಲು ಹೀಗೆ ಅರ್ಪಿಸಿದ ಪ್ರಾಣಿಯ ತಲೆ ಮತ್ತು ಚರ್ಮವನ್ನು ದೊಡ್ಡದೊಂದು ಕುಳಿ ತೆಗೆದು ಅದರಲ್ಲಿ ಹಾಕಿ ಹೂಳುತ್ತಿದ್ದರು. ಆದರೆ ಇತ್ತೀಚೆಗೆ ಬಲಿಕೊಟ್ಟ ಪ್ರಾಣಿಗಳ ತಲೆಯನ್ನು ಅದೇ ಸಮುದಾಯದವರು ತೆಗೆದುಕೊಂಡು ಹೋಗುತ್ತಾರೆ. ಚರ್ಮಗಳನ್ನು ಅಲ್ಲಿನ ಪೂಜಾರಿ ಮಾರಿ ಬಂದ ಹಣವನ್ನು ದೇವಿ ಕಾರ್ಯಕ್ಕೆ ಬಳಸುತ್ತಾರೆ.

ಮಂಗಳವಾರ ಮುಂಜಾನೆ ಏಳು ಗಂಟೆಯಿಂದ ದೇವಿಗೆ ಹರಕೆ ಹೊತ್ತವರು ದೀಡು ನಮಸ್ಕಾರ, ಉರುಳು ಸೇವೆ ಮಾಡಲು ಪ್ರಾರಂಭಿಸುತ್ತಾರೆ. ಕೆಲವರು ಉಟುಗೆ ಉಡುತ್ತಾರೆ. ಹೀಗೆ ಹರಕೆ ತೀರಿಸಿದ ಭಕ್ತರು ತಮ್ಮ ಆ ಒದ್ದೆ ಬಟ್ಟೆಗಳನ್ನು ಅಲ್ಲೆ ರಸ್ತೆಯಲ್ಲಿ ಎಸೆದು ಸ್ನಾನ ಮಾಡಿಕೊಂಡು ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಅಂದು ಸಂಜೆಯವರೆಗೆ ದೇವಿಗೆ ಹಣ್ಣು ಕಾಯಿ ಮಾಡಿಸುತ್ತಾರೆ. ಅಲ್ಲದೆ ತಾವು ಬಲಿಕೊಟ್ಟ ಪ್ರಾಣಿಗಳ ಗುಂಡಿಗೆಯನ್ನು ಬೇಯಿಸಿ ಬೆಂದ ಮಾಂಸವನ್ನು ದೇವಿಗೆ ಎಡೆಯಾಗಿ ಕೊಡುತ್ತಾರೆ. ಮಂಗಳವಾರ ಎಲ್ಲಾ ಗುಡಾರಗಳಲ್ಲೂ ಮಾಂಸದ ಅಡುಗೆ ಮಾಡಿರುತ್ತಾರೆ. ರಾತ್ರಿ ಊಟವಾದ ಮೇಲೆ ಮತ್ತೆ ಎಲ್ಲಾ ಹಕ್ಕಿಪಿಕ್ಕಿಯರು ದೇವರ ಮುಂದೆ ಭಕ್ತಿಭಾವದಿಂದ ಕುಣಿಯುತ್ತಾರೆ. ರಾತ್ರಿಯಲ್ಲಾ ಕುಣಿದು ಬುಧವಾರದ ದಿವಸ ಎಲ್ಲರೂ ಮಾಂಸದ ಅಡುಗೆ ಊಟ ಮಾಡಿ ದೇವಿಯ ದರ್ಶನ ಪಡೆದು ಅಂದು ಸಂಜೆ ತಮ್ಮ ತಮ್ಮ ಗುಡಾರಗಳನ್ನು ಖಾಲಿ ಮಾಡಿಕೊಂಡು ತಾವು ಬಂದ ವಾಹನಗಳಲ್ಲಿ ಹೊರಡುತ್ತಾರೆ. ಕಾರು, ಬಸ್ಸು,ಜೀಪು, ಟ್ರಾಕ್ಟರ್,

ಆಟೋ, ರೈಲು ಹೀಗೆ ಹಲವು ವಾಹನಗಳಲ್ಲಿ ತಮ್ಮ ತಮ್ಮ ಊರುಗಳಿಗೆ ಹಿಂದಿರುಗುತ್ತಾರೆ. ಈ ಜಾತ್ರೆಗೆ ಹೊರ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಹೀಗೆ ಹಲವು ರಾಜ್ಯಗಳಿಂದ ಅಲ್ಲದೇ ಬೇರೆ ಬೇರೆ ದೇಶಗಳಿಂದಲೂ ಈ ಸಮುದಾಯದವರು ಬಂದಿರುತ್ತಾರೆ. ಈ ಜಾತ್ರೆಗೆ ಬಂದ ಹಕ್ಕಿಪಿಕ್ಕಿಯರು ಹೆಣ್ಣು, ಗಂಡು, ಬಡವ, ಶ್ರೀಮಂತ ಎಂಬ ಭೇದವಿಲ್ಲದೆ ಎಲ್ಲರೂ ಮದ್ಯವನ್ನು ಸೇವಿಸುತ್ತಾರೆ. ದೇವಿಯ ಮುಂದೆ ಕುಣಿಯುವುದು ಇವರ ವಿಶೇಷತೆ ಅಲ್ಲದೇ ಹರಕೆ ಹೊತ್ತವರು ದೇವಿಗೆ ಹಣದ ಹಾರ, ಲಿಂಬೆಹಣ್ಣಿನ ಹಾರ, ಹಸಿರು ಗಾಜಿನ ಬಳೆಗಳನ್ನು ದೇವಿಗೆ ಭಕ್ತಿಯ ರೂಪದಲ್ಲಿ ಅರ್ಪಿಸುತ್ತಾರೆ.

ದಂಡಿನ ದುರ್ಗಮ್ಮನ ಜಾತ್ರೆಯನ್ನು ಹಕ್ಕಿಪಿಕ್ಕಿ ಸಮುದಾಯದವರು ಪ್ರತಿವರ್ಷ ಆಚರಿಸಿದರೆ, ತಮ್ಮ ತಮ್ಮ ಬೆಡಗುಗಳಲ್ಲಿನ ಕುಲದೈವಗಳ ಹಬ್ಬಗಳನ್ನು ಐದು ಇಲ್ಲವೇ ಹತ್ತು ವರ್ಷಗಳಿಗೊಮ್ಮೆ ಆಚರಿಸುವುದನ್ನು ನೋಡಬಹುದು. ಹತ್ತು ವರ್ಷಗಳ ಹಿಂದೆ ಮಾಡಿದ್ದ ಸಾವಂಡಿಯಾ ಬೆಡಗಿನವರ ಹಬ್ಬವನ್ನು ಈ ವರ್ಷ ಕಾರಿಗನೂರಿನಲ್ಲಿ ದಿನಾಂಕ. ೮.೪.೨೦೧೩ ರಿಂದ ೧೨.೪.೨೦೧೩ರವರೆಗೆ ಆಚರಿಸಿದರು. ಈ ಹಬ್ಬದಲ್ಲಿ ಭಾಗವಹಿಸಿ ಕೆಲವು ಅಂಶಗಳನ್ನು ಗ್ರಹಿಸಿದಂತೆ ಹಾಗೂ ಅಲ್ಲಿನ ಸಮುದಾಯದವರು ನೀಡಿದ ಮಾಹಿತಿಯಂತೆ ಈ ಹಬ್ಬವನ್ನು ಮಾಡುವ ವಿಧಾನ ಎಲ್ಲಾ ಬೆಡಗಿನವರಲ್ಲೂ ಒಂದೇ ರೀತಿಯಾಗಿದ್ದರೂ ಸ್ವಲ್ಪ ಭಿನ್ನತೆಗಳನ್ನು ಕಾಣಬಹುದು. ಒಂದೊಂದು ಬೆಡಗಿವನರು ಒಂದೊಂದು ಬಗೆಯ ಪ್ರಾಣಿಗಳನ್ನು ಬಲಿ ಕೊಡುತ್ತಾರೆ. ದೇವರಿಗೆ ಸಾರಾಯಿ ಅಭಿಷೇಕ ಮತ್ತು ಕೋಣ ಬಲಿ ಕೊಡುವುದು ಸಾಮಾನ್ಯವಾಗಿ ಎಲ್ಲಾ ಬೆಡಗಿನವರಲ್ಲಿಯೂ ಇದೆ.

೧. ಸಾವಂಡಿಯಾ ದೇವಿಯ ಹಬ್ಬ

ಸಾವಂಡಿಯಾ ಬೆಡಗಿನವರ ಪ್ರಮುಖ ದೈವ ಸರಕ್ ಸಾವಂಡಿಯಾ ದೇವಿಯಾಗಿದ್ದು, ಇವರ ಅಡ್ಡ ಹೆಸರು ಚಾವ್ಹಾಣ, ಈ ಬೆಡಗಿನಲ್ಲಿ ಖಾತ್/ಸಾತ್ ಮುಠಾನ್(ಏಳುಹಿಡಿ) ಬೆಡಗಿನವರು, ಮತ್ತು ಸಾವದ್/ ಸಾವ್ ಮುಠಾನ್(ಹದಿನಾಲ್ಕು ಹಿಡಿ) ಬೆಡಗಿನವರೆಂಬ ಎರಡು ಗುಂಪುಗಳಿವೆ. ಕಂಪ್ಲಿಯಲ್ಲಿರುವ ಹಕ್ಕಿಪಿಕ್ಕಿಯರ ಸಾವಂಡಿಯಾದವರು ಖಾತ್ ಮುಠಾನ್ ಅವರು (೭ ಹಿಡಿ) ಕಾರಿಗನೂರಿನಲ್ಲಿರುವ ಸಾವಂಡಿಯಾದವರು ಸಾವದ್ ಮುಠಾನ್ (೧೪ ಹಿಡಿ) ಅವರು ಇವರುಗಳಲ್ಲಿ ದೇವರು ಮಾಡುವ ವಿಧಾನಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬಂದರೂ ಒಂದೆ ರೀತಿಯ ಕಾರ್ಯಗಳನ್ನು ಮಾಡುತ್ತಾರೆ. ಹಬ್ಬವನ್ನು ಮಾಡುವ ಪೂರ್ವದಲ್ಲಿ ದೇವರ ಮನೆಯಲ್ಲಿ ಪೂಜಾರಿ ಮತ್ತು ಹಿರಿಯರು ಸೇರಿ ದೇವರ ಮುಂದೆ ಇರಿಸಿರುವ ಕೆಂಪು ಗುಲಗಂಜಿ ಅಥವಾ ಬಿಳಿ ಜೋಳದ ಕಾಳುಗಳ ಒಂದು ಹಿಡಿ ತಂದು ಅದರಲ್ಲಿ ಒಂದು ಚಿಟಕಿಯಲ್ಲಿ ಹಿಡಿದ ಕಾಳುಗಳನ್ನು ನಾಲ್ಕು ಗುಂಪು ಮಾಡಿ ಕೊನೆಗೆ ಉಳಿಯುವ ನಾಲ್ಕು ಅಥವಾ ಎರಡು ಕಾಳುಗಳನ್ನು ನೋಡಿ ನಿರ್ಧರಿಸುತ್ತಾರೆ. ತಮಗೆ ಬೇಕಾದ ವರವನ್ನು ಕೇಳಿಕೊಂಡು ಕಾಳುಗಳು ಎರಡು ಅಥವಾ ನಾಲ್ಕು ಉಳಿದರೆ ಕೆಲಸವಾಗುತ್ತದೆ ಎಂದೋ

ಅಥವಾ ಒಂದು ಇಲ್ಲವೇ ಮೂರು ಉಳಿದರೆ ಕೆಲಸ ಆಗುವುದಿಲ್ಲವೆಂದು ಮನಸ್ಸಿನಲ್ಲಿ ಅಂದುಕೊಂಡು ಚಿಟಕಿಯಿಂದ ನಾಲ್ಕು ಗುಂಪು ಮಾಡುತ್ತಾರೆ. ಸಮಬಂದರೆ ಅವರ ಭಾಷೆಯಲ್ಲಿ ಬಹಂ ಎಂದು ಬೆಸ ಬಂದರೆ ವಧಾವು ಎಂದು ಅರ್ಥ. ಈ ರೀತಿಯ ಕ್ರಮದಿಂದ ಹಬ್ಬವನ್ನು ಆಚರಿಸುವುದು ಬಿಡುವುದು ನಿರ್ಧರಿಸುತ್ತಾರೆ. ಈ ರೀತಿಯ ಕ್ರಮವನ್ನು ಅವರು ಬಂತುಕೆ ಕೇಳುವುದು ಎನ್ನುತ್ತಾರೆ. ಈ ಮೂಲಕ ದೇವರು ಹಬ್ಬ ಮಾಡಲು ಅಪ್ಪಣೆ ಕೊಟ್ಟರೆ ಸೋಮವಾರದಿಂದ ಹಬ್ಬವನ್ನು ಪ್ರಾರಂಭಿಸುತ್ತಾರೆ.

ಹಬ್ಬ ಆಚರಿಸುವ ವಿಧಾನ

ಸಾವಂಡಿಯಾದವರು ಮಾತ್ರವಲ್ಲದೆ ಹಕ್ಕಿಪಿಕ್ಕಿಯರ ಯಾವುದೇ ಬೆಡಗಿನವರಾದರೂ ತಮ್ಮ ದೇವರುಗಳಾದ ಖುದ್ಧಾ(ಶಿವ), ಪಾರದಾನ್‌ದೇವಿ(ಗಂಗಾದೇವಿ), ಅಜಮೀರ್ ಖಡವಿದೇವಿ(ವಿಶೇಷವಾಗಿ ಸಾವಂಡಿದವರ ದೈವ) ಸೀಳ್‌ದೇವಿ(ಸುಂಕಲಮ್ಮ) ತುಳುಜಾ ಭವಾನಿ ಮತ್ತು ತಮ್ಮ ಪೂರ್ವಿಕರ ಮೂರ್ತಿಗಳನ್ನು ಪೂಜಾರಿಯ ಮನೆಯಿಂದ ಹೊರತೆಗೆದು ದೇವರುಗಳನ್ನು ಹೊಳೆಗೆ ಹೊಯ್ದು ಅಲ್ಲಿಂದ ಗುಡಿಗೆ ತಂದು ಕೂರಿಸುತ್ತಾರೆ. ನಂತರ ಈ ಮೊದಲೇ ಆಯ್ಕೆ ಮಾಡಿಕೊಂಡ ಬಯಲಿನಲ್ಲಿ ಚಪ್ಪರ ಹಾಕಿ ಅದರ ಮುಂದೆ ದೇವರ ಪಟವನ್ನು ನಿಲ್ಲಿಸುತ್ತಾರೆ. ಆ ಚಪ್ಪರದ ಕೆಳಗೆ ಅಂದು ಸಂಜೆ ಆ ದೇವರುಗಳನ್ನು ಗದ್ದುಗೆ ಹಾಸಿ ಅದರ ಮೇಲೆ ಇಡುತ್ತಾರೆ. ಸೋಮವಾರ ಸಂಜೆ ಪೂಜೆ ಪ್ರಾರಂಭವಾಗುತ್ತದೆ. ಮೊದಲಿಗೆ ಖುದ್ಧಾ(ಶಿವನ)ನ ಪೂಜೆ.

ಖುದ್ಧ (ಶಿವಾ)

ಮೊದಲ ದಿನ ಅಂದರೆ ಸೋಮವಾರ ರಾತ್ರಿ ೧೨ ಗಂಟೆ ಸುಮಾರಿಗೆ ಖುದ್ಧಾ ದೇವರಿಗೆ ಒಂದು ಕೋಣವನ್ನು ಬಲಿಕೊಡುತ್ತಾರೆ. ತಾವು ಚಪ್ಪರದ ಅಡಿಯಲ್ಲಿ ದೇವರ ಎದುರಿಗೆ ಎರೆಮಣ್ಣಿನಿಂದ ನಿರ್ಮಿಸಿದ ಕುಂಡಲಿ ತಟ್ಟೆಯಾಕಾರದಲ್ಲಿರುತ್ತದೆ. ಅದನ್ನು ಇವರು ಸಾತ್‌ಸರ್ ಎನ್ನುತ್ತಾರೆ. ಇವುಗಳನ್ನು ಕೋಣ ಮತ್ತು ಹೊತಗಳನ್ನು ಬಲಿಕೊಟ್ಟಾಗ ಅವುಗಳ ರಕ್ತ ಸಂಗ್ರಹಿಸಲು ಮಾಡಿರುತ್ತಾರೆ. ಅವುಗಳಲ್ಲಿ ದೇವರ ಮೂರ್ತಿಗಳನ್ನು ಇಟ್ಟು ರಕ್ತಾಭಿಷೇಕ ಮಾಡುತ್ತಾರೆ. ಅಂದು ಕೋಣವನ್ನು ಆ ಕುಂಡಲದ ಹತ್ತಿರ ಎಳೆತಂದು ಕೆಡವಿ ಕೋಣದ ಕುತ್ತಿಗೆಗೆ ಚಾಕುವಿನಿಂದ ತಿವಿದು ಚಿಮ್ಮುವ ರಕ್ತದಿಂದ ಖುದ್ಧಾ ದೇವರ ಮುಖದ ಮೇಲೆ ನೈವೇದ್ಯ ಮಾಡುತ್ತಾರೆ. ರಕ್ತವನ್ನು ಆ ಕುಂಡಲದಲ್ಲಿ ಸಂಗ್ರಹಿಸುತ್ತಾರೆ. ಅಂದು ದೇವರು ಮೈಮೇಲೆ ಬಂದವರು ಕೋಣನ ರಕ್ತವನ್ನು ಕುಡಿಯುತ್ತಾರೆ. ನಂತರ ಕೋಣದ ತಲೆಯನ್ನು ಕತ್ತರಿಸುತ್ತಾರೆ. ಈ ಮೊದಲೇ ಗೋಧಿ ಮತ್ತು ಅಕ್ಕಿಯನ್ನು ಕಲಸಿ ಅದರಿಂದ ನೆಲದ ಮೇಲೆ ಬಿಡಿಸಿದ ಸ್ವಸ್ತಕದ ಆಕಾರದ ಮಧ್ಯದಲ್ಲಿ ದೇವರ ಮೂರ್ತಿ ಇಟ್ಟು ಅದರ ಎದುರಿಗೆ ಕೋಣದ ತಲೆಯನ್ನು ಇಡುತ್ತಾರೆ. ಜೊತೆಗೆ ಕೋಣದ ಬಾಲವನ್ನು ಕೊಯ್ದು ಅದರ ಬಾಯಲ್ಲಿ ಇಟ್ಟಿರುತ್ತಾರೆ. ಬೇರೆ ಯಾವುದೇ ಸ್ತ್ರೀ ದೈವಗಳಿಗೆ ಕೊಣ ಬಲಿಕೊಟ್ಟ ನಂತರ ಅದರ ಬಾಯಲ್ಲಿ ಆ ಕೋಣದ ಎಡಗಾಲನ್ನು ಕೊಯ್ದು ಇಡುತ್ತಾರೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಹಕ್ಕಿಪಿಕ್ಕಿಯಲ್ಲಿ

ಕೋಣದ ಬಾಯಲ್ಲಿ ಬಾಲವನ್ನು ಇಡಲಾಗುತ್ತದೆ. ಇಷ್ಟೆಲ್ಲಾ ಆದ ಮೇಲೆ ಕೋಣದ ಎದೆಯನ್ನು ಸೀಳಿ ಬಲಭಾಗದಲ್ಲಿರುವ ಎಲ್ಲಾ ಅಂಗಾಂಗಳನ್ನು ಕೊಯ್ದು ತೆಗೆದು ಏಳು ಜಾಲಿಯ ಬರಲಿಗೆ ಸೇರಿಸಿ ತುಪ್ಪ ಸವರಿ ಸುಡುತ್ತಾರೆ. ಬೇಯಿಸಿದ ಮಾಂಸವನ್ನು ಏಳು ಚಪಾತಿಗಳ ಮೇಲೆ ಇಟ್ಟು ಸಾವಂಡಿಯಾ ಬೆಡಗಿನ ಎಲ್ಲರೂ ತಮ್ಮ ಎಲ್ಲಾ ಕೈಗಳನ್ನು ಗುಂಪು ಮಾಡಿ ಆ ಕೈಗಳ ಮೇಲೆ ಚಪಾತಿಯನ್ನು ಅಗಲವಾಗಿ ಹಿಡಿದು ಅದರ ಮೇಲೆ ಬೆಂದ ಮಾಂಸವನ್ನು ಇಟ್ಟು ಎಲ್ಲರೂ ಸೇರಿ ದೇವರಿಗೆ ಎಡೆ ಇಡುತ್ತಾರೆ. ಅಲ್ಲಿಗೆ ಖಿದ್ಧಾ ದೇವರ ಪೂಜೆ ಮುಗಿದಂತೆ.

ಪಾರದಾನ್ ದೇವಿ (ಗಂಗಮ್ಮ)

ಈ ದೇವಿಯ ಪೂಜಾ ವಿಧಾನ ಹೇಗೆಂದರೆ ಮೊದಲಿಗೆ ಎರೆ ಮಣ್ಣನ್ನು ತಂದು ಅದನ್ನು ಹದ ಮಾಡಿ ಅದರ ಮೂರು ಗುಂಡುಗಳನ್ನು ತಯಾರಿಸಿ ಒಲೆಯನ್ನು ಮಾಡಬೇಕು. ರಾತ್ರಿ ಒಂದು ಗಂಟೆಯ ಸುಮಾರಿಗೆ ಆ ಒಲೆಯನ್ನು ಸುಂದರವಾಗಿ ಅಲಂಕಾರವನ್ನು ಮಾಡುತ್ತಾರೆ. ಇದಾದ ನಂತರ ಆ ಒಲೆಗೆ ಬೆಂಕಿ ಇಡುತ್ತಾರೆ. ನಂತರ ಕಡಾಯಿಯಲ್ಲಿ ತುಪ್ಪ ಹಾಕಿ, ತುಪ್ಪವನ್ನು ಕುದಿಸುತ್ತಾ ಅದರಲ್ಲಿ ಪೂಜಾರಿಯು ದೇವರ ಮೂರ್ತಿಗಳನ್ನು ನೆನೆಸುತ್ತಾರೆ. ಇಂಥ ಕುದಿಯುತ್ತಿರುವ ತುಪ್ಪದಲ್ಲಿ ಪೂಜಾರಿಯು ಹಾಗೆಯೇ ಕೈ ಹಾಕುತ್ತಿರುತ್ತಾನೆ. ಆದರೂ ಕೈ ಸುಡುವುದಿಲ್ಲ. ಕಾರಣ ದೇವಿಯ ಮಹಿಮೆ ಎನ್ನುತ್ತಾರೆ. ನಂತರ ಅದೇ ಕಡಾಯಿಯಲ್ಲಿ ಗೋಧಿ ಹಿಟ್ಟಿನ ೭ ಚಪಾತಿಗಳನ್ನು ಮಾಡುತ್ತಾರೆ. ಮಧ್ಯಾಹ್ನ ಸುಮಾರು ೧೨ ಗಂಟೆಯ ಹೊತ್ತಿಗೆ ಒಂದು ಹೋತವನ್ನು ಅದರ ಕಾಲುಗಳನ್ನು ಕಟ್ಟಿ ಚೂರಿಯಿಂದ ಕುತ್ತಿಗೆ ಕೊಯ್ದು ದೇವರ ಮುಂದೆ ಈ ಮೊದಲೇ ಮಾಡಿದ್ದ ಮಣ್ಣಿನ ಕುಂಡಲದಲ್ಲಿ ಆ ಹೋತದ ರಕ್ತವನ್ನು ಹಾಕುತ್ತಾರೆ. ನಂತರ ಆ ರಕ್ತದಲ್ಲಿಯೇ ದೇವರನ್ನು ಕೂಡಿಸುತ್ತಾರೆ. ತಮ್ಮ ಬೊಗಸೆಯಿಂದ ಪೂಜಾರಿಗಳು ಆ ಸಂಗ್ರಹಿಸಿದ ರಕ್ತವನ್ನು ಕುಡಿಯುತ್ತಾರೆ.

ಅಜಮೀರ್ ಖಡವಿ ದೇವಿ

ಈ ದೇವರ ಪೂಜೆ ಮಾಡಬೇಕಾದರೆ, ಪಾರ್‌ದನ್ ದೇವಿಗೆ ಮಾಡಿದ ಒಲೆಗಳ ಮೇಲೆಯೇ ಬೆಂಕಿ ಹಚ್ಚುತ್ತಾರೆ. ಅಂದಿನ ರಾತ್ರಿ ೩ ಗಂಟೆಗೆ ೨೦ ಕೆಜಿ ಯಷ್ಟು ಕುದಿಯುವ ಪಡಗವನ್ನು ಒಲೆಯ ಮೇಲೆ ಇಡುತ್ತಾರೆ. ಅಜಮೀರ್ ಖಡವಿ ದೇವಿಯ ಮೂರ್ತಿಯನ್ನು ತಂದು ಪಡಗದಾಗ ಬಾಯಿ ಮೇಲೆ ಇಟ್ಟು ತುಪ್ಪವನ್ನು ಪಡಗದಲ್ಲಿ ಬಿಳುವಂತೆ ಹಾಕುತ್ತಾರೆ. ಬೆಲ್ಲ, ರವಾ, ತುಪ್ಪ, ಪಡಗದಲ್ಲಿ ಹಾಕಿದ ನಂತರ ದೇವಿಯ ಮೂರ್ತಿಯನ್ನು ತಂದು ಪಡಗದಲ್ಲಿ ಮೂರ್ತಿಯನ್ನು ಎದ್ದುತ್ತಾರೆ. ಈ ರೀತಿಯಾಗಿ ಎದ್ದಿದ ನಂತರ ದೇವರನ್ನು ಮತ್ತೆ ಅದರ ಸ್ಥಳದಲ್ಲಿ ಇಡಬೇಕು. ನಂತರ, ಬೆಲ್ಲ ಹಾಗೂ ನೀರನ್ನು ಪಡಗದಲ್ಲಿ ಹಾಕಬೇಕು. ಇದೆಲ್ಲಾ ಹಾಕಿದ ನಂತರ ಅದನ್ನು ಚೆನ್ನಾಗಿ ಕುದಿಸುತ್ತಾರೆ. ಈ ರೀತಿಯಾಗಿ ಕುದ್ದ ನಂತರ ಅದರಲ್ಲಿ ರವಾ, ಅಕ್ಕಿ, ಹಾಕಿ ಸೌಟನಿಂದ ತಿರುಗಿಸುತ್ತಾರೆ. ಈ ರೀತಿ ಮಾಡಿ ಚೆನ್ನಾಗಿ ಕುದಿಸಿದ ನಂತರ ಆ ಪಡಗವನ್ನು ಕುಂಕುಮದಿಂದ ಶೃಂಗಾರ ಮಾಡುತ್ತಾರೆ.

ಸೂರ್ಯ ಉದಯಿಸುವ ಸಮಯದಲ್ಲಿ ಪೂಜಾರಿಯು ದೇವರ ಬಟ್ಟೆಯನ್ನು ಗಾಗರಿ ಹಾಕಿಕೊಳ್ಳುತ್ತಾನೆ. ಮತ್ತು ನವಿಲಿನ ಗರಿಯನ್ನು ಹಿಡಿದು ದೇವರ ಕಟ್ಟೆಯ ಮೇಲೆ ಚೆನ್ನಾಗಿ ಕುಣಿಯುತ್ತಾನೆ. ಕುಣದು ಕುಣಿದು ಸೂರ್ಯೋದಯದ ಸಮಯದಲ್ಲಿ ಪೂಜಾರಿ ಒಂದು ಪಡಗದಲ್ಲಿರುವ ಸುಡುತ್ತಿರುವ ಹುಗ್ಗಿಯನ್ನು ಕೈಯಲ್ಲಿ ತೆಗೆದು ಸೂರ್ಯ ದೇವರಿಗೆ ತೋರಿಸಿ, ಮತ್ತೇ ಪಡಗದಲ್ಲಿ ೭ ಸಾರಿ ಕೈಯನ್ನು ಹಾಕಿ ತೆಗೆಯುತ್ತಾರೆ. ಆ ಹುಗ್ಗಿಯನ್ನು ಮಣ್ಣಿನ ಪರಣಿಯಲ್ಲಿ ಎಡೆ ಮಾಡಿ ದೇವರ ಮುಂದೆ ಇಟ್ಟು, ಮಧ್ಯದಲ್ಲಿ ತುಪ್ಪ ಮತ್ತು ಬೆಲ್ಲದ ಚೂರನ್ನು ಇಡುತ್ತಾರೆ.

ಮಧ್ಯಾಹ್ನ ೧೨ ಗಂಟೆಗೆ ಕಸಿಮಾಡಿದ ಹೊತವನ್ನು ದೇವರಿಗೆ ಬಲಿ ಕೊಡುವ ಸಮಯದಲ್ಲಿ ಮೂರು ದೇವರು ಅಂದರೆ ಪಾರದನ್ ದೇವಿ, ಅಜಮೀರ್ ಖಡವಿದೇವಿ ಮತ್ತು ಸೀಳ್‌ದೇವಿ ಈ ಮೂರು ದೇವರುಗಳನ್ನು ಈ ಹಿಂದೆ ಮಾಡಿದ ಮಣ್ಣಿನ ಕುಂಡಲದಲ್ಲಿ ಇಡಬೇಕು. ಇಟ್ಟ ನಂತರ ಹೋತನ್ನು ಚೂರಿಯಿಂದ ಕುತ್ತಿಗೆಗೆ ತಿವಿದು ರಕ್ತವನ್ನು ಆ ಕುಂಡಲದಲ್ಲಿ ಹಾಕುತ್ತಾರೆ.

ಸೀಳ್ ದೇವಿ (ಸುಂಕಲಮ್ಮ)

ಈ ದೇವಿಗೆ ಮಂಗಳವಾರ ಮದ್ಯಾಹ್ನ ಒಂದು ಕೋಣವನ್ನು ಬಲಿಕೊಡುತ್ತಾರೆ ಮತ್ತು ದೇವಿಗೆ ಪ್ರತ್ಯೇಕವಾಗಿ ಮಣ್ಣಿನ ಒಲೆಯನ್ನು ಮಾಡುತ್ತಾರೆ. ಅದರ ಮೇಲೆ ಬೆಳಗಿನ ಜಾವ ಐದು ಗಂಟೆಗೆ ಎಣ್ಣೆಯ ಕಡಾಯಿ ಏರಿಸುತ್ತಾರೆ. ಕುದಿಯುವ ಎಣ್ಣೆಯಲ್ಲಿ ಏಳು ಗೋಧಿ ಹುಂಡೆಗಳನ್ನು ಮಾಡಿ ಒಂದು ಆ ದೇವಿಯ ಮುಂದೆ ಇಡಬೇಕು. ಮತ್ತು ಗೋಧಿ ಹಿಟ್ಟಿನ ಏಳು ಚಪಾತಿಗಳನ್ನು ಮಾಡಬೇಕು. ಪಾರದಾನ್‌ದೇವಿ ಮತ್ತು ಸೀಳ್‌ದೇವಿಗೆ ಬಲಿಕೊಟ್ಟು ಹೋತದ ಬಲಭಾಗದಲ್ಲಿರುವ ಅಂಗಗಳನ್ನು ಕೊಯ್ದು ಏಳು ಜಾಲಿಯ ಮರದ ಬರಲನ್ನು ತಂದು ಅವುಗಳನ್ನು ಚೋಪು ಮಾಡಿ ಅವುಗಳಿಗೆ ತುಪ್ಪವನ್ನು ಸವರಿ ಮಾಂಸದ ಚೂರುಗಳನ್ನು ಸಿಕ್ಕಿಸಿ ಒಲೆಯ ಮೇಲೆ ಚೆನ್ನಾಗಿ ಸುಡುತ್ತಾರೆ. ಸುಟ್ಟು ಮಾಂಸವನ್ನು ಎಲ್ಲಾ ದೇವರ ಹೆಸರು ಹೇಳಿ ಎಡೆಯಾಗಿ ಇಡುತ್ತಾರೆ.

ಇವರ ಎಲ್ಲಾ ದೇವರುಗಳ ಮೂರ್ತಿಗಳು ಬೆಳ್ಳಿಯಿಂದ ಮಾಡಿದ್ದು ಸಣ್ಣ ಬಿಲ್ಲೆಯಂತಿರುತ್ತವೆ. ಅದರಲ್ಲಿ ಏಳು ಜನ ಅಕ್ಕತಂಗಿಯರ ಒಂದು ಬಿಲ್ಲೆ (ಅಚ್ಚು), ಸಾವಂಡಿಯಾ ದೇವಿ, ಗಂಗಾಪಾರದಾನ್ ದೇವಿ, ಖುದ್ಧಾ ಮತ್ತು ಆ ಮನೆತನದ ಪೂರ್ವಿಕರ ಸಂಕೇತವಾಗಿ ಬೆಳ್ಳಿಯ ಚಿಕ್ಕ ಚಿಕ್ಕ ಮೂರ್ತಿಗಳನ್ನು ಗದ್ದುಗೆಯ ಮೇಲೆ ಇಟ್ಟಿರುತ್ತಾರೆ. ಮೊದಲ ದಿನ ಸೋಮವಾರ ರಾತ್ರಿ ಹನ್ನೆರಡು ಗಂಟೆಯ ವೇಳೆಗೆ ಖುದ್ಧಾ(ಶಿವ)ನಿಗೆ ಒಂದು ಕೋಣ ಬಲಿಕೊಡುತ್ತಾರೆ. ನಂತರ ಮಂಗಳವಾರ ಮುಂಜಾನೆ ಎರಡು ಕೋಣ, ಎರಡು ಹೋತಗಳನ್ನು ಬಲಿಕೊಡುತ್ತಾರೆ. ಬಲಿಕೊಟ್ಟ ಪ್ರಾಣಿಗಳ ಮಾಂಸವನ್ನು ಒಂದೇ ಕಡೆ ಬೇಯಿಸಿ ಇಡೀ ಕಾಲೋನಿಯ ಜನರೆಲ್ಲಾ ತಿನ್ನುತ್ತಾರೆ. ಅಲ್ಲದೇ ಬೇರೆ ಕಡೆಯಿಂದ ಬಂದ ಇತರ ಸಮುದಾಯವರೂ ಸಹ ಊಟ ಮಾಡುತ್ತಾರೆ. ಬುಧವಾರ ಯಾವುದೇ ಕಾರ್ಯಕ್ರಮ ಇರುವುದಿಲ್ಲ. ಗುರುವಾರ ಸಂಜೆ ಹಂದರದ ಕೆಳಗೆ ನೆಲಸಾರಿಸಿ ದೇವರ ಮೂರ್ತಿಗಳನ್ನು ಸಾವಂಡಿಯಾ ಹೆಣ್ಣುಮಕ್ಕಳು

ಬಿಸಿ ನೀರಿನಿಂದ ತೊಳೆಯುತ್ತಾರೆ. ಆದರೆ ಕಂಪ್ಲಿಯಲ್ಲಿ ಈ ಕೆಲಸವನ್ನು ಗಂಡುಮಕ್ಕಳೇ ಮಾಡುತ್ತಾರೆ. ಕಾರಣ ಇಲ್ಲಿ ಹೆಂಗಸರಿಗೆ ದೇವರ ಮೂರ್ತಿಗಳನ್ನು ಮುಟ್ಟುವ ಅವಕಾಶವಿಲ್ಲ. ಅಂದು ದೇವರನ್ನು ಬಿಸಿ ನೀರಿನಿಂದ ತೊಳೆದು ಗದ್ದುಗೆಯ ಮೇಲೆ ಹತ್ತಿ ಹಳ್ಳೆಯನ್ನು ಹಾಸಿ ಅದರ ಮೇಲೆ ದೇವರ ಮೂರ್ತಿಗಳನ್ನು ಇಡುತ್ತಾರೆ.

ಕೊನೆಯ ದಿನ ಅಂದರೆ ಶುಕ್ರವಾರ ಮಧ್ಯಾಹ್ನ ಮೂರು ಗಂಟೆಯಿಂದ ದೇವರಿಗೆ ಸಾರಾಯಿ ನೈವೇದ್ಯವಾಗುತ್ತದೆ. ದೇವರ ಮೂರ್ತಿಗಳಿಗೆ ಸಾರಾಯಿ ಅಭಿಷೇಕ ಮಾಡುತ್ತಾರೆ. ಇಲ್ಲಿ ಗಮನಿಸಿಬೇಕಾದ ಅಂಶವೆಂದರೆ ಎಲ್ಲಾ ದೇವರಿಗೆ ಸಾರಾಯಿ ನೈವೇದ್ಯವಾದರೆ ಸಾವಂಡಿಯಾ ದೇವಿಗೆ ತುಪ್ಪದ ನೈವೇದ್ಯ ಮಾಡುತ್ತಾರೆ. ಬಹುಶಃ ಸಾವಂಡಿಯಾ ಮನೆತನದ ಹೆಣ್ಣುಮಕ್ಕಳು ಮಧ್ಯೆಸೇವಿಸುವಂತಿಲ್ಲ ಎಂಬ ಸಂಪ್ರದಾಯಕ್ಕೆ ಇದೇ ಕಾರಣವಿರಬಹುದು. ಅಲ್ಲದೆ ಇಂದು ದೇವರು ತಮ್ಮ ಸಾವಂಡಿಯಾ ಬೆಡಗಿನ ಎಲ್ಲಾ ಗಂಡುಮಕ್ಕಳ ಮೈಯಲ್ಲಿ ಬಂದು ಹಿರಿಯರು ಕಿರಿಯರು ಎನ್ನದೇ ಎಲ್ಲರೂ ಸಾರಾಯಿ ಕುಡಿಯುತ್ತಾರೆ. ಕಂಪ್ಲಿಯಲ್ಲಿ ಪೂಜಾರಿಗಳ ಮೈಯಲ್ಲಿ ಮಾತ್ರ ದೇವರು ಬಂದು ಸಾರಾಯಿ ಕುಡಿಯುತ್ತಾರೆ. ಇಂದಿಗೆ ಅಂದರೆ ಶುಕ್ರವಾರ ಈ ಹಬ್ಬ ಮುಕ್ತಾಯವಾಗುತ್ತದೆ. ದೇವರುಗಳನ್ನು ಕೆಂಪು ಬಟ್ಟೆಯಲ್ಲಿ ಸುತ್ತಿ ಕಟ್ಟಿ ಪೂಜಾರಿಯ ಮನೆಯ ಜಗಲಿಯ ಮೇಲೆ ಇರಿಸುತ್ತಾರೆ.

ಈ ಕಾರ್ಯಕ್ರಮಕ್ಕೆ ಕಾಲೋನಿಯ ಮಧ್ಯದಲ್ಲಿ ಬಯಲು ಪ್ರದೇಶದಲ್ಲಿ ಚಪ್ಪರ ಹಾಕಿ ದೇವರುಗಳ ಮೂರ್ತಿಗಳನ್ನು ಆ ಚಪ್ಪರದ ಅಡಿಯಲ್ಲಿ ನೆಲಸಾರಿಸಿ ಗದ್ದುಗೆ ಹಾಸಿ ಅದರ ಮೇಲೆ ಕೂರಿಸುತ್ತಾರೆ. ಗದ್ದುಗೆಯ ಎರಡೂ ಬದಿಗೆ ಎರಡು ಕಬ್ಬಿಣದ ಚಾಕುಗಳನ್ನು ಇಟ್ಟಿರುತ್ತಾರೆ. ಅಲ್ಲದೆ ಲಿಂಬೆಹಣ್ಣು, ಊದುಬತ್ತಿ, ಲೋಬಾನ, ಕುಂಕುಮ, ಧೂಪ, ಇತ್ಯಾದಿಗಳನ್ನು ಇರಿಸುತ್ತಾರೆ. ಈ ಮೂರು ದಿನಗಳು ಮಂಗಳವಾರ, ಬುಧವಾರ, ಗುರುವಾರ ಇಡೀ ಕಾಲೋನಿಯೇ ಮಾಂಸ ಮತ್ತು ಧೂಪದ ಸೊಡರಿನಿಂದ ತುಂಬಿರುತ್ತದೆ.

೨. ಕೊರಬಿಯಾ ದೇವರ ಹಬ್ಬ

ಈ ದೇವರ ಹಬ್ಬವನ್ನು ಸಹ ಮೇಲೆ ವಿವರಿಸಿದಂತೆ ಆಚರಿಸುತ್ತಾರೆ. ಸೋಮವಾರದಂದು ಪೂಜೆ ಪ್ರಾರಂಭಿಸುತ್ತಾರೆ. ಇದೂ ಸಹ ದೇವರು ಅಪ್ಪಣೆ ಕೊಟ್ಟ ವರ್ಷ ಮಾತ್ರ ನಡೆಯುತ್ತದೆ. ಬಯಲಿನಲ್ಲಿ ಹಾಕಿದ ಚಪ್ಪರದ ಅಡಿಯಲ್ಲಿ ಗದ್ದುಗೆಯ ಮೇಲೆ ಈ ಬೆಡಗಿಗೆ ಸೇರಿದ ದೇವರುಗಳಾದ ಖುದ್ಧಾ, ಪಾರದಾನ್ ದೇವಿ, ತುಳುಜಾ ಭವಾನಿ, ಸೀಳ್‌ದೇವಿ ಈ ನಾಲ್ಕು ದೇವರುಗಳನ್ನು ಗದ್ದುಗೆಯ ಮೆಲೆ ಕೂರಿಸುತ್ತಾರೆ.

ಖುದ್ಧ (ಶಿವಾ)

ಮೊದಲದಿನ ಜೋಳ, ಗೋಧಿ, ಅಕ್ಕಿ, ಈ ಮೂರು ಧಾನ್ಯಗಳನ್ನು ಕಲಸಿ ಪೂಜಾರಿಯವರೇ ಸ್ವಸ್ತಿಕ(ಪಾರಭತಿ) ಆಕಾರದಲ್ಲಿ ನೆಲದ ಮೇಲೆ ಬಿಡಿಸುತ್ತಾರೆ. ಆ ಸ್ವಸ್ತಿಕದ ಮೇಲೆ ಖುದ್ಧ ದೇವರ

ಮೂರ್ತಿಯನ್ನು ಇಡುತ್ತಾರೆ. ಅದಕ್ಕೆ ಸೋಮವಾರ ರಾತ್ರಿ ಒಂದು ಕೋಣವನ್ನು ಬಲಿಕೊಟ್ಟು ರಕ್ತದ ಅಭಿಷೇಕ ಮಾಡುತ್ತಾರೆ. ನಂತರ ಕೋಣದ ತಲೆ ಕಡಿದು ದೇವರ ಮುಂದೆ ಇಡುತ್ತಾರೆ. ಕೋಣದ ಬಾಲ ಮತ್ತು ಅದರ ಹೊಟ್ಟೆಯಲ್ಲಿನ ನೆಣವನ್ನು(ಕೊಬ್ಬು) ತೆಗೆದು ಕೋಣದ ತಲೆಯ ಮೆಲೆ ಇಟ್ಟು ಬಾಲವನ್ನು ಕೊಯ್ದು ಅದರ ಬಾಯಲ್ಲಿ ಇಡುತ್ತಾರೆ. ಮಂಗಳವಾರ ಮಧ್ಯಾಹ್ನದ ವೇಳೆಗೆ ಪಾರದನ್ ದೇವಿಗೆ ತುಪ್ಪದ ಕಡಾಯಿ ಏರಿಸುತ್ತಾರೆ. ಕುದಿಯುವ ತುಪ್ಪದಲ್ಲಿ ಪೂಜಾರಿ ಏಳು ಸಿಹಿ ಚಪಾತಿಗಳನ್ನು ಕುದಿಯುವ ತುಪ್ಪದಲ್ಲಿ ಅದ್ದಿ ತೆಗೆಯುತ್ತಾನೆ. ಅದು ಬರಿಗೈಯಲ್ಲಿಯೇ. ಜೊತೆಗೆ ಏಳು ಸಪ್ಪೆ ಚಪಾತಿಗಳನ್ನು ಸಹ ಮಾಡುತ್ತಾನೆ. ನಂತರ ಅವುಗಳನ್ನು ದೇವರಿಗೆ ಎಡೆ ಇಡುತ್ತಾರೆ. ಅಲ್ಲದೇ ಈ ದೇವಿಗೆ ಎರಡು ಆಡು ಬಲಿಕೊಡುತ್ತಾರೆ. ಆಡಿನ ರಕ್ತದಿಂದ ದೇವಿಗೆ ಅಭಿಷೇಕ ಮಾಡುತ್ತಾರೆ.

ತುಳುಜಾ ಭವಾನಿ

ಈ ದೇವಿಗೆ ತುಪ್ಪದ ಕಾಡಾಯಿ ಏರಿಸುತ್ತಾರೆ. ಗಂಗಾದೇವಿಗೆ ಪೂಜೆ ಮಾಡಿದ ರೀತಿಯಲ್ಲಿ ಏಳು ಚಪಾತಿ, ಏಳು ಉಂಡೆಗಳನ್ನು ಗೋಧಿ ಹಿಟ್ಟಿನಲ್ಲಿ ಮಾಡಿ ಕರಿಯುತ್ತಾರೆ. ಅವುಗಳನ್ನು ದೇವರಿಗೆ ಎಡೆ ಇಡುತ್ತಾರೆ ಹಾಗೂ ಅಂದು ದೇವಿಗೆ ಒಂದು ಕೋಣವನ್ನು ಬಲಿಕೊಡುತ್ತಾರೆ. ಅಲ್ಲದೆ ಕೋಣದ ರಕ್ತದಿಂದ ದೇವಿಗೆ ಅಭಿಷೇಕ ಮಾಡುತ್ತಾರೆ. ಏಳು ಚಪಾತಿಗಳನ್ನು ತಮ್ಮ ಬೆಡಗುಗಳ ದೇವತೆಗಳಾದ ಸಪ್ತಮಾತೃಕೆಗಳ ಸಂಕೇತವಾಗಿ ಎಡೆ ಇಡಲಾಗುತ್ತದೆ. ಅಲೆಮಾರಿ ಬೇಟೆಗಾರರಾಗಿದ್ದ ಆದಿಮ ಕಾಲದ ಎಲ್ಲಾ ಮಾನವರು ಪ್ರಾಣಿ ಪಕ್ಷಿಗಳ ಹಸಿಮಾಂಸ ತಿನ್ನುತ್ತಾ, ರಕ್ತ ಕುಡಿಯುತ್ತಾ ಜೀವಿಸಿ ಕಾಲಾನಂತರದಲ್ಲಿ ಬದಲಾವಣೆ ಹೊಂದಿದವರೇ ಆಗಿದ್ದಾರೆ. ಇವರ ಹಬ್ಬಗಳಲ್ಲಿ ದೇವರಿಗೆ ರಕ್ತಾಬಿಷೇಕ ಮಾಂಸದ ಎಡೆ ಇಡುವುದು ಮತ್ತು ತಾವು ಹಸಿ ರಕ್ತವನ್ನು ಕುಡಿಯುವುದನ್ನು ನೋಡಿದರೆ ನಮ್ಮ ಹಿಂದಿನ ಆದಿಮ ಸಂಸ್ಕೃತಿಯ ಕುರುಹುಗಳ ಉಳಿಸಿಕೊಂಡು ಇಂತಹ ಜಾಗತೀಕ ಪ್ರಪಂಚದಲ್ಲಿ ಆಚರಿಸುವುದು ಹಕ್ಕಿಪಿಕ್ಕಿ ಸಮುದಾಯದವರ ವೈಶಿಷ್ಟ್ಯವಾಗಿದೆ. ಈ ದೇವಿಗೆ ಬಲಿಕೊಟ್ಟ ಕೋಣದ ಎದೆ ಸೀಳಿ ಅದರ ಗುಂಡಿಗೆಯನ್ನು ಕತ್ತರಿಸಿ ಸಣ್ಣ ಸಣ್ಣ ಚೂರುಗಳಾಗಿ ಮಾಡಿ ತ್ರಿಶೂಲಕ್ಕೆ ಸಿಕ್ಕಿಸಿ ತುಪ್ಪ ಸವರಿ ಸುಡುತ್ತಾರೆ. ಬೆಂದ ಗುಂಡಿಗೆಯನ್ನು ಮೊದಲೇ ತಯಾರಿಸಿದ್ದ ಏಳು ಸಪ್ಪೆ ಚಪಾತಿಗಳ ಮೇಲೆ ಇಟ್ಟು ದೇವರಿಗೆ ಎಡೆಯಾಗಿ ಎಲ್ಲರೂ ಕೈಯಲ್ಲಿ ಹಿಡಿದು ದೇವಿಗೆ ತೋರಿಸಿ ಮತ್ತೆ ದೇವರ ಮುಂದೆ ಇರಿಸುತ್ತಾರೆ (ಪೂಜಾರಿ ಈರು, ಕೊರಬಿಯಾ, ೫೦).

ಕೊನೆಯದಾಗಿ ಸೀಳ್‌ದೇವಿಗೆ ಎಣ್ಣೆ ಕಡಾಯಿ ಏರಿಸುತ್ತಾರೆ. ಅದರಲ್ಲಿ ಏಳು ಚಪಾತಿ ಕರಿಯುತ್ತಾರೆ. ಅವುಗಳನ್ನು ದೇವಿಗೆ ಎಡೆ ಇಡುತ್ತಾರೆ. ಜೊತೆಗೆ ಒಂದು ಆಡಿನ ಮರಿ ಬಲಿಕೊಡುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಅವರು ಬಲಿಗಳನ್ನು ಕತ್ತರಿಸುವುದಿಲ್ಲ. ಮೊದಲೇ ಅವುಗಳನ್ನು ಅರೆ ಜೀವವಾಗಿಸಿ ಎರೆಮಣ್ಣಿನಿಂದ ಮಾಡಿದ್ದ ಎರಡು ಸಾದ್‌ಸಾರ್‌ಗಳ ಬಳಿ ಎಳೆತಂದು ಕುತ್ತಿಗೆಗೆ ಚಾಕುವಿನಿಂದ ತಿವಿದು ಬಲಿಕೊಡುತ್ತಾರೆ. ಒಂದು ಕುಂಡದಲ್ಲಿ (ಸಾದ್‌ಸಾರ್) ಆಡು ಅಥವಾ ಹೋತಿನ ರಕ್ತವನ್ನು ಸಂಗ್ರಹಿಸಿದರೆ ಮತ್ತೊಂದು ಕುಂಡದಲ್ಲಿ ಕೋಣದ ರಕ್ತವನ್ನು ಸಂಗ್ರಹಿಸುತ್ತಾರೆ.

ಅವುಗಳಲ್ಲಿ ದೇವರುಗಳ ಮೂರ್ತಿಗಳನ್ನು ಅದ್ದಿ ರಕ್ತಾಭಿಷೇಕ ಮಾಡುತ್ತಾರೆ. ಅಲ್ಲದೇ ದೇವರು ಮೈಮೇಲೆ ಬಂದ ಪೂಜಾರಿಗಳು ಕೋಣದ ರಕ್ತವನ್ನು ಕುಡಿಯುತ್ತಾರೆ.

ಇವರ ಎಲ್ಲಾ ಆಚರಣೆಗಳು ಸಾವಂಡಿಯಾದವರು ದೇವರು ಮಾಡಿದ ರೀತಿಯೇ ಮಾಡುತ್ತಾರೆ. ಆದರೆ ವ್ಯತ್ಯಾಸವೆಂದರೆ ಸಾವಂಡಿಯಾದವರು ದೇವರಿಗೆ ಗೋಧಿಯ ಹುಗ್ಗಿ ಎಡೆ ಮಾಡುತ್ತಾರೆ. ಕೊರಬಿಯಾದವರು ಹುಗ್ಗಿ ಎಡೆ ಮಾಡುವುದಿಲ್ಲ. ಮತ್ತೊಂದು ವ್ಯತ್ಯಾಸವೆಂದರೆ ಸಾಂವಡಿಯಾದವರು ಎರಡು ಕೋಣ, ಮೂರು ಕಸಿ ಮಾಡಿದ ಹೋತಗಳನ್ನು ಬಲಿ ಕೊಡುತ್ತಾರೆ. ಕೊರಬಿಯಾದವರು ಎರಡು ಕೋಣ, ಎರಡು ಆಡು, ಒಂದು ಆಡಿನ ಮರಿಯನ್ನು ಬಲಿ ಕೊಡುತ್ತಾರೆ.

ಹಕ್ಕಿಪಿಕ್ಕಿ ಸಮುದಾಯದವರ ಯಾವುದೇ ಬೆಡಗಿನವರ ಹಬ್ಬವಾದರೂ ಸಹ ಒಂದೇ ರೀತಿಯಾಗಿ ಆಚರಿಸುತ್ತಾರೆ. ಬಲಿ ಪ್ರಾಣಿಗಳಲ್ಲಿ ಸ್ವಲ್ಪ ವ್ಯತ್ಯಾಸವಿರಬಹುದಾದರೂ ಉಳಿದ ಆಚರಣೆಗಳೆಲ್ಲಾ ಒಂದೇ ರೀತಿಯಾಗಿರುತ್ತವೆ. ಹಬ್ಬವನ್ನು ಯಾವುದೇ ಬೆಡಗಿನವರಾದರೂ ಸೋಮವಾರ ಪ್ರಾರಂಭಿಸಿ ಶುಕ್ರವಾರ ಮುಗಿಸುತ್ತಾರೆ. ಅದಕ್ಕೂ ಮೊದಲು ಬಂತುಕೆ ಕೇಳುತ್ತಾರೆ. ಕಾಲೋನಿಯ ಮದ್ಯ ಬಯಲಿನಲ್ಲಿ ಚಪ್ಪರ ಹಾಕಿ ಅದರ ಮುಂದೆ ಆಯಾ ಬೆಡಗಿನ ದೇವರುಗಳ ಧ್ವಜ ನಿಲ್ಲಿಸುತ್ತಾರೆ. ಚಪ್ಪರದ ಕೆಳಗೆ ನೆಲಸಾರಿಸಿ ಗದ್ದುಗೆ ಮಾಡಿ ಮುಖ್ಯವಾಗಿ ಎಲ್ಲಾ ಬೆಡಗಿನವರು ಖುದ್ಧಾ, ಪಾರದನ್‌ದೇವಿ, ತುಳುಜಾ ಭವಾನಿ, ಸೀಳ್‌ದೇವಿ ಮತ್ತು ಆಯಾ ಬೆಡಗಿನವರ ಪೂರ್ವಿಕರ (ಮಡಿದ ಹಿರಿಯರ) ಸಂಕೇತ ಬೆಳ್ಳಿಯ ಚಿಕ್ಕ ಚಿಕ್ಕ ಬಿಲ್ಲೆಯಾಕಾರದ ಮೂರ್ತಿಗಳಿರುತ್ತವೆ.

ಅಲ್ಲದೆ ಗದ್ದಿಗೆಯ ಮುಂಭಾಗದಲ್ಲಿ ಎರಡು ಕುಣಿಗಳನ್ನು (ಸಾದಸರ್) ಬಲಿ ಪ್ರಾಣಿಯ ರಕ್ತ ಸಂಗ್ರಹಿಸಲು ಎರೆಮಣ್ಣಿನಿಂದ ಮಾಡಿರುತ್ತಾರೆ. ಒಂದು ಆಡು ಅಥವಾ ಹೋತದ ರಕ್ತವನ್ನು ಸಂಗ್ರಹಿಸಲು ಮತ್ತೊಂದು ಕೋಣದ ರಕ್ತಕ್ಕೆ ಅಲ್ಲದೆ ಎರೆಮಣ್ಣಿನಿಂದ ಎರಡು ಒಲೆಗಳನ್ನು ಮಾಡಿರುತ್ತಾರೆ. ಕೊನೆಯ ದಿನ ಸಾರಾಯಿ ನೈವೇದ್ಯ ಎಲ್ಲಾ ಬೆಡಗಿನ ದೇವರುಗಳಿಗೆ ಆಗಲೇಬೇಕು. ಸಾಮಾನ್ಯವಾಗಿ ಇವರು ದೇವರುಗಳ ಮೂರ್ತಿಗಳನ್ನು ಕೆಂಪು ಬಣ್ಣದ ಬಟ್ಟೆಯಲ್ಲಿ ಹತ್ತಿ ಹರಳೆ ಇಟ್ಟು ಹರಳೆಯ ಮೇಲೆ ದೇವರ ಮೂರ್ತಿಗಳಿಟ್ಟು ಕಟ್ಟಿಡುತ್ತಾರೆ.

ಪೂಜಾರಿಯ ಉಡುಪು

ಹಕ್ಕಿಪಿಕ್ಕಿಯರಲ್ಲಿ ದೇವರು ಯಾರ ಮೈಮೇಲೆ ಬರುತ್ತದೆಯೋ ಅವನೇ ಪೂಜಾರಿಯಾಗಿ ಕಾರ್ಯ ನಿರ್ವಹಿಸುತ್ತಾನೆ. ಪೂಜಾರಿಯು ಪ್ರತಿದಿನ ಸಾಮಾನ್ಯ ಉಡುಗೆ ತೊಡುಗೆಗಳಲ್ಲಿಯೇ ಇರುತ್ತಾನೆ. ದೇವರು ಮಾಡುವ ದಿವಸ ಕೆಂಪು ಲಂಗ, ಕೆಂಪು ಬಟ್ಟೆಯಿಂದ ಸೆರಗಿನ ರೀತಿಯಲ್ಲಿ ನಡುವಿನಿಂದ ಎದೆ ಭಾಗವನ್ನು ಮುಚ್ಚಿಕೊಂಡಿರುತ್ತಾನೆ. ಕಾಲಿಗೆ, ನಡುವಿಗೆ ಗೆಜ್ಜೆಕಟ್ಟಿಕೊಂಡಿರುತ್ತಾನೆ. ಕೈಯಲ್ಲಿ ನವಿಲು ಗರಿಯ ಕಟ್ಟನ್ನು ಹಿಡಿದುಕೊಂಡಿರುತ್ತಾನೆ.

ಹಕ್ಕಿಪಿಕ್ಕಿಯರಲ್ಲಿ ಕೊನೆಯ ಮಗನಿಗೆ ದೈವವು ಸೇರುತ್ತದೆ. ಮನೆಯಲ್ಲಿ ಭಾಗವಾಗುವಾಗ ಹಿಂದಿನಿಂದ ಬಂದಂತಹ ದೇವರುಗಳು ಮನೆಯ ಕೊನೆಯ ಮಗನಿಗೆ ಸೇರುತ್ತವೆ. ದೇವರುಗಳನ್ನು ತೆಗೆದುಕೊಳ್ಳುವಾಗ ಅವನು ತನ್ನ ಅಣ್ಣಂದಿರಿಗೆ ಎರಡೆರಡು ರೂಪಾಯಿ ಕೊಡುತ್ತಾನೆ. ದೇವರು ಮಾಡುವಾಗ ಎಲ್ಲರೂ ತಮ್ಮ ಪಾಲಿನ ಭಾಗವನ್ನು ಹಾಕುತ್ತಾರೆ. ಇವರು ದೇವರು ಮಾಡುವುದು ಕೊನೆಯ ತಮ್ಮನ ಮನೆಯ ಮುಂದೆ.

೩. ತುಳಜಾಭವಾನಿ ಹಬ್ಬ

ಈ ಮೇಲೆ ತಿಳಿಸಿದ ಹಬ್ಬಗಳಲ್ಲದೇ ಕಂಪ್ಲಿ ಕಾಲೋನಿಯಲ್ಲಿ ಎಲ್ಲಾ ಬೆಡಗಿನವರು ಸೇರಿ ಆಚರಿಸುವ ಹಬ್ಬವೆಂದರೆ ತುಳುಜಾ ಭವಾನಿ ಹಬ್ಬ. ಸುಮಾರು ವರ್ಷಗಳ ಹಿಂದೆ ವಲಸೆ ಬಂದ ಇವರು ಕಂಪ್ಲಿಯಲ್ಲಿ ಸರ್ಕಾರ ಕೊಟ್ಟ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡು ತಮ್ಮದೇ ಆದ ಒಂದು ಕಾಲೋನಿಯನ್ನು ರಚಿಸಿಕೊಂಡರು. ಆಗ ಇವರಿಗೆ ಕಾಲೋನಿಯಲ್ಲಿ ಸಮುದಾಯದವರು ಪೂಜಿಸಲು ಒಂದು ದೇವಸ್ಥಾನ ಇರಲಿಲ್ಲ. ತಮ್ಮ ಮನೆದೇವರುಗಳನ್ನು ಮಾತ್ರ ತಮ್ಮ ತಮ್ಮ ಮನೆಗಳಲ್ಲೇ ಪೂಜಿಸುತ್ತಿದ್ದರು. ಈ ಕಾಲೋನಿಯ ಎಲ್ಲಾ ಬೆಡಗಿನವರಿಗೆ ಸಂಬಂಧಪಟ್ಟಂತೆ ಎಲ್ಲರೂ ಪೂಜಿಸಲು ಹಬ್ಬ ಆಚರಿಸಲು ಒಂದು ದೇವಸ್ಥಾನವಿರಲಿಲ್ಲ. ೨೦೦೨ರಲ್ಲಿ ಕಂಪ್ಲಿಗೆ ಕಾರ್ಯನಿಮಿತ್ತ ಬಂದ ಗುಲಬರ್ಗಾದ ಬಿ.ಸುಧಾಕರ, ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಅವರು ಇವರನ್ನು ನೋಡಿ ಇವರು ಎಲ್ಲರೂ ಪೂಜಿಸುವ ದೇವರಾದ ತುಳುಜಾಭವಾನಿಗೆ ಒಂದು ಗುಡಿ ಕಟ್ಟಿಸಲು ಯೋಜನೆ ಹಾಕಿ ೨೦೦೪ರಲ್ಲಿ ತಮ್ಮ ಸ್ವಂತ ಹಣ ಮತ್ತು ಸಮುದಾಯದವರು ವಂತಿಗೆ ಹಾಕಿದ ಹಣದಿಂದ ಪುಟ್ಟದೊಂದು ದೇವಸ್ಥಾನ ಕಟ್ಟಿಸಿದರು. ಅಲ್ಲದೆ ಮಹಾರಾಷ್ಟ್ರದಿಂದ ಕರಿಕಲ್ಲಿನಲ್ಲಿ ಕೆತ್ತಲಾದ ತುಳುಜಾಭವಾನಿಯ ವಿಗ್ರಹ ತರಿಸಿ ಬ್ರಾಹ್ಮಣರಿಂದ ಹೋಮ ಮಾಡಿಸಿ ದಿನಾಂಕ ೦೬.೦೬.೨೦೦೪ರಂದು ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಅಂದಿನಿಂದ ಇಂದಿನವರೆಗೆ ಪ್ರತಿವರ್ಷ ಜೂನ್ ಇಲ್ಲವೇ ಜುಲೈ ತಿಂಗಳಲ್ಲಿ ಈ ದೇವಿಯ ಹಬ್ಬ ಮಾಡುತ್ತಾ ಬಂದಿದ್ದಾರೆ".(ಶ್ರೀಕಾಂತ್ ೬೦, ಕಂಪ್ಲಿ).

ಈ ಹಬ್ಬ ಪ್ರತಿವರ್ಷ ಜೂನ್ ಅಥವಾ ಜುಲೈ ತಿಂಗಳಲ್ಲಿ ಸೋಮವಾರ, ಮಂಗಳವಾರ ಎರಡು ದಿನಗಳ ಕಾಲ ನಡೆಯುತ್ತದೆ. ಸೋಮವಾರ ಬೆಳಗಿನ ಜಾವ ದೇವಿಯ ಚಿಕ್ಕ ಬೆಳ್ಳಿಯ ಮೂರ್ತಿಯನ್ನು ಹೊಳೆಗೆ ಒಯ್ದು ಗಂಗೆಪೂಜೆ ಮಾಡಿಕೊಂಡು ಮೆರವಣಿಗೆಯಲ್ಲಿ ದಂಡದೀಪ ಕಳಸಗಳನ್ನು ತರುತ್ತಾರೆ. ದಾರಿಯುದ್ದಕ್ಕೂ ಮೆರವಣಿಗೆ ಮಾಡುತ್ತಾ ತಾಷರಂಡೋಲ್ ಬಾರಿಸುತ್ತಾ ಕುಣಿಯುತ್ತಾ ದಂಡದೀಪವನ್ನು ತರುತ್ತಾರೆ. ಸೋಮವಾರದಂದು ಕಾಲೋನಿಯ ಎಲ್ಲಾ ಮನೆಗಳಲ್ಲಿ ಸಿಹಿ ಅಡುಗೆ ಮಾಡಿರುತ್ತಾರೆ. ಮರುದಿನ ಮಂಗಳವಾರ ಬೆಳಗಿನ ಜಾವ ಸೂರ್ಯ ಉದಯಿಸುವ ಮೊದಲು ದೇವಿಗೆ ಒಂದು ಅಥವಾ ಎರಡು ಕೋಣಗಳನ್ನು ಬಲಿ ಕೊಡುತ್ತಾರೆ. ಅಂದು ದೇವಿ ಪೂಜಾರಿಯ ಮೈಮೇಲೆ ಬಂದು ಭಕ್ತರ ಕಷ್ಟಗಳನ್ನು ಬಗೆಹರಿಸುತ್ತಾಳೆ ಎಂದು ಹೇಳುತ್ತಾರೆ. ಅಲ್ಲದೆ

ಅಂದು ಭಕ್ತಾದಿಗಳು ದೇವಿಯಿಂದ ಕುರುಹು ಕೇಳುತ್ತಾರೆ. ಹೊತ ಅಥವಾ ಮೇಕೆಯ ಮೇಲೆ ನೀರನ್ನು ಹಾಕಿ ದೇವಿಯ ಮುಂದೆ ನಿಲ್ಲಿಸಿ ಭಕ್ತರು ಮನದಲ್ಲಿ ಕುರುಹು ಕೇಳಿಕೊಳ್ಳುತ್ತಾರೆ. ಅವರು ಅಂದುಕೊಂಡಿದ್ದು ನೆರವೇರವುದಾದರೆ ಆ ಹೋತು ಅಥವಾ ಮೇಕೆ ತನ್ನ ಮೈಯನ್ನು ಕೊಡುವುತ್ತದೆ. ಇಲ್ಲದಿದ್ದರೆ ಸುಮ್ಮನೆ ಇರುತ್ತದೆ. ಸುಮ್ಮನೆ ಇದ್ದರೆ ತಾವು ಅಂದುಕೊಂಡ ಕೆಲಸ ಆಗುವುದಿಲ್ಲವೆಂದು ನಂಬುತ್ತಾರೆ.

ಮಂಗಳವಾರ ಇಡೀ ಕಾಲೋನಿಯಲ್ಲಿ ಮಾಂಸದ ಅಡುಗೆ ಮಾಡಿ ಊಟ ಮಾಡುತ್ತಾರೆ. ಕುರಿ, ಕೋಣ, ಆಡು, ಹೋತ ಹೀಗೆ ವಿವಿಧ ಪ್ರಾಣಿಗಳ ಮಾಂಸವನ್ನು ಅಂದು ಅಡುಗೆ ಮಾಡುತ್ತಾರೆ. ಪ್ರತಿವರ್ಷ ಕಾಲೋನಿಯಲ್ಲಿ ಆಚರಿಸುವ ಈ ಹಬ್ಬದಲ್ಲಿ ಹಕ್ಕಿಪಿಕ್ಕಿ ಸಮುದಾಯದವರಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರನ್ನು ಗುರುತಿಸಿ ಮೂರು ಜನರಿಗೆ ಭವಾನಿ ಪ್ರಶಸ್ತಿ ನೀಡಿ ಸನ್ಮಾನಿಸುವ ಹೊಸ ಪರಂಪರೆ ಹುಟ್ಟುಕೊಂಡಿದೆ. ಹಿರಿಯರ ಸಮ್ಮುಖದಲ್ಲಿ ಪ್ರಶಸ್ತಿ ಪತ್ರ ನೀಡಲಾಗುತ್ತದೆ. ಆದರೆ ಯಾವುದೇ ನಗದು ಬಹುಮಾನ ನೀಡುವುದಿಲ್ಲ. ತಮ್ಮ ಕಾಲೋನಿಯಲ್ಲಿ ಎಲ್ಲಾ ಬೆಡಗಿನವರು ಸೇರಿ ಸಂಭ್ರಮದಿಂದ ಮಾಡುವ ಅತಿ ಪ್ರಮುಖ ಹಬ್ಬವೆಂದರೆ ಈ ತುಳುಜಾ ಭವಾನಿಯ ಹಬ್ಬ (ಶಿಕಾರಿರಾಮು, ೫೦, ಸಾವಂಡಿಯಾ, ಕಂಪ್ಲಿ).

೪. ಸಮುದಾಯದವರ ಇತರೆ ಹಬ್ಬಗಳು

ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯದವರು ಪಾರಂಪರಿಕವಾಗಿ ತಮ್ಮದೇ ಆದ ಸಂಪ್ರದಾಯದೊಂದಿಗೆ ಸಮುದಾಯದವರಷ್ಟೇ ಆಚರಿಸುವ ಹಬ್ಬಗಳನ್ನು ಆಚರಿಸುತ್ತಾ ಬಂದಿದ್ದರೂ. ಪ್ರಸ್ತುತ ದಿನಗಳಲ್ಲಿ ಬದಲಾದ ಸಾಮಾಜಿಕ ವ್ಯವಸ್ಥೆಯಲ್ಲಿ ಹೊಸ ಹೊಸ ಹಬ್ಬ ಆಚರಣೆಗಳನ್ನು ಆಚರಿಸುತ್ತಿದ್ದಾರೆ. ಅಲ್ಲದೇ ಅನ್ಯ ಸಮುದಾಯದವರ ಸಂಪರ್ಕದಿಂದ ಅವರ ಹಬ್ಬಾಚರಣೆಗಳನ್ನು ಅನುಸರಿಸಿ ಆಚರಿಸುತ್ತಿರುವುದು ಕಾಣಬಹುದು.

ಹಕ್ಕಿಪಿಕ್ಕಿಯರು ಇಂದು ಮೊಹರಂ, ದೀಪಾವಳಿ, ಹೋಳಿ ಹಾಗೂ ಗಣೇಶನ ಹಬ್ಬಗಳನ್ನು ಇತ್ತೀಚಿನ ದಿನಗಳಲ್ಲಿ ಆಚರಿಸುತ್ತಿದ್ದಾರೆ. ಹೋಳಿ ಹಬ್ಬವನ್ನು ಕಾಲೋನಿಯ ಎಲ್ಲಾ ಜನರು ಸೇರಿ ಹಿರಿಯರು ಕಿರಿಯರೆನ್ನದೆ, ಗಂಡು ಹೆಣ್ಣು ಭೇದವಿಲ್ಲದೆ ಅಣ್ಣತಂಗಿ ಅಕ್ಕ ತಮ್ಮ ಹೀಗೆ ಎಲ್ಲರೂ ಪರಸ್ಪರ ಬಣ್ಣ ಎರಚಿಕೊಂಡು ಸಂಭ್ರಮದಿಂದ ಆಚರಿಸುತ್ತಾರೆ. ಇವರು ಪ್ರತಿವರ್ಷವೂ ಗಣೇಶ ಚತುರ್ಥಿಗೆ ಗಣೇಶನ ಪ್ರತಿಮೆಯನ್ನು ಸ್ಥಾಪಿಸಿ ಪೂಜಿಸುವುದುಂಟು. ಮೊಹರಂ ಹಬ್ಬವನ್ನು ಸಹ ಪ್ರತಿವರ್ಷ ತಪ್ಪದೇ ಆಚರಿಸುತ್ತಾರೆ.

ಹಕ್ಕಿಪಿಕ್ಕಿ ಸಮುದಾಯದವರು ತಮ್ಮ ಕುಲಗಳಿಗೆ ಸಂಬಂಧಿಸಿದ ಹಬ್ಬಗಳಲ್ಲದೇ ಇತರ ಸಾಮಾಜಿಕ ಹಬ್ಬಗಳನ್ನೂ ಸಹ ಪ್ರತಿವರ್ಷ ಆಚರಿಸುವುದನ್ನು ಕಾಣಬಹುದು. ಅಲ್ಲದೇ ಇವರು ತಮ್ಮ ಹಬ್ಬಗಳಲ್ಲಿ ಬರೀ ಮಾತೃದೇವತೆಗಳನ್ನು ಪೂಜಿಸುವುದಲ್ಲದೆ ಪ್ರಮುಖ ಪಿತೃ ದೈವವಾದ ಖುದ್ಧಾ(ಶಿವ)ನನ್ನು ಎಲ್ಲಾ ಹಬ್ಬಗಳಲ್ಲೂ ಪೂಜಿಸುವುದುಂಟು.

೪.೨. ಜನಪದ ಕಲೆ ಹಾಗೂ ಸಂಪ್ರದಾಯಗಳು

ಜನಪದ ಕಲೆಗಳು ಅಪ್ಪಟ ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದು ಬಂದಂಥವುಗಳು. ಅವುಗಳ ಕೊಡುಗೆ ಅಪಾರವಾದುದು. ಜಾನಪದ ಸಂಪ್ರದಾಯಗಳು ಒಂದು ಸಮುದಾಯದ ಸಮಷ್ಟಿ, ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು. ಅದು ಜನಸಾಮಾನ್ಯರ ಶೃತಿಯೂ ಹೌದು, ಸಂಸ್ಕೃತಿಯೂ ಹೌದು ಎಂಬ ಡಾ. ದೇ.ಜವರೇಗೌಡರ ಮಾತುಗಳು ಜನಪದ ಕಲೆಯ ಮಹತ್ವವನ್ನು ತಿಳಿಸುತ್ತದೆ. "ಕಲೆಗಳನ್ನು ಪ್ರಮುಖವಾಗಿ ಶಿಷ್ಟಪದ ಮತ್ತು ಜನಪದವೆಂದು ವಿಂಗಡಣೆ ಮಾಡಲಾಗಿದೆ. ಶಿಷ್ಟಾಚಾರಗಳ ಚೌಕಟ್ಟಿನಲ್ಲಿ ನಿಸರ್ಗದ ದೂರ ಬದುಕನ್ನು ನಡೆಸಿಕೊಂಡು ಬಂದ ನಗರ ಜನತೆಯ ಕಲೆ ಶಿಷ್ಟಪದ ಕಲೆಯೆನಿಸಿದರೆ ನಿಸರ್ಗ ಸಹಜವಾದ ಬದುಕನ್ನು ನಡೆಸಿಕೊಂಡು ಬಂದ ಗ್ರಾಮೀಣ ಜನತೆಯ ಕಲೆ ಜನಪದ ಕಲೆ ಎನಿಸಿಕೊಳ್ಳುತ್ತದೆ".[೫]

ಕರ್ನಾಟಟಕದ ನೆಲ, ಜನಪದ ಕಲೆಗಳ ಕಣಜವಾಗಿದೆ. ಆದಿಮಕಾಲದಲ್ಲಿ ರೂಪುಗೊಂಡಿರ ಬಹುದಾದ ಕಲೆಯ ಕಾಲದ ಪ್ರಶ್ನೆಗಿಂತ ನಾಡಿನ ಸಂಸ್ಕೃತಿಗೆ ಜನಪದ ಕಲೆ, ಜನರ ಬದುಕಿನ ಆತ್ಮವಾಗಿ ಜೀವವಾಗಿ ಜೀವಂತ ಅಸ್ತಿತ್ವವನ್ನು ನೀಡಿದೆ. ಹೀಗೆ ಕಲೆಯನ್ನೇ ತಮ್ಮ ಜೀವನದ ಅಂಗ ವೆಂಬಂತೆ ರೂಢಿಸಿಕೊಂಡು ಬರುತ್ತಿರುವ ಬುಡಕಟ್ಟುಗಳಲ್ಲಿ ಹಕ್ಕಿಪಿಕ್ಕಿ ಸಮುದಾಯವೂ ಸಹ ಒಂದು. ಇವರು ತಮ್ಮದೇ ಆದ ವಿಶಿಷ್ಟ ಶೈಲಿಯ ಕುಣಿತವನ್ನು ಬಹು ಹಿಂದಿನಿಂದಲೂ ರೂಢಿಸಿಕೊಂಡು ಬಂದಿದ್ದಾರೆ. ಮಹಿಳೆಯರು ಮತ್ತು ಪುರುಷರು ಒಟ್ಟಿಗೆ ಸೇರಿ ವೃತ್ತಾಕಾರದಲ್ಲಿ ನಿಂತು ಡೋಲು ಅಥವಾ ಹಲಗೆಯ ವಾದ್ಯದ ಸದ್ದಿಗೆ ಉಳಿದವರು ವೃತ್ತಾಕಾರದಲ್ಲಿ ಕುಣಿಯುತ್ತಾರೆ. ಹಕ್ಕಿಪಿಕ್ಕಿ ಸಮುದಾಯ ದವರು ತಮ್ಮ ಸಂತೋಷಕ್ಕಾಗಿ ಹಾಡು ಕುಣಿತಗಳನ್ನು ರೂಢಿಸಿಕೊಂಡು ಬಂದಿದ್ದಾರೆ. ಹಬ್ಬಹರಿದಿನಗಳಲ್ಲಿ ಮದುವೆ ಸಮಾರಂಭಗಳಲ್ಲಿ, ದೇವರ ಕಾರ್ಯ ಮುಗಿದ ನಂತರ, ಸಂತೋಷದ ದಿನಗಳಲ್ಲಿ ಗಂಡು-ಹೆಣ್ಣು ಚಿಕ್ಕವರು, ದೊಡ್ಡವರು ಎನ್ನುವ ಭೇದವಿಲ್ಲದೆ ಎಲ್ಲರೂ ಸೇರಿ ಕುಣಿಯುತ್ತಾರೆ. ಪ್ರಾಣಿಗಳ ಚರ್ಮದಿಂದ ಮಾಡಿದ ತಮಟೆ, ತಪ್ಪಡಿ, ಡೋಲ್, ಡೊಳ್ಳು, ಕಂಚಿನಗಂಗಾಳ, ಕಂಸಾಳೆ ಇವುಗಳನ್ನು ತೆಗೆದುಕೊಂಡು ವೃತ್ತಾಕಾರದ ಮಧ್ಯದಲ್ಲಿ ನಿಂತು ಬಾರಿಸುತ್ತಾರೆ. ನುಡಿಸಿದ ಸದ್ದಿಗೆ ತಕ್ಕಂತೆ ಹೆಜ್ಜೆಗಳನ್ನು ಹಾಕಿ ಕುಣಿದು ಸಂತೋಷಪಡುತ್ತಾರೆ.

ಹಕ್ಕಿಪಿಕ್ಕಿ ಸಮುದಾಯದ ಹೆಣ್ಣುಮಕ್ಕಳು ಬೇರೆ ಬೇರೆ ಸಂದರ್ಭಕ್ಕೆ ತಕ್ಕಂತೆ ಹಾಡುಗಳನ್ನು ಹಾಡುತ್ತಾರೆ. ಈ ಹಾಡುಗಳಲ್ಲಿ ದಂಡಿನ ದುರುಗಮ್ಮನ ಹಾಡು ಹೆಚ್ಚು ಜನಪ್ರೀಯವಾದುದು. ಅಲೆಮಾರಿ ಸಮುದಾಯ ವೊಂದು ಸ್ಥಳೀಯ ಸಂಸ್ಕೃತಿ ಆಚರಣೆಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಕಾಣಬಹುದಾಗಿದೆ. ಇವರ ಮುಖ್ಯಕಲೆ ಕುಣಿತ ಸ್ತ್ರೀ ಪುರುಷರು ಗುಂಪುಗೂಡಿ ಕುಣಿಯುವರು. ಕುಣಿತದಲ್ಲಿ

---

೫. ಕರ್ನಾಟಕದ ಜನಪದ ಚಿತ್ರಕಲೆ, ಪಾಟೀಲ ಎಸ್.ಸಿ., ಶ್ರೀ ಜಗದ್ಗುರು ತೊಂಟದಾರ್ಯ ಸಂಸ್ಥಾನ ಮಂಠ, ಗದಗ, ೧೯೯೩, ಪು. ೦೫

ವೈವಿಧ್ಯತೆ ಕಡಿಮೆ ಆಂಡಬರ ರಹಿತ ಸರಳ ಕುಣಿತವಿದು. ಆಕರ್ಷಕವಾದ ಈ ಕುಣಿತವು ಹೆಜ್ಜೆಗಳ ಲೆಕ್ಕಾಚಾರದ ಮೇಲೆ ಸಾಗುವ ಈ ಕಲಾಪ್ರಕಾರವನ್ನು ಹಕ್ಕಿಪಿಕ್ಕಿಯರು ಮೈಗೂಡಿಸಿಕೊಂಡು ಬಂದಿದ್ದಾರೆ. "ಕರ್ನಾಟಕದ ಆದಿವಾಸಿಗಳಲ್ಲಿ ಅಪೂರ್ವ ನೃತ್ಯಗಳು ಇನ್ನೂ ಉಳಿದು ಬಂದಿವೆ. ಕುಣಿತವಿಲ್ಲದ ಆದಿವಾಸಿ ಸಮಾಜವಿಲ್ಲ. ಹಾಡಿಲ್ಲದ ಕುಣಿತವಿಲ್ಲದ ಜನಾಂಗವಿಲ್ಲ."[೬] ಕುಣಿತ ಮನುಷ್ಯನ ಸಹಜ ಸ್ವಭಾವ ಮನುಷ್ಯನ ಮೊದಲ ಮಾತೇ ಕುಣಿತವಾಗಿದೆ. ತನಗೆ ಸುಖಸಂತೋಷಗಳುಂಟಾದಾಗ ಅದನ್ನೇ ಕುಣಿತ, ಕೇಕೆಗಳ ಮೂಲಕ ವ್ಯಕ್ತಪಡಿಸುತ್ತಾನೆ. ಅತೀವ ಆನಂದವಾದಾಗ, ಆವೇಶವುಂಟಾದಾಗ ಕಾಲು ಕುಣಿತಕ್ಕೆ ತೊಡಗುತ್ತದೆ".[೭] ಹಕ್ಕಿಪಿಕ್ಕಿಯರು ಇದಕ್ಕೆ ಹೊರತಾಗಿಲ್ಲ. ಇವರು ಐದು ಬಗೆಯ ಹೆಜ್ಜೆಯ ಕುಣಿತ ಮಾಡುತ್ತಾರೆ. ಇವರು ತಮ್ಮ ಹಬ್ಬಗಳಲ್ಲಿ ಕುಣಿಯುವುದನ್ನು ನೋಡಲು ಇತರ ಸಮುದಾಯದವರು ಗುಂಪು ಗುಂಪು ಬರುತ್ತಾರೆ. ಇವರ ನೃತ್ಯ ನೋಡಿ ಸಂತೋಷಪಡುತ್ತಾರೆ. ಕಂಪ್ಲಿಯಲ್ಲಿನ ಹಕ್ಕಿಪಿಕ್ಕಿ ಸಮುದಾಯದವರು ತಮ್ಮ ಜನಪದ ನೃತ್ಯ ಕಲೆಯನ್ನು ಪರಂಪರಾಗತವಾಗಿ ಪಾಲಿಸಿಕೊಂಡು ಬಂದಿದ್ದಾರೆ. ಇವರ ಈ ನೃತ್ಯಕಲೆಯನ್ನು ಸರ್ಕಾರ ಗುರುತಿಸಿ ಮೊಟ್ಟಮೊದಲಿಗೆ ಅಕ್ಷರ ವಿಜಯ ಸಾಕ್ಷರತಾ ಯೋಜನೆ ಯಲ್ಲಿ ಅನಕ್ಷರಸ್ಥ ಜನರಲ್ಲಿ ಶಿಕ್ಷಣದ ಬಗ್ಗೆ ಅರಿವು ಮೂಡಿಸಲು ಬಳಸಿಕೊಂಡರು. ನಂತರದ ದಿನಗಳಲ್ಲಿ ಇವರ ಜನಪದ ಕಲೆಯನ್ನು ಗುರುತಿಸಿದ ಬಳ್ಳಾರಿ ಜಿಲ್ಲೆ ಕನ್ನಡ ಮತ್ತು ಸಂಸ್ಕೃತ ಇಲಾಖೆಯವರು ಇವರಿಗೆ ಕಲಾತಂಡಗಳನ್ನು ರಚಿಸಿಕೊಳ್ಳಲು ಸಲಹೆ ಸಹಾಯ ನೀಡಿತು. ಇದರಿಂದ ಜಾಗೃತರಾದ ಹಕ್ಕಿಪಿಕ್ಕಿ ಕಾಲೋನಿಯವರು ತಮ್ಮ ಮುಖಂಡ ಶಿಕಾರಿ ರಾಮು ಅವರ ನೇತೃತ್ವದಲ್ಲಿ ಕಲಾ ತಂಡಗಳನ್ನು ಕಟ್ಟಿಕೊಂಡು, ವಿವಿಧ ರಾಜ್ಯಗಳಲ್ಲಿ ಅಲ್ಲದೆ ಕರ್ನಾಟಕದ ಪ್ರತಿಶತ ಎಲ್ಲಾ ಜಿಲ್ಲೆಗಳಲ್ಲೂ ತಮ್ಮ ಕಲಾ ಪ್ರದರ್ಶನ ನೀಡಿದ್ದಾರೆ. ಇಂದು ಸರ್ಕಾರದ ಯಾವುದೇ ಕಾರ್ಯಕ್ರಮಗಳಿದ್ದರು ಇವರನ್ನು ಕರೆಸುವುದುಂಟು. ಕಂಪ್ಲಿ ಕಾಲೋನಿಯಲ್ಲಿ ಇಂದು ಹಲವು ಕಲಾ ತಂಡಗಳು ಹುಟ್ಟಿಕೊಂಡಿವೆ.

- ಹಕ್ಕಿಪಿಕ್ಕಿ ಬುಡಕಟ್ಟು ಮಹಿಳಾ ಜನಪದ ನೃತ್ಯ ಕಲಾತಂಡ
- ಉದಯ ತಾಷಾರಾಮ್‌ಡೋಲ್, ಹಕ್ಕಿಪಿಕ್ಕಿ ಬುಡಕಟ್ಟು ಪುರುಷ ಶಬ್ದವಾದ್ಯ ಕಲಾತಂಡ
- ಗಂಗಾಭವಾನಿ ತಾಷಾರಾಮ್‌ಡೋಲ್ ನೃತ್ಯಕಲಾ ತಂಡ
- ಶ್ರೀ ಕೃಷ್ಣ ತಾಷಾರಾಮ್‌ಡೋಲ್ ಕಲಾ ತಂಡ
- ಶ್ರೀ ದುರ್ಗಾದೇವಿ ತಾಷಾರಾಮ್‌ಡೋಲ್ ಕಲಾ ತಂಡ
- ತುಳುಜಾಭವಾನಿ ತಾಷಾರಾಮ್‌ಡೋಲ್ ಕಲಾ ತಂಡ

---

೬. ಗಿರಿಜನ ಸಿರಿ, ಖಂಡೋಬಾ ಪಿ.ಕೆ., ಖಂಡೋಬಾ ಅಭಿನಂದನಾ ಸಮಿತಿ, ಧಾರವಾಡ, ೨೦೦೩, ಪು. ೪೧೫

೭. ಕರ್ನಾಟಕ ಬುಡಕಟ್ಟುಗಳು, ಸಂಪುಟ–೨, ಲಕ್ಕಪ್ಪಗೌಡ ಎಚ್.ಜೆ., ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೨೦೦೦, ಪು. ೨೨೬

ಹೀಗೆ ಹಲವು ತಂಡಗಳನ್ನು ರಚಿಸಿಕೊಂಡ ಹಕ್ಕಿಪಿಕ್ಕಿ ಸಮುದಾಯದವರು ದೇಶ ವಿದೇಶಗಳಲ್ಲಿ ಹಾಗೂ ರಾಜ್ಯದ ಹಲವು ಜಿಲ್ಲೆಗಳಲ್ಲಿ, ಸುತ್ತಮುತ್ತಲಿನ ಹಳ್ಳಿ, ನಗರಗಳಲ್ಲಿ ಆಹ್ವಾನದ ಮೇರೆಗೆ ಹೋಗಿ ತಮ್ಮ ಕಲಾ ಪ್ರದರ್ಶನ ನೀಡುತ್ತಿದ್ದಾರೆ. ಎಲ್ಲಾ ತರಹದ ಸಂತೋಷ ಸಮಾರಂಭಗಳಿಗೆ ಇವರನ್ನು ಆಹ್ವಾನಿಸುವುದುಂಟು ಇವರ ಸಂಗೀತ, ನೃತ್ಯ ಸುತ್ತಮುತ್ತಲಿನ ಹಳ್ಳಿಗರಿಗೆ ಹಾಗೂ ಕಂಪ್ಲಿಯ ಇತರ ಜನತೆಗೆ ತುಂಬಾ ಮೆಚ್ಚುಗೆ ಇವರು ಪ್ರದರ್ಶನ ನೀಡಿದ ಸರ್ಕಾರದ ಕಾರ್ಯಕ್ರಮಗಳೆಂದರೆ,

- ಕನ್ನಡ ಮತ್ತು ಸಂಸ್ಕೃತ ಇಲಾಖೆ, ಬೆಂಗಳೂರು
- ಕನ್ನಡ ಮತ್ತು ಸಂಸ್ಕೃತ ಇಲಾಖೆ, ಬಳ್ಳಾರಿ
- ಕನ್ನಡ ಮತ್ತು ಸಂಸ್ಕೃತ ಇಲಾಖೆ, ಶಿವಮೊಗ್ಗ
- ಕನ್ನಡ ಮತ್ತು ಸಂಸ್ಕೃತ ಇಲಾಖೆ, ಕೋಲಾರ

ಹೀಗೆ ಬಹುತೇಕ ಕರ್ನಾಟಕದ ಎಲ್ಲಾ ಜಿಲ್ಲಾ ಕನ್ನಡ ಮತ್ತು ಸಂಸ್ಕೃತ ಇಲಾಖೆಗಳಲ್ಲಿ ನೃತ್ಯಕಲಾ ಪ್ರದರ್ಶನ ನೀಡಿದ್ದಾರೆ. ಅಲ್ಲದೇ ನುಡಿತೇರು, ಜನಪದ ಜಾತ್ರೆ, ಮೈಸೂರು ರಂಗಾಯಣದಲ್ಲಿ ನಾಲ್ಕು ಕಾರ್ಯಕ್ರಮಗಳು ಮತ್ತು ಬುಡಕಟ್ಟು ಇಲಾಖೆ, ಬೆಂಗಳೂರು. ಹೀಗೆ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ನೃತ್ಯಕಲೆಯನ್ನು ಪ್ರದರ್ಶಿಸಿದ್ದಾರೆ. ಇವುಗಳಲ್ಲದೇ ವಾರ್ತಾ ಇಲಾಖೆಗಳಲ್ಲಿ ತಮ್ಮ ಜಾನಪದ ಕಲೆಯನ್ನು ಪ್ರದರ್ಶಿಸಿ ಕಾರ್ಯಕ್ರಮ ನೀಡಿದ್ದಾರೆ.

ವಾರ್ತಾ ಇಲಾಖೆಗಳಲ್ಲಿ ಕಾರ್ಯಕ್ರಮ

ಕಂಪ್ಲಿಯ ಹಕ್ಕಿಪಿಕ್ಕಿಯರು ತಮ್ಮ ಜನಪದ ನೃತ್ಯಕಲೆಯನ್ನು ಸುತ್ತಮುತ್ತಲಿನ ಊರುಗಳಲ್ಲಿ ಹಲವು ಹಬ್ಬಾಚರಣೆಗಳಲ್ಲಿ ಸರ್ಕಾರದ ಕಾರ್ಯಕ್ರಮಗಳಲ್ಲಿ ಪ್ರದರ್ಶಿಸಿರುವುದು ಮಾತ್ರವಲ್ಲದೆ ರಾಜ್ಯದ ವಿವಿಧ ವಿಭಾಗಗಳ ವಾರ್ತಾ ಇಲಾಖೆಗಳಲ್ಲಿ ತಮ್ಮ ಜನಪದ ನೃತ್ಯಕಲೆ ಮತ್ತು ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ.

- ೨೦೧೦-೧೧ನೇ ಸಾಲಿನಲ್ಲಿ ಹಾವೇರಿಯಲ್ಲಿ ಶಬ್ದವಾದ್ಯ ಮಹಿಳಾ ತಂಡದಿಂದ ಕಾರ್ಯಕ್ರಮ ನೀಡಲಾಗಿತ್ತು.
- ೨೦೧೩ರಲ್ಲಿ ಗುಲಬರ್ಗಾದಲ್ಲಿ ೧೩ ಜನರ ಪುರುಷ ಮತ್ತು ಮಹಿಳೆಯರ ತಂಡದಿಂದ ನೃತ್ಯ ಕಾರ್ಯಕ್ರಮ.
- ೨೦೧೩ರಲ್ಲಿ ಬೆಳಗಾವಿ ವಿಭಾಗದಲ್ಲಿ ಕಾರ್ಯಕ್ರಮ ಕೊಟ್ಟಿದ್ದು.
- ಕೊಪ್ಪಳದಲ್ಲಿ ಏಳು ದಿನಗಳ ಕಾಲ ತರಬೇತಿ ಶಿಬಿರದಲ್ಲಿ ಕಾರ್ಯಕ್ರಮ.

ಬಾಗಲಕೋಟೆಯಲ್ಲಿ ಹತ್ತು ದಿನಗಳ ಕಾಲ ತರಬೇತಿ ಮತ್ತು ಪ್ರದರ್ಶನ ೧೨ ಜನರ ತಂಡ ಆರು ಜನ ಮಹಿಳೆಯರು ಆರು ಜನ ಪುರುಷರು.

ಇವುಗಳ ಜೊತೆಗೆ ಹೊರ ರಾಜ್ಯವಾದ ಭೂಪಾಲ್‌ನಲ್ಲಿ ಆಲ್ ಇಂಡಿಯಾ ಆದಿವಾಸಿ ಕಲಾಪ್ರದರ್ಶನ ಕಾರ್ಯಕ್ರಮದಲ್ಲಿ ನೃತ್ಯ ಪ್ರದರ್ಶನ ನೀಡಿದ್ದಾಗಿ ಕಂಪ್ಲಿ ಹಕ್ಕಿಪಿಕ್ಕಿ ಕಾಲೋನಿಯ ಪ್ರಮುಖ ಶಿಕಾರಿ ರಾಮು ಅವರು ಮಾಹಿತಿ ತಿಳಿಸಿದರು.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದಂತೆ ಕಾಲೋನಿಯಲ್ಲಿ ಅಥವಾ ಊರಿನಲ್ಲಿ ಯಾವುದೇ ಹಬ್ಬ ಜಾತ್ರೆಗಳಲ್ಲದೇ ಯಾರಾದರೂ ರಾಜಕಾರಣಿಗಳ ಮೆರವಣಿಗೆ, ಗಣೇಶನ ಮೆರವಣಿಗೆ ಮುಂತಾದ ಕಾರ್ಯಕ್ರಮಗಳಲ್ಲಿ ಈ ಕಾಲೋನಿಯ ಕಲಾತಂಡಗಳು ಭಾಗವಹಿಸಿ ನೆರೆದ ಜನರಿಗೆ ತಮ್ಮ ರಾಮಡೋಲ್ ವಾದ್ಯ ನೃತ್ಯಗಳ ಪ್ರದರ್ಶನದಿಂದ ಮನೋರಂಜನೆ ನೀಡುತ್ತಾರೆ. ಇವರ ವಿಶಿಷ್ಟ ನೃತ್ಯವನ್ನು ಕಂಡು ಸುತ್ತಮುತ್ತಲ ಹಳ್ಳಿಯವರು ತಮ್ಮ ಊರಿನಲ್ಲಿನ ಉತ್ಸವಗಳಿಗೆ ಇವರನ್ನು ಅಮಂತ್ರಿಸುವುದುಂಟು. ಇವರು ಸ್ತ್ರೀ ಪುರುಷರೆಂಬ ಬೇಧಭಾವವಿಲ್ಲದೆ ವಾದ್ಯಗಳ ಸದ್ದಿಗೆ ತಕ್ಕಂತೆ ಹೆಜ್ಜೆ ಬದಲಿಸುತ್ತಾ ಕುಣಿಯುವುದು ನೋಡುಗರಿಗೆ ಸಂತೋಷವನ್ನುಂಟು ಮಾಡುತ್ತದೆ. ನೃತ್ಯದ ಸಂದರ್ಭದಲ್ಲಿ ಬಳಸುವ ವಾದ್ಯಗಳು.

ತಪ್ಪಡಿ = ಹಲಗೆ	ಡೊಳ್ಳು = ಡೋಲ್	ತಾಷ = ತಾಷೋ
ಗೆಜ್ಜೆಗಳು = ಗುಂಘ್ಘರ	ಕಂಸಾಳೆ = ಖಃಖಾಳಿ	ಕಂಚಿನ ಗಂಗಾಳ = ಕಂಚಿನ ಥಾಳಿ

ಸಾಂಪ್ರದಾಯಿಕ ಸಂಗೀತ

ಹಕ್ಕಿಪಿಕ್ಕಿಯರ ಭಾಷೆಗೆ ಲಿಪಿಯಿಲ್ಲದಿದ್ದರೂ ಮೌಖಿಕವಾಗಿ ಅವರಲ್ಲಿ ಸಾಕಷ್ಟು ಸಾಹಿತ್ಯ ಲಭ್ಯ ವಾಗುತ್ತದೆ. ತಮ್ಮ ಅಲೆಮಾರಿತನದ ನಡುವೆಯೂ ಅವರು ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಬೇಟೆಗೆ ಹೋದಾಗ, ವ್ಯಾಪಾರಕ್ಕೆ ಹೋದಾಗ, ಬಿಡುವಿನ ವೇಳೆಯಲ್ಲಿ ಸಮಯ ಕಳೆಯಲು ಕತೆ ಗಳನ್ನು, ಒಗಟುಗಳನ್ನು ಹೇಳುತ್ತಾರೆ. ಹಬ್ಬ ಹರಿದಿನಗಳಲ್ಲಿ ದೇವರ ಕುರಿತಾದ ಹಾಡುಗಳನ್ನು ಸಹ ಹಾಡುತ್ತಾರೆ. ತಪ್ಪಡಿ, ತಾಳ, ಡೊಲ್‌ಗಳನ್ನು ಬಳಸಿಕೊಂಡು ಗಂಟೆಗಟ್ಟಲೆ ಹಾಡುಗಳನ್ನು ಹಾಡುತ್ತಾರೆ. ಕಂಪ್ಲಿ ಕಾಲೋನಿಯಲ್ಲಿ ಅನೇಕರನ್ನು ಸಂದರ್ಶಿಸಿ ಸಂಗ್ರಹಿಸಿದ ಹಾಡು, ಒಗಟುಗಳೆಂದರೆ

* "ಮಲಿ ಮಲಿ ಚಿಯೋ ಲಹಂಗಾನ್ ಮೇಲ್
ಧರಿಶಿನಾ ಮೇಲ್ ತು ಕೃಷ್ಣ ಕಾಳೊ
ಮೂ ರಾಧಾ ಗೋರಿ ತಾರಿ ಮಾರಿ ಸಿನಾ ಜೋಡ್
ಜಾಯಿನ ಕಹಾಯಿಸಿ ನಂದ ಮಾ ಮುಜನ
ತೊಡಾಯಿಸಿ ತಾರಿ ಕೋಡಿ" (ಹಾಡಿದವರು: ಲತಾ ೪೦, ಖೋಡಿಯಾರ್, ಕಂಪ್ಲಿ)

ಈ ಹಾಡಿನ ಕನ್ನಡ ಸಾರಾಂಶ ಕೃಷ್ಣನು ರಾಧೆಯ ಸೆರಗನ್ನು ಹಿಡಿದು ಎಳೆಯುವಾಗ ರಾಧೆಯು ಕೃಷ್ಣನನ್ನು ಕೆಣಕುತ್ತಾ ನೀನು ತುಂಬಾ ಕಪ್ಪಾಗಿದ್ದಿಯಾ ನಾನು ತುಂಬಾ ಕೆಂಪಗಿದ್ದೇನೆ ನನಗೂ ನಿನಗೂ ಎಲ್ಲಿಯ ಜೋಡಿ ಸುಮ್ಮನೆ ನನ್ನನ್ನು ಕಾಡಬೇಡ ಹೋಗು ಇಲ್ಲವಾದರೆ ನನ್ನ ಮಾವನಾದ ನಂದು ಮಾವನಿಗೆ ಹೇಳಿ ನಿನ್ನನ್ನು ಹೊಡೆಸುತ್ತೇನೆ ಎನ್ನುತ್ತಾಳೆ. ಇಲ್ಲಿ ಕೃಷ್ಣರಾಧೆಯರ ಸರಸ ಸಲ್ಲಾಪದ ಸಂದರ್ಭದ ಸಂಭಾಷಣೆಯನ್ನು ಹಾಡಿನ ರೂಪದಲ್ಲಿ ತಿಳಿಸಲಾಗಿದೆ.

ಹಕ್ಕಿಪಿಕ್ಕಿಯರ ಪ್ರಮುಖ ಪುರುಷ ದೈವವಾದ ಖುದ್ಧಾ(ಶಿವ)ನನ್ನು ಕುರಿತ ಹಾಡು

* ಆಜಿ ಧನಿರಾಯೋ
ತಾರಿ ಮಾಯೊ ನ್ಯಾರಿ
ಲೋಕನೋ ಪೋಚೊ ತಾರಿಯಾ ಮಾಯೊ ||

ಚಿಡಿಯು ಮು ಕೋಟಿ
ಜೀವಯ ರಾಶಿನೋ
ಅನ್ನಪೂರ್ಣ ಕರ್ನಾರೊ
ತು ಧನಿರಾಯ ||

ಆಜಿ ಧನಿರಾಯೋ
ತಾರಿ ಮಾಯಾ ನ್ಯಾರಿ
ಲೋಕನೋ ಪೋಚೊ ತಾರಿಯಾ ಮಾಯೊ || (ಹಾಡಿದವರು ಶಿಕಾರಿ ರಾಮು, ೫೦, ಸಾವಂಡಿಯಾ)

ಕನ್ನಡ ಸಾರಾಂಶ ಇಂದು ಒಡೆಯಾ
ನಿನ್ನ ಮಾಯೆ ಬೇರೆ
ಲೋಕಕ್ಕೆ ತಿಳಿದಿದೆ ನಿನ್ನಯಾ ಮಾಯೆ ||

ತೃಣದಿಂದ ಕೋಟಿಯ ವರೆಗೆ
ಜೀವ ರಾಶಿಗಳಿಗೂ
ನೀನೇ ಒಡೆಯಾ
ಜೀವರಾಶಿಗಳಿಗೆಲ್ಲಾ ಅನ್ನ ಹಾಕುವವನು ನೀನೇ ಒಡೆಯಾ

ಇಂದು ಒಡೆಯಾ
ನಿನ್ನ ಮಾಯೆ ಬೇರೆ
ಲೋಕಕ್ಕೆ ತಿಳಿದಿದೆ ನಿನ್ನಯಾ ಮಾಯೆ ||

* “ಜಯ ದುರ್ಗೆ ದುರ್ಗತಿ ಪರಿಹಾರಿಣಿ
ಶುಂಭ ವಿಧಾರಿಣಿ ಮತಾ ಭವಾನಿ
ಆದಿಶಕ್ತಿ ಪರಿಬ್ರಹ್ಮ ಸ್ವರೂಪಿಣಿ
ಜಗಜನನಿ ಚಹೋ ವೇದ ಬಕಾಲಿನಿ
ಬ್ರಹ್ಮಾನಂದ ಶರಣಮಿ ಆಯೋ
ಭಯೋ ಭಯಾ ನಾಶಕರೋ ಮಹಾರಾಣಿ” (ಲತಾ, ೪೦ ಖೋಡಿಯಾರ, ಕಂಪ್ಲಿ)

ಈ ಹಾಡಿನ ತಾತ್ವರ್ಯ ಲತಾ ದಂಪತಿಗಳೇ ಹೇಳುವಂತೆ ಪಾರ್ವತಿ ದೇವಿಯು ಮಹಾಕಾಳಿಯ ಅವತಾರ ತಾಳಿ ಎಲ್ಲಾ ರಾಕ್ಷಸರನ್ನು ಸಂಹರಿಸಿ ಕೊನೆಗೆ ದೇವಲೋಕದಲ್ಲಿನ ದೇವತೆಗಳನ್ನು ಕೊಲ್ಲ ತೊಡಗುತ್ತಾಳೆ. ಅವಳನ್ನು ಶಾಂತಗೊಳಿಸಲು ಯಾರಿಂದಲೂ ಸಾಧ್ಯವಾಗದಾಗ ಶಿವನನ್ನು ದೇವತೆಗಳು ಬೇಡಿಕೊಂಡು ನೀನೇ ಅವಳಿಗೆ ಉಗ್ರರೂಪ ನೀಡಿದೆ. ಈಗ ನೀನೇ ಆ ತಾಯಿಯನ್ನು ಶಾಂತಗೊಳಿಸು ಎಂದಾಗ ಶಿವನು ತನ್ನ ಹೆಂಡತಿಯಾದ ಮಹಾಂಕಾಳಿ ರೂಪದ ಪಾರ್ವತಿಯನ್ನು ಬೇಡಿಕೊಳ್ಳುತ್ತಾನೆ.

ಹೇ ದುರ್ಗಾದೇವಿಯೇ ದುಷ್ಟರ ಸಂಹಾರಿಣಿ, ಆದಿಶಕ್ತಿಯೇ

ಪರಬ್ರಹ್ಮ ಸ್ವರೂಪಿಣಿಯೇ, ರುಂಡಮಾಲಿನಿಯೇ ಪರಬ್ರಹನಾದ ನಾನೇ ನಿನ್ನ ಪದಾದಡಿಯಲ್ಲಿ ಬಿದ್ದಿರುವೆ ಶಾಂತಳಾಗು ಎಂದು ಬೇಡಿಕೊಳ್ಳುತ್ತಾನೆ. ಆಗ ಶಿವನ ಎದೆಯ ಮೆಲೆ ಕಾಲಿಟ್ಟ ದೇವಿಯು ಎಚ್ಚೆತ್ತುಕೊಂಡು ಶಾಂತಳಾಗುವಳು ಎಂಬ ವಿಷಯದ ಸ್ವಲ್ಪ ಭಾಗವನ್ನು ಈ ಮೇಲಿನಂತೆ ಶ್ರೀಮತಿ ಲತಾ ಮೋಹನ್ ಅವರು ಹಾಡಿದರು.

ಕೇವಲ ಹಾಡುಗಳು ಮಾತ್ರವಲ್ಲದೆ ಇವರು ಬಿಡುವಿನ ವೇಳೆಯಲ್ಲಿ ಅನೇಕ ಒಗಟುಗಳನ್ನು ಹೇಳುತ್ತಾರೆ. ವಸ್ತು, ಪ್ರಾಣಿ, ಪಕ್ಷಿಗಳಿಗೆ ಸಂಬಂಧಿಸಿದಂತೆ ಹಲವು ಒಗಟುಗಳು ವಾಗ್ರಿ ಭಾಷೆಯಲ್ಲಿ ಕಂಪ್ಲಿಯ ಹಕ್ಕಿಪಿಕ್ಕಿಯರು ಹೇಳುತ್ತಾರೆ.

ಒಗಟುಗಳು

* “ಗಾಂಡಿ ವಗರ್‌ಲ್ಯೊ ಟೊಪ್ಲಾಮು
ಮುಟ್ಟಿ ವಗರ್ ಲ್ಯೋ ದಾಂತ್ತುಡು
ವಾಡ್ಡಿನಾ ಗಾಂಢಿವಗರ್‌ಲ್ಯೊ ಟೊಪ್ಲಾಮ ಚು ನಾಚು
ಬಕ್ಕಾ ವಗರ್‌ಲ್ಯೆ ಆದ್ಮಿ ಚೋ ಮೈನಾ ಖಾದ್ದು (ಉತ್ತರ: **ಮುಖಾಣ್**)

ಕನ್ನಡದಲ್ಲಿ: ಹಿಡಿ ಇಲ್ಲದಾ ಕುಡುಗೋಲಿನಿಂದ ಕೊಯ್ದು
ಕುಂಡೆ ಇಲ್ಲದಾ ಮುಟ್ಟಿಗೆ ಹಾಕಿದರೆ
ಬಾಯಿ ಇಲ್ಲದವ ಆರು ತಿಂಗಳು ತಿಂದ (**ಮಣ್ಣು**)

ಈ ಒಗಟಿನ ಅರ್ಥ ಸತ್ತ ಹೆಣವನ್ನು ಹೂತಾಕಿದಾಗ ಹೆಣ ಮಣ್ಣು ತಿಂದು ಕೊಳೆಯುವುದು ಎಂಬರ್ಥ.

* "ಏಕ್ ಭಾಯ್, ಭಾಯಿನಿ, ಭಹಾನ್ ಭಹನೇವಿ
ಅಯ್ಯು ನಾ ಘರ್ತಾ ಭವಿನಾ ಘರ್ ಮಲ್ಲುವಾನಕಳ್ಯಾ
ಜತಾ ಜತಾ ವಾಟ್ ಪರಿ ಏಕ್ ದೇವೊಳ್ ದಿಟ್ಸೊಂ
ಯೋ ದೇವೊಳ್ಳ್ಮು ರಾತಿ ಪಡಿರಿಯಾ
ಖಿತ್ತೇಲಿ ವಕ್ಕಲ್ ಮೂ ಏಕ್‌ಸೂರ್‌ಟು ಮಾಂಗ್ ಆವ್ಯೊ
ಆವಿನ್ ಭಾಯಿನೋ, ಭಾವರಿನೊ ಮೂಂಡ್ ಕತ್ರಿನ್
ಸಲೋಜೊ ಬಾವಣ್ ಹುಟ್ವಿನ್ ಜೋಯಾ
ಜೊತಾನೂ ಧಡೆಕೂಳಂ ಮುಂಡೇಕೊಳಂ ಪಡಿರಿಯಾಹ
ಯೋಜನ್ ಬೊ ಧಡನಾ ಅವಸರ ಮಾ
ಭಯ್‌ನಾ ಧಡ್ಡನ ಭವಾರಿನೂ ಮುಂಡ್
ಭವರಿನಾ ಧಢನ ಭಯಿನೊ ಮೂಂಡ್ ಲಗಾಡಿನ್
ದೇವಣ್ ಮಹಾಣಾ ಮೂರ್‌ವಾಲಜಿ ಮೆಹಣಾ ಮಾರ್‌ತಾಸಾ
ಯೋ ದೇವುಳ್‌ಮು ನೋ ದೇವಿ ಫರಿ ಜೀವ್‌ದಿದೋ
ಜೀವ್ ದಿದಾಚಿಣು ಹುಟ್ಟೆ ಅಂಭಾ ಚೇಣೊ
ಬಹುನೂ ಬಳುಚಾ ಚೇಣೊ ಭಾವರ್ರಿನೋ ಧಾಡ್ ಭಯ್‌ನೊ ಮೂಂಡಾ
ಭಾಯಿನೊ ಧಾಡಂ ಭವಂನೂ ಮುಂಡ್ ಯೊ ಜೋಯ್ ದೇವಣ್
ವರೇ ತೂತ್ರಕರ್‌ವಾಲಜಿ ದೇವಾಣ್ ಪ್ರತ್ಯಕ್ಷಹೀನ್ ಬಾವರಿನೊ
ಮೂಂಡ್ ರಿಹೆಲಾಹೊ ಸಂಸಾರ್‌ಕರ್ ತಾರಿ ಅಗ್ಗಳ್ ಬಳ್ಳಿ
ಸಾಲ್ ವಾನಿಫನ್ ಕಿರೀಶ ಆ ಸೂಯ್ ಹೊ" **(ಉತ್ತರ: ಡಿ ಫಾಡೊ)**

ಕನ್ನಡದಲ್ಲಿ ಒಂದು ಊರಿನಿಂದ ಅಣ್ಣ ತನ್ನ ತಂಗಿ, ತಂಗಿಯ ಗಂಡನನ್ನು ಕರೆದುಕೊಂಡು ತಂಗಿಯನ್ನು ಗಂಡನ ಮನೆಗೆ ಬಿಟ್ಟು ಬರಲು ಹೊರಟ ಮೂರು ಜನ ಹೊರಟರು ಹೋಗುವ ದಾರಿಯಲ್ಲಿ ಒಂದು ಗುಡಿ ಇತ್ತು ಕತ್ತಲಾಗಿದ್ದರಿಂದ ಆ ಗುಡಿಯಲ್ಲಿ ಮೂರು ಜನ ಊಟ ಮಾಡಿ

ಮಲಗಿದರು. ಮಧ್ಯರಾತ್ರಿಯಲ್ಲಿ ಒಬ್ಬ ಕಳ್ಳ ಬಂದು ಗಂಡ ಮತ್ತು ಅಣ್ಣನ ರುಂಡಗಳನ್ನು ಕತ್ತರಿಸಿ ಹಾಕಿ ಹೋದನು. ಹೆಂಡತಿ ಎದ್ದು ನೋಡಿದಳು. ಗಂಡ, ಅಣ್ಣನ ರುಂಡ ಮುಂಡ ಬೇರೆಯಾಗಿದ್ದನ್ನು ಕಂಡು ಅವಸರದಲ್ಲಿ ಗಂಡನ ರುಂಡ ಅಣ್ಣನ ಮುಂಡಕ್ಕೆ, ಅಣ್ಣನ ಮುಂಡಕ್ಕೆ ಗಂಡನ ರುಂಡವನ್ನು ಸೇರಿಸಿ ದೇವಿಯನ್ನು ಪ್ರಾರ್ಥಿಸಿದಳು. ದೇವಿ ಪ್ರತ್ಯಕ್ಷಳಾಗಿ ಜೀವ ಬರುವಂತೆ ಮಾಡಿದಳು. ನಂತರ ಅವರಿಬ್ಬರು ಎದ್ದು ನಿಂತರು ಆಗ ಅವಳು ರುಂಡ ಮುಂಡಗಳನ್ನು ಅದಲು ಬದಲಾಗಿರುವುದನ್ನು ಗುರುತಿಸಿದಳು. ಮತ್ತೆ ದೇವಿಯನ್ನು ಪ್ರಾರ್ಥಿಸಿದಳು. ದೇವಿಯು ಪ್ರತ್ಯೇಕ್ಷಳಾದಾಗ ನಾನು ಯಾರ ಜೊತೆ ಸಂಸಾರ ಮಾಡುವುದು ಎಂದು ಕೇಳಿದಳು. ಅದಕ್ಕೆ ದೇವಿಯು ನಿನ್ನ ಗಂಡನ ರುಂಡದ ಜೊತೆ ಸಂಸಾರ ಮಾಡು ನಿನ್ನ ವಂಶ ಬೆಳೆಯುತ್ತದೆ ಎಂದು ಆರ್ಶಿವಾದ ಮಾಡಿದಳು. ಇದು ಈಗಲೂ ಸಹ ಬೆಳೆಯುತ್ತಿದೆ. ಅದು ಏನು (ಉತ್ತರ: **ನವಿಲು**)

ಈ ರೀತಿಯಾಗಿ ಕಂಪ್ಲಿ ಹಕ್ಕಿಪಿಕ್ಕಿ ಕಾಲೋನಿಯಲ್ಲಿನ ಮಹಿಳೆಯರು ಮತ್ತು ಪುರುಷರು ಹಾಡು, ಒಗಟು, ಕಥೆಗಳನ್ನು ಹೇಳುತ್ತಾರೆ. ದೇವರು ಮಾಡುವ ಸಂದರ್ಭದಲ್ಲಿ ದೇವರ ಕುರಿತಾದ ಹಾಡುಗಳನ್ನು ಸುದೀರ್ಘವಾಗಿ ಹಾಡುತ್ತಾರೆ. ಮುಖ್ಯವಾಗಿ ದಂಡಿನ ದುರುಗಮ್ಮ, ತುಳಜಾಭವಾನಿ ದೇವತೆಗಳ ಕುರಿತು ಹಾಡುತ್ತಾರೆ. ಈ ಹಾಡುಗಳು ಈಗಾಗಲೇ ಹಕ್ಕಿಪಿಕ್ಕಿಗಳಿಗೆ ಸಂಬಂಧಿಸಿದ ಹಲವು ಪುಸ್ತಕಗಳಲ್ಲಿ ಪ್ರಕಟವಾಗಿರುವುದರಿಂದ ಅವುಗಳನ್ನು ಹೊರತುಪಡಿಸಿ ಕೆಲವನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ವಿಶಿಷ್ಟವಾದ ಸಂಸ್ಕೃತಿಯನ್ನು ಹೊಂದಿರುವ ಹಕ್ಕಿಪಿಕ್ಕಿಯರು ತಮ್ಮದೇ ಆದ ವಿಭಿನ್ನ ರೀತಿಯಲ್ಲಿ ಹಬ್ಬಗಳನ್ನು ಆಚರಿಸುತ್ತಾರೆ. ಮಾತೃದೇವತೆಗಳನ್ನೇ ಹೆಚ್ಚಾಗಿ ಆರಾಧಿಸುವ ಇವರು ತಮ್ಮ ಕುಲ ಮೂಲದ ಬಗ್ಗೆ ಅಲ್ಲದೆ ತಮ್ಮ ದೈವಗಳ ಹುಟ್ಟು ಬೆಳವಣಿಗೆಗೆ ಸಂಬಂಧಿಸಿದಂತೆ ತಮ್ಮ ಹಿರಿಯರಿಂದ ಕೇಳಿದ ಹಾಡು, ಕಥೆಗಳನ್ನು ತಮ್ಮದೇ ಭಾಷೆಯಲ್ಲಿ ಹೇಳುತ್ತಾರೆ. ಅಲ್ಲದೆ ಆ ಕಥೆಗಳನ್ನು ಇಂದಿಗೂ ನಂಬಿಕೊಂಡು ಬರುತ್ತಿದ್ದಾರೆ. ಇವರು ದೈವ ಕಾರ್ಯಗಳಲ್ಲಿ ಧಾರ್ಮಿಕ ವಿಧಿ ವಿಧಾನಗಳ ಜೊತೆಗೆ ಮನೋರಂಜನೆಗೆ ಹೆಚ್ಚು ಆದ್ಯತೆ ನೀಡುತ್ತಾರೆ. ಇವರ ಹಬ್ಬಗಳಲ್ಲಿ ಹಾಡು, ಕುಣಿತ ಸರ್ವೆಸಾಮಾನ್ಯವಾಗಿ ಕಂಡುಬರುತ್ತವೆ. ಸ್ತ್ರೀ ಪುರುಷರು ಜೊತೆಗೂಡಿ ಹಾಡಿ ಕುಣಿದು ಸಂತೋಷ ಪಡುತ್ತಾರೆ. ಪಾಶ್ಚಿಮಾತ್ಯರಿಗೆ ನಾವೇನು ಕಡಿಮೆ ಎನ್ನುವಂತೆ ಸ್ತ್ರೀ ಪುರುಷರು ಸ್ವೇಚೆಯಿಂದ ಹಬ್ಬ ಹರಿದಿನಗಳಲ್ಲಿ ಕುಡಿದು ಕುಣಿಯುವರು.

ಮಾತೃ ಮೂಲ ದೈವಗಳನ್ನೇ ಹೆಚ್ಚಾಗಿ ಆರಾಧಿಸುವ ಹಕ್ಕಿಪಿಕ್ಕಿ ಸಮುದಾಯದವರ ಆಚರಣೆಗಳನ್ನು ಇತರ ಸಮುದಾಯದವರ ಆಚರಣೆಗಳಿಗೆ ಹೋಲಿಸಿದರೆ ತುಂಬಾ ವಿಭಿನ್ನ ಎನಿಸುತ್ತದೆ. ಅಲ್ಲದೆ ಈ ಸಮುದಾಯದವರ ಜನಪದ ಜೀವನವೂ ಸಹ ವಿಶಿಷ್ಟವಾದುದು. ಶಕ್ತಿ ದೇವತೆಗಳ ಆರಾಧಕರಾದ ಇವರು ತಮ್ಮ ಎಲ್ಲಾ ಹಬ್ಬಗಳಲ್ಲಿ ಪ್ರಾಣಿ ಬಲಿಕೊಡುವುದು ಸರ್ವೇಸಾಮಾನ್ಯವಾಗಿದೆ. ಅಲ್ಲದೆ

ದೇವರುಗಳಿಗೆ ರಕ್ತಾಭಿಷೇಕ, ಮಾಂಸದ ಎಡೆ ಮತ್ತು ಮಧ್ಯದ ನೈವೇದ್ಯ ಮಾಡುವುದನ್ನು ನೋಡಿದರೆ ಪ್ರಾಚೀನ ಕಾಲದಲ್ಲಿ ಇದ್ದಂತಹ ಮಾನವನ ಜೀವನವನ್ನು ನೆನಪಿಸುವಂತೆ ಇರುತ್ತದೆ.

ಆದಿಮ ಕಾಲದಲ್ಲಿ ಮಾನವನು ಅಲೆಮಾರಿಯಾಗಿ ಅಲೆಯುತ್ತಾ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ಹಸಿಮಾಂಸವನ್ನೇ ತಿನ್ನುತ್ತಾ, ರಕ್ತವನ್ನು ಕುಡಿಯುತ್ತಾ, ಜೀವಿಸುತ್ತಿದ್ದ ಸಂಪ್ರದಾಯದ ಕುರುಹುಗಳಾಗಿ ಇಂದಿನ ಹಕ್ಕಿಪಿಕ್ಕಿಯರ ಆಚರಣೆಗಳನ್ನು ನೋಡಬಹುದಾಗಿದೆ. ಈಗಲೂ ಸಹ ಇವರ ಹಬ್ಬಗಳಲ್ಲಿ ದೇವರು ಪೂಜಾರಿ ಅಥವಾ ಇತರರ ಮೈಯಲ್ಲಿ ಬಂದು ಕುರಿ ಕೋಣಗಳ ರಕ್ತ ಕುಡಿಯುವುದು, ದೇವರಿಗೆ ರಕ್ತಾಭಿಷೇಕ ಮಾಡುವುದು ಇತ್ಯಾದಿ. ಹಿಂದಿನ ಆಚರಣೆಗಳನ್ನು ಇಂದಿಗೂ ಇವರು ಉಳಿಸಿಕೊಂಡು ಬಂದಿರುವುದನ್ನು ಇವರ ಆಚರಣೆಗಳಲ್ಲಿ ಕಾಣಬಹುದಾಗಿದೆ.

ಹಾಗೆಯೇ ತಮ್ಮ ಪ್ರತಿ ಹಬ್ಬ ಜಾತ್ರೆಗಳಲ್ಲಿ ಇವರು ದೇವರ ಕುರಿತು ಹಾಡುಗಳನ್ನು ಹಾಡುತ್ತಾರೆ. ಅಲ್ಲದೆ ಮಧ್ಯೆ ಸೇವಿಸಿ ದೇವರ ಮುಂದೆ ಭಕ್ತಿಯಿಂದ ನೃತ್ಯ ಮಾಡುತ್ತಾರೆ. ಇವರು ಹಚ್ಚೆಯನ್ನು ಬಹು ಇಷ್ಟಪಟ್ಟು ಹಾಕಿಸಿಕೊಳ್ಳುತ್ತಾರೆ. ಸತ್ತಾಗ ನಮ್ಮೊಡನೆ ಬರುವ ವಸ್ತು(ಒಡವೆ) ಎಂದರೆ ಅದು ಹಚ್ಚೆ ಎಂದು ನಂಬಿದವರಾಗಿದ್ದಾರೆ. ಈಗಲೂ ಸಹ ತಮ್ಮಲ್ಲಿ ಆಗು ಹೋಗುವ ಎಲ್ಲ ಘಟನೆಗಳಿಗೆ ದೈವವೇ ಕಾರಣ ಎಂದು ನಂಬುತ್ತಾರೆ. ಇವರು ತಮ್ಮ ಕುಲದೈವ ಅಪ್ಪಣೆ ಕೊಡದ ಹೊರತು ಯಾವುದೇ ಮಂಗಳ ಕಾರ್ಯ ಮಾಡುವುದಿಲ್ಲ. ತಮ್ಮ ದೇವರುಗಳಿಗೆ ಸಂಬಂಧಿಸಿದಂತೆ ತಮ್ಮ ಭಾಷೆಯಲ್ಲಿ ಅನೇಕ ಹಾಡು ಕಟ್ಟಿ ಮಹಿಳೆಯರು ಹಾಡುತ್ತಾರೆ. ಹೀಗೆ ಇವರು ಅಪಾರ ಸಾಹಿತ್ಯ ಅಡಗಿಸಿಕೊಂಡ ವಿಶಿಷ್ಟವಾದ ಸಂಸ್ಕೃತಿಯನ್ನು ಆಚರಿಸುವ ಜನರಾಗಿದ್ದಾರೆ.

ಅಧ್ಯಾಯ ೫

ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಬದಲಾವಣೆ

೫.೧. ಸಾಮಾಜಿಕ ಬದಲಾವಣೆ

೫.೨. ಆರ್ಥಿಕ ಬದಲಾವಣೆ

೫.೩. ಸಾಂಸ್ಕೃತಿಕ ಬದಲಾವಣೆ

೫.೪. ಶೈಕ್ಷಣಿಕ ಬದಲಾವಣೆ

೫.೫. ರಾಜಕೀಯ ಬದಲಾವಣೆ

ಅಧ್ಯಾಯ ಐದು

ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಬದಲಾವಣೆ

ಸಮಾಜವು ನಿತ್ಯ ಪರಿವರ್ತನಾಶೀಲವಾದದ್ದು, ಎಲ್ಲಾ ಸಮಾಜ ಕಾಲಮಾನಕ್ಕೆ ತಕ್ಕಂತೆ ಬದಲಾವಣೆಗಳನ್ನು ಆಹ್ವಾನಿಸುತ್ತಲೇ ಇರುತ್ತವೆ. ಆದಿವಾಸಿ, ಅಲೆಮಾರಿ, ಗ್ರಾಮೀಣ ಹಾಗೂ ಆಧುನಿಕ ಹೀಗೆ ಪ್ರತಿಯೊಂದು ಸಮಾಜದಲ್ಲಿಯೂ ಬದಲಾವಣೆ ಉಂಟಾಗುತ್ತಿರುತ್ತವೆ. ಆದರೆ ಬದಲಾವಣೆಯ ಗತಿಯು ಸಮಾಜದಿಂದ ಸಮಾಜಕ್ಕೆ ಸಮುದಾಯದಿಂದ ಸಮುದಾಯಕ್ಕೆ ವ್ಯತ್ಯಾಸಗೊಳ್ಳುತ್ತದೆ. ಹಾಗೆಯೇ ಒಂದೇ ಸಮುದಾಯದ ಜನರು ವಿವಿಧ ಪ್ರದೇಶಗಳಲ್ಲಿ ವಾಸಿಸುವಾಗ ಬದಲಾವಣೆಯ ಗತಿ ವ್ಯತ್ಯಾಸಗೊಳ್ಳುತ್ತದೆ. ಆದಿವಾಸಿ ಅಲೆಮಾರಿ ಸಮಾಜಗಳಲ್ಲಿ ಬದಲಾವಣೆಯ ವೇಗ ನಿಧಾನಗತಿಯದಾಗಿದ್ದರೆ ಗ್ರಾಮೀಣ ಪ್ರದೇಶಗಳಲ್ಲಿ ಸಾಧಾರಣ ಗತಿಶೀಲವಾಗಿದ್ದು, ನಗರಗಳಲ್ಲಿ ತೀವ್ರಗತಿಯದ್ದಾಗಿರುತ್ತದೆ.

"ಸಾಮಾನ್ಯವಾಗಿ ಬದಲಾವಣೆ ಭೌತಿಕ, ಜೈವಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಂದಾಗಿರುತ್ತದೆ".[೧] ಭೂಕಂಪ, ಪ್ರವಾಹ, ಅತಿವೃಷ್ಟಿ, ಅನಾವೃಷ್ಟಿಗಳು ಭೌತಿಕ ಬದಲಾವಣೆಯನ್ನು ತಂದರೂ ಜನಸಂಖ್ಯೆ ಹೆಚ್ಚಳ, ಯುದ್ಧ, ಮುಷ್ಕರ, ಆರ್ಥಿಕತೆ, ರಾಜಕೀಯ, ಶೈಕ್ಷಣಿಕ ಮೊದಲಾದವು ಬದಲಾವಣೆಗೆ ಒಳಗಾಗುತ್ತವೆ. ಇವು ಜೈವಿಕ ಬದಲಾವಣೆಗೆ ನಿದರ್ಶನಗಳು. ಯಂತ್ರ, ಕೈಗಾರಿಕೆ, ಕಾರ್ಖಾನೆ, ತ್ವರಿತ ಉತ್ಪನ್ನ ಮೊದಲಾದವು ವೈಜ್ಞಾನಿಕ ಬದಲಾವಣೆಗಳಾದರೆ ಹೊರಗಿನ ಸಂಸ್ಕೃತಿಗಳ ಸಂಪರ್ಕದಿಂದ ಇಲ್ಲವೇ ಸಮಾಜ ಸುಧಾರಣೆಗಳಿಂದ ಜನರಲ್ಲಿ ಆದರ್ಶ, ಧಾರ್ಮಿಕ ಭಾವನೆಗಳು, ನೈತಿಕ ಕಲ್ಪನೆಗಳು ಮೊದಲಾದವುಗಳಲ್ಲಿ ಉಂಟಾಗುವ ಪ್ರಕ್ರಿಯೆಗಳು, ಸಾಂಸ್ಕೃತಿಕ ಬದಲಾವಣೆಗಳು. ಹೀಗೆ ಹಲವಾರು

---

೧. ನಂಜಮ್ಮಣ್ಣಿ ಎಂ., ಭಾರತೀಯ ಸಾಮಾಜಿಕ ಸಂಸ್ಥೆಗಳು, ನಿರ್ದೇಶಕರು, ೨೦೦೩, ಪು. ೩೨

ಕಾರಣಗಳಿಂದ ಸಮಾಜದಲ್ಲಿ ಉಂಟಾಗುತ್ತಿರುವ. ಬದಲಾವಣೆಗಳನ್ನು ಸಾಮಾಜಿಕ ಬದುಕಿನ ಸ್ಥಿತ್ಯಂತರಗಳು ಎಂದು ಕರೆಯಲಾಗುತ್ತದೆ.

೫.೧. ಸಾಮಾಜಿಕ ಬದಲಾವಣೆ

ಬದಲಾವಣೆ ಎಂಬ ಪದ ಇಂಗ್ಲಿಷ್ ಪದವಾದ 'Change' ಎಂಬುದರ ಕನ್ನಡ ರೂಪಾಂತರ ಇಲ್ಲಿ 'Change' ಎಂದರೆ "A Thing or A Metter with a difference" ಎಂಬ ಅರ್ಥ ಕೊಡುತ್ತದೆ. ಸಮಾಜದ ರಚನೆ ಮತ್ತು ಕಾರ್ಯಗಳಲ್ಲಿ ಕಂಡುಬರುವ ಬದಲಾವಣೆಯೇ ಸಾಮಾಜಿಕ ಬದಲಾವಣೆ ಎನ್ನಬಹುದು. "ಸಮಾಜದಲ್ಲಿ ಉಂಟಾಗುವ ಹಳೆಯದನ್ನು ತೆಗೆದು ಹೊಸದನ್ನ ಅಳವಡಿಸುವ ಅಥವಾ ಮಾರ್ಪಡಿಸುವ ಹೊಸ ಶೋಭಾಚಾರ ಅಥವಾ ವಿಧಾನಕ್ಕೆ ಸಾಮಾಜಿಕ ಬದಲಾವಣೆ"[೨] ಎಂದು ಎಚ್.ಟಿ. ಮಜುಂದಾರ್ ಅಭಿಪ್ರಾಯ ಪಡುತ್ತಾರೆ. ಬದಲಾವಣೆ ಎಂಬುದು ಶಾಶ್ವತವಾಗಿ ಇರುವಂತಹ ಒಂದು ಅಂಶವಾಗಿದೆ. ಸಾಮಾಜಿಕ ಬದಲಾವಣೆ ಎಂಬ ಪ್ರಕ್ರಿಯೆಗೆ ಸಮಾಜದಲ್ಲಿರುವ ಯಾವ ವಸ್ತುವೂ ಹೊರತಾಗಿಲ್ಲ. ಈ ಬದಲಾವಣೆಗಳು ಹೇಗೆ ಮತ್ತು ಏಕೆ ಉಂಟಾಗುತ್ತವೆಯೆಂಬುದೇ ಸಾಮಾಜಿಕ ಬದಲಾವಣೆಯ ಅರ್ಥ ಹಾಗೂ ಅಂಶಗಳನ್ನು ವಿವರಿಸುತ್ತದೆ. "ಪ್ರಾಚೀನ ಕಾಲದಲ್ಲಿ ತೀರಾ ಸರಳವಾದ, ನಿರಾಡಂಬರ ಬುಡಕಟ್ಟಿನ ಸಮಾಜ ಅಸ್ತಿತ್ವದಲ್ಲಿತ್ತು. ಕಾಲಾಂತರದಲ್ಲಿ ಬುಡಕಟ್ಟು ಸಮಾಜವು ವಿಕಸನ ಹೊಂದಿ ಇಂದು ಅತ್ಯಂತ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಿಂದ ಕೂಡಿದ ನಾಗರೀಕ ಸಮಾಜವಾಗಿದೆ".[೩] ಹೀಗೆ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಬದಲಾವಣೆಗೊಂಡ ಈ ಸಮಾಜದಲ್ಲಿ ಹಲವಾರು ಅಂಶಗಳಲ್ಲಿ ಬದಲಾವಣೆಗಳು ಸಂಭವಿಸಿದೆ. ಇದರ ಪ್ರಭಾವ ತನ್ನ ಎಲ್ಲಾ ಅಂಶಗಳ ಮೇಲೆ ಬೀರಿದೆ. ಬದಲಾವಣೆ ಅಥವಾ ಪರಿವರ್ತನಾ ಅಂಶಗಳ ಪಟ್ಟಿಯಲ್ಲಿ ನೆಲೆಸಿರುವ ಬುಡಕಟ್ಟು ಜನರ ಬದುಕು ವಿವಿಧ ಕಾರಣಗಳಿಂದಾಗಿ ಸ್ಥಿತ್ಯಂತರಗೊಳ್ಳುತ್ತಿದೆ. ಈ ಸಮುದಾಯದವರ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಅಂಶಗಳಲ್ಲಿ ನಾವಿಂದು ಕೊಂಚ ಬದಲಾವಣೆಯಾಗಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು.

ವಸತಿ ವ್ಯವಸ್ಥೆಯಲ್ಲಿ ಬದಲಾವಣೆ

ಕಂಪ್ಲಿಯಂತಹ ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿರುವ ಹಕ್ಕಿಪಿಕ್ಕಿಯರು ಇನ್ನೂ ತಮ್ಮ ಅಲೆಮಾರಿತನವನ್ನು ಸಂಪೂರ್ಣವಾಗಿ ಬಿಡದೇ ಇರುವುದು ಕಂಡುಬರುತ್ತದೆ. ಅಲೆಮಾರಿಗಳಾದ ಇವರು ಈ ಹಿಂದೆ ಡೇರೆಗಳು, ಗುಡಿಸಲುಗಳನ್ನು ತಮ್ಮ ವಾಸಸ್ಥಳವನ್ನಾಗಿ ಮಾಡಿಕೊಂಡಿದ್ದರು. ಈ ಪ್ರದೇಶದಲ್ಲಿ ನೆಲೆಯೂರಿದ ಮೇಲೆ ಅನಿವಾರ್ಯವಾಗಿ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ.

---

೨. ನಾರಾಯಣ ಎಂ., ಸಮಾಜಶಾಸ್ತ್ರ, ೧೯೮೭, ಪು. ೧೫೩

೩. ಕಟ್ಟಿ ಎ.ಆರ್., ಭಾರತೀಯ ಸಾಮಾಜಿಕ ಅಧ್ಯಯನ, ೧೯೯೦, ಪು. ೨೫೪

ಕಾಲೋನಿಯಲ್ಲಿ ಗುಡಿಸಲು ಮತ್ತು ಹೆಂಚಿನ ಮನೆಗಳು ಕ್ರಮವಾಗಿ ಹೆಚ್ಚಾಗಿದ್ದು, ಮಾಳಿಗೆ, ಆರ್‌ಸಿಸಿ ಮನೆಗಳು ಕಡಿಮೆ. ಹಿಂದೆ ಅಲೆಮಾರಿ ಜೀವನ ನಡೆಸುತ್ತಿದ್ದಾಗ ಇವರು ತಮ್ಮ ಗುಡಿಸಲು, ಟೆಂಟು ಗಳನ್ನು ಹಾಕಿಕೊಳ್ಳುವಾಗ ಊರಾಚಿನ ಬಯಲಿನಲ್ಲಿ ಎದುರುಬದಿರಾಗಿ ಹಾಕುತ್ತಿದ್ದರು. ಒಬ್ಬರ ಗುಡಿಸಲ ಹಿಂದೆ ಮತ್ತೊಬ್ಬರು ಗುಡಿಸಲು ಅಥವಾ ಟೆಂಟು ಹಾಕುತ್ತಿರಲಿಲ್ಲ. ಟೆಂಟುಗಳಲ್ಲಿ ಮಲಗುವಾಗ ಎಂದೂ ಅವರು ಎದಿರು ಬದಿರು ಕಾಲುಗಳನ್ನು ಹಾಕಿ ಮಲಗುತ್ತಿರಲಿಲ್ಲ. ಹಾಗೆ ಮಲಗಿದರೆ ಕಾಲು ಕಡೆಯಲ್ಲಿ ತಲೆಮಾಡಿ ಮಲಗಿಕೊಂಡಿರುವ ವ್ಯಕ್ತಿಯು ತಾನು ಕೀಳೆಂದು ಭಾವಿಸುತ್ತಾನೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಾಲೋನಿಯ ಮನೆಗಳನ್ನು ಗಮನಿಸಿದಾಗ ಇವರು ಮನೆಗಳನ್ನು ಕಟ್ಟಿಕೊಳ್ಳುವಾಗ ಎದಿರುಬದಿರಾಗಿ ಕಟ್ಟಿಕೊಳ್ಳುವ ಹಿಂದಿನವರ ನಿಯಮವನ್ನು ಪಾಲಿಸಿದಂತೆ ಕಂಡು ಬರುವುದಿಲ್ಲ. ಕಾರಣ ಸ್ಥಳದ ಕೊರತೆ ಇಲ್ಲವೇ ಪಟ್ಟಣದ ಪ್ರಭಾವವಿರಬಹುದು. ಆಧುನಿಕತೆ ಹಕ್ಕಿಪಿಕ್ಕಿಯರ ಮೇಲೆ ಪ್ರಭಾವ ಬೀರಿದ್ದರೂ ಇನ್ನೂ ಈ ಜನರಲ್ಲಿ ಗ್ರಾಮೀಣ ಪರಿಸರದ ಲಕ್ಷಣ ಹೋಗಿಲ್ಲ. ಅಲ್ಲದೆ ಇವರು ಸಂಪೂರ್ಣವಾಗಿ ಅಲೆಮಾರಿತನವನ್ನು ಬಿಟ್ಟಿಲ್ಲ. ಹೀಗಾಗಿ ಹಕ್ಕಿಪಿಕ್ಕಿಯರು ವಾಸಿಸುತ್ತಿರುವ ಕಾಲೋನಿಯ ಪರಿಸರ ಇನ್ನೂ ಬಹುಮಟ್ಟಿಗೆ ಪಾರಂಪರಿಕವಾಗಿರುವುದನ್ನು ಕಾಣಬಹುದು.

ಕೌಟುಂಬಿಕ ರಚನೆಯಲ್ಲಿ ಬದಲಾವಣೆ

ಹಕ್ಕಿಪಿಕ್ಕಿ ಸಮುದಾಯದವರ ಕೌಟುಂಬಿಕ ರಚನೆಯು ಮೊದಲು ಮಾತೃ ಪ್ರಧಾನ ವ್ಯವಸ್ಥೆಯಲ್ಲಿದ್ದು ಇದು ಪ್ರಾಚೀನ ಬುಡಕಟ್ಟುಗಳ ಲಕ್ಷಣವನ್ನು ಹೋಲುತ್ತಿತ್ತು. ಕುಟುಂಬದ ಸದಸ್ಯರ ನಿರ್ವಹಣೆ ಆ ಮನೆಯ ಮಹಿಳೆಯದ್ದಾಗಿದ್ದು, ಪುರುಷನು ತಾನು ದುಡಿದು ತಂದ ಸಂಪಾದನೆಯನ್ನು ಹೆಂಡತಿಗೆ ಕೊಡುತ್ತಿದ್ದನು. ಈಗೀಗ ಈ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆ ಆಗಿದೆ. ಪ್ರಸ್ತುತ ಸಾಮಾಜಿಕ ವ್ಯವಸ್ಥೆ ಯಲ್ಲಿ ಪಿತೃಪ್ರಧಾನ ಕುಟುಂಬಗಳು ಹೆಚ್ಚಾಗಿದ್ದು, ಪುರುಷ ಪ್ರಧಾನತೆ ಹೆಚ್ಚುತ್ತಿದೆ. ಆದರೂ ಕಾಲೋನಿಯಲ್ಲಿ ಪೂರ್ಣ ಪುರುಷನ ಇಲ್ಲವೆ ಪೂರ್ಣ ಮಹಿಳೆಯ ಅಧಿಕಾರವಿರದೆ ಇಬ್ಬರೂ ಸಮಾನ ಸ್ಥಾನಮಾನವನ್ನು ಹೊಂದಿರುತ್ತಾರೆ.

ಸಾಮಾಜಿಕ ರಚನೆಯಲ್ಲಿ ಪ್ರಾಥಮಿಕ ಘಟಕವಾದ ಕುಟುಂಬ ವ್ಯವಸ್ಥೆ ಅಲ್ಪಸಂಖ್ಯಾತರಾಗಿದ್ದ ಹಕ್ಕಿಪಿಕ್ಕಿಯರಲ್ಲಿ ಈ ಹಿಂದೆ ಅಜ್ಜ, ಅಜ್ಜಿ, ತಂದೆ, ತಾಯಿ, ಮಕ್ಕಳು ಎಂದು ಎರಡಕ್ಕಿಂತ ಹೆಚ್ಚು ತಲೆಮಾರುಗಳನ್ನು ಹೊಂದಿದ ಮಾತೃಪ್ರಧಾನ ಅವಿಭಕ್ತ ಕುಟುಂಬ ವ್ಯವಸ್ಥೆಯಿತ್ತು. ಇಂದು ಪರಿವರ್ತನೆ ಸೆಲೆಗೆ ಸಿಲುಕಿದ ಅನೇಕ ಹಕ್ಕಿಪಿಕ್ಕಿ ಕುಟುಂಬಗಳು ಸ್ವ ಪರಿಪೂರ್ಣತೆ ಹೊಂದಿದ ಕುಟುಂಬಗಳಾಗಿ ರೂಪಗೊಂಡಿವೆ. ಆರ್ಥಿಕ ಭದ್ರತೆಯ ಕೊರತೆ ಇರುವ ಇವರು ಚಿಕ್ಕಮಟ್ಟ ಗುಡಿಸಲುಗಳಲ್ಲಿ ಅಥವಾ ಸಣ್ಣ ಮನೆಗಳಲ್ಲಿ ವಾಸಿಸುತ್ತಿರುವುದರಿಂದ ಹೆಚ್ಚು ಜನ ಒಂದೇ ಕಡೆ ವಾಸಿಸುವುದು ಕಷ್ಟವಾಗಿದೆ. ಹಾಗಾಗಿ ಇವರಲ್ಲಿ ವಿವಾಹಿತರೆಲ್ಲಾ ಪ್ರ ತ್ಯೇಕವಾಗಿ ಜೀವಿಸುವುದು ಇತ್ತೀಚೆಗೆ ಸಾಮಾನ್ಯವಾಗಿದೆ. ಬದಲಾದ ಕಾಲದ ಪರಿಸರಕ್ಕೆ ತಕ್ಕಂತೆ ಹಕ್ಕಿಪಿಕ್ಕಿಯರ ಅವಿಭಕ್ತ ಕುಟುಂಬಗಳು ಕೇಂದ್ರ ಕುಟುಂಬಗಳಾಗಿ

ಬದಲಾಗುತ್ತಿವೆ. ಆದರೂ ತಮ್ಮ ಪಾರಂಪರಿಕ ಆಚರಣೆಗಳು ಬದಲಾಗದೇ ಹಿಂದಿನ ಛಾಯೆಗಳನ್ನು ಉಳಸಿಕೊಂಡು ಬಂದಿವೆ. ಪ್ರಸ್ತುತ ದಿನಗಳಲ್ಲಿ ಕಾಲೋನಿಯಲ್ಲಿ ಕೇಂದ್ರ ಕುಟುಂಬಗಳು ಹೆಚ್ಚಾಗಿ ಕಂಡುಬರುತ್ತಿವೆ. ಕುಟುಂಬದ ನಿರ್ವಹಣೆ ಮಹಿಳೆ ಮತ್ತು ಪುರುಷನ ಸಮಾನ ಅಧಿಕಾರದಿಂದ ನಿರ್ವಹಿಸಲ್ಪಡುತ್ತಿದೆ.

ಜನನ ಸಂದರ್ಭದಲ್ಲಿನ ಆಚರಣೆಯಲ್ಲಿ ಬದಲಾವಣೆ

ಮಾನವ ಹುಟ್ಟಿನಿಂದ ಸಾವಿನವರೆಗೂ ಅನೇಕ ಸಂಸ್ಕಾರಗಳಿಗೆ ಒಳಪಡುತ್ತಾನೆ. ಸಂಸ್ಕಾರ, ಆಚರಣೆ ಪ್ರತಿಯೊಂದು ಸಮಾಜದ ವಿಶಿಷ್ಟ ಸಂಪ್ರದಾಯ ಎನಿಸಿಕೊಳ್ಳುತ್ತದೆ. ಮದುವೆ ಎಂಬ ಸಂಸ್ಕಾರದ ಮೂಲಕ ಒಂದಾದ ಜೋಡಿಗೆ ಗರ್ಭದಾನ ಸಂಸ್ಕಾರದ ಮೂಲಕ ಆಚರಣೆಗಳು ಆರಂಭವಾಗುತ್ತವೆ. ತಿಂಗಳ ಋತುಚಕ್ರದ ನಂತರ ಗರ್ಭಿಣಿಯಾದವಳನ್ನು ಗುರುತಿಸುವ ಮೂಲಕ ಗರ್ಭಿಣಿ ಸ್ತ್ರೀಯನ್ನು ಸಂತಸ ದಿಂದಡಲು ಸೀಮಂತ ಎಂಬ ಆಚರಣೆಯನ್ನು ಎಲ್ಲಾ ಬಂಧುಬಾಂಧವರು ಸೇರಿ ಆಚರಿಸುತ್ತಾರೆ. ನಂತರ ತವರು ಮನೆಯಲ್ಲಿ ಹೆರಿಗೆ ಕಾರ್ಯವನ್ನು ಮಾಡಿಸುತ್ತಾರೆ. ಹೆರಿಗೆಯ ವಿಷಯಕ್ಕೆ ಸಂಬಂಧಪಟ್ಟಂತೆ ಹಕ್ಕಿಪಿಕ್ಕಿಯರಲ್ಲಿ ವಿಶಿಷ್ಟ ಪದ್ಧತಿಯನ್ನು ಅನುಸರಿಸುವುದು ನೋಡಬಹುದು. ಹಿಂದೆ ಈ ಸಮುದಾಯ ದವರಲ್ಲಿ ಗರ್ಭಿಣಿಯು ತಾನೇ ತನ್ನ ಹೆರಿಗೆಯನ್ನು ಮಾಡಿಕೊಳ್ಳುತ್ತಿದ್ದಳು. ಯಾರೂ ಅವಳ ನೆರವಿಗೆ ಹೊಗುತ್ತಿರಲಿಲ್ಲ.

ಇಂದು ಹೆರಿಗೆಯ ಸಮಯದಲ್ಲಿ ಗರ್ಭಿಣಿಗೆ ಯಾವ ತೊಂದರೆಯಾಗದಿರಲಿ ಎಂಬ ಕಾರಣಕ್ಕೆ ಈ ಸಮುದಾಯದವರು ಅಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸುವುದು ಸಾಮಾನ್ಯವಾಗಿ ಕಂಡುಬರುತ್ತಿದೆ. ಸೂತಕದಂತಹ ಮೈಲಿಗೆಗಳನ್ನು ಇವತ್ತಿಗೂ ಪಾಲಿಸುತ್ತಾರಾದರೂ ಹಿಂದೆ ಇದ್ಧ ನಿರ್ಬಂಧಗಳು ಸ್ವಲ್ಪಮಟ್ಟಿಗೆ ಸಡಿಲಗೊಳಿಸಿಗೊಂಡಿದ್ದಾರೆ. ಹೆರಿಗೆಯಾದ ಐದನೆ ದಿನದಂದು ಮಗುವಿನ ಮೊದಲ ತಲೆಗೂದಲನ್ನು ತೆಗೆಯಿಸಿ ನಾಮಕರಣ ಮಾಡುವುದರ ಮೂಲಕ ಮನೆಯನ್ನು ಶುಚಿಗೊಳಿಸಿ ಮಗುವಿನ ತಾಯಿಯಿಂದ ಗಂಗೆ ಪೂಜೆ ಮಾಡಿಸಿ ನಂತರ ಅವಳನ್ನು ಮನೆ ಒಳಗೆ ಬರಮಾಡಿಕೊಳ್ಳುತ್ತಾರೆ.

ನಾಮಕರಣಶಾಸ್ತ್ರ ಆಚರಣೆಯಲ್ಲಿ ಬದಲಾವಣೆ

ಸಾಮಾನ್ಯವಾಗಿ ಹೆಸರಿಡುವ ಪದ್ಧತಿ ಎಂದು ಕರೆಯುವ ಈ ಆಚರಣೆಯ ಸಮುದಾಯದಲ್ಲಿ ಮಗುವಿನ ತಾಯಿ ಹುಟ್ಟಿದ ತನ್ನ ಮಗುವಿಗೆ ಐದು ದಿನಗಳಲ್ಲಿಯೇ ನಾಮಕರಣವನ್ನು ಮಾಡುವ ಜೊತೆಗೆ ಮಗುವಿನ ತಲೆಕೂದಲನ್ನು ತಾನೇ ಕತ್ತರಿಸಿ ಜವಳ ತೆಗೆಯುವುದನ್ನು ಕಾಣಬಹುದಾಗಿದೆ. ಆದರೆ ಇಂದು ಆಧುನಿಕತೆಗೆ ಒಳಗಾಗುತ್ತಿರುವ ಹಕ್ಕಿಪಿಕ್ಕಿಯರು ತಮ್ಮ ಮಕ್ಕಳ ನಾಮಕರಣವನ್ನು ಮಗು ಜನಿಸಿದ ಐದನೆಯ ದಿನದಂದು ಈ ಆಚರಣೆಯನ್ನು ತಾಯಿಯೇ ಹೆಸರಿಡುವುದರ ಮೂಲಕ ಆಚರಿಸುತ್ತಾರೆ. ಈ ಹಿಂದೆ ತಾಯಿಯೇ ತನ್ನ ಮಗುವಿನ ಮೊದಲ ತಲೆಗೂದಲನ್ನು ತೆಗೆಯುತ್ತಿದ್ದಳು.

ಇಂದು ಮಗು ಜನಿಸಿದ ಐದನೆಯ ದಿನದಂದು ಕ್ಷೌರದವರನ್ನು ಕರೆಯಿಸಿ ಮಗುವಿನ ತಲೆಗೂದಲನ್ನು ತೆಗೆಯಿಸಿ ನಂತರ ತಾಯಿ ಮಗುವಿಗೆ ಹೆಸರಿಡುತ್ತಾಳೆ.

ಇವರಲ್ಲಿ ಮಗು ಗಂಡಾಗಲಿ ಅಥವಾ ಹೆಣ್ಣಾಗಲಿ ಸಾಮಾನವಾಗಿ ಸಂತೋಷಪಡುತ್ತಾರೆ. ಹಿಂದಿನಿಂದಲೂ ಹಕ್ಕಿಪಿಕ್ಕಿ ಸಮುದಾಯದವರಲ್ಲಿ ಮಾತೃಪ್ರಧಾನ್ಯತೆ ಇದ್ದು ಹೆಣ್ಣಿಗೆ ಮಹತ್ವವಿದೆ. ಅಲ್ಲದೇ ಮದುವೆಯ ಸಂದರ್ಭದಲ್ಲಿ ತೆರ ಪದ್ಧತಿ(ಕನ್ಯಾಶುಲ್ಕ) ಇವರಲ್ಲಿರುವುದರಿಂದ ಹೆಣ್ಣಾದರೆ ಕುಟುಂಬದವರು ಹೆಚ್ಚು ಸಂತೋಷಿಸುತ್ತಾರೆ. ಇವರು ಮಕ್ಕಳಿಗೆ ಇಂಥವುಗಳೇ ಹೆಸರಿಡಬೇಕೆಂದು ಕಟಿಬದ್ಧರಾಗಿರುವುದಿಲ್ಲ. ತಮಗೆ ಮನಬಂದ ಹೆಸರುಗಳನ್ನು ಇಡುತ್ತಿದ್ದಾರೆ. ಚಲನಚಿತ್ರ ನಟ, ನಟಿಯರ ಹೆಸರೂ ತಮ್ಮ ಪೂರ್ವಿಕರ ಹೆಸರು, ದೇವರುಗಳ ಹೆಸರು ಹೀಗೆ ವಿಭಿನ್ನವಾದ ಹೆಸರುಗಳನ್ನು ಇಡುತ್ತಾರೆ.

ಋತುಮತಿ ಆಚರಣೆಯಲ್ಲಿನ ಬದಲಾವಣೆ

ಹೆಣ್ಣು ಬಾಲ್ಯ ಕಳೆದು ಯೌವ್ವನಕ್ಕೆ ಕಾಲಿಡುವ ಸಂದರ್ಭದಲ್ಲಿ ನಡೆಯುವ ಒಂದು ನೈಸರ್ಗಿಕ ಕ್ರಿಯೆ. ಪ್ರತಿ ಸಮಾಜವೂ ಹೆಣ್ಣು ಪ್ರೌಢಾವಸ್ಥೆಗೆ ಬಂದಾಗ ಅವಳಲ್ಲಿ ಉಂಟಾಗಬಹುದಾದ ದೈಹಿಕ ಬದಲಾವಣೆ ಗುರುತಿಸಿ ಅದಕ್ಕೆ ಸಂಬಂಧಪಟ್ಟಂತೆ ಸಾಂಪ್ರದಾಯಿಕ ಆಚರಣೆಯನ್ನು ಮಾಡುವ ಮೂಲಕ ಲೌಕಿಕ ಪ್ರಪಂಚಕ್ಕೆ ಪರಿಚಯಿಸುವ ಕ್ರಮ ಇದೆ. ಹಕ್ಕಿಪಿಕ್ಕಿ ಸಮುದಾಯದವರಲ್ಲಿ ರಜಸ್ವತಿಯಾದ ಹುಡುಗಿಯನ್ನು ಪ್ರತ್ಯೇಕವಾಗಿ ಒಂದು ಕೋಣೆಯಲ್ಲಿ ಏಳು ದಿನಗಳವರೆಗೆ ಇರಿಸಲಾಗುತ್ತದೆ. ಏಳು ದಿನಗಳವರೆಗೆ ಅವಳನ್ನು ಅಶುದ್ಧಳೆಂದು ಭಾವಿಸಲಾಗುತ್ತದೆ. ಅದಕ್ಕಾಗಿಯೇ ಆ ಸಮಯದಲ್ಲಿ ಅವಳು ಪ್ರತಿದಿನ ಸ್ನಾನ ಮಾಡಬೇಕು, ಯಾವುದೇ ಕೆಲಸವನ್ನು ಮಾಡುವಂತಿಲ್ಲ, ಅವಳನ್ನು ಯಾರೂ ಮುಟ್ಟುವಂತಿಲ್ಲ. ಅವಳಿಗೆ ಪ್ರತ್ಯೇಕ ಊಟದ ತಟ್ಟೆಯಲ್ಲಿ ಊಟವನ್ನು ಕೊಡುವರು. ಏಳನೆಯ ದಿನ ಅವಳಿಗೆ ಸ್ನಾನ ಮಾಡಿಸಿ ಹೊಸ ಸೀರೆ ಕುಪ್ಪಸ ತೊಡಿಸಿ ಒಡವೆಗಳಿಂದ ಅಲಂಕರಿಸಿ ಮುಖಕ್ಕೆ ಕೆಂಪು ಬಣ್ಣ ಹಚ್ಚಿ ಬಂಧು ಬಳಗದವರನ್ನು ಬರಮಾಡಿಕೊಂಡು ಮುತ್ತೈದೆಯರಿಂದ ಆರತಿ ಮಾಡಿಸಿ ಮನೆಯೊಳಗೆ ಬರಮಾಡಿ ಕೊಳ್ಳುತ್ತಾರೆ.

ಆದರೆ, ಕಂಪ್ಲಿಯ ಹಕ್ಕಿಪಿಕ್ಕಿಯರು ತಮ್ಮ ಕಾಲೋನಿಯಲ್ಲಿ ಋತುಮತಿಶಾಸ್ತ್ರ ಮಾಡಿದ ನೆನಪು ಸಹ ಇಲ್ಲ ಎಂದು ಹಿರಿಯರು ಹೇಳುತ್ತಾರೆ. ಋತುಮತಿ ಹೆಣ್ಣಿಗೆ ಏಳು ದಿನಗಳವರೆಗೆ ಪ್ರತ್ಯೇಕವಾಗಿರಿಸುವ ಕಾರ್ಯ ಕಟ್ಟುನಿಟ್ಟಿನಿಂದ ಪಾಲಿಸುವರು. ಆದರೆ ಏಳನೆಯ ದಿನ ಅವಳನ್ನು ಅಲಂಕರಿಸುವ, ಮುಖಕ್ಕೆ ಕೆಂಪು ಹಚ್ಚುವ, ಬಂಧುಬಳಗದವರನ್ನು ಕರೆಯಿಸಿ ಸಿಹಿ ಊಟ ಹಾಕಿಸುವ ಕಾರ್ಯಕ್ರಮಗಳನ್ನು ಕಾಲೋನಿಯವರು ಮಾಡುತ್ತಿರಲಿಲ್ಲ. ಅಂದು ಕೇವಲ ಅವಳಿಗೆ ಸ್ನಾನ ಮಾಡಿಸಿ ಅವಳಿಂದ ಮನೆದೇವರಿಗೆ ಪೂಜೆ ಮಾಡಿಸಿ ನಂತರ ಮನೆಯೊಳಗೆ ಬರಮಾಡಿಕೊಳ್ಳುವ ಸಂಪ್ರದಾಯವಿತ್ತು. ಆದರೆ ಇಂದು ಬದಲಾಗುತ್ತಿರುವ ಸಮಾಜಕ್ಕೆ ತಕ್ಕಂತೆ ಕಾಲೋನಿಯ ಕೆಲ ಸ್ಥಿತಿವಂತರು ಇತರ ಸಮುದಾಯದವರಂತೆ ಋತುಮತಿಶಾಸ್ತ್ರವನ್ನು ಆಚರಿಸುತ್ತಿದ್ದಾರೆ. ಋತುಮತಿಯಾದ ಏಳನೆಯ ದಿನ ನೆಂಟರಿಷ್ಟರನ್ನು ಕರೆಯಿಸಿ

ಸಿಹಿ ಅಡುಗೆ ಮಾಡಿಸಿ ಊಟಕ್ಕೆ ಹಾಕಿಸಿ ಹೆಣ್ಣಿಗೆ ಆರತಿ ಮಾಡಿಸುತ್ತಾರೆ. ಅಲ್ಲದೆ ಅಂದು ಪೋಟೊ ವಿಡಿಯೋಗಳನ್ನು ಸಹ ಮಾಡಿಸುತ್ತಿದ್ದಾರೆ. ಇದು ನಮ್ಮ ಸಮುದಾಯಕ್ಕೆ ತಕ್ಕದಾದುದಲ್ಲ ಎಂಬುದೇ ಇಂದಿಗೂ ಹಿರಿಯರ ಅಭಿಪ್ರಾಯವಾಗಿದೆ.

ವಿವಾಹ ಪದ್ಧತಿಯಲ್ಲಿ ಬದಲಾವಣೆ

ಸಾಮಾಜಿಕ ಸಂಸ್ಥೆಗಳಲ್ಲಿನ ಬದಲಾವಣೆಯನ್ನು ಸಾಮಾಜಿಕ ಬದಲಾವಣೆ ಎನ್ನುತ್ತೇವೆ. ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ವಿವಾಹಗಳಲ್ಲಿ ಬದಲಾವಣೆಗಳು ಕಾಲಮಾನಕ್ಕೆ ತಕ್ಕಂತೆ ಎಲ್ಲಾ ಸಮುದಾಯಗಳಲ್ಲೂ ಸಂಭವಿಸುತ್ತವೆ.

ಹಕ್ಕಿಪಿಕ್ಕಿಗಳಲ್ಲಿ ಈ ಹಿಂದೆ ಬಾಲ್ಯವಿವಾಹ ಸರ್ವೆಸಾಮಾನ್ಯ ಎನ್ನುವಂತಿತ್ತು. ಶಿಕ್ಷಿತರಾಗುತ್ತಿರುವ ಕಾಲೋನಿಯ ಜನರು ಇಂದಿನ ದಿನಗಳಲ್ಲಿ ತಮ್ಮ ಮಕ್ಕಳು ಪ್ರಾಪ್ತ ವಯಸ್ಸಿಗೆ ಬಂದ ನಂತರವೇ ಮದುವೆ ಮಾಡುತ್ತಿದ್ದಾರೆ. ಇವರ ಮದುವೆ ಆಚರಣೆಗಳಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಮದುವೆಯ ಸಂದರ್ಭದಲ್ಲಿ ಮಹಿಳೆಯರು ಬಂಗಾರದ ಒಡವೆ, ಕಾಲುಂಗುರಗಳನ್ನು ತೊಡುತ್ತಿದ್ದಾರೆ. ಪುರುಷರು ಹಿಂದೆ ಬಿಳಿಯ ಅಂಗಿ ಕಚ್ಚೆಪಂಚೆ ತೊಡುತ್ತಿದ್ದರು. ಆದರೆ ಇಂದು ಶೂಟು, ಪ್ಯಾಂಟು, ಶರ್ಟ್, ಇತ್ಯಾದಿ ಆಧುನಿಕ ಉಡುಪುಗಳನ್ನು ಮದುವೆಯ ಸಂದರ್ಭದಲ್ಲಿ ಧರಿಸುತ್ತಿದ್ದಾರೆ.

ಈ ಹಿಂದೆ ವಧುವಿಗೆ ತಾಳಿಯನ್ನು ವರನ ತಂದೆ ಇಲ್ಲವೇ ಅವನ ಸಂಬಂಧಿಕರು ಇಲ್ಲವೇ ಕಟ್ಟೆಮನೆ ಗೌಡನೇ ಕಟ್ಟುತ್ತಿದ್ದನು. ಇತ್ತೀಚಿನ ದಿನಗಳಲ್ಲಿ ಈ ಪದ್ಧತಿಯನ್ನು ಕೈಬಿಟ್ಟಿದ್ದಾರೆ. ವರನೇ ವಧುವಿಗೆ ತಾಳಿ ಕಟ್ಟುವ ಪದ್ಧತಿಯ ರೂಢಿಸಿಕೊಂಡಿದ್ದಾರೆ. ತೆರ ಕೊಡುವ ಪದ್ಧತಿಯನ್ನು ಈಗಲೂ ತುಂಬಾ ಕಟ್ಟುನಿಟ್ಟಿನಿಂದ ಅನುಸರಿಸುತ್ತಿದ್ದಾರೆ. ಮದುವೆಯ ಆಚರಣಾ ವಿಧಾನಗಳಲ್ಲಿ ಸ್ವಲಮಟ್ಟಿನ ಬದಲಾವಣೆಯಾಗಿದ್ದು, ಇತರ ಸಮುದಾಯದಂತೆ ವಿವಾಹಗಳನ್ನು ಜರುಗಿಸುತ್ತಿದ್ದಾರೆ. ಕಂಪ್ಲಿ ಕಾಲೋನಿಯ ಹಕ್ಕಿಪಿಕ್ಕಿಯರಲ್ಲಿ ಇಂದು 'ಸೀರುಡಿಕೆ' ಪದ್ಧತಿಯು ಸಂಪೂರ್ಣ ಕಣ್ಮರೆಯಾಗಿದೆ. ಮೈದುನ ವಿವಾಹವು ರೂಢಿಯಲ್ಲಿದ್ದು, ನಾದಿನಿ ವಿವಾಹಗಳೂ ವಿರಳವಾಗಿ ನಡೆಯುತ್ತಿವೆ. ಇತ್ತೀಚಿನ ಯುವಕ, ಯುವತಿಯರು ಪರಸ್ಪರ ಪ್ರೀತಿಸಿ ಮದುವೆ ಮಾಡಿಕೊಳ್ಳುತ್ತಿದ್ದರಾದರೂ ಇಂತಹ ಪ್ರೇಮ ವಿವಾಹಕ್ಕೆ ಮೊದಲು ಸಮುದಾಯದವರು ಒಪ್ಪಿಗೆ ಕೊಟ್ಟರೆ ಮಾತ್ರ ಮದುವೆ ಜರಗುತ್ತವೆ ಇಲ್ಲದಿದ್ದರೆ ಇಲ್ಲ.

ಅಂತರ್‌ಜಾತಿ ವಿವಾಹವನ್ನು ಒಪ್ಪದ ಇವರು ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಅನಿವಾರ್ಯವಾಗಿ ಒಪ್ಪಿಗೆ ಕೊಡಬೇಕಾಗಿದೆ. ಆದರೂ ಇವರು ತಮ್ಮ "ಸಮುದಾಯದ ಯುವಕ ಅಥವಾ ಯುವತಿ ತಮಗಿಂತ ಮೇಲ್ಜಾತಿಯವರನ್ನು ಪ್ರೀತಿಸಿ ಮದುವೆಯಾದರೆ ಆ ಮೇಲ್ಜಾತಿಯ ಯುವಕ ಅಥವಾ ಯುವತಿ ಇವರ ಸಮುದಾಯಕ್ಕೆ ಸೇರಿಕೊಂಡು ಕಾಲೋನಿಯಲ್ಲಿ ಬಂದು ಎಲ್ಲರೊಡನೆ ಜೀವಿಸಬೇಕು. ಒಂದು ವೇಳೆ ಹಕ್ಕಿಪಿಕ್ಕಿ ಸಮುದಾಯದ ಯುವಕ ಅಥವಾ ಯುವತಿ

ತಮಗಿಂತ ಕೆಳ ಸಮುದಾಯದವರನ್ನು ಮದುವೆಯಾದರೆ ಮದುವೆಯಾದವರನ್ನು ತಮ್ಮ ಜಾತಿಯಿಂದ ಹೊರ ಹಾಕಲಾಗುತ್ತದೆ".(ಶಿಕಾರಿ ರಾಮು, ೫೦, ಕಂಪ್ಲಿ) ಸಾಮಾನ್ಯವಾಗಿ ಇವರು ಮುಸ್ಲಿಮರು ಮತ್ತು ಮಾದಿಗರನ್ನು ತಮಗಿಂತ ಕೀಳು ಎಂದು ಭಾವಿಸುತ್ತಾರೆ. ಇವುಗಳಲ್ಲಿಯೂ ಸ್ವಲ್ಪಮಟ್ಟಿನ ಬದಲಾವಣೆಯನ್ನು ಇಂದು ಕಾಲೋನಿಯಲ್ಲಿ ಕಾಣಬಹುದಾಗಿದೆ.

ಸಾವಿನ ಸಂದರ್ಭದ ಆಚರಣೆಯಲ್ಲಿ ಬದಲಾವಣೆ

ಹಕ್ಕಿಪಿಕ್ಕಿಯರು ಸಾವಿಗೆ ತುಂಬಾ ಹೆದರುತ್ತಾರೆ. ಹಿಂದಿನ ಕಾಲದಲ್ಲಿ ಇವರ ಕಾಲೋನಿಗಳಲ್ಲಿ ಯಾರಾದರೂ ಸತ್ತರೆ ಸತ್ತವನ ಸಂಬಂಧಿಕರನ್ನು ಬಿಟ್ಟು ಉಳಿದವರೆಲ್ಲಾ ಕಾಲೋನಿಯನ್ನು ಬಿಡುತ್ತಿದ್ದರು. ಇತ್ತೀಚಿನ ದಿಗಳಲ್ಲಿ ತಮ್ಮ ಕಾಲೋನಿಯಲ್ಲಿ ಯಾರಾದರೂ ಸತ್ತರೆ ಹೆಣವನ್ನು ಸ್ಮಶಾನಕ್ಕೆ ಹೊಯ್ಯುವ ವರೆಗೆ ಕಾಲೋನಿಯಲ್ಲಿ ಯಾರ ಮನೆಯಲ್ಲೂ ಒಲೆ ಹಚ್ಚುವಂತಿಲ್ಲ. ಅಡುಗೆ ಮಾಡುವಂತಿಲ್ಲ. ಹಾಗೇನಾದರೂ ಅಡುಗೆ ಮಾಡಿದರೆ ಅಡುಗೆಯನ್ನು ಚೆಲ್ಲಿ ಜೊತೆಗೆ ಅಂಥವರಿಗೆ ದಂಡವನ್ನು ವಿಧಿಸುತ್ತಾರೆ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಇವರಲ್ಲಿ ಮಹಿಳೆಯರೂ ಸ್ಮಶಾನಕ್ಕೆ ಹೋಗುತ್ತಾರೆ. ಅಲ್ಲದೇ ಮಹಿಳೆಯರು ಹೆಣವನ್ನೂ ಹೊರುತ್ತಾರೆ. ಬೇರೆ ಯಾವುದೇ ಸಮುದಾಯಗಳಲ್ಲಿ ಮಹಿಳೆಯರು ಹೆಣವನ್ನು ಹೋರುವ ಪದ್ಧತಿ ಕಂಡುಬರುವುದಿಲ್ಲ.

ಇವರಲ್ಲಿ ಸತ್ತವರನ್ನು ಹೂಳುವ ಪದ್ಧತಿ ಹೆಚ್ಚು. ಸುಟ್ಟರೆ ದೇವತೆಗಳು ಸಿಟ್ಟಾಗುತ್ತಾರೆಂದು ನಂಬುತ್ತಾರೆ. ಕಾರಣ ತಮ್ಮ ಸಮುದಾಯದ ಮೂಲ ಪುರುಷನಾದ ದಾದಾಜಿ ದೇವನು ಒಂದು ಜೀವ ಸೃಷ್ಟಿಸಿದನು. ಆ ಜೀವಕ್ಕೆ ನೆಲ ಇರಲಿಲ್ಲ, ಆ ಕಾಲದಲ್ಲಿ ಆ ನೆಲವನ್ನು ಒಂದು ಹೆಣ್ಣು ದೆವ್ವ ಆಳುತ್ತಿದ್ದಳು. ಆ ದೆವ್ವ ದೊಡ್ಡ ದೇವರಾದ ದಾದಾಜಿಗೆ ನೆಲವನ್ನು ಕೊಟ್ಟು ಜೀವಿಗಳೆಲ್ಲ ನಿನ್ನ ಅಂಕೆಯಲ್ಲಿರಲಿ ಸತ್ತವರೆಲ್ಲ ನೆಲದೊಳಕ್ಕೆ ನನ್ನ ಅಂಕೆಗೆ ಬರಲಿ ಎಂದು ಹೇಳಿದಳು. ಈ ಒಪ್ಪಂದದ ಪ್ರಕಾರ ಆ ಹೆಣ್ಣು ದೆವ್ವನನ್ನು ತೃಪ್ತಿಪಡಿಸಲು ಸತ್ತವ್ಯಕ್ತಿ ಮತ್ತು ಅವನ ವಸ್ತುಗಳನ್ನು ಹೂಳುತ್ತಾರೆ ಎಂದು ಇಲ್ಲಿನ ಹಿರಿಯರು ಪುರಾಣ ಕಥೆಗಳನ್ನು ಹೇಳುತ್ತಾರೆ. ಅದರೂ ಅಪಘಾತದಲ್ಲಿ ಗರ್ಭಿಣಿಯಾಗಿದ್ದಾಗ ಚಿಕ್ಕವಯಸ್ಸಿನಲ್ಲಿ ಸತ್ತವರನ್ನು ಸುಡುವ ಪದ್ಧತಿಯು ಇವರಲ್ಲಿದೆ. ಸತ್ತವ್ಯಕ್ತಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆ ಹೊದಿಸಿ ಚಟ್ಟದ ಮೇಲಿಟ್ಟು ಹೊತ್ತುಕೊಂಡು ಹೋಗಿ ಹೂತುಹಾಕುತ್ತಾರೆ. ಇಲ್ಲವೇ ಸುಡುತ್ತಾರೆ. ಈ ಕಾಲೋನಿ ಯವರಲ್ಲಿ ಹೆಣವನ್ನು ಮೊದಲು ಹೊರವವರು (ಹೆಗಲು ಕೊಡುವವರು) ಸತ್ಯವ್ಯಕ್ತಿಯ ಸಂಬಂಧಿಕರೇ ನಂತರ ಬೇರೆಯವರು ಹೋರಬಹುದು.

ಹೆಣವನ್ನು ಹೂಳಿದ ನಂತರ ಹಿಂದಿರುಗಿ ಗುಡಾರಕ್ಕೆ ಬಂದು ರೊಟ್ಟಿ ಮಾಡಿ ಮೆಣಸಿನಕಾಯಿಯ ಚಟ್ನಿಯನ್ನು ಮಾಡಿ ರೊಟ್ಟಿಯ ಮೇಲಿಟ್ಟು ಹೆಣವನ್ನು ಹೂಳಿದ ಮಣ್ಣಿನ ಮೇಲಿಟ್ಟು ಅಲ್ಲಿಂದ ಮನೆಗೆ ಹಿಂದಿರುಗುತ್ತಾರೆ. ಶವಸಂಸ್ಕಾರದ ಮರುದಿನ ಮನೆಯವರು ಹೋಗಿ ಪಿಂಡವನ್ನಿಟ್ಟು ಕಾಗೆಯನ್ನು ಕರೆದು ಕಾಗೆ ಬಂದು ಪಿಂಡ ತಿಂದರೆ ಸತ್ತವರ ಆತ್ಮ ಸಂತೃಪ್ತಿಗೊಂಡಿದೆ ಎಂದು.

ಇವರಲ್ಲಿ ಬೇರೆ ಸಮುದಾಯದವರಂತೆ ಸತ್ತ ಮೂರನೇ ದಿನದಂದು ಅಣ್ಣತಮ್ಮಂದಿರು ಇಂಡಿಕೂಳು ತಿನ್ನುವ ಪದ್ಧತಿ ಇಲ್ಲ.

ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿರುವ ಇವರು ಇಂದು ಶವಸಂಸ್ಕಾರವನ್ನು ಇತರ ಸಮುದಾಯದವರು ಸಂಸ್ಕಾರ ಮಾಡುವ ರುದ್ರಭೂಮಿಯಲ್ಲಿಯೇ ಮಾಡುತ್ತಿದ್ದಾರೆ. ಸ್ಥಳದ ಕೊರತೆಯಿಂದ ಹೆಣವನ್ನು ಹೂಳುವುದಕ್ಕಿಂತ ಸುಡುವ ಪದ್ಧತಿಯನ್ನೇ ಇತ್ತೀಚೆಗೆ ಹೆಚ್ಚಾಗಿ ಅನುಸರಿಸುತ್ತಿದ್ದಾರೆ. ಕಂಪ್ಲಿ ಪಟ್ಟಣದಲ್ಲಿರುವ ಇಂದಿನ ಸ್ಮಶಾನವು ಒಂದು ಕಾಲಕ್ಕೆ ಪಟ್ಟಣದ ಹೊರವಲಯದಲ್ಲಿದ್ದಿತ್ತು. ನಿರ್ಜನ ಪ್ರದೇಶವಾಗಿದ್ದ ಇದು ಅಂದಿನ ಕೆಳಸಮುದಾಯಗಳ ರುದ್ರಭೂಮಿಯಾಗಿತ್ತು. ಅಲ್ಲದೇ ಹಳ್ಳದ ನೀರು ಹರಿಯುವ ಈ ಪ್ರದೇಶ ಬುಡಕಟ್ಟು ಸಮುದಾಯಗಳ ವಾಸಸ್ಥಳವೂ ಆಗಿದ್ದಿತು. ಆದರೆ ಪಟ್ಟಣ ಬೆಳೆದಂತೆ ಹಣವಂತರು ಬುಡಕಟ್ಟು ಸಮುದಾಯಗಳು ನೆಲೆಸಿದ್ದ ಹಳ್ಳದ ಪ್ರದೇಶದಲ್ಲೇ ಕಟ್ಟಡಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಪ್ರಸ್ತುತ ಕಂಪ್ಲಿ ಪಟ್ಟಣದಲ್ಲಿ ಎರಡು ರುದ್ರಭೂಮಿಗಳಿದ್ದು, ಅವು ಕಡಿಮೆ ವಿಸ್ತೀರ್ಣ ಹೊಂದಿವೆ. ಪಟ್ಟಣ ಬೆಳದಂತೆಲ್ಲಾ ಈ ರುದ್ರಭೂಮಿಗಳು ಪಟ್ಟಣದ ಮಧ್ಯದಲ್ಲಿ ಸೇರಿ ಹೋಗಿವೆ.

ಆಹಾರ ಪದ್ಧತಿಯಲ್ಲಿ ಬದಲಾವಣೆ

ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಬಹುಮುಖ್ಯವಾದದ್ದು ಆಹಾರ. ಮೂಲತಃ ಅಲೆಮಾರಿಗಳಾದ ಹಕ್ಕಿಪಿಕ್ಕಿ ಸಮುದಾಯದವರ ಆಹಾರ ಪೂರೈಕೆಯ ವಿಧಾನಗಳನ್ನು ನಾಲ್ಕು ಬಗೆಗಳಲ್ಲಿ ಕಾಣಬಹುದಾಗಿದೆ. ಬೇಟೆ ಹಾಗೂ ಅರಣ್ಯ ಉತ್ಪನ್ನಗಳ ಸಂಗ್ರಹದಿಂದ, ಭಿಕ್ಷಾಟನೆಯಿಂದ, ಕೃಷಿ ಹಾಗೂ ವ್ಯಾಪಾರದಿಂದ ಹೀಗೆ ಬದಲಾದ ಕಾಲಮಾನಕ್ಕೆ ತಕ್ಕಂತೆ ಆ ನಾಲ್ಕು ಹಂತಗಳಲ್ಲಿ ಆಹಾರ ಪೂರೈಕೆಯನ್ನು ಮಾಡಿಕೊಳ್ಳುತ್ತಾ ಬರುತ್ತಿದ್ದಾರೆ. ಮಾಂಸ ಪ್ರಿಯರಾದ ಇವರು ಹಿಂದೆ ಕಾಡಿನಲ್ಲಿ ಪ್ರಾಣಿಪಕ್ಷಿಗಳನ್ನು ಬೇಟೆಯಾಡಿ ಪ್ರತಿದಿನ ಮಾಂಸವನ್ನು ತಿನ್ನುವ ಇವರು ತಿನ್ನದೇ ಇರುವ ಪ್ರಾಣಿ ಪಕ್ಷಿಗಳೇ ಇಲ್ಲ. ಬೇಟೆ ಸಿಗದಿದ್ದ ಸಂದರ್ಭದಲ್ಲಿ ಕಾಡಿನಲ್ಲಿ ದೊರೆಯುವ ಗಡ್ಡೆಗೆಣೆಸು, ಹಣ್ಣು ಹಂಪಲುಗಳನ್ನು ತಿನ್ನುತ್ತಿದ್ದರು. ಬದಲಾದ ಸಂದರ್ಭದಲ್ಲಿ ಕಾಡಿನಿಂದ ನಾಡಿಗೆ ಬಂದು ಊರಾಚೆ ನೆಲಸ ತೊಡಗಿದಾಗ ಸುತ್ತಮುತ್ತಲ ಹಳ್ಳಿಗಳಲ್ಲಿ ಭಿಕ್ಷೆ ಬೇಡಿ ತಮ್ಮ ಆಹಾರ ಪೂರೈಸಿಕೊಳ್ಳುತ್ತಿದ್ದರು. ಇನ್ನು ಮುಂದುವರಿದು ತಾವು ಇತರ ಸಮುದಾಯದವರಂತೆ ಕೃಷಿ ಮಾಡತೊಡಗಿದರು. ಕೃಷಿಯಿಂದ ಬೆಳೆ ಬೆಳೆದು ಅಕ್ಕಿ, ಜೋಳ, ರಾಗಿ, ಹಲಸಂದಿ, ಸಜ್ಜೆ, ನವಣೆ, ಇತ್ಯಾದಿ ದಾನ್ಯಗಳನ್ನು ಆಹಾರಕ್ಕೆ ಬಳಸುತ್ತಿದ್ದಾರೆ.

ಅಲೆಮಾರಿಗಳಾದ ಕಾರಣ ಇವರಿಗೆ ಎಲ್ಲಾ ಬಗೆಯ ಆಹಾರಗಳ ಪರಿಚಯವಿದ್ದು, ಸಾಮಾನ್ಯ ಅಡುಗೆಗಳಾದ ಅನ್ನ, ಸಾರು, ರೊಟ್ಟಿ, ಪಾಯಸ, ಇಡ್ಲಿ, ಚಿತ್ರಾನ್ನ, ದೊಸೆ ಹೀಗೆ ಎಲ್ಲಾ ತರಹದ ಅಡುಗೆಯನ್ನು ಸೇವಿಸುವರು. ದಿನ ಬೆಳಗಾದರೆ ತಮ್ಮ ತಮ್ಮ ಕೆಲಸಗಳಿಗಾಗಿ ಊರೂರು ಅಲೆಯುವುದರಿಂದ ಹೋಟೆಲ್ ತಿಂಡಿಯನ್ನು ತಂದು ಬೆಳಗಿನ ಉಪಹಾರವಾಗಿ ಸೇವಿಸಿ ಕೆಲಸಕ್ಕೆ ಹೋಗುವರು. ಹೀಗಾಗಿ ಬೆಳಗಿನ ಸಮಯದಲ್ಲಿ ಮನೆಗಳಲ್ಲಿ ಅಡುಗೆ ಮಾಡದೇ ಇರುವುದು ಸಾಮಾನ್ಯ.

ಮದ್ಯಾಹ್ನ ಮತ್ತು ರಾತ್ರಿ ವೇಳೆ ಮನೆಗಳಲ್ಲಿ ಅಡುಗೆ ಮಾಡಿಕೊಳ್ಳುತ್ತಾರೆ. ಕೆಲವರು ಮಧ್ಯಾಹ್ನವೂ ಸಹ ಹೋಟೆಲ್‌ನಲ್ಲಿ ತಿಂದು ರಾತ್ರಿ ಊಟಕ್ಕೆ ತಮ್ಮ ಮಕ್ಕಳು ಭಿಕ್ಷಾಟನೆಯಿಂದ ಬೇಡಿ ತಂದ ಆಹಾರವನ್ನು ಊಟ ಮಾಡಿ ಮಲಗುತ್ತಾರೆ.

ಊಟೋಪಚಾರಗಳಿಗೆ ಸಂಬಂಧಿಸಿದ ವಿಧಿನಿಷೇಧಗಳನ್ನು ಈಗಲೂ ತುಂಬಾ ಕಟ್ಟುನಿಟ್ಟಿನಿಂದ ನಡೆಸುತ್ತಿದ್ದಾರಾದರೂ ಕೆಲವೊಂದು ನಿಷೇಧಗಳಲ್ಲಿ ಸಡಿಲಿಕೆ ಕಂಡುಬರುತ್ತದೆ. ಉದಾಹರಣೆಗೆ ಈ ಹಿಂದೆ ಇವರು ಮುಸ್ಲಿಮರ ಮನೆಗಳಲ್ಲಿ ಮತ್ತು ಮಾದಿಗರ ಮನೆಗಳಲ್ಲಿ ನೀರೂ ಕುಡಿಯುವಂತಿರಲಿಲ್ಲ. ಇತ್ತೀಚೆಗೆ ಈ ಪದ್ಧತಿಯನ್ನು ನಡೆಸದೇ ಅವರ ಮನೆಗಲ್ಲಿ ನೀರು ಕುಡಿಯುವುದು ಮಾತ್ರವಲ್ಲದೇ ಊಟವನ್ನು ಸಹ ಮಾಡುತ್ತಿದ್ದಾರೆ. ಅಲ್ಲದೇ ಇತರ ಮೇಲ್ಜಾತಿಯವರೊಡನೆ ಪಂಕ್ತಿ ಭೋಜನ ಮಾಡುತ್ತಿದ್ದಾರೆ. ಪ್ರಸ್ತುತ ಸಾಮಾಜಕ್ಕೆ ಈ ತರಹದ ಬದಲಾವಣೆ ಸ್ವಾಗತಾರ್ಹವಾಗಿದೆ. ಜಾತೀಯತೆಯನ್ನು ಹೋಗಲಾಡಿಸುವ ಮಾರ್ಗೋಪಾಯಗಳಲ್ಲಿ ಈ ಸಹಪಂಕ್ತಿ ಭೋಜನವೂ ಒಂದಾಗಿದೆ. ಕಾಲೋನಿಯ ಹಕ್ಕಿಪಿಕ್ಕಿಯರು ತಮ್ಮ ಬೆಡಗುಗಳಲ್ಲಿನ ಊಟೋಪಚಾರಗಳಿಗೆ ಸಂಬಂಧಿಸಿದ ವಿಧಿನಿಷೇಧಗಳನ್ನು ಈಗಲೂ ತುಂಬಾ ಕಟ್ಟುನಿಟ್ಟಿನಿಂದ ನಡೆಸಿಕೊಂಡು ಬರುತ್ತಿದ್ದಾರೆ.

ನ್ಯಾಯಪದ್ಧತಿಯಲ್ಲಿನ ಬದಲಾವಣೆ

ಹಕ್ಕಿಪಿಕ್ಕಿ ಸಮುದಾಯದವರು ತಮ್ಮಲ್ಲಿ ತಲೆದೊರುವ ಸಮಸ್ಯೆಗಳಿಗೆ ತಮ್ಮ ತಮ್ಮಲ್ಲಿಯೇ ನ್ಯಾವ್ (ಪಂಚಾಯಿತಿ) ಮಾಡಿ ಬಗೆಹರಿಸಿಕೊಳ್ಳುತ್ತಾರೆ. ಇವರ ಪಂಚಾಯಿತಿಗೆ ತಮ್ಮದೇ ಆದ ನ್ಯಾಯಪದ್ಧತಿ ಇದ್ದು, ಒಂದು ಕಟ್ಟೆಮನೆ ಆ ಕಟ್ಟೆಮನೆಗೆ ಮುಖಂಡನನ್ನಾಗಿ ಒಬ್ಬ ಹಿರಿಯನನ್ನು ಕಟ್ಟೆಮನೆ ಗೌಡನನ್ನಾಗಿ ನೇಮಕ ಮಾಡಿಕೊಂಡಿರುತ್ತಾರೆ. ಪ್ರತಿಯೊಂದು ಬುಡಕಟ್ಟು ತಮ್ಮ ಸಂಪ್ರದಾಯ ರಕ್ಷಿಸಲು ಮತ್ತು ತಮ್ಮಲ್ಲಿನ ಅಪರಾಧಗಳನ್ನು ನಿಯಂತ್ರಿಸಲು ನ್ಯಾಯ ಪದ್ಧತಿಯನ್ನು ಹೊಂದಿರುತ್ತದೆ. ಅದೇ ರೀತಿ ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯವೂ ತಮ್ಮದೇ ಆದ ನ್ಯಾಯ ಪದ್ಧತಿಯನ್ನು ಹೊಂದಿದೆ. "ರಾಜ್ಯ ಕಾನೂನನ್ನು ನಿರ್ಮಿಸುತ್ತದೆ ಎನ್ನುವುದಕ್ಕಿಂತ ಕಾನೂನು ರಾಜ್ಯವನ್ನು ನಿರ್ಮಿಸುತ್ತದೆ"[೪] ಎಂಬ ಮಾತು ಬುಡಕಟ್ಟಿನವರ ಅಂದಿನ ನ್ಯಾಯಪದ್ಧತಿಯನ್ನು ನೋಡಿಯೇ ಹೇಳಿರಬೇಕು. ಇಂದಿನ ನಮ್ಮ ಕಾನೂನು ನಿಯಮಗಳು ಬುಡಕಟ್ಟುಗಳ ಪ್ರಾಚೀನ ನ್ಯಾಯಪದ್ಧತಿಯನ್ನು ಅನುಸರಿಸಿದವುಗಳೇ ಅಗಿದೆ.

ಕಾಲೋನಿಯ ಹಕ್ಕಿಪಿಕ್ಕಿಯರು ಕಟ್ಟೆಮನೆಯನ್ನು ರಚಿಸಿಕೊಂಡು ಅರ್ಹ ವ್ಯಕ್ತಿಯನ್ನು ಕಟ್ಟೆಮನೆ ಗೌಡನನ್ನಾಗಿ ನೇಮಿಸಿಕೊಂಡು ತಾವೇ ವ್ಯಾಜ್ಯಗಳನ್ನು ಇತ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ತಮ್ಮ ಸಮುದಾಯದ ಸದಸ್ಯರನ್ನು ನಿಯಂತ್ರಣದಲ್ಲಿಡಲು ಹಲವು ಕಟ್ಟುನಿಟ್ಟಿನ ನಿಯಮಗಳಿವೆ. ತಪ್ಪಿತಸ್ಥರನ್ನು ಮತ್ತು ತಮ್ಮ ನ್ಯಾಯ ಪದ್ಧತಿ ಉಲ್ಲಂಘಿಸಿದವರನ್ನು ಉಗ್ರ ಶಿಕ್ಷೆಗೆ ಗುರಿಮಾಡಲಾಗುತ್ತದೆ. ಈ ಹಿಂದೆ

---

೪. ಅಕ್ಕಮಹಾದೇವಿ, ಬುಡಕಟ್ಟು ನ್ಯಾಯ, ೧೯೯೮, ಪು. ೮

ಇವರಲ್ಲಿ ಆರೋಪಿಗಳ ಅಪರಾಧವನ್ನು ಪತ್ತೆ ಹಚ್ಚಲು ಹಲವು ಕ್ರಮಗಳನ್ನು ಬಳಸುತ್ತಿದ್ದರು. ಅವುಗಳೆಂದರೆ ಕೊಡಲಿಯನ್ನು ಕೆಂಪಾಗಿ ಕಾಯಿಸಿ ಆರೋಪಿಯ ಅಂಗೈ ಮೇಲೆ ಒಂದು ವೀಳ್ಯೆದೆಲೆ ಇಟ್ಟು ಅದರ ಮೇಲೆ ಕಾದ ಕೊಡಲಿ ಇಡುತ್ತಾರೆ. ಆ ವ್ಯಕ್ತಿ ತಪ್ಪು ಮಾಡಿದ್ದರೆ ಕೈ ಸುಡುತ್ತದೆ. ಒಂದು ವೇಳೆ ತಪ್ಪು ಮಾಡಿಲ್ಲದಿದ್ದರೆ ಕೈ ಸುಡುವುದಿಲ್ಲ ಎಂಬುದು ಇವರ ನಂಬಿಕೆ. ಅಲ್ಲದೆ ಮತ್ತೊಂದು ವಿಧಾನವೆಂದರೆ ಕಾದ ಎಣ್ಣೆಯಲ್ಲಿ ಆರೋಪಿಯು ಕೈ ಅದ್ದಬೇಕು. ಕೈ ಸುಟ್ಟರೆ ಅವನು ತಪ್ಪು ಮಾಡಿದ್ದಾನೆ ಇಲ್ಲದಿದದರೆ ಕೈ ಸುಡುವುದಿಲ್ಲ ಎಂಬುದು ಅವರ ನಂಬಿಕೆಯಾಗಿತ್ತು. ಈ ಪದ್ಧತಿಯನ್ನು ಇಂದಿನ ವೈಜ್ಞಾನಿಕ ಯುಗದಲ್ಲಿ ಸಮುದಾಯದವರು ಅನುಸರಿಸುತ್ತಿಲ್ಲ.

ಇವರಲ್ಲಿ ಊಟೋಪಚಾರ, ಗಂಡ ಹೆಂಡತಿಯ ನಡವಳಿಕೆ, ಅನೈತಿಕತೆ, ಮದುವೆ, ವಿಚ್ಛೇದನ, ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಹಲವು ನಿರ್ಬಂಧಗಳನ್ನು ವಿಧಿಸಿದ್ದರು. ಆ ನಿಯಮಗಳನ್ನು ಯಾರು ಉಲ್ಲಂಘಿಸುತ್ತಿರಲಿಲ್ಲ. ಆದರೆ ಇಂದು ಈ ನಿಯಮಗಳಲ್ಲಿ ಸಡಿಲಿಕೆ ಉಂಟಾಗಿದೆ. ಊಟೋಪಚಾರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಹಕ್ಕಿಪಿಕ್ಕಿಯರು ಮುಸ್ಲಿಮರ ಮನೆಗಳಲ್ಲಿ ನೀರು ಸಹ ಕುಡಿಯುವಂತಿರಲಿಲ್ಲ. ಆದರೆ ಇಂದು ಈ ನಿಯಮವನ್ನು ಯಾರೂ ಅನುಸರಿಸುತ್ತಿಲ್ಲ. ಗಂಡು ಹೆಣ್ಣಿಗೆ ಸಂಬಂಧಿಸಿದ ನಿರ್ಬಂಧಗಳನ್ನು ಇವರು ಇಂದಿಗೂ ತಪ್ಪದೇ ಕಟ್ಟುನಿಟ್ಟಿನಿಂದ ಪಾಲಿಸಿಕೊಂಡು ಬರುತ್ತಿದಾರೆ. ಆಧುನಿಕತೆ ಸ್ಪರ್ಶ ಪಡೆಯುತ್ತಿರುವ ಹಕ್ಕಿಪಿಕ್ಕಿಯರು ಇತರ ಸಮುದಾಯ ದವರೊಂದಿಗೆ ಬೆರತು ಅನ್ಯ ಸಂಸ್ಕೃತಿಯ ಪರಿಚಯ ಮಾಡಿಕೊಂಡು ತಮ್ಮಲ್ಲಿನ ನ್ಯಾಯ ಪದ್ಧತಿಯಲ್ಲಿ ಬದಲಾವಣೆಗಳನ್ನು ತಂದುಕೊಳ್ಳುತ್ತಿದ್ದಾರೆ.

ಹಿಂದಿನ ಕಾಲದಲ್ಲಿ ಇವರು ವ್ಯಾಜ್ಯಗಳನ್ನು ಹಿರಿಯರ ಮುಖಂಡತ್ವದಲ್ಲಿ ಸಮುದಾಯದವರ ಸಮ್ಮುಖದಲ್ಲಿ ಒಂದು ನಿರ್ದಿಷ್ಟ ಜಾಗದಲ್ಲಿ ಚರ್ಚಿಸಿ ನ್ಯಾಯ ತೀರ್ಮಾನ ಕೈಗೊಳ್ಳುತ್ತಿದ್ದರು. ಪಂಚರ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರುತ್ತಿದ್ದರು. ಇಂದು ಈ ಪಂಚರ ತೀರ್ಮಾನಕ್ಕೆ ಅಷ್ಟೊಂದು ಬೆಲೆ ಕೊಡದೆ ಕೋರ್ಟು ಕಚೇರಿಗಳಲ್ಲಿ ನ್ಯಾಯ ಇತ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಕಾಲೋನಿಯ ಸದಸ್ಯರು ಪ್ರತಿ ಸಣ್ಣ ಜಗಳವನ್ನು ಆರಕ್ಷಕ ಠಾಣೆಗೆ ದೂರು ಒಯ್ಯುತ್ತಿದ್ದಾರೆ. ಈ ರೀತಿಯ ಬದಲಾವಣೆಗೆ ಕಾರಣ ಕಾಲೋನಿಯಲ್ಲಿ ರಾಜಕೀಯ ಪಕ್ಷಗಳ ಪ್ರವೇಶ ಚುನಾವಣಾ ಸಂದರ್ಭದಲ್ಲಿ ಇವರ ಮತಗಳನ್ನು ಪಡೆಯುವ ಉದ್ದೇಶದಿಂದ ಸ್ಥಳೀಯ ರಾಜಕೀಯ ನಾಯಕರು ಸಮುದಾಯದವರ ಮಧ್ಯೆ ಗುಂಪುಗಾರಿಕೆ ಸೃಷ್ಟಿಸಿ ಕಾಲೋನಿಯವರ ಒಗ್ಗಟ್ಟನ್ನು ಒಡೆಯುತ್ತಿದ್ದಾರೆ. ಅಲ್ಲದೇ ಆಧುನಿಕತೆಗೆ ಒಳಗಾದ ಕಾಲೋನಿಯ ಜನರು ತಮ್ಮ ಹಳೆಯ ನ್ಯಾಯ ಪದ್ಧತಿಯನ್ನು ಅನುಸರಿಸದೇ ಪ್ರತಿ ಸಣ್ಣ ವ್ಯಾಜ್ಯಗಳ ತೀರ್ಮಾನಕ್ಕೂ ಕಾನೂನು ಕಟ್ಟಳೆಗಳ ಮೊರೆ ಹೋಗುತ್ತಿದ್ದಾರೆ.

೫.೨ ಆರ್ಥಿಕ ಬದಲಾವಣೆ

ಪ್ರಾಚೀನ ಕಾಲದಲ್ಲಿ ಬುಡಕಟ್ಟು ಸಮುದಾಯಗಳಿಗೆ ಆರ್ಥಿಕತೆಯ ಬಗ್ಗೆ ಚಿಂತೆ ಇರಲಿಲ್ಲ ಹಾಗೂ ಬಂಡವಾಳದ ಪ್ರಜ್ಞೆ, ಸಂಗ್ರಹಿಸಿ ಇಟ್ಟುಕೊಳ್ಳುವ ಮನೋಭಾವನೆಯೂ ಅವರಲ್ಲಿರಲಿಲ್ಲ. ಕ್ರಮೇಣ ಕೂಡಿಡುವ ಮನೋಭಾವ ಅವರಲ್ಲಿ ಬೆಳೆದದ್ದರಿಂದ ಅವರು ಗಳಿಸುವ ಆಮಿಷಕ್ಕೆ ಒಳಗಾದರು. ನಂತರ ತಮ್ಮದೇ ಆದ ಆರ್ಥಿಕ ಬೆಳವಣಿಗೆಗೆ ಮಹತ್ವ ನೀಡತೊಡಗಿದರು. ಆಧುನೀಕರಣಗೊಂಡ ಇಂದಿನ ಈ ಸಮಾಜದಲ್ಲಿ ಆರ್ಥಿಕತೆಗೆ ನೀಡುವಂತಹ ಪ್ರಾತಿನಿಧ್ಯ ಮತ್ತಾವ ವಿಷಯಕ್ಕೂ ನೀಡುವುದಿಲ್ಲ. ಇಂತಹ ಜಾಗತೀಕರಣದ ಸಂದರ್ಭದಲ್ಲಿ ಕಾಲೋನಿಯಲ್ಲಿನ ಹಕ್ಕಿಪಿಕ್ಕಿ ಸಮುದಾಯದವರಲ್ಲಿಯೂ ಈಗ ಆರ್ಥಿಕವಾಗಿ ತುಂಬಾ ಬದಲಾವಣೆಗಳಾಗಿರುವುದನ್ನು ಕಾಣಬಹುದು. ಆದರೂ ಸಂಪೂರ್ಣವಾಗಿ ಇಂದಿನ ಆಧುನಿಕತೆಗೆ ಹೊಂದಿಕೊಂಡು ತಮ್ಮ ಆರ್ಥಿಕತೆಯಲ್ಲಿ ಬದಲಾವಣೆ ಹೊಂದಿದ್ದಾರೆ ಎನ್ನುವುದಕ್ಕಿಂತ ಬದಲಾವಣೆಗೆ ಪ್ರಯತ್ನಿಸುತ್ತಿದ್ದಾರೆ ಎನ್ನುವುದು ಸೂಕ್ತ.

ಆರ್ಥಿಕತೆ ಎನ್ನುವುದು ಒಬ್ಬ ವ್ಯಕ್ತಿಯ ಸಮುದಾಯದ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುವಲ್ಲಿ ಬಹುಮುಖ್ಯವಾದ ಪಾತ್ರ ನಿರ್ವಹಿಸುತ್ತದೆ. ಸಮಾಜ ಎಂಬುದು ಉಳ್ಳವರು, ಇಲ್ಲದವರು, ಬಡವರು, ಶ್ರೀಮಂತರು ಎಂಬ ಸ್ತರವಿನ್ಯಾಸ ವ್ಯವಸ್ಥೆ ಮಾದರಿಯಲ್ಲಿ ರಚಿತವಾಗಿರುವಂತಹದ್ದು. ಶತಮಾನಗಳ ಹಿಂದೆ ಕಾಡುಮೇಡುಗಳಲ್ಲಿ ಅಲೆದಾಡುತ್ತಾ ಅಲೆಮಾರಿ ಜೀವನ ಸಾಗಿಸುತ್ತಿದ್ದ ಹಕ್ಕಿಪಿಕ್ಕಿ ಸಮುದಾಯದವರು ಕಾಡಿನಲ್ಲಿ ದೊರೆಯುವ ಸಂಪತ್ತನ್ನು ಅವಲಂಬಿಸಿ ಜೀವನ ಸಾಗಿಸುತ್ತಿದ್ದರು. ಅರಣ್ಯ ಮೂಲಭೂತ ಅಗತ್ಯಗಳನ್ನು ಒದಗಿಸುವ ಆರ್ಥಿಕತೆಯ ಕೇಂದ್ರಬಿಂದುವಾಗಿತ್ತು. ಅಲ್ಲಿ ದೊರೆಯುವ ಹಣ್ಣುಹಂಪಲಗಳು, ಗಡ್ಡೆ ಗೆಣಸುಗಳನ್ನು ಸಂಗ್ರಹಿಸುತ್ತಾ, ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುತ್ತಾ ಜೀವನವನ್ನು ಸಾಗಿಸುತ್ತಿದ್ದರು. ಆರ್ಥಿಕ ಉತ್ಪನ್ನಗಳ ಮೇಲೆ ಬ್ರಿಟಿಷರು ಭಾರತವನ್ನಾಳುವ ಮೂಲಕ ಪ್ರಾಬಲ್ಯ ಸ್ಥಾಪನೆ ಮಾಡಿದರೋ ಅಂದಿನಿಂದ ಇವರ ಸಾಮಾಜಿಕ ರಚನೆ ಬದಲಾವಣೆಯತ್ತ ಸಾಗಿತು. ಭಾರತದಲ್ಲಿ ವಸಾಹತುಶಾಹಿ ವ್ಯವಸ್ಥೆ ಸೃಷ್ಟಿಸಿದ ಅವಾಂತರಗಳ ಫಲವಾಗಿ ಕಾಡಿನ ನಡುವೆ ಸಾರಿಗೆ ಸಂಪರ್ಕ ಅಭಿವೃದ್ಧಿ ಅರಣ್ಯ ಕಾನೂನು ಎಂಬ ನಿಯಮಗಳು ಅಭಿವೃದ್ಧಿ ಹೆಸರಿನಲ್ಲಿ ವಿಜೃಂಭಿಸಲು ಪ್ರಾರಂಭಿಸಿದವು. ಅರಣ್ಯ ವಾಸಿಗಳ ಸ್ವಚ್ಛಂದ ಜೀವನಕ್ಕೆ ಕಡಿವಾಣ ಹಾಕುವ ದಿಸೆಯಲ್ಲಿ ಬ್ರೀಟಿಷ್ ಸರ್ಕಾರ ಯಶಸ್ವಿಯಾಯಿತು. ಇದರಿಂದ ಅವರ ಸ್ವಚ್ಛಂದ ಬದುಕು ಅಸ್ತಿರಗೊಳ್ಳಲಾರಂಬಿಸಿತು. ಅಭಿವೃದ್ಧಿಯ ಹೆಸರಿನಲ್ಲಿ ಇವರನ್ನು ಒಕ್ಕಲೆಬ್ಬಿಸುವ ಮೂಲಕ ಕಾಡಿನಿಂದ ನಾಡಿಗೆ ಬಂದು ನೆಲೆಸುವಂತೆ ಮಾಡಿದವು. ನಾಡಿಗೆ ಬಂದು ನೆಲೆಸಿದ ಹಕ್ಕಿಪಿಕ್ಕಿಯರು ತಮ್ಮ ಜೀವನ ನಿರ್ವಹಣೆಗೆ ಅನಿವಾರ್ಯವಾಗಿ ತಮ್ಮ ಮೂಲ ವೃತ್ತಿಯಿಂದ ಪಲ್ಲಟಗೊಂಡು ಸುತ್ತಲಿನ ಸಮುದಾಯಗಳ ಜೊತೆ ಬೆರೆಯುವ ಮೂಲಕ ಕೂಲಿಗಾಗಿ ಶ್ರೀಮಂತರ, ಬಂಡವಾಳಶಾಹಿಗಳ ಹಾಗೂ ಜಮಿನ್ದಾರರನ್ನು ಅವಲಂಬಿಸ ಬೇಕಾಯಿತು. ಡಾ. ಎ.ಎಸ್. ಪ್ರಭಾಕರ ಅವರು ತಮ್ಮ ಅಲೆಮಾರಿಗಳ ಶಾಪಗ್ರಸ್ತ ಪಯಣ ಎಂಬ

ಲೇಖನದಲ್ಲಿ ಹೇಳಿರುವಂತೆ ಆರ್ಥಿಕ ಸ್ಥಿತ್ಯಂತರಗಳೆಂದರೆ ಅವರ ವೃತ್ತಿ ಬದುಕಿನಲ್ಲಿ ನಡೆದ ಬದಲಾವಣೆಯೇ ಆಗಿದೆ. "ಕುಲಕಸುಬಿನ ಆಧಾರದ ಮೇಲೆ ಒಂದು ಜಾತಿಗೆ ಪ್ರಾಪ್ತವಾಗಿದ್ದ ಹೀನ ವೃತ್ತಿಗಳು ಆಧುನಿಕ ಜಗತ್ತಿನಲ್ಲಿ ಇಲ್ಲವಾಗಿ ಅಂತಹ ಜಾತಿಗಳು ಸಾಮಾಜಿಕ ಸ್ಥಾನಮಾನಗಳನ್ನು ಮೀರಿ ನಿಲ್ಲಲು ಸಾಧ್ಯವಾದರೂ ಜಾತಿಗಳ ಒಟ್ಟು ಆರ್ಥಿಕ ಸ್ಥಿತಿಗಳಲ್ಲಿ ಯಾವ ಬದಲಾವಣೆಗಳಾಗಿಲ್ಲ".[೫]

ಇಂದು ಜಗತ್ತು ತಂತ್ರಜ್ಞಾನದ ಹೆಸರಿನಲ್ಲಿ ಎಷ್ಟೇ ಮುಂದುವರೆದಿದ್ದರೂ ಭಾರತ ಇನ್ನೂ ಸಂಪ್ರದಾಯಿಕ ಉತ್ಪಾದನಾ ವಿಧಾನವನ್ನು ಸಮರ್ಥಿಸುತ್ತಲೆ ಇದೆ. ಹಾಗಾಗಿ ಭಾರತದ ಉತ್ಪಾದನಾ ಕ್ಷೇತ್ರಗಳಲ್ಲಿ ಅಗಾಧ ಪ್ರಮಾಣದ ಕ್ರಾಂತಿಗಳು ಸಂಭವಿಸಿಲ್ಲ. ಆಗಾಗ ನಡೆದು ಹೋದ ಬದಲಾವಣೆಗಳು ಸಮಾಜದ ದುಡಿವ ವರ್ಗಗಳ ಬದುಕಿನಲ್ಲಿ ಯಾವ ಗಮನರ್ಹಾ ಹೊಸತನವನ್ನು ತರಲಿಲ್ಲ. ಅಲೆಮಾರಿಗಳೆಂದು ಕರೆಯಿಸಿಕೊಳ್ಳುವ ಬಹುತೇಕ ಎಲ್ಲಾ ಸಮುದಾಯಗಳಿಗೆ ಅವುಗಳ ಚರಿತ್ರೆಯಲ್ಲಿ ನಿಶ್ಚಿತ ಆದಾಯವನ್ನು ತಂದು ಕೊಡುವ ಸ್ಥಿರಾಸ್ತಿಗಳಿರಲಿಲ್ಲ. ಆರ್ಥಿಕವಾಗಿ ಅಲೆಮಾರಿಗಳು ಉತ್ಪಾದಕ ಸಮುದಾಯಗಳನ್ನು ಅವಲಂಬಿಸಬೇಕಿತ್ತು. ಭಾರತದ ಮೂಲ ಕಸುಬಾದ ಕೃಷಿಯನ್ನು ಇವರು ಕೈಗೊಳ್ಳುವ ಯಾವ ಪಾರಂಪರಿಕ ಸಿದ್ಧತೆಗಳೂ ಇಲ್ಲದ ಕಾರಣಕ್ಕಾಗಿ ಅವರು ಕೃಷಿಕರಾಗುವ ಸಾಧ್ಯತೆಗಳಿರಲಿಲ್ಲ. ದತ್ತಿಯ ಮೂಲಕ ಬಂದ ಜಮೀನನ್ನು ಅವರು ಉಳುಮೆ ಮಾಡಲಿಲ್ಲ. ಹೀಗಾಗಿ ಇಂತಹ ಅಲೆಮಾರಿಗಳಿಗೆ ಭೂಮಿ ದಕ್ಕಿದರೂ ಅವರಿಗೆ ಅದು ಆರ್ಥಿಕ ಮೂಲವಾಗಲಿಲ್ಲ. ಹಕ್ಕಿಪಿಕ್ಕಿಯರ ಜೀವನಾಧಾರದ ಆರ್ಥಿಕತೆಯು ಸ್ವಯಂ ಪರಿಪೂರ್ಣವಾದುದಲ್ಲ. ಇವರು ಸಾಂಪ್ರದಾಯಿಕ ಬೇಟೆಗಾರಿಕೆ ಮತ್ತು ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡು ಅಲೆಮಾರಿಗಳಾಗಿ ಜೀವನ ನಡೆಸುತ್ತಿದ್ದಾಗಲೂ ಇದು ಸಾಧ್ಯವಾಗಿಲ್ಲ. ಕಂಪ್ಲಿ ಕಾಲೋನಿಯ ಹಕ್ಕಿಪಿಕ್ಕಿಯರಲ್ಲಿ ಒಂದಿಬ್ಬರನ್ನು ಬಿಟ್ಟರೆ ಯಾರೂ ಸಹ ಭೂಮಿಯನ್ನು ಹೊಂದಿಲ್ಲ. ಸ್ವಂತ ಉಳುಮೆ ಎಂಬುದೇ ಇಲ್ಲಿನ ಹಕ್ಕಿಪಿಕ್ಕಿಯರಿಗೆ ಗೊತ್ತಿಲ್ಲ.

ಮಾನವನ ಜೀವಿತಾವಧಿಯಲ್ಲಿ ಹೆಚ್ಚು ಕಡಿಮೆ ಕಾಡು ಪ್ರಾಣಿಗಳಂತೆ ಜೀವಿಸುತ್ತಿದ್ದ, ನಂತರ ಆತನ ಸಾಮಾಜಿಕ ಜೀವನ ಕ್ರಮೇಣ ವಿಕಾಸವಾಗತೊಡಗಿತು. ಮಾನವನ ಸಾಮಾಜಿಕ, ಆರ್ಥಿಕ ಜೀವನದ ವಿಕಾಸವನ್ನು ನಾಲ್ಕು ಹಂತಗಳಲ್ಲಿ ನೋಡಬಹುದು.

೧. ಬೇಟೆ ಜೀವನದ ಹಂತ : Hunting stage

೨. ಪಶುಪಾಲನೆಯ ಹಂತ : Pasteral stage

೩. ಕೃಷಿಯ ಹಂತ : Agriculture stage

೪. ಕೈಗಾರಿಕಾ ಹಂತ : Industrice stage ಈ ರೀತಿಯಾಗಿ ಮಾನವನ ಸಾಮಾಜಿಕ, ಆರ್ಥಿಕ ಜೀವನವು ವಿವಿಧ ಹಂತಗಳಲ್ಲಿ ಬದಲಾವಣೆ ಹೊಂದುತ್ತಾ ಬಂದಿದ್ದದನ್ನು ಕಾಣಬಹುದು.

---

೫. ಬೋರಲಿಂಗಯ್ಯ ಹಿ.ಚಿ., ಪ್ರಭಾಕರ ಎ.ಎಸ್., (ಸಂ) ಬುಡಕಟ್ಟು ಅಧ್ಯಯನ, ೨೦೦೫, ಪು.೧೦೧ ೧೦೨

ಪ್ರಸ್ತುತ ಕಂಪ್ಲಿಯಲ್ಲಿನ ಹಕ್ಕಿಪಿಕ್ಕಿಯರ ಆರ್ಥಿಕಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ. ತಮ್ಮ ಜೀವನಕ್ಕಾಗಿ ನಾನಾ ರೀತಿಯ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವುದನ್ನು ಗಮನಿಸಬಹುದು. ಇದಕ್ಕೆ ಮುಖ್ಯಕಾರಣ ಸಂದರ್ಭ ಹಾಗೂ ತಾವು ನೆಲೆಸಿರುವ ಪರಿಸರ. ಈ ಸಮುದಾಯದವರು ವಾಸಿಸುವ ಪಟ್ಟಣ ಪ್ರದೇಶ ಮತ್ತು ಸುತ್ತಲ ಹಳ್ಳಿಗಳ ಪ್ರಭಾವ ಬೀರಿರುವುದರಿಂದ ಅವುಗಳ ಜೊತೆಗಿನ ಸಂಬಂಧದಿಂದ ತಮ್ಮ ವೃತ್ತಿಗಳಲ್ಲಿ ಹಲವು ಬದಲಾವಣೆ ಕಂಡುಕೊಂಡಿದ್ದಾರೆ. ಬೇರೆ ಸಮುದಾಯಗಳಂತೆ ಇಲ್ಲಿನ ಹಕ್ಕಿಪಿಕ್ಕಿಯರೂ ಇಂದು ಕೃಷಿಕೂಲಿಗಳಾಗಿ ಹೆಚ್ಚಿನ ಜನರು ಜೀವಿಸುತ್ತಿದ್ದಾರೆ. ಕೆಲವರು ಗಾರೆಕೆಲಸಗಳಿಗೆ ಹೋಗುತ್ತಿದ್ದಾರೆ. ಮಹಿಳೆಯರು ಕೂಲಿ ಮತ್ತು ಮನೆಕೆಲಸಕ್ಕೆ ಹೋಗುವರು. ವಯಸ್ಸಾದ ಕೆಲವರು ಹೊಲಗದ್ದೆಗಳ ಕಾವಲು ಕಾಯಲು ಹೋಗುತ್ತಿದ್ದಾರೆ. ಅಲ್ಲದೆ ಆಟೋ ಚಾಲಕರಾಗಿ, ಮಣಿಸರ ವ್ಯಾಪಾರಸ್ಥರಾಗಿ, ಗಿಡಮೂಲಿಕೆ ಮಾರುವವರಾಗಿ ಹೀಗೆ ಹತ್ತು ಹಲವು ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಅಲೆಮಾರಿಗಳಾದ ಹಕ್ಕಿಪಿಕ್ಕಿಯರು ನೆಲೆನಿಂತ ನಂತರದ ದಿನಗಳಲ್ಲಿ ರೂಪಿಸಿಕೊಂಡ ವಿಭಿನ್ನವಾದ ಉತ್ಪಾದನಾ ಮಾರ್ಗದಲ್ಲಿ ಕೂಲಿಯೂ ಗಣನೀಯ ಪ್ರಭಾವ ಬೀರಿದೆ. ಆರಂಭದ ದಿನಗಳಲ್ಲಿ ಭೂಮಿಯನ್ನು ನಂಬಿ ದುಡಿದ ಹಕ್ಕಿಪಿಕ್ಕಿಯರು ಇಂದು ಸುತ್ತಲ ಗ್ರಾಮಗಳ ವ್ಯವಸಾಯಗಾರರ ಹೊಲಗದ್ದೆಗಳಲ್ಲಿ ಕೃಷಿಕೂಲಿ ಕೆಲಸಗಾರರಾಗಿ ದುಡಿಯುತ್ತಿರುವುದನ್ನು ಕಾಣಬಹುದು. ಕೂಲಿ ಎಂದರೆ ಸಾಮಾನ್ಯವಾಗಿ ದಿನದ ಕೊನೆಯಲ್ಲಿ ಅಥವಾ ವಾರದ ಕೊನೆಯಲ್ಲಿ ಶ್ರಮವನ್ನು ವ್ಯಯಿಸಿದ ಶ್ರಮಿಕನಿಗೆ ಕೊಡುವ ಸಂಭಾವನೆ ಇಂದು ಹಕ್ಕಿಪಿಕ್ಕಿ ಕಾಲೋನಿಯ ಬಹಳಷ್ಟು ಮಂದಿ ಉತ್ಪಾದನಾ ಮಾರ್ಗವಾಗಿ ಕುಟುಂಬದ ನಿರ್ವಹಣೆಗೆ ಕಂಡುಕೊಂಡ ಪರ್ಯಾಯ ಮಾರ್ಗಗಳಲ್ಲಿ ಒಂದು. ಇಂದು ಇದು ಮುಖ್ಯವಾಗಿದ್ದು, ಕಾಲೋನಿಯ ಜನರನ್ನು ಸುತ್ತಮುತ್ತಲ ಸಮುದಾಯಗಳ ಜೊತೆ ಸ್ನೇಹ ಸೌಹಾರ್ದತೆ ಬೆರೆಯುವಂತೆ ಮಾಡಿದೆ. ಇದರಿಂದ ಇಂದು ಹಕ್ಕಿಪಿಕ್ಕಿಯರ ಜೀವನ ವಿಧಾನ,ರೀತಿ ನೀತಿಗಳಲ್ಲಿ ಸಾಕಷ್ಟು ಬದಲಾವಣೆಗಳು ಕಂಡುಬರುತ್ತಿವೆ. ಕೂಲಿಯಲ್ಲಿ ಗಂಡಸರು, ಹೆಂಗಸರು ಸಮಾನವಾಗಿ ವಿವಿಧ ಬಗೆಯ ಕೆಲಸಗಳಲ್ಲಿ ದುಡಿಯುವವರಾಗಿದ್ದಾರೆ. ಹೀಗೆ ವಿವಿಧ ಕಸುಬುಗಳಲ್ಲಿ ತೊಡಗಿರುವ ಕಾಲೋನಿಯ ಲಿಂಗವಾರು ಸಂಖ್ಯಾಪ್ರಮಾಣ ಮುಂದಿನ ಕೋಷ್ಟಕ ೬.೧ರಂತಿದೆ.


ಉದ್ಯೋಗದ ಆಸರೆಯಾಗಿ ಕುಟುಂಬ ನಿರ್ವಹಣೆಗೆ ಅವಲಂಬಿಸಿರುವ ಕೂಲಿಯು ಬದಲಾದ ವ್ಯವಸ್ಥೆಯಲ್ಲಿ ಗಮನಾರ್ಹವಾದ ಬದಲಾವಣೆಯ ವಿಷಯವಾಗಿದೆ. ಬುಡಕಟ್ಟು ಸಮುದಾಯವಾದ ಹಕ್ಕಿಪಿಕ್ಕಿಯರು ರೂಢಿಸಿಕೊಂಡ ಉದ್ಯೋಗಗಳಿಗೂ, ಪಾರಂಪರಿಕವಾಗಿ ಬಂದಿದ್ದ ಉದ್ಯೋಗಗಳಿಗೂ ಸಂಬಂಧವೇ ಇಲ್ಲದ ಪರಿಸ್ಥಿತಿಯಲ್ಲಿಯೂ ಆಸರೆಯಾಗಿ ಪಡೆದ ವೃತ್ತಿಗಳು ಇಂದು ಹಕ್ಕಿಪಿಕ್ಕಿಯರನ್ನು ಹೆಚ್ಚು ವ್ಯಾಪಿಸಿವೆ. ಹೀಗಾಗಿ ಬದಲಾಗುತ್ತಿರುವ ಸಮಾಜದಲ್ಲಿ ನಾನಾ ಬದಲಾವಣೆಗೆ ಹೊಸ ಹೊಸ ಉದ್ಯೋಗಗಳ ಸೃಷ್ಟಿಯಾದವು ಅಭಿವೃದ್ಧಿಯ ಮಾನದಂಡಗಳು, ಬೆಳವಣಿಗೆಗಳು ನಡೆಯುತ್ತಿದ್ದರೂ ಇವೆಲ್ಲವುಗಳನ್ನು ಮರೆತು ವ್ಯವಸ್ಥಿತ ಸಮಾಜದೊಂದಿಗೆ ಹೊಂದಿಕೊಂಡು ಹೋಗುವ, ಅನೇಕ

ವಿಧವಾದ ಉದ್ಯೋಗಗಳಲ್ಲಿ ತೊಡಗಿಸಿಕೊಂಡು ನೆಲೆನಿಂತು ಜೀವಿಸುತ್ತಿರುವುದು ಇವರುಗಳ ವಿಶೇಷ ಗುಣ. ಕೂಲಿಯನ್ನು ಕಲ್ಪನೆಯಲ್ಲೂ ಕಾಣದ ಹಕ್ಕಿಪಿಕ್ಕಿಯರು ಪ್ರಸ್ತುತ ದಿನಗಳಲ್ಲಿ ಅವಲಂಬನೆ ಮಾಡಿಕೊಂಡ ರೀತಿಯೆ ಬೆರಗುಗೊಳಿಸುತ್ತದೆ. ವ್ಯವಸಾಯದ ಜೊತೆಗೆ ಒಂದೇ ವಿಧವಾದ ವೃತ್ತಿಯನ್ನು ಅವಲಂಬಿಸದೆ ಆದಾಯ ತರುವ ವಿವಿಧ ವೃತ್ತಿಗಳಲ್ಲಿ ತೊಡಗಿಸಿ ಕೊಂಡಿದ್ದಾರೆ. ಹೀಗಾಗಿ ಕಾಲೋನಿಯ ಬಹಳಷ್ಟು ಜನರು ಕೃಷಿಕೂಲಿಗಳಾಗಿದ್ದಾರೆ.

ಕೋಷ್ಟಕ ೬.೧. ವಿವಿಧ ವೃತ್ತಿಗಳನ್ನು ಅನುಸರಿಸುತ್ತಿರುವ ಹಕ್ಕಿಪಿಕ್ಕಿಯರ ಲಿಂಗವಾರು ಸಂಖ್ಯಾ ಪ್ರಮಾಣ

ಕಸುಬುಗಳು	ಇಕೋತಿಯಾ			ಕೊರಬಿಯಾ			ಖೋಡಿಯಾರ			ಪಿಂಪಳಜಾ			ಸಾವಂಡಿಯಾ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಕೃಷಿಕೂಲಿ	೬	೭	೧೨	೪೩	೬೩	೧೦೬	೧೮	೨೭	೪೫	೬	೧೧	೧೭	೨೮	೪೬	೭೪
ಧಾರ್ಮಿಕ ಭಿಕ್ಷಾಟನೆ		೨	೨	೨	೩	೫		೧	೧		೨	೨			
ದಿನಗೂಲಿ				೩		೩	೧		೧						
ಗಾರೆಕೆಲಸ				೨೨	೧	೨೩	೮		೮	೨		೨	೧೨		೧೨
ಹಂದಿ ಸಾಕಣಿಕೆ							೧	೧	೨						
ಸರ್ಕಾರಿ							೨		೨				೧		೧
ತಾತ್ಕಾಲಿಕ	೧		೧												
ಇತರೆ					೧	೧									
Total	೭	೯	೧೫	೭೦	೬೮	೧೩೮	೩೦	೨೯	೫೯	೮	೧೩	೨೧	೪೧	೪೬	೮೭

ವೃತ್ತಚಿತ್ರ ೧. ವಿವಿಧ ವೃತ್ತಿಗಳನ್ನು ಅನುಸರಿಸುತ್ತಿರುವ ಕಾಲೋನಿ ಹಕ್ಕಿಪಿಕ್ಕಿಯರ ಲಿಂಗವಾರು ಸಂಖ್ಯಾ ಪ್ರಮಾಣ



ಮೇಲಿನ ಕೋಷ್ಟಕ ೬.೧ ಮತ್ತು ವೃತ್ತಚಿತ್ರ ೬.೧ರಲ್ಲಿ ತೋರಿಸಿದಂತೆ ಕಾಲೋನಿಯ ಹಕ್ಕಿಪಿಕ್ಕಿಯರಲ್ಲಿ ಶೇ. ೭೫ರಷ್ಟು ಜನರು ಕೃಷಿಕೂಲಿಗಳಾಗಿದ್ದು, ಇತರೇ ಕೆಲಸಗಳಲ್ಲಿ ಶೇ. ೨೫ರಷ್ಟು ಜನ ದುಡಿಯುತ್ತಿರುವುದು

ಅಂಕಿಸಂಖ್ಯೆಗಳಿಂದ ತಿಳಿದುಬರುತ್ತದೆ. ಆರ್ಥಿಕ ಭದ್ರತೆಯನ್ನು ಒದಗಿಸುವ ಅಸ್ತಿಯೇ ಇವರಿಗಿಲ್ಲದಿರುವುದರಿಂದ ಜೀವನಕ್ಕಾಗಿ ಹಲವು ಕಸುಬುಗಳನ್ನು ಅನುಸರಿಸುವುದು ಅನಿವಾರ್ಯವಾಗಿದೆ.

೫.೩ ಸಾಂಸ್ಕೃತಿಕ ಬದಲಾವಣೆ

ಹೆಚ್ಚಾಗಿ ಸ್ತ್ರೀದೈವಗಳನ್ನು ಪೂಜಿಸುವ ಹಕ್ಕಿಪಿಕ್ಕಿಯರು ಇಂದು ಹಲವಾರು ರೀತಿಯ ಬದಲಾವಣೆಗೆ ಒಳಗಾಗಿದ್ದಾರೆ. ಇವರ ಬಹುತೇಕ ಹಬ್ಬಗಳು ಕುಲದೈವದ ಮೇಲೆಯೇ ಅವಲಂಬಿಸಿವೆ. ಮತಾಂತರವನ್ನು ಬಯಸದ ಹಕ್ಕಿಪಿಕ್ಕಿಯರು ಹುಟ್ಟಿನಿಂದ ಹಿಂದುವಾದ ನಾವು ಸಾಯುವಾಗಲೂ ಹಿಂದುಗಳಾಗಿಯೇ ಸಾಯುತ್ತೇವೆ ಎನ್ನುತ್ತಾರೆ. ಆದಿಕಾಲದಿಂದಲೂ ಅಲೆಮಾರಿಯಾಗಿದ್ದ ಹಕ್ಕಿಪಿಕ್ಕಿಯರು ವಿಶಿಷ್ಟವಾದ ಸಂಸ್ಕೃತಿಯನ್ನು ರೂಢಿಸಿಕೊಂಡು ಇತರ ಸಮುದಾಯದವರಿಗಿಂತ ಭಿನ್ನವಾಗಿ ಗುರುತಿಸಿಕೊಂಡಿದ್ದಾರೆ. ಆದರೆ ಇಂದಿನ ನವಯುಗದಲ್ಲಿ ತಮ್ಮ ಸಂಸ್ಕೃತಿಯಲ್ಲಿ ಬದಲಾವಣೆ ಕಂಡುಕೊಳ್ಳುತ್ತಿದ್ದಾರೆ. "ಸಂಸ್ಕೃತಿ ಎನ್ನುವುದು ಒಂದು ಉತ್ಪಾದನೆ, ಜೀವನದಲ್ಲಿ ಯಾವುದನ್ನು ಆವಿಷ್ಕರಿಸಿಕೊಳ್ಳುತ್ತೇವೆಯೋ ಅದೇ ಸಂಸ್ಕೃತಿಯಾಗಿದೆ. ಸಂಸ್ಕೃತಿ ಎನ್ನುವುದು ಪ್ರಾಕೃತಿಕವಾದದ್ದಲ್ಲ. ಅದು ಮನುಷ್ಯರು ನಿರ್ಮಿಸಿರುವುದಾಗಿದೆ. ಕಾಡು ಪ್ರಕೃತಿಯಾದರೆ, ವನಸಂಸ್ಕೃತಿಯಾಗಿದೆ. ಮನುಷ್ಯರೂಪಿಸಿಕೊಂಡ, ನಿರ್ಮಿಸಿಕೊಂಡ ಪ್ರಕೃತಿಯನ್ನು ಸಂಸ್ಕೃತಿ ಎಂದು ಕರೆಯುತ್ತೇವೆ".[೬] ಹೀಗೆ ಯಾವುದೇ ಸಮುದಾಯವು ಕಾಲಾಂತರದಲ್ಲಿ ತಾವೇ ರೂಢಿಸಿಕೊಂಡ ಸಂಸ್ಕೃತಿಯನ್ನು ಕಾಲಮಾನಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುತ್ತಿವೆ.

ಹಕ್ಕಿಪಿಕ್ಕಿ ಸಮುದಾಯದವರು ಪ್ರಸ್ತುತ ದಿನಗಳಲ್ಲಿ ಆಚರಣೆಗಳನ್ನು ಬದಲಾದ ಪರಿಸರಕ್ಕೆ ತಕ್ಕಂತೆ ಮಾಡುತ್ತಿದ್ದಾರೆ. ಅವರಲ್ಲಿನ ಅನೇಕ ಜನಪದ ಆಚರಣೆಗಳು ಕಾಲಕ್ಕನುಗುಣವಾಗಿವೆ. ಅವರ ಆಚರಣೆಗಳು ಇಂದು ಸಾಂಕೇತಿಕವಾಗಿದ್ದು, ಆಧುನಿಕತೆಯ ಪರಿಸರ ಅವರಲ್ಲಿ ಸಾಂಪ್ರದಾಯಿಕ ನಂಬಿಕೆಗಳನ್ನು ಉಳಿಸಿ ನಾವಿನ್ಯತೆಯನ್ನು ಪಡೆದಿದೆ. ಅವರ ನಂಬಿಕೆಗಳಿಗೆ ಘಾಸಿಯಾಗದಂತೆ ಪಾರಂಪರಿಕ ಆಚರಣೆ, ಸಂಪ್ರದಾಯ, ಹಬ್ಬ ಹರಿದಿನಗಳಲ್ಲಿ, ತಮ್ಮ ಮೂಲ ಕುಲದೈವಗಳ ಮೇಲೆ ನಂಬಿಕೆ ಉಳಿಯುವುದರ ಜೊತೆಗೆ ಇಂದು ರಾಘವೇಂದ್ರಸ್ವಾಮಿ, ಅಯ್ಯಪ್ಪಸ್ವಾಮಿ, ಮಂಜುನಾಥಸ್ವಾಮಿ, ತಿರುಪತಿ ತಿಮ್ಮಪ್ಪನಂತಹ ಆಧುನಿಕ ದೈವಗಳು ಕಾಲೋನಿಯ ಮನೆಮನೆಗಳನ್ನು ಹೊಕ್ಕಿವೆ. ಪ್ರಸ್ತುತ ಕಾಲೋನಿಯಲ್ಲಿ ಕಂಡುಬಂದ ಅಂಶಗಳೆಂದರೆ ಹಕ್ಕಿಪಿಕ್ಕಿಯರು ಇಂದು ನಗರಗಳ ಮಾದರಿಯಲ್ಲಿ ಮೇಲ್ವರ್ಗದ ಜನರು ಆಚರಿಸುವ ಆಚರಣೆಗಳನ್ನು ಅನುಸರಿಸುವ ಮೂಲಕ ಗಣೇಶಚತುರ್ಥಿ, ಏಕಾದಶಿ, ವರಮಹಾಲಕ್ಷ್ಮಿ ಮುಂತಾದ ಹಬ್ಬಗಳನ್ನು ಮಾಡುತ್ತಿದ್ದಾರೆ. ಆಧುನೀಕರಣದ ಪ್ರಭಾವಗಳಾದ ಸಮೂಹ ಮಾಧ್ಯಮಗಳು, ಪ್ರಗತಿಪರ ಚಿಂತನೆಗಳು ಇವರನ್ನು ಹೊಸ ದಿಕ್ಕಿನೆಡೆಗೆ ತಂದು ನಿಲ್ಲಿಸಿವೆ. ಹಿಂದೆ ಇದ್ದ ದೈವಾರಾಧನೆ, ಭೂತಾರಾಧನೆಗಳನ್ನು ಉಳಿಸಿಕೊಳ್ಳುವ ಜೊತೆಗೆ ಆಧುನಿಕವಾಗಿ ನಾಗರಿಕ ಸಮಾಜ ಆಚರಿಸುವ ಪ್ರತಿ ಹಬ್ಬಾಚರಣೆಗಳನ್ನು ಆಚರಿಸುವ ಮೂಲಕ ನಾಗರಿಕ ಸಮಾಜದೊಂದಿಗೆ ಸಂಪೂರ್ಣವಾಗಿ ಬೆರೆತು ಹೋಗಿರುವರು.

---

೬. ತಾರಿಹಳ್ಳಿ ಹನುಮಂತಪ್ಪ, ಮಾನವ ಮತ್ತು ಸಾಂಸ್ಕೃತಿಕ ಪಲ್ಲಟಗಳು, ೨೦೧೨, ಪು. ೧

ಕಂಪ್ಲಿ ಕಾಲೋನಿಯ ಹಕ್ಕಿಪಿಕ್ಕಿಯರು ತಮ್ಮ ಕುಲದೇವರ ಹಾಗೂ ಮನೆದೇವರುಗಳ ಜೊತೆಗೆ ಚೌಡೇಶ್ವರಿ, ವಿರೂಪಾಕ್ಷೇಶ್ವರ, ಆಂಜನೇಯಸ್ವಾಮಿ, ಮುಂತಾದ ದೇವರುಗಳನ್ನು ಪೂಜಿಸುತ್ತಿದ್ದಾರೆ. ವರ್ಷಕ್ಕೆ ಒಂದು ಸಲವಾದರೂ ಮಹಾರಾಷ್ಟ್ರದ ತುಳುಜಾಪುರಕ್ಕೆ ಹೋಗಿ ತುಳುಜಾಭವಾನಿಯ ದರ್ಶನ ಮಾಡಿಕೊಂಡು ಬರುವರು. ಇವರ ಪೂಜೆಯ ವಿಧಿವಿಧಾನ ಹಾಗೂ ಆಚರಣೆಗಳು ಬದಲಾಗಿದ್ದರೂ ಅವರು ದೇವರಿಗೆ ಕೊಡುವ ಬಲಿ ಆಚರಣೆ ಬದಲಾಗಿಲ್ಲ. ಪ್ರತಿವರ್ಷ ಯುಗಾದಿ ಹಬ್ಬದ ಸಂದರ್ಭದಲ್ಲಿ ನಡೆಯುವ ದೇವರ ಆಚರಣೆಯಲ್ಲಿ ತಮ್ಮ ಆರೂ ಬೆಡಗಿನ ದೇವತೆಗಳಿಗೆ ಕೋಣ,ಕುರಿ, ಹೋತಗಳನ್ನು ಬಲಿ ಕೊಟ್ಟು ಹೆಂಡವನ್ನು ದೇವರ ಮುಂದಿಟ್ಟು ಪುರುಷರು, ಮಹಿಳೆಯರು ಮಕ್ಕಳಾದಿಯಾಗಿ ಎಲ್ಲರೂ ಸೇರಿ ಚೆನ್ನಾಗಿ ಕುಡಿದು ಜಾತ್ರೆ ಮಾಡುವರು. ಊರ ತುಂಬಾ ವಾದ್ಯಗಳನ್ನು ಬಾರಿಸುತ್ತಾ,ಕುಣಿಯುತ್ತಾ ಮೆರವಣಿಗೆ ಮೂಲಕ ದೈವವನ್ನು ಸಂತೃಪ್ತಿಪಡಿಸಿದ ಭಾವ ಅವರಲ್ಲಿದೆ. ಆ ಮುಖೇನ ವಿವಿಧ ಕಡೆಗಳಲ್ಲಿ ಚದುರಿ ಹೋಗಿದ್ದವರು ಒಂದೆಡೆ ಬೆರೆತು ತಮ್ಮ ಕಷ್ಟ-ಸುಖಗಳನ್ನು ಹಂಚಿಕೊಳ್ಳುವರು. ಇದೇ ಅವರ ಪಾರಂಪರಿಕ ಸಾಂಸ್ಕೃತಿಕ ಹಬ್ಬವಾಗಿದ್ದು ಅವರ ಅನನ್ಯತೆಯ ಪ್ರತೀಕವಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಇತರ ಅಂಶಗಳಂತೆ ಸಾಂಸ್ಕೃತಿಕ ಅಂಶವು ಸಾಮಾಜಿಕ ಬದಲಾವಣೆಗೆ ಕಾರಣವಾಗಿದೆ. ಯಾವುದೇ ಸಮುದಾಯವು ತನ್ನತನವನ್ನು ಉಳಿಸಿಕೊಳ್ಳಲು ಸಾಮಾಜಿಕ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಲೇ ಇರುತ್ತವೆ. ಈ ನಿಟ್ಟಿನಲ್ಲಿ ಹಕ್ಕಿಪಿಕ್ಕಿ ಸಮುದಾಯ ಕೂಡಾ ನೀತಿ ನಿಯಮ ಗಳನ್ನು ಪಾಲಿಸುತ್ತಾ ಆಧುನಿಕ ಸಂದರ್ಭಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುವ ಮೂಲಕ ಹಿಂದಿನ ಕಟ್ಟಳೆ ಗಳಲ್ಲಿ ಸಡಿಲತೆ ಇದ್ದರೂ ಇವರ ಆಚಣೆಗಳು ಮೂಢನಂಬಿಕೆ ಅಂತ ಎನಿಸಿದರೂ ಅದರ ಹಿಂದಿನ ನೋವು ಬಿತ್ತರಿಸುವಂತೆ ಚಿತ್ರಣವಿರುವುದು ಕಂಡಬರುತ್ತದೆ. ಒಟ್ಟಾರೆಯಾಗಿ ಹಕ್ಕಿಪಿಕ್ಕಿ ಸಮುದಾಯ ಆಧುನಿಕ ಚಿಂತನೆಗೆ ಒಗ್ಗಿಕೊಂಡು ಮೂಲ ಪರಂಪರೆಯನ್ನು ಎತ್ತಿಹಿಡಿಯುತ್ತ ಸಾಗುತ್ತಿರುವುದು ಗಮನಿಸಬೇಕಾದ ಅಂಶ.

೫.೪. ಶೈಕ್ಷಣಿಕ ಬದಲಾವಣೆ

ಅಲೆಮಾರಿ ಬುಡಕಟ್ಟು ಶಿಕ್ಷಣದ ಆರಂಭಿಕ ಪ್ರಯತ್ನವನ್ನು ತಿಳಿಯುವಾಗ ಅವರ ಪಾರಂಪರಿಕ ಜ್ಞಾನದಿಂದ ಆಧುನಿಕ ಶಿಕ್ಷಣದವರೆಗಿನ ಬದಲಾವಣೆಯನ್ನು ನೋಡಬೇಕಾಗುತ್ತದೆ. ಅವರಲ್ಲಿನ ಸಂಕುಚಿತ ಮನೋಭಾವನೆ, ಅಸ್ಪೃಶ್ಯತೆ ಭಾವಗಳೇ ಬುಡಕಟ್ಟುಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿಯಲು ಕಾರಣ. ಇಂತಹ ಬುಡಕಟ್ಟುಗಳಲ್ಲಿ ಒಂದಾದ ಹಕ್ಕಿಪಿಕ್ಕಿ ಸಮುದಾಯ ಹಿಂದೆ ಸಹಜವಾಗಿ ಪಡೆಯುತ್ತಿದ್ದ ಅನೌಪಚಾರಿಕ ಶಿಕ್ಷಣ ವ್ಯವಸ್ಥೆಯೇ ಅದ್ಭುತವಾದುದ್ದಾಗಿತ್ತು. ತಮ್ಮ ಕಾಲೋನಿಯ ಹಿರಿಯರಿಂದ ಜೀವನಾನುಭವದ ಕ್ರಮ ಶಿಕ್ಷಣ ಪಡೆಯುತ್ತಿದ್ದರು. ಈ ಅನೌಪಚಾರಿಕ ಶಿಕ್ಷಣದ ಮಾರ್ಗದಲ್ಲಿ ಸಂಸ್ಕೃತಿಯ ಪ್ರಸಾರದ ಕಲಿಕೆ ಮಕ್ಕಳಿಗೆ ಲಭ್ಯವಾಗುತ್ತಿತ್ತು. ಇಂದಿನ ಸಾಕ್ಷರತಾ ಶಿಕ್ಷಣಕ್ಕಿಂತ ಸಂಪೂರ್ಣವಾಗಿ

ಭಿನ್ನವಾಗಿದ್ದ ತಲೆತಲಾಂತರಗಳಿಂದ ಬಳುವಳಿಯಾಗಿ ಬಂದ ಸಾಗಿ ಬೇಟೆ, ಆಹಾರ ಸಂಗ್ರಹಣಾ ವಿಧಾನ, ನಾಟಿ ಔಷಧಿ, ಪ್ರಾಣಿ ಪಕ್ಷಿಗಳ ಚಲನವಲನ, ನೀರಿನ ಮೂಲ, ನಿಸರ್ಗ ವಿಕೋಪಗಳ ಪೂರ್ವಜ್ಞಾನ, ಸ್ವಯಂ ರಕ್ಷಣೆಯ ಕಲಿಕೆ, ದೈಹಿಕ ಕಸರತ್ತು, ಪಕ್ಷಿಗಳ ಕುರಿತು ಅರಿವು ಹಾಗೂ ತಮ್ಮ ಜೀವನದಲ್ಲಿ ಆಚರಿಸಬೇಕಾದ ನೈತಿಕ ಶಿಕ್ಷಣ ಅವರಿಗೆ ಸಾಂಪ್ರದಾಯಿಕವಾಗಿ ದೊರೆಯುತ್ತಿತ್ತು. ತಮ್ಮ ಸಮುದಾಯದಲ್ಲಿ ಪಾಲಿಸಬೇಕಾಗಿದ್ದ ವಿಧಿನಿಷೇಧಗಳ ತಿಳುವಳಿಕೆ ಜೀವನದ ಭಾಗವೇ ಆಗಿರುತ್ತಿತ್ತು.

ನಿನ್ನೆ ನಾಳೆಗಳ ಯೋಚನೆ ಇಲ್ಲದೆ ಬದುಕುವ ಇವರು ತಮ್ಮದೇ ಆದ ಆದರ್ಶ ರಾಜ್ಯದಲ್ಲಿದ್ದಾರೆ. ತಮ್ಮ ಹಿರಿಯರಿಂದ ಸಾಂಪ್ರದಾಯಿಕ ಪಾರಂಪರಿಕ ಅನೌಪಚಾರಿಕ ಶಿಕ್ಷಣ ಪಡೆಯುವರು. “ಸಹಜವಾಗಿಯೇ ಆರೇಳು ವರ್ಷಕ್ಕೆ ಅಲೆಮಾರಿಗಳಾಗಿ ರೂಪಗೊಳ್ಳುವ ಇವರು ಆ ವಯಸ್ಸಿಗೆ ಪರಿಸರದ ಅಧ್ಯಯನದ ಮಾಸ್ಟರ್ ಆಗಿರುತ್ತಾರೆ. ಆರು ವರ್ಷಕ್ಕೆ ಸುಮಾರು ೩೦-೪೦ ಜಾತಿಯ ಗಿಡಬಳ್ಳಿಗಳನ್ನು ಗುರುತಿಸುವ ಹಂತ ತಲುಪಿರುತ್ತಾರೆ”.[೭] ಹೀಗೆ ಅನೌಪಚಾರಿಕ ಶಿಕ್ಷಣದ ಮೂಲಕ ಪಾರಂಪರಿಕ ಜ್ಞಾನ ಪಡೆದುಕೊಂಡ ಇವರು ಔಪಚಾರಿಕ ಶಿಕ್ಷಣದಿಂದ ವಂಚಿತರಾಗಿದ್ದಾರೆ.

“ಬುಡಕಟ್ಟು ಸಮುದಾಯಗಳು ಹೊಂದಿದ್ದ ನಿಸರ್ಗ ಸಹಜವಾದ ನಾಚಿಕೆಸ್ವಭಾವ, ಅಲೆಮಾರಿತನ ಯಾರೊಂದಿಗೂ ನೇರವಾಗಿ ವ್ಯವಹರಿಸದ ಮುಜುಗರದ ಸ್ವಭಾವಗಳಿಂದ ಅವರು ಶಿಕ್ಷಣದಿಂದ ವಂಚಿತರಾಗಬೇಕಾಯಿತು”.[೮] ಸ್ವಾತಂತ್ರ್ಯ ನಂತರ ಶಿಕ್ಷಣದ ಹಾಗೂ ಸಮುದಾಯಗಳ ಹಿತಾಸಕ್ತಿಯನ್ನು ಕಾಪಾಡುವ ಕೆಲಸಗಳು ಸಂವಿಧಾನದಲ್ಲಿ ರೂಪಿತವಾದವು. ಕೊಠಾರಿ ಶಿಕ್ಷಣ ಆಯೋಗವು ೧೯೬೪-೬೬ರ ಶಿಪಾರಸ್ಸುಗಳಲ್ಲಿ ಬುಡಕಟ್ಟು ಜನಾಂಗದ ಶಿಕ್ಷಣಕ್ಕೆ ಆದ್ಯತೆ ನೀಡುವಂತೆ ತಿಳಿಸಿತು. ನಿರ್ಲಕ್ಷಿತ ಕ್ಷೇತ್ರಗಳಿಗೆ ಶಿಕ್ಷಣವನ್ನು ಪ್ರಸಾರ ಮಾಡಬೇಕೆಂದು ಸೂಚಿಸಿತು. ಗುಡ್ಡಗಾಡು ಪ್ರದೇಶಗಳು ಆದ್ಯತೆಯ ಕೇಂದ್ರಗಳಾಗಿ ಪರಿವರ್ತಿತವಾದವು. ಪ್ರಾಥಮಿಕ ಶಾಲಾ ಶಿಕ್ಷಣ, ವಸತಿ ಶಿಕ್ಷಣ, ಮಾದರಿಯ ಆಶ್ರಮ ಶಾಲೆಗಳ ಸ್ಥಾಪನೆ, ಶಾಲಾ ಆರಂಭದಿಂದ ಎರಡು ವರ್ಷಗಳ ಶಿಕ್ಷಣ ಬೋಧನಾ ಮಾಧ್ಯಮ ಬುಡಕಟ್ಟು ಸಮುದಾಯದ ಭಾಷೆಯೇ ಆಗಿರಬೇಕು. ಅನಂತರ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನೀಡಬೇಕೆಂದು ಶಿಪಾರಸ್ಸು ಮಾಡಿತು. ಬುಡಕಟ್ಟು ಸಮುದಾಯಗಳ ಶಿಕ್ಷಣದ ಬೆಳವಣಿಗೆಗೆ ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ ಎನ್.ಡಿ.ಇ. ಅತೀ ಪ್ರಮುಖವಾದ ಕೊಡುಗೆಗಳನ್ನು ನೀಡಿತೆಂದು ಹೇಳಬಹುದು. ಬುಡಕಟ್ಟು ಸಮುದಾಯದಲ್ಲಿ ಭೋದಿಸಲು ಅರ್ಹ ಹಾಗೂ ಅನುಭವಿ ಶಿಕ್ಷಕರ ನೇಮಕಾತಿಯಾಗಬೇಕೆಂದು, ಶಿಕ್ಷಕರನ್ನು ಈ ಪ್ರದೇಶಗಳಿಗೆ ಆಕರ್ಷಿಸಲು ಸರ್ಕಾರ ಪ್ರಯತ್ನಿಸಬೇಕೆಂದು ಸಲಹೆ ನೀಡಿತು.

---

೭. ಡಾ. ಮೇತ್ರಿ ಕೆ.ಎಂ.,, ಡಾ. ಚಲುವರಾಜು (ಸಂ). ಬುಡಕಟ್ಟು ಅಧ್ಯಯನ, ಸಂಚಿಕೆ ೪, ೨೦೦೭, ಪು.೩೪

೮. ಡಾ. ತಾರಿಹಳ್ಳಿ ಹನುಮಂತಪ್ಪ, ಕರ್ನಾಟಕದ ಬುಡಕಟ್ಟು ಸಮುದಾಯಗಳು, ೨೦೧೦, ಪು.೨೪

"ಸಮಾಜದ ಕೊನೆಯ ಸ್ಥರದಲ್ಲಿರುವ ವ್ಯಕ್ತಿ ಶಿಕ್ಷಣದ ಒಳಗೆ ಬರಲಾಗದಿದ್ದರೆ, ಆ ಶಿಕ್ಷಣವೇ ಅವರನ್ನು ಹುಡುಕಿಕೊಂಡು ಹೋಗಬೇಕು. ಇಲ್ಲದಿದ್ದರೆ ಆ ಶಿಕ್ಷಣ ವ್ಯವಸ್ಥೆ ನಿಷ್ಪ್ರಯೋಜಕವೆಂದು ಸ್ವಾಮಿ ವಿವೇಕಾನಂದರು ಶತಮಾನದ ಹಿಂದೆ ನುಡಿದ ಈ ಮಾತು ಇಂದಿಗೂ ಪ್ರಸ್ತುತ".[೯] ಭಾರತದಲ್ಲಿ ಎಲ್ಲಾ ನಾಗರೀಕರಿಗೆ ಪ್ರಾಥಮಿಕ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಗುರುತಿಸಲಾಗಿದೆ. ಸಮಾಜದಲ್ಲಿನ ಅಜ್ಞಾನ ಮತ್ತು ಅಸಮಾನತೆಯನ್ನು ಹೋಗಲಾಡಿಸಲು ಶಿಕ್ಷಣ ಬಹುಮುಖ್ಯ ಸಾಧನ. ಶಿಕ್ಷಣವು ವ್ಯಕ್ತಿಯ ಜೀವನದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿನ ನಿಶ್ಚಿತ ಪ್ರಗತಿಯನ್ನು ಉಂಟುಮಾಡಿ ಜೀವನದ ಗುಣಮಟ್ಟವನ್ನು ಎತ್ತರಕ್ಕೇರಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಶೋಷಿತರನ್ನು ಮೇಲಕ್ಕೆತ್ತುವ ನಿಟ್ಟಿನಲ್ಲಿ ಶಿಕ್ಷಣದ ಪಾತ್ರ ಗಮನಾರ್ಹವಾದುದು. ಮಾನವನ ಪರಿವರ್ತನೆ, ಜೀವನ ವ್ಯವಸ್ಥೆಗೆ ಶಿಕ್ಷಣ ಅತ್ಯಮೂಲ್ಯವಾದ ಸಾಧನವಾಗಿದೆ. ದಿನನಿತ್ಯದ ಪರಿವರ್ತನೆ ಬದುಕಿನಲ್ಲಿ ಪ್ರಾಪಂಚಿಕ ತಿಳಿವಳಿಕೆಗೆ ಶಿಕ್ಷಣದ ಅವಶ್ಯಕತೆ ಬೇಕೆಬೇಕು.

ಶಿಕ್ಷಣದ ತಳಹದಿ ದುರ್ಬಲವಾಗಿದ್ದರೆ ಅದರ ಮೇಲೆ ದೊಡ್ಡ ಕಟ್ಟಡ ಕಟ್ಟಿದರೂ ಅದು ದುರ್ಬಲವೇ ಆಗಿರುತ್ತದೆ. ಶಿಕ್ಷಣ ವ್ಯವಸ್ಥೆ ಧನಾತ್ಮಕ ಪರಿಣಾಮ ಬೀರುವಂತೆ ಇರಬೇಕು. ಇಲ್ಲದೇ ಹೋದರೆ ಮುಂದಿನ ಪೀಳಿಗೆ ಹಾಳಾಗುತ್ತದೆ. ಶಿಕ್ಷಣ, ಹೋರಾಟದ ಮನೋಭಾವನೆಯನ್ನು ಬೆಳಸಿ ತಿರಸ್ಕೃತರೆಂದು ಭಾವಿಸಿದ ಜನಕ್ಕೆ ಸಂಜೀವಿನಿಯಾಗಿ ಶಕ್ತಿ ತುಂಬುವಂತಹ ಕೆಲಸ ಮಾಡಬೇಕು. ಪ್ರಸ್ತುತ ಶೈಕ್ಷಣಿಕ ರೂಪಾಂತರಗಳಿಗೆ ಸಮುದಾಯಗಳು ಒಳಗಾಗುತ್ತಿವೆ. ಶಿಕ್ಷಣ ಬುಡಕಟ್ಟುಗಳಿಗೆ ನಾಗರೀಕ ಸ್ವಾತಂತ್ರ್ಯ ನೀಡುವ ಮೂಲಕ ಅವರ ಪರಿವರ್ತನೆಗೆ ನಾಂದಿ ಹಾಡಿದೆ. ಪ್ರಸ್ತುತ ಕಂಪ್ಲಿ ಕಾಲೋನಿಯ ಹಕ್ಕಿಪಿಕ್ಕಿಯರಲ್ಲಿ ಶಿಕ್ಷಣ ಪಡೆದ ಮತ್ತು ಪಡೆಯುತ್ತಿರುವವರ ಲಿಂಗವಾರು ಸಂಖ್ಯಾ ಪ್ರಮಾಣವನ್ನು ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

ಕೋಷ್ಟಕ ೬.೨. ಕಂಪ್ಲಿ ಹಕ್ಕಿಪಿಕ್ಕಿ ಕಾಲೋನಿಯ ಬೆಡಗುವಾರು, ಲಿಂಗವಾರು ಶೈಕ್ಷಣಿಕ ಹಂತಗಳು

ಶೈಕ್ಷಣಿಕ ಹಂತಗಳು	ಇಕೋತಿಯಾ			ಕೊರಬಿಯಾ			ಖೋಡಿಯಾರ			ಪಿಂಪಳಜಾ			ಸಾವಂಡಿಯಾ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಪ್ರಾಥಮಿಕ	೨	೨	೪	೧೦	೬	೧೬	೬	೬	೧೨	೫	೧	೬	೫	೮	೧೩
ಮಾಧ್ಯಮಿಕ	೪	೧	೫	೨	೨	೪	೯	೩	೧೨	೧	೧	೨	೬	೩	೯
ಪ್ರೌಢ		೧	೧	೬		೬	೧೦	೨	೧೨		೧	೧	೬		೬
ಪದವಿಪೂರ್ವ													೧		೧
Total	೬	೪	೧೦	೧೮	೮	೨೬	೨೫	೧೧	೩೬	೬	೩	೯	೧೮	೧೧	೨೯


೯. ಮೈತ್ರಿ ಕೆ.ಎಂ., ಚಲುವರಾಜು (ಸಂ) ಬುಡಕಟ್ಟು ಅಧ್ಯಯನ, ೨೦೦೬, ಪು.೩೨

ಪ್ರಸ್ತುತ ಕಾಲೋನಿಯ ಹಕ್ಕಿಪಿಕ್ಕಿಯರ ಶೈಕ್ಷಣಿಕ ಸ್ಥಿತಿಗತಿ ಅಷ್ಟೇನು ಸುಧಾರಣೆಯಾಗಿಲ್ಲ. ಒಟ್ಟಾರೆ ಕಾಲೋನಿಯಲ್ಲಿನ ಲಿಂಗವಾರು ಶಿಕ್ಷಣದ ಪ್ರಮಾಣವನ್ನು ಗಮನಿಸಿದರೆ ಪ್ರಾಥಮಿಕ ಶಿಕ್ಷಣದಲ್ಲಿ ಶೇ. ೪೬ರಷ್ಟು, ಮಾಧ್ಯಮಿಕ ಶೇ. ೨೯ರಷ್ಟು, ಪ್ರೌಢ ಶಿಕ್ಷಣ ಶೇ. ೨೪ರಷ್ಟು ಮತ್ತು ಪದವಿಪೂರ್ವ ಶೇ. ೧ರಷ್ಟು ಶೈಕ್ಷಣಿಕ ಪ್ರಮಾಣ ಕಂಡುಬರುವುದು. ಇದರಿಂದ ತಿಳಿದುಬರುವುದೇನೆಂದರೆ ಬೆರಳಣಿಕೆಯಷ್ಟು ಜನರು ಶಿಕ್ಷಣ ಕಲಿತಿರುವುದನ್ನು ಬಿಟ್ಟರೆ ಉಳಿದವರು ಶಿಕ್ಷಣದಿಂದ ವಂಚಿತರಾಗಿರುವುದು. ಇತರೆ ಹಿಂದುಳಿದ ಸಮುದಾಯಗಳಂತೆ ಇಲ್ಲಿಯೂ ಹೆಣ್ಣುಮಕ್ಕಳು ಶಿಕ್ಷಣದಿಂದ ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಕಾಣಬಹುದು. ಇವರಲ್ಲಿ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವುದೇ ಅಪರೂಪ. ಒಂದು ವೇಳೆ ಶಾಲೆಗೆ ಕಳುಹಿಸಿದರು ಅವರು ಋತುಮತಿಯಾದ ನಂತರ ಶಾಲೆ ಬಿಡಿಸಿಬಿಡುತ್ತಾರೆ. ತಮ್ಮ ಮಕ್ಕಳನ್ನು ಕೂಲಿ ಕೆಲಸಕ್ಕೆ ಕರೆದೊಯ್ಯುವುದು ಅಲ್ಲದೇ ಇವರ ಕೆಲವು ಕುಟುಂಬಗಳು ಅಲೆಮಾರಿಗಳಾಗಿದ್ದು ತಮ್ಮ ಮಕ್ಕಳನ್ನು ತಮ್ಮೊಡನೆ ತಿಂಗಳಾನುಗಟ್ಟಲೆ ಕರೆದೊಯ್ದು ಕೆಲಸದಲ್ಲಿ ತೊಡಗಿಸುವರು. ಇದರಿಂದ ಮಕ್ಕಳ ಶಿಕ್ಷಣಕ್ಕೆ ತಡೆಯುಂಟಾಗುತ್ತದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಮಕ್ಕಳ ಪ್ರಗತಿ, ಕಲಿಕೆ ಕುರಿತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿನಾಯಕ ನಗರ, ಕಂಪ್ಲಿಯ ಶಿಕ್ಷಕರಲ್ಲಿ ವಿಚಾರಿಸಿದಾಗ ಅವರು ಹೇಳಿದ್ದು ಈ ಮಕ್ಕಳು ಆಟಗಳಲ್ಲಿ ತುಂಬಾ ಚುರುಕಿನಿಂದ ಇದ್ದು, ಓದಿನಲ್ಲಿ ಹಿಂದೆ ಉಳಿದಿದ್ದಾರೆ. ಕಲಿಕೆಯಲ್ಲಿ ಹಿಂದುಳಿಯಲು ಅವರ ಭಾಷೆ ಕಾಲೋನಿಯ ಪರಿಸರ ಹಾಗೂ ಅನಕ್ಷರಸ್ಥರಾದ ಅವರ ಹಿರಿಯರು ಕಾರಣ ಎನ್ನುತ್ತಾರೆ. ಪ್ರಸ್ತುತ ಕಾಲೋನಿಯ ಶೈಕ್ಷಣಿಕ ಸರಾಸರಿ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

ಕೋಷ್ಟಕ ೬.೩. ಕಂಪ್ಲಿ ಹಕ್ಕಿಪಿಕ್ಕಿ ಕಾಲೋನಿಯ ಬೆಡಗುವಾರು, ಲಿಂಗವಾರು ಸಾಕ್ಷರರ್ಹರು, ಸಾಕ್ಷರಸ್ಥ ಮತ್ತು ಅನಕ್ಷರಸ್ಥರ ಪ್ರಮಾಣ

ಬೆಡಗುಗಳು	ಸಾಕ್ಷರರ್ಹರು			ಸಾಕ್ಷರಸ್ಥರು			ಅನಕ್ಷರಸ್ಥರು		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಇಕೋತಿಯಾ	೧೧	೧೩	೨೪	೬	೪	೧೦	೫	೯	೧೪
ಕೊರಬಿಯಾ	೮೫	೯೦	೧೭೫	೧೮	೮	೨೬	೬೭	೮೨	೧೪೯
ಖೋಡಿಯಾರ	೪೯	೪೫	೯೪	೨೫	೧೧	೩೬	೨೪	೩೪	೫೮
ಪಿಂಪಳಜಾ	೧೩	೧೮	೩೧	೬	೩	೯	೭	೧೫	೨೨
ಸಾವಂಡಿಯಾ	೫೫	೫೮	೧೧೩	೧೮	೧೧	೨೯	೩೭	೪೭	೮೪
Total	೨೧೩	೨೨೪	೪೩೭	೭೩	೩೭	೧೧೦	೧೪೦	೧೮೭	೩೨೭

ವೃತ್ತಚಿತ್ರ ೬.೩. ಕಂಪ್ಲಿ ಹಕ್ಕಿಪಿಕ್ಕಿ ಕಾಲೋನಿಯ ಸಾಕ್ಷರಸ್ಥ ಮತ್ತು ಅನಕ್ಷರಸ್ಥರ ಪ್ರಮಾಣ



೫.೫. ರಾಜಕೀಯ ಬದಲಾವಣೆ

ಮಾನವನು ರಾಜಕೀಯ ಜೀವಿಯಾಗಿದ್ದಾನೆ. ಶ್ರೀಮಂತನಾಗಿರಲಿ, ಬಡವನಾಗಿರಲಿ, ಅಕ್ಷರಸ್ಥನಾಗಿರಲಿ, ಅನಕ್ಷರಸ್ಥನಾಗಿರಲಿ ಅವನಿಗೆ ರಾಜಕೀಯ ಆಸಕ್ತಿ ಅಧಿಕಾರದ ವ್ಯಾಮೋಹ ಇದ್ದೇ ಇರುತ್ತದೆ. ರಾಬರ್ಟ್ ಎ. ದಾಲ್ ಅವರು ಅಭಿಪ್ರಾಯ ಪಡುವಂತೆ "ರಾಜಕೀಯವು ಸರ್ವವ್ಯಾಪಿಯಾಗಿದೆ". ರಾಜಕೀಯ ಆಸಕ್ತಿ, ಅನುಭವ ಮತ್ತು ಕುತೂಹಲ ವ್ಯಕ್ತಿಯಿಂದ ವ್ಯಕ್ತಿಗೆ ಮತ್ತು ಸ್ಥಳದಿಂದ ಸ್ಥಳಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ಪರಿವರ್ತನೆ ಹೊಂದುತ್ತಿರುವುದು ಅಲ್ಲದೆ ಇನ್ನೂ ಕೆಲವು ಬಾಹ್ಯಕಾರಣಗಳಾದ ಅಕ್ಷರ ಜ್ಞಾನ, ಆರ್ಥಿಕ ಪ್ರಗತಿ ಮತ್ತು ಜನಸಂಖ್ಯೆ ಲಿಂಗ ಮತ್ತು ಭೌಗೋಳಿಕ ಅಂತರಗಳು ಸಹಿತ ಬುಡಕಟ್ಟು ರಾಜಕೀಯ ಪ್ರೇರಣೆಗೆ ಸಹಾಯಕವಾಗಿರುವಂತಹ ಅಂಶಗಳಾಗಿವೆ.

ಯಾವುದೇ ಒಂದು ಸಮುದಾಯವು ಆರ್ಥಿಕವಾಗಿ, ಸಾಮಾಜಿಕವಾಗಿ, ಉನ್ನತ ಸ್ಥಾನಮಾನ ಹೊಂದಬೇಕಾದರೆ ಮೊದಲು ರಾಜಕೀಯವಾಗಿ ಗುರುತಿಸಿಕೊಳ್ಳಬೇಕು. ಅಂದರೆ ಗ್ರಾಮಪಂಚಾಯಿತಿಯಿಂದ ಹಿಡಿದು ಎಲ್ಲಾ ಹಂತದ ಚುನಾವಣೆಗಳಲ್ಲಿ ಸ್ಪರ್ಧಿಸಿ ಅಲ್ಲಿನ ಅಧಿಕಾರವನ್ನು ಪಡೆಯುವಲ್ಲಿ ಯಶಸ್ವಿಯಾದರೆ ಆ ಇಡೀ ಸಮುದಾಯ ಅಭಿವೃದ್ಧಿಯಾಗುತ್ತದೆ. ಆದರೆ ಇಂದಿನ ರಾಜಕೀಯದಲ್ಲಿ ಅಧಿಕಾರಕ್ಕೆ ಬರುತ್ತಿರುವವರು ಬಹುಸಂಖ್ಯಾತರಾದ ಮೇಲ್ಜಾತಿ ಸಮುದಾಯಗಳೇ ವಿನಹ ಅಲ್ಪಸಂಖ್ಯಾತರು, ಬಡವರೂ ಆದ ಬುಡಕಟ್ಟು ಜನರು ಅಧಿಕಾರ ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ. ಸಂವಿಧಾನದಲ್ಲಿ ಬುಡಕಟ್ಟುಗಳಿಗೆ ರಾಜಕೀಯ ಮೀಸಲಾತಿ ಇದ್ದರೂ ಅನಕ್ಷರಸ್ಥರಾದ ಇವರು ರಾಜಕೀಯದಲ್ಲಿ ಪ್ರವೇಶಿಸುತ್ತಿರುವುದು ವಿರಳವೆಂದೇ ಹೇಳಬಹುದು. ಇಂತಹ ಬುಡಕಟ್ಟು ಸಮುದಾಯಗಳಲ್ಲಿ ಒಂದಾದ ಕಂಪ್ಲಿಯ ಹಕ್ಕಿಪಿಕ್ಕಿ ಸಮುದಾಯದವರು ಇಂದು ರಾಜಕೀಯವಾಗಿ ಬೆಳವಣಿಗೆ ಹೊಂದುತ್ತಿದ್ದಾರೆ. ಸಮಾಜದಲ್ಲಿ ಅನ್ಯ ಸಮುದಾಯದವರಿಂದ ಅಸ್ಪೃಶ್ಯರೆಂದು ಅವಮಾನಕ್ಕೆ ಒಳಗಾಗುತ್ತಿರುವ ಇವರು ಸಾಮಾಜಿಕ ವ್ಯವಸ್ಥೆಯಲ್ಲಿ ಉತ್ತಮ ಸ್ಥಾನಮಾನ ಪಡೆಯಲು ಅಲ್ಲದೆ ತಮಗೆ ದೊರೆಯಬೇಕಾದ



ಮೂಲಭೂತ ಸೌಲಭ್ಯಗಳನ್ನು ಪಡೆಯುವ ಸಲುವಾಗಿ ರಾಜಕೀಯ ಪ್ರವೇಶ ಮಾಡುತ್ತಿದ್ದಾರೆ. ಪಟ್ಟಣ ಪಂಚಾಯತ್ (ಪುರಸಭೆ) ಚುನಾವಣೆಗಳಲ್ಲಿ ಹಕ್ಕಿಪಿಕ್ಕಿ ಕಾಲೋನಿಯ ಈ ಸಮುದಾಯದವರು ಸ್ಪರ್ಧಿಸುತ್ತಿದ್ದಾರೆ. ಉತ್ತಮ ಸಂಘಟನಾ ಮನೋಭಾವನೆ ಹೊಂದಿರುವ ಕಾಲೋನಿಯವರು ಚುನಾವಣೆ ಗಳಿಗೆ ಸ್ಪರ್ಧಿಸುತ್ತಿದ್ದರೂ ಸೋಲನ್ನು ಅನುಭವಿಸುತ್ತಿದ್ದಾರೆ. ಅನಕ್ಷರತೆ, ಬಡತನ ಮತ್ತು ಇವರು ಕಡಿಮೆ ಜನಸಂಖ್ಯೆಯಲ್ಲಿರುವುದೇ ಇದಕ್ಕೆ ಕಾರಣವಾಗಿದೆ. ಇಲ್ಲಿನ ಪ್ರಬಲ ಜನಸಮುದಾಯದವರು ಇವರನ್ನು ರಾಜಕೀಯದಲ್ಲಿ ಬೆಳೆಯಲು ಬಿಡುತ್ತಿಲ್ಲ. ಆದರೂ ಹೊಸಪೇಟೆ ತಾಲೂಕಿನಲ್ಲಿ ನೆಲೆಸಿರುವ ಹಕ್ಕಿಪಿಕ್ಕಿಯರನ್ನು ಗಮನಿಸಿದರೆ ಕಂಪ್ಲಿ ಕಾಲೋನಿಯಲ್ಲಿನ ಹಕ್ಕಿಪಿಕ್ಕಿಯರು ರಾಜಕೀಯವಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಉದಾಹರಣೆಗೆ ಶ್ರೀಕಾಂತ್ ಅವರು ಎರಡು ಬಾರಿ ಪುರಸಭೆ ಚುನಾವಣೆಗೆ ಸ್ಪರ್ಧಿಸಿದ್ದರು. ಕಂಪ್ಲಿಯ ಸ್ಥಳೀಯ ಚುನಾವಣೆಗಳಲ್ಲಿ ಅಭ್ಯರ್ಥಿಗಳ ಜಯಾಪಜಯ ನಿರ್ಧರಿಸುವ ಸಮುದಾಯ ಇದಾಗಿದೆ. ಕಾರಣ ಇವರಲ್ಲಿ ಉತ್ತಮ ಹೊಂದಾಣಿಕೆ ಇದ್ದು, ಕಾಲೋನಿಯ ಎಲ್ಲರೂ ಒಂದು ಕಡೆ ಸೇರಿ ತಮ್ಮ ಮುಖಂಡನು ಹೇಳಿದಂತೆ ಎಲ್ಲರೂ ಯಾವುದಾದರೂ ಒಂದು ಪಕ್ಷದ ಪರವಾಗಿ ಮತಚಲಾಯಿಸುತ್ತಿದ್ದಾರೆ. ಪ್ರಸ್ತುತ ಕಾಲೋನಿಯ ಹಕ್ಕಿಪಿಕ್ಕಿಯರು ರಾಜಕೀಯದಲ್ಲಿ ಪ್ರವೇಶಿಸಿ ಅಧಿಕಾರದ ಚುಕ್ಕಾಣಿ ಹಿಡಿಯಲು ಉತ್ಸುಕರಾಗಿದ್ದಾರೆ. ಇವರು ರಾಜಕೀಯದಲ್ಲಿ ಬೆಳೆಯಬೇಕಾದರೆ ಕಾಲೋನಿಯ ಯುವಕರಲ್ಲಿ ಉತ್ತಮ ಮಟ್ಟದ ರಾಜಕೀಯ ಜ್ಞಾನ ಬರಬೇಕು. ಜೊತೆಗೆ ಒಗ್ಗಟ್ಟಿನ ಮನೋಭಾವನೆ ಬೆಳೆದು ತಮ್ಮಲ್ಲಿಯೇ ಒಬ್ಬ ಯೋಗ್ಯ ನಾಯಕನನ್ನು ಆಯ್ಕೆ ಮಾಡಿಕೊಳ್ಳುವುದರ ಮೂಲಕ ತಮ್ಮ ಸಮುದಾಯದ ಕಲ್ಯಾಣ ವನ್ನು ಕಾಣಬಹುದಾಗಿದೆ.

೧೯೯೩ರ ಪಂಚಾಯತ್‌ರಾಜ್ ಅಧಿನಿಯಮದ ಪ್ರಕಾರ ಬುಡಕಟ್ಟು ಸಮುದಾಯಗಳಿಗೆ ರಾಜಕೀಯ ಮೀಸಲಾತಿಯನ್ನು ನೀಡಿದರೂ ಈ ಸಮುದಾಯ ರಾಜಕೀಯದಿಂದ ದೂರ ಉಳಿದಿದೆ. ಬಳ್ಳಾರಿ ಜಿಲ್ಲೆಯ ರಾಜಕೀಯವನ್ನು ನೋಡುವುದಾದರೆ ಪರಿಶಿಷ್ಟ ಪಂಗಡದಲ್ಲಿ ಬಹುಸಂಖ್ಯಾತರಾದ ವಾಲ್ಮೀಕಿ (ನಾಯಕ) ಸಮುದಾಯ ರಾಜಕೀಯವಾಗಿ ಬೆಳೆಯುತ್ತಿದೆ. ಅಲ್ಪಸಂಖ್ಯಾತರಾದ ಹಕ್ಕಿಪಿಕ್ಕಿ ಸಮುದಾಯ ದವರು ರಾಜಕೀಯದಲ್ಲಿ ಹೆಚ್ಚು ಸ್ಪರ್ಧಿಸುತ್ತಿಲ್ಲ. ರಾಜಕೀಯದ ತಿಳುವಳಿಕೆ ಆಡಳಿತದ ತಂತ್ರವನ್ನು ಅರಿಯದ ಈ ಮುಗ್ಧ ಜನರನ್ನು ರಾಜಕಾರಣದಿಂದ ದೂರವಿಡುವು ಹುನ್ನಾರ ನಡೆದಿದೆ. ಪ್ರಬಲ ಜನಸಂಖ್ಯೆ ಇರುವ ಒಂದು ಬುಡಕಟ್ಟು ಅಲ್ಪಸಂಖ್ಯಾತರಿರುವ ಇನ್ನೊಂದು ಬುಡಕಟ್ಟನ್ನು ರಾಜಕೀಯವಾಗಿ ತುಳಿಯುವ ಕ್ರಮಗಳು ಜಿಲ್ಲೆಯಲ್ಲಿ ನಡೆಯುತ್ತಿರುವುದನ್ನು ಗಮನಿಸಬಹುದು.

ಸಾಮಾಜಿಕ ಬದಲಾವಣೆಗೆ ಕಾರಣವಾದ ಅಂಶಗಳು

ಅಲೆಮಾರಿ ಬುಡಕಟ್ಟು ಸಮುದಾಯವಾದ ಹಕ್ಕಿಪಿಕ್ಕಿಯರು ಬೇಟೆಯನ್ನು ತಮ್ಮ ವೃತ್ತಿಯನ್ನಾಗಿಸಿ ಕೊಂಡು ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಅನುಸರಿಸುತ್ತಾ ಬಂದಿದ್ದಾರೆ. ಇಂದು ಈ ಸಮುದಾಯ ದವರ ಮೇಲೆ ಅನ್ಯ ಸಮುದಾಯಗಳ ಪ್ರಭಾವ, ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಆಧುನೀಕರಣದ ಪ್ರಭಾವಗಳಿಂದಾಗಿ ಸಾಮಾಜಿಕ ಬದುಕಿನಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತಿವೆ.

ಕಂಪ್ಲಿ ಪಟ್ಟಣ ಪ್ರದೇಶದಲ್ಲಿ ನೆಲೆಸಿರುವ ಹಕ್ಕಿಪಿಕ್ಕಿ ಸಮುದಾಯದವರು ಆಧುನಿಕತೆ ಒದಗಿಸುತ್ತಿರುವ ಸೌಲಭ್ಯಗಳನ್ನು ಪಡೆದುಕೊಂಡು ಬದಲಾಗುತ್ತಿರುವ ಇಂದಿನ ಸಮಾಜಕ್ಕೆ ಹೊಂದಿಕೊಳ್ಳುತ್ತಾ ತಮ್ಮ ಕಸುಬು,ಸಂಸ್ಕೃತಿ, ಹಬ್ಬ ಹರಿದಿನಗಳು, ಕಟ್ಟೆಮನೆ ಪದ್ಧತಿ, ಜೀವನಾವರ್ತನ ಆಚರಣೆಗಳಲ್ಲಿ ಬದಲಾವಣೆ ಗಳನ್ನು ಕಂಡುಕೊಂಡಿದ್ದಾರೆ. ಈ ಹಿಂದೆ ತಮ್ಮ ಜೀವನಕ್ಕೆ ಆಧಾರವಾಗಿ ಬರೀ ಬೇಟೆಯನ್ನು ಅವಲಂಬಿಸಿದ್ದ ಇವರು ಇಂದು ಹಲವಾರು ವೃತ್ತಿಗಳನ್ನು ಅನುಸರಿಸುತ್ತಿದ್ದಾರೆ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಏಣಿಶ್ರೇಣಿಯಲ್ಲಿ ಅತ್ಯಂತ ಕೇಳಸ್ತರದಲ್ಲಿದ್ದು, ಅಸ್ಪೃಶ್ಯರೆಂದು ಗುರುತಿಸಿಕೊಂಡಿದ್ದ ಇವರು ಇಂದು ಆರ್ಥಿಕವಾಗಿ ಸಾಮಾಜಿಕವಾಗಿ, ರಾಜಕೀಯವಾಗಿ ಮೇಲಸ್ತರಕ್ಕೆ ಬರುವಲ್ಲಿ ಪ್ರಯತ್ನಿ ಸುತ್ತಿದ್ದಾರೆ. ಇವರ ಸಾಮಾಜಿಕ ವ್ಯವಸ್ಥೆಯಲ್ಲಿನ ಸ್ವಲ್ಪಮಟ್ಟಿನ ಬದಲಾವಣೆಗೆ ಹಲವು ಅಂಶಗಳು ಕಾರಣವಾಗಿವೆ.

೧. ಅನ್ಯ ಸಮುದಾಯಗಳ ಪ್ರಭಾವ

ಮೂಲತಃ ಅಲೆಮಾರಿಗಳಾಗಿದ್ದ ಇವರಿಗೆ ಹಲವು ಭಾಷೆ ಸಂಸ್ಕೃತಿಗಳ ಪರಿಚಯವಿದೆ. ಅಲ್ಲದೆ ಇಂದಿನ ದಿನಗಳಲ್ಲಿ ಶಾಶ್ವತವಾಗಿ ನೆಲೆನಿಂತ ಕಾಲೋನಿಯ ಬಹುತೇಕ ಜನರು ಕೃಷಿಕೂಲಿಗಳಾಗಿದ್ದು, ಅನ್ಯ ಸಮುದಾಯದವರ ಹೊಲಗದ್ದೆಗಳಲ್ಲಿ ದುಡಿಯುತ್ತಿದ್ದಾರೆ. ಅಲ್ಲದೆ ಸಣ್ಣಪುಟ್ಟ ವಸ್ತುಗಳ ವ್ಯಾಪಾರವನ್ನು ಮಾಡುತ್ತಿದ್ದಾರೆ. ಪರಿಣಾಮವಾಗಿ ಅನ್ಯ ಸಮುದಾಯದವರೊಡನೆ ಬೆರೆಯುತ್ತಿದ್ದಾರೆ. ಪ್ರಸ್ತುತ ಇತರ ಸಮುದಾಯಗಳ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಸಮಾನ ಸ್ಥಾನಮಾನ ಪಡೆಯುತ್ತಿದ್ದಾರೆ.

೨. ಶಿಕ್ಷಣದ ಪ್ರಭಾವ

ಸಮಾಜದಲ್ಲಿನ ಅಜ್ಞಾನ ಮತ್ತು ಅಸಮಾನತೆಯನ್ನು ಹೋಗಲಾಡಿಸಲು ಶಿಕ್ಷಣ ಬಹುಮುಖ್ಯ ಸಾಧನ. ಬಯಸಿದ ಜೀವನಮಟ್ಟವನ್ನು ಪಡೆಯುವ ಪ್ರಕ್ರಿಯೆಯಲ್ಲಿ ಜ್ಞಾನ ಕೌಶಲ್ಯಗಳು, ಮೌಲ್ಯಗಳು ಮತ್ತು ನಡಾವಳಿಗಳನ್ನು ರೂಢಿಸಿಕೊಳ್ಳುತ್ತವೆ. ಶಿಕ್ಷಣ ಮಾನವನ ಜೀವನದಲ್ಲಿ ಕ್ರಾಂತಿಯುಂಟು ಮಾಡುವಂತಹದ್ದು. ಶಿಕ್ಷಣ ಎನ್ನುವುದು ಒಂದು ನಿಮಿಷ ಅಥವಾ ಒಂದು ಘಂಟೆಯಲ್ಲಿ ಒಂದು ಹಾಳೆಯ ಮೇಲೆ ಮೂಡಿಸುವಂಥ ಮಸೂದೆಯಲ್ಲ ಅದು ಪಾರಂಪರಿಕವಾಗಿ ರೂಢಿಸಿಕೊಂಡು ಬಂದಂಥ ಒಂದು ಪದ್ಧತಿ. ಶಿಕ್ಷಣ ಎನ್ನುವುದು ಬರಿ ಅಕ್ಷರ ಜ್ಞಾನವಾಗಿರದೇ ಭವಿಷ್ಯದ ಸರ್ವತೋಮುಖ ಬೆಳವಣಿಗೆ ಆಗಿರುತ್ತದೆ. ಬುಡಕಟ್ಟುಗಳಲ್ಲಿ ಮಾನಸಿಕವಾದ ಧೈರ್ಯತುಂಬಿ ಅವರ ಹಕ್ಕುಗಳನ್ನು ನೆನಪಿಸುವಲ್ಲಿ ಶಿಕ್ಷಣದ ಪಾತ್ರ ಹಿರಿದಾಗಿದೆ. ವಿದ್ಯೆ ಉಳ್ಳವನ ಮುಖವು ಮುದ್ದು ಬರುವಂತಿಕ್ಕು ಎಂಬ ಸರ್ವಜ್ಞನ ವಚನದಂತೆ ಶಿಕ್ಷಣ ಪಡೆದ ಪ್ರತಿಯೊಬ್ಬನು ಸಮಾಜದಲ್ಲಿ ತನಗೆ ಸಿಗಬೇಕಾದ ಅವಶ್ಯಕತೆಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿ ಸಾಮಾಜಿಕವಾಗಿ ತನ್ನ ಅಂತಸ್ಥನ್ನು ಎತ್ತರಿಸಿಕೊಳ್ಳುತ್ತಾನೆ. ಇಂದು ಹಕ್ಕಿಪಿಕ್ಕಿಯರು ಆಧುನಿಕ ಶಿಕ್ಷಣ ಪಡೆಯುವಲ್ಲಿ ಮುಂದಾಗಿದ್ದಾರೆ. ಇದರಿಂದ ಲೋಕಜ್ಞಾನ

ತಿಳಿದುಕೊಂಡ ಸಮುದಾಯ ತನ್ನ ಸಂಪ್ರದಾಯ, ವೃತ್ತಿ, ಆಚರಣೆ ಹೀಗೆ ತಮ್ಮ ಜೀವನದಲ್ಲಿ ಹಲವಾರು ಬದಲಾವಣೆಗಳನ್ನು ಕಂಡುಕೊಳ್ಳುತ್ತಿದ್ದಾರೆ.

೩. ಮಾಹಿತಿ ತಂತ್ರಜ್ಞಾನದ ಪ್ರಭಾವ

ಇಂದು ಮಾಹಿತಿ ತಂತ್ರಜ್ಞಾನ ತುಂಬಾ ಮುಂದುವರೆದಿದೆ. ಯಂತ್ರಮಾನವನಿಂದ ಕೆಲಸ ಮಾಡಿಸಿಕೊಳ್ಳುತ್ತಾ ಚಂದ್ರ, ಮಂಗಳ ಗ್ರಹಗಳಲ್ಲಿ ವಾಸಿಸುವಂತಹ ಹಂತ ತಲುಪಿದೆ. ಕೇವಲ ಅರ್ಧ ಶತಮಾನದ ಹಿಂದೆ ಪ್ರತಿ ಸತ್ಯವು ಭ್ರಮಾಲೋಕದ ಕಟ್ಟುಕಥೆಗಳೇ ಆಗಿದ್ದವು. ಪ್ರತಿ ಆವಿಷ್ಕಾರವನ್ನು ಜನರು ತಿರಸ್ಕಾರ ಮನೋಭಾವನೆಯಿಂದ ಕಾಣುತ್ತಿದ್ದರು. ಆದರೆ ಅದನ್ನು ಮುಂದುವರೆಸಿಕೊಂಡು ಹೊಗುವಲ್ಲಿ ಜನರು ವಿಫಲರಾದರು. ನೂತನ ಆವಿಷ್ಕಾರಗಳ ಮೋಹಕತೆಗೆ ಒಳಗಾದ ಸಮುದಾಯಗಳು, ಜನಾಂಗಗಳು ಅನಿವಾರ್ಯವಾಗಿ ತಂತ್ರಜ್ಞಾನವನ್ನು ಸ್ವೀಕರಿಸಲೇಬೇಕಾಯಿತು. ಪ್ರಸ್ತುತ ಇಂತಹ ವಿದ್ಯುನ್ಮಾನಗಳ ಮತ್ತು ತಂತ್ರಜ್ಞಾನಗಳ ಪ್ರಭಾವದಿಂದಾಗಿ ಇಡೀ ಜಗತ್ತು ತುಂಬಾ ಚಿಕ್ಕದಾಗಿದೆ. ಇಂದು ಜಗತ್ತು ಒಂದು ವಿಶ್ವಗ್ರಾಮ ಎನ್ನಲಾಗುತ್ತದೆ.

ವೈಚಾರಿಕ ಕ್ರಾಂತಿಯಲ್ಲಿ ಹೊಸ ಕಲಿಕೆಯನ್ನು ಆರಂಭಿಸಿದ ಮಾನವ ಸಮಾಜ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಬದಲಾಗುತ್ತಾ ಹೋಯಿತು. ಈ ತಂತ್ರಜ್ಞಾನ ಹಾಗೂ ಮೌಲ್ಯಗಳ ನಿರಂತರ ಬದಲಾವಣೆಯಿಂದಾಗಿ ಪ್ರಸ್ತುತ ಹಕ್ಕಿಪಿಕ್ಕಿಯರು ಕೂಡ ಬದಲಾವಣೆಗೆ ಒಳಗಾಗಿದ್ದಾರೆ. ಮಾಹಿತಿ ತಂತ್ರಜ್ಞಾನದ ಫಲವಾಗಿ ಕಾಲೋನಿಗಳಲ್ಲಿ ದೂರದರ್ಶನ, ಟೇಪರೆಕಾರ್ಡ್‌ರ್, ಸಮೂಹ ಮಾಧ್ಯಮಗಳು, ಟೆಲಿಪೋನ್, ಮೊಬೈಲ್ ಮೋಟಾರ್‌ಸೈಕಲ್, ವಾಹನಗಳ ಪ್ರವೇಶವಾಯಿತು. ಪ್ರಾರಂಭದಲ್ಲಿ ಹಕ್ಕಿಪಿಕ್ಕಿಯರೂ ಕೂಡ ಇವುಗಳನ್ನು ತಿರಸ್ಕಾರ ಮನೋಭಾವನೆಯಿಂದ ನೋಡಿದರು. ಆದರೆ ಸಮೂಹ ಮಾಧ್ಯಮಗಳ ಪ್ರಭಾವ, ಸಾರಿಗೆ ಸಂಪರ್ಕಗಳ ಪ್ರಭಾವ ದಟ್ಟವಾದ ಕಾರಣ ನೂತನ ಸಾಮಾಜಿಕ ಕ್ರಾಂತಿಗೆ ಪೂರಕವಾಗಿ ಬದಲಾಗಬೇಕಾಯಿತು. ದೈನಂದಿನ ಜೀವನದಲ್ಲಿ ತಂತ್ರಜ್ಞಾನವು ಯಾವುದೇ ಒಂದು ರೂಪದಲ್ಲಿ ನಮ್ಮ ನಡುವೆ ಇರುತ್ತದೆ. ಒಂದು ಕ್ಷಣ ವಿದ್ಯುತ್ ಹೋದರೆ ಪರದಾಡುವ ಪರಿಸ್ಥಿತಿ ಏರ್ಪಟ್ಟಿದೆ. ಫ್ಯಾನ್ ತಿರುಗದೇ ಹೋದರೆ ತೊಳಲಾಡುತ್ತೇವೆ. ಮೊಬೈಲ್ ಸಂಪರ್ಕ ಒಂದು ವೇಳೆ ಕಡಿತಗೊಂಡರೆ ತುಂಬಾ ತೊಂದರೆ ಅನುಭವಿಸುತ್ತೇವೆ. ಇಂತಹ ಅನೇಕ ರೂಪಗಳ ಮುಖಾಂತರ ತಂತ್ರಜ್ಞಾನ ಇಂದು ತನ್ನ ಬಾಹುಗಳಿಂದ ಇವರನ್ನು ಸುತ್ತುವರಿದಿದೆ. ಮಾಹಿತಿ ತಂತ್ರಜ್ಞಾನವು ಬಹುಪಾಲು ಬದಲಾವಣೆ ಪ್ರಕ್ರಿಯೆಗೆ ಒಳಗಾಗುವಂತೆ ಮಾಡಿದೆ.

೪. ಆಧುನೀಕರಣದ ಪ್ರಭಾವ

ಆಧುನೀಕರಣದಿಂದ ರಾಜಕೀಯ,ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳಲ್ಲಿ ಮೇಲ್ಮುಖ ಹಾಗೂ ಕೆಳಮುಖ ಗತಿಶೀಲತೆ ಕಾಣಬಹುದು. ಆಧುನೀಕರಣ ಎಂಬ ಶಬ್ದ ಸಮಾಜಶಾಸ್ತ್ರದಲ್ಲಿ ಸಾಂಪ್ರದಾಯಿಕ ಜೀವನಕ್ರಮ ಮತ್ತು ಚಿಂತನೆಗಳಿಗೆ ವ್ಯತಿರಿಕ್ತವಾಗಿ ಆಗುವ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಗೆ

ಅನ್ವಯಿಸುತ್ತದೆ. ಅಖಿಲೇಶ್ವರ ಜ್ಹಾ ಅವರು ತಿಳಿಸುವಂತೆ "ಆಧುನೀಕರಣವು ಐತಿಹಾಸಿಕವಾಗಿ ತಪ್ಪಿಸಿಕೊಳ್ಳಲಾಗದ ಹಾಗೂ ಬಿಡಿಸಿಕೊಳ್ಳಲಾಗದ ಸಾಮಾಜಿಕ ಬದಲಾವಣೆಯ ಸಂಬಂಧವಾದ ಪ್ರಕ್ರಿಯೆ. ಈ ಪ್ರಕ್ರಿಯೆ ಮಾನವ ಹುಟ್ಟಿದಾಗಿನಿಂದಲೂ ನಡೆಯುತ್ತಿದೆ".[೧೦] ಆಧುನೀಕರಣವನ್ನು ಶಾಪವೆಂದೂ, ವರವೆಂದೂ ಎರಡು ಪಾತಾಳಿಗಳಲ್ಲಿ ಒಂದೊಂದು ಸಮುದಾಯಗಳ ಸಂದರ್ಭದಲ್ಲಿ ಲೆಕ್ಕ ಹಾಕಬಹುದಾದರೂ ಅಂತಿಮವಾಗಿ ಆಧುನಿಕರಣವು ಇವೆರಡನ್ನು ಮೀರಿ ಕಾಲದ ಪ್ರವಾಹದಲ್ಲಿ ಜನಾಂಗಗಳ ಮನಸ್ಸಿನ ಪ್ರವೃತ್ತಿ ಸಮಷ್ಠಿ ಬದುಕಿನ ವಿಕಾಸವಾಗಿ ಘಟಿಸುತ್ತಿರುತ್ತದೆ. "ಈ ಆಧುನಿಕತೆಯನ್ನು ಕೆಳಜಾತಿಗಳಿಗೆ ಅರಗಿಸಿಕೊಳ್ಳುವ ಜಾಣ್ಮೆ ಅರ್ಹತೆ, ಪ್ರಬುದ್ಧತೆ ಸಾಕಷ್ಟು ಬಂದಿಲ್ಲ ಎಂಬ ಮಾತುಗಳು ಇವೆ. ಹಾಗೆ ನೋಡಿದರೆ ಎಲ್ಲ ಬಗೆಯ ಬದಲಾವಣೆಗಳ ಪ್ರತಿಬಿಂಬವೇ ಆಧುನಿಕರಣಾಂತರ, ನಾಗರೀಕತೆಗಳ ವಿಕಾಸ ಪ್ರಕ್ರಿಯೆ ಆಧುನೀಕರಣ".[೧೧]

ಇವತ್ತಿನ ದಲಿತರ, ಅಲೆಮಾರಿ ಸಮುದಾಯಗಳ ಬಹಳಷ್ಟು ಆಚರಣೆಗಳಲ್ಲಿ, ಯೋಚನೆ, ವಿಧಾನಗಳಲ್ಲಿ ಈ ಬುಡಕಟ್ಟು ಬದುಕಿನ ಲಕ್ಷಣ ಇರುವುದನ್ನು ಕಾಣುತ್ತೇವೆ. ಇಂದಿಗೂ ತಮ್ಮ ಆದಿಮ ಸಂಸ್ಕೃತಿಗಳನ್ನು ಬಿಟ್ಟುಕೊಡದ ಬುಡಕಟ್ಟುಗಳು ಎಲ್ಲೋ ಒಂದು ಕಡೆ ಆಧುನಿಕ ಜಗತ್ತಿನ ಹಕ್ಕುಗಳ ಕುರಿತು ಎಚ್ಚರಗೊಂಡಿವೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕಂಪ್ಯೂಟರ್ ಯುಗಕ್ಕೆ ಹೊಸ ಶತಮಾನದ ಸಂದರ್ಭಕ್ಕೆ ಬುಡಕಟ್ಟುಗಳು ಒಗ್ಗಿಕೊಳ್ಳುತ್ತಿವೆ. ಆಧುನಿಕತೆಯ ರೂಪಗಳಾದ ತಂತ್ರಜ್ಞಾನ, ವಿದ್ಯುನ್ಮಾನ, ಆರ್ಥಿಕತೆ, ರಾಜಕೀಯ ಚಿಂತನೆ, ಪ್ರಜಾಪ್ರಭುತ್ವ ವ್ಯವಸ್ಥೆ ಆಳುವ ವ್ಯವಸ್ಥೆಗಳು ಬುಡಕಟ್ಟುಗಳಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಮುಂದಾಗಿದೆ. .

ಆದರೆ ಆ ಬದಲಾವಣೆ ಎಷ್ಟರ ಮಟ್ಟಿಗೆ ಅವರ ಅನನ್ಯತೆಯನ್ನು ಉಳಿಸುವಲ್ಲಿ ಯಶಸ್ವಿಯಾಗಿದೆ ಎನ್ನುವುದು ತಿಳಿಯಬೇಕಾಗಿದೆ. ಇವತ್ತಿನ ಸಮಾಜದಲ್ಲಿ ಕೈಗಾರೀಕರಣ ಆಧುನೀಕರಣ, ಖಾಸಗೀಕರಣ, ಉದಾರೀಕರಣ ಇವೆಲ್ಲವೂ ಹಂತ ಹಂತವಾಗಿ ಮನುಷ್ಯನನ್ನು ಆವರಿಸಿವೆ. ಇವುಗಳಿಂದ ಬಿಡಿಸಿಕೊಳ್ಳುವ ಮಾತಿನ ಅಗತ್ಯವೇ ಇಲ್ಲದಂತೆ ಅವನು ಬಂಧಿಯಾಗಿದ್ದಾನೆ. ಜಗತ್ತಿನ ಬೇರೆಲ್ಲಾ ಬುಡಕಟ್ಟುಗಳು ಈಗಾಗಲೇ ಸ್ವತಃ ತಮ್ಮ ಬುಡಕಟ್ಟಿನ ಮೂಲ ಸ್ವರೂಪವನ್ನೇ ಕಳೆದುಕೊಂಡಿವೆ. ಆಧುನೀಕರಣದ ಪ್ರಭಾವದಿಂದಾಗಿ ಅವರಲ್ಲಿ ಸಾಂಸ್ಕೃತಿಕ ಪಲ್ಲಟವಾಗಿರುವುದನ್ನು ಕಾಣಬಹುದು. ಇಂತಹ ಪಲ್ಲಟಕ್ಕೆ ಬುಡಕಟ್ಟುಗಳು ವ್ಯಥೆಪಡುವ ಸ್ಥಿತಿಯಲ್ಲಿಲ್ಲ. ಏಕೆಂದರೆ ಆ ಸಂದರ್ಭಕ್ಕೆ ಅದರ ಅನಿವಾರ್ಯತೆ ಇರುತ್ತದೆ. ಅಂತಹ ಅನಿವಾರ್ಯಕ್ಕೆ ಸಿಕ್ಕ ಹಕ್ಕಿಪಿಕ್ಕಿ ಸಮುದಾಯದವರು ಆಧುನಿಕತೆಯ ಆವಿಷ್ಕಾರಗಳ ಪ್ರಭಾವಕ್ಕೆ ಒಳಗಾದರೂ ವಿಜ್ಞಾನ, ತಂತ್ರಜ್ಞಾನ, ರಾಜಕಾರಣ ಮತ್ತು ಸಂಸ್ಕೃತಿ ಇವೆಲ್ಲವುಗಳ ಜೊತೆಗೆ

---

೧೦. ನಂಜಮ್ಮಣ್ಣಿ ಎಂ., ಭಾರತೀಯ ಸಾಮಾಜಿಕ ಸಂಸ್ಥೆಗಳು, ೨೦೦೩, ಪು. ೩೪೭

೧೧. ಗಣೇಶ್ ಮೊಗಳ್ಳಿ, ದಲಿತರು ಮತ್ತು ಜಾಗತೀಕರಣ, ಪು.೧೧೯

ಸಂಯೋಗಗೊಂಡು ಅನನ್ಯತೆಯ ಜೊತೆಗೆ ನಾವಿನ್ಯತೆಯ ರೂಪವನ್ನು ಪಡೆದುಕೊಂಡಿತು. ಇವತ್ತಿನ ಬಹುಪಾಲು ಬುಡಕಟ್ಟುಗಳು ಕಂಡಕೊಂಡಂತೆ ಹಳೆಯ ಸಾಂಪ್ರದಾಯಿಕ ಕಟ್ಟಳೆಗಳು, ನಿಯಮಗಳನ್ನು ಬಳಸಿಕೊಳ್ಳುವ ಜೊತೆಗೆ ಜಾತಿಯ ಚಹರೆಗಳಾಗಿ ಗುರುತಿಸಲಾಗುತ್ತಿದ್ದ ವೃತ್ತಿ, ಮೂಲ ಉಡುಪುಗಳ ವಿನ್ಯಾಸದಲ್ಲಿ ಬದಲಾವಣೆ ಕಂಡುಕೊಂಡಿದ್ದಾರೆ.

ಆಧುನೀಕತೆಯ ಪ್ರಭಾವಕ್ಕೆ ಒಳಗಾದ ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯದ ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ಸಮುದಾಯ, ಜಾತಿ, ಬಣ ಹಾಗೂ ಉಪಜಾತಿಗಳಾಗಿ ಮಾರ್ಪಡುತ್ತಿದೆ. ರಾಜಕೀಯ, ಧಾರ್ಮಿಕ, ಸಾಮಾಜಿಕ ವರ್ಗ, ಕೈಗಾರಿಕಾ ಸಂಸ್ಥೆ, ಸಂಪರ್ಕ ಸಾಧನ, ಸಮೂಹ ಮಾಧ್ಯಮ, ಕಾರ್ಮಿಕ ವರ್ಗಗಳಂತಹ ಸಂಸ್ಥೆಗಳು ಬದಲಾಗಿವೆ. ಇಂತಹ ಬೃಹತ್ ಸಂಸ್ಥೆಗಳು ಆಧುನೀಕರಣಕ್ಕೆ ತಕ್ಕ ಸಾಮಾಜಿಕ ಪ್ರಜ್ಞೆಯನ್ನು ಹಕ್ಕಿಪಿಕ್ಕಿಯರಲ್ಲಿ ಮೂಡಿಸುತ್ತವೆ. “ಹೀಗೆ ಆಧುನೀಕರಣ ಹಳೆಯ ಪದ್ಧತಿಗಳಿರುವ ಸಮಾಜದಲ್ಲಿ ನೂತನವಾದುದನ್ನು ರೂಢಿಸಿಕೊಂಡು ಆ ಸಮಾಜದ ಮುನ್ನಡೆಗೆ ನೆರವಾಗುತ್ತದೆ”.[೨] ಅವರ ಮನೋಭಾವನೆಗಳು, ಮೌಲ್ಯಗಳು, ಕಟ್ಟಳೆಗಳು, ವಿಚಾರಗಳು ನೂತನ ಚಿಂತನ ಕ್ರಮಗಳ ಹುಟ್ಟುವಿಗೆ ಆಧುನೀಕರಣ ಕಾರಣವಾಯಿತು. ಸಮಾಜದಲ್ಲಿನ ದಿನನಿತ್ಯದ ಜೀವನಕ್ಕೆ ಅಗತ್ಯವಾದ ಅಗತ್ಯತೆಗಳು ಪಡೆಯುವ ನಿಟ್ಟಿನಲ್ಲಿ ಸ್ಪರ್ಧೆಗಳು ಏರ್ಪಟ್ಟವು. ಈ ಸ್ಪರ್ಧಾ ಮನೋಭಾವನೆ ಹಕ್ಕಿಪಿಕ್ಕಿಯರಲ್ಲಿ ಪರಿಚಯಿಸಲ್ಪಟ್ಟ ವಿಜ್ಞಾನ, ಆಧುನೀಕರಣ, ಕೈಗಾರಿಕೀಕರಣ, ಮಾಧ್ಯಮಗಳು, ಸಮೂಹ ಮಾಧ್ಯಮಗಳು ಹಕ್ಕಿಪಿಕ್ಕಿಯರಲ್ಲಿ ಬದಲಾವಣೆಯ ಲಯಕ್ಕೆ ಒಗ್ಗಿಸಿಕೊಳ್ಳುವಂತೆ ಪ್ರೇರೇಪಿಸಿವೆ. ಆ ಪ್ರೇರಣೆಯಿಂದ ಇವರ ಸಾಮಾಜಿಕ ಸ್ಥಾನಮಾನ, ಅಂತಸ್ತು ಧಾರ್ಮಿಕ ಸಾಂಪ್ರದಾಯಿಕ ವಿಧಿ ವಿಧಾನಗಳಲ್ಲಿ ತೀವ್ರತರಹದ ಬದಲಾವಣೆಗಳನ್ನು ನೋಡಬಹುದು.

---

೧೨. ನಂಜಮ್ಮಣ್ಣಿ ಎಂ., ಭಾರತೀಯ ಸಾಮಾಜಿಕ ಸಂಸ್ಥೆಗಳು, ೨೦೦೩, ಪು. ೩೪೬

ಅಧ್ಯಾಯ ೬

ಪರಿಸಮಾಪ್ತಿ

ಅಧ್ಯಾಯ ಆರು

ಪರಿಸಮಾಪ್ತಿ

ಸಮಾಜ ಎಂಬುದು ನಿತ್ಯ ಪರಿವರ್ತನಾಶೀಲವಾದುದು. ಹಿಂದೆ ಇದ್ದ ಸಮಾಜ ಹೀಗಿಲ್ಲ. ಈಗಿರುವ ಸಮಾಜದ ಸ್ಥಿತಿಗತಿ ಮುಂದೆ ಇರಲಾರದು. ಇಂತಹ ಚಲನಶೀಲತೆಯನ್ನು ಅಂತರ್ಗತವಾಗಿಸಿ ಕೊಂಡ ಸಮುದಾಯಗಳು ಬದಲಾಗುವ ಕಾಲಮಾನದ ಲಯಕ್ಕೆ ವಿಸ್ತರಿಸಿಕೊಳ್ಳುವ ಅಥವಾ ತನ್ನ ಸಂವೇದನೆಗಳನ್ನು ಆ ಬದಲಾದ ಲಯಕ್ಕೆ ಹೊಂದಿಸಿಕೊಳ್ಳುವ ಪ್ರಯತ್ನವನ್ನ ಯಾವತ್ತು ಜೀವಂತ ವಾಗಿಟ್ಟುಕೊಂಡಿರುತ್ತವೆ. ಪ್ರಸ್ತುತ ಅಧ್ಯಯನವು ಹಕ್ಕಿಪಿಕ್ಕಿ ಸಮುದಾಯವು ಎದುರುಗೊಳ್ಳುವ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಬದಲಾವಣೆ ಕುರಿತು ವಿವರಿಸುವ ಪ್ರಯತ್ನವಾಗಿದೆ.

ಈ ದೇಶದಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಸಾಂಸ್ಕೃತಿಕ ರಕ್ಷಣೆಯ ನೆಪದಲ್ಲಿ ಹಕ್ಕಿಪಿಕ್ಕಿಯರಂತಹ ಅನೇಕ ಸಮುದಾಯಗಳನ್ನು ಒಕ್ಕಲೆಬ್ಬಿಸುವಂತ ಕಾರ್ಯಗಳು ಕಾಲದಿಂದ ಕಾಲಕ್ಕೆ ಸಂಭವಿಸುತ್ತಲೇ ಬಂದಿವೆ. ಹಕ್ಕಿಪಿಕ್ಕಿಯರಲ್ಲಿ ಲಭ್ಯವಾಗುವ ದಂತ ಕಥೆಗಳು ಹಾಗೂ ಅವರ ಸಾಂಸ್ಕೃತಿಕ ಬದುಕನ್ನು ನೋಡಿದಾಗ ಅವರು ಉತ್ತರ ಭಾರತದ ಮೂಲದವರೆಂಬುದು ತಿಳಿಯಬಹುದು. ಅಲೆಮಾರಿಗಳಾದ ಇವರು ಸುಮಾರು ೨೦೦ ವರ್ಷಗಳಿಗಿಂತ ಈಚೆಗೆ ಇಲ್ಲಿಗೆ ಬಂದಿರಬಹುದು. ಇಲ್ಲವೇ ಅದಕ್ಕಿಂತಲೂ ಪೂರ್ವದಲ್ಲಿಯೇ ಒಂದು ನೆಲೆಸಿರಬಹುದು. ಹಕ್ಕಿಪಿಕ್ಕಿ ಸಮುದಾಯದವರು ಮೂಲದಿಂದ ಇಂದಿನವರೆಗೂ ಹಲವು ಸಮಸ್ಯೆಗಳ ಸುಳಿವುಗಳನ್ನು ದಾಟಿ ಬಂದಿರುವರು. ಸಾಮಾಜಿಕ ಶ್ರೇಣೀಕರಣದ ಒಂದು ಕಾರಣವಾಗಿ ಬದುಕುತ್ತಿರುವ ದುಡಿಯುವ ಸಮುದಾಯವು ಇಂದಿಗೂ ದುಡಿಸಿಕೊಳ್ಳುವ, ಮೇಲು ವರ್ಗಗಳ ದಬ್ಬಾಳಿಕೆ ಹಾಗೂ ಅಸಮಾನತೆಯಿಂದ ಬದುಕುತ್ತಿವೆ. ಇವೆಲ್ಲವು ಭಾರತ ಸಮಾಜದ ಚರಿತ್ರೆಯಲ್ಲಿ ನಿರಂತರವಾಗಿ ನಡೆದಿವೆ. ಬುಡಕಟ್ಟು ಎನಿಸಿರುವ ಸಮುದಾಯಗಳೆಲ್ಲವು ಅನಿವಾರ್ಯವಾಗಿ

ಮೇಲ್ವರ್ಗಗಳ ಚಾಕರಿ ಮಾಡಿ ಅವರ ಬಿಟ್ಟಿ ಸೇವೆಯನ್ನು ಮಾಡುತ್ತಿರುವ ಜಾತಿಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹೀನಾಯ ಶೋಷಣೆಗೆ ಒಳಪಟ್ಟಿವೆ. ಹಕ್ಕಿಪಿಕ್ಕಿ ಸಮುದಾಯದ ಮೂಲವನ್ನು ಅಭ್ಯಸಿಸಿದಾಗ ೧೮೭೧ರಲ್ಲಿ ಕ್ರಿಮಿನಲ್ ಟ್ರೈಬ್ ಆ್ಯಕ್ಟ್ ಪ್ರಕಾರ ಅಪರಾಧಿ ಬುಡಕಟ್ಟು ಎಂದು ಗುರುತಿಸಿದ್ದರು. ಅಲ್ಲದೇ ಇತರೆ ಸಮುದಾಯಗಳಿಂದ ಪ್ರತ್ಯೇಕವಾಗಿ ಇರಿಸಲಾಗಿತ್ತು.

ಕರ್ನಾಟಕದಲ್ಲಿ ಸುಮಾರು ಐವತ್ತು ಬುಡಕಟ್ಟುಗಳಿವೆ. ಅವುಗಳಲ್ಲಿ ೨೧ಕ್ಕಿಂತ ಹೆಚ್ಚು ಅಲೆಮಾರಿ ಬುಡಕಟ್ಟುಗಳಿವೆ. ಇಂತಹ ಅಲೆಮಾರಿ ಬುಡಕಟ್ಟುಗಳಲ್ಲಿ ಹಕ್ಕಿಪಿಕ್ಕಿ ಸಮುದಾಯವೂ ಒಂದಾಗಿದೆ. ಇವರು ಜಾಗತೀಕರಣದ ಈ ಸಂದರ್ಭದಲ್ಲಿ ಚಲನಶೀಲತೆಯ ಗುಣವನ್ನು ಹೊಂದಿರುವುದರಿಂದ ಇವರ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ವ್ಯವಸ್ಥೆಗಳಲ್ಲಿ ಬದಲಾವಣೆಗಳು ಇಂದಿನ ಆಧುನೀಕರಣ, ಜಾಗತೀಕರಣ, ಕೈಗಾರಿಕರಣ, ವಿಜ್ಞಾನ ತಂತ್ರಜ್ಞಾನಗಳ ಪ್ರಭಾವದಿಂದ ಆಗಿರುವುದು, ಈ ಅಧ್ಯಯನದಿಂದ ಸ್ಪಷ್ಟವಾಗುವುದು. ಅಲ್ಲದೇ ಆ ಪರಿಸರದಲ್ಲಿನ ಇತರ ಸಮುದಾಯಗಳ ಪ್ರಭಾವವನ್ನು ಕೂಡ ಕಡೆಗಣಿಸುವಂತಿಲ್ಲ. ಈ ಎಲ್ಲ ಬದಲಾವಣೆಯ ಅಂಶಗಳನ್ನು ಸಮುದಾಯದ ಅಧ್ಯಯನ ವಿಧಾನಗಳಾದ, ಅವಲೋಕನ ವಿಧಾನ, ಪ್ರಶ್ನಾವಳಿ, ಸಂದರ್ಶನ, ಕ್ಷೇತ್ರಕಾರ್ಯ ಮಾಹಿತಿ ಸಮೀಕ್ಷೆಯ ವಿಧಾನಗಳನ್ನು ಬಳಸಿ ಅಧ್ಯಯನಕ್ಕೊಳಪಡಿಸಲಾಗಿದೆ.

ಪ್ರಸ್ತುತ ಈ ನಿಬಂಧನೆಗೆ ಹೊಸಪೇಟೆ ತಾಲೂಕಿನ ಕಂಪ್ಲಿಪಟ್ಟಣದ ಒಂದು ಕಾಲೋನಿಯನ್ನು ಆಯ್ದುಕೊಳ್ಳಲಾಗಿದೆ. ಅಲ್ಲಿ ನೆಲೆಗೊಂಡಿರುವ ಹಕ್ಕಿಪಿಕ್ಕಿಯರ ಬದುಕಿನ ಬವಣೆಗಳನ್ನು ಅಧ್ಯಯನಕ್ಕೊಳ್ಳಪಡಿಸಿಕೊಳ್ಳಲಾಗಿದೆ. ಸಾಮಾಜಿಕ ಸ್ವಾವಲಂಬನೆ, ಆರ್ಥಿಕ ಸುಭದ್ರತೆ, ರಾಜಕೀಯ ಸ್ಥಾನಮಾನಗಳನ್ನು ಪಡೆಯುವ ನಿಟ್ಟಿನಲ್ಲಿ ಹಕ್ಕಿಪಿಕ್ಕಿಯರು ಹಲವು ಪ್ರಯತ್ನಗಳನ್ನು ಮಾಡಿದ್ದಾರೆ. ಕೆಲವು ಪ್ರಯತ್ನಗಳಲ್ಲಿ ಯಶಸ್ಸು ಕಂಡಿದ್ದಾರೆ. ಹಲವು ಕಡೆ ಪ್ರಯತ್ನಕ್ಕೆ ಸೋಲಾಗಿದೆ. ಸೊಲಿಗೆ ನಿರ್ದಿಷ್ಟವಾದ ಕಾರಣಗಳಿರಬಹುದು. ಹೀಗೆ ತಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಉತ್ತಮಪಡಿಸಿಕೊಳ್ಳುವ ನಿಟ್ಟಿನಲ್ಲಿ ಹಕ್ಕಿಪಿಕ್ಕಿಯರು ಕೈಗೊಂಡ ಪ್ರಯತ್ನಗಳು ಸಂಪೂರ್ಣ ಸೊತು ಹೋಗಿಲ್ಲ.

ಹಕ್ಕಿಪಿಕ್ಕಿ ಸಮುದಾಯವು ಪುರಾತನತೆ, ಆಧುನಿಕ ಮೌಲ್ಯಗಳೊಂದಿಗೆ ಸಮ್ಮಿಲನಗೊಂಡಿದೆ. ಸಮುದಾಯದ ಜನಜೀವನದಲ್ಲಿ ಕಂಡುಬರುವ ವೈವಿಧ್ಯತೆ ಹಾಗೂ ಭಿನ್ನತೆ ಅವರಲ್ಲಿನ ವೈಶಿಷ್ಟತೆಯನ್ನು ಗುರುತಿಸುತ್ತದೆ. ಹಕ್ಕಿಪಿಕ್ಕಿಯರು ಪಾರಂಪರಿಕವಾಗಿ ಅನುಭವಿಸುತ್ತಾ ಬಂದ ಶೋಷಣೆಯ ರೂಪ ಬದಲಾಗಿದೆ. ಆದರೆ ಸಮಾಜದಲ್ಲಿ ಅಸಮಾನತೆ ಎನ್ನುವುದು ಒಂದು ಜಾತಿ ಸೂಚಕವಾಗಿದೆ. ಅಸ್ತಿತ್ವದಲ್ಲಿರುವ ಕಾಯ್ದೆ ಕಾನೂನುಗಳು ಅದರ ನಿರ್ಮೂಲನೆ ಮಾಡುವಲ್ಲಿ ವಿಫಲವಾಗಿದೆ. ಏಣಿಶ್ರೇಣಿ ವ್ಯವಸ್ಥೆಯ ಆಧಾರದ ಮೇಲೆ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುವ ಹಳೆಯ ಚಾಳಿ ಮುಂದುವರಿದಿದೆ. ಇಂದು ಆರ್ಥಿಕ ಭದ್ರತೆ ಎನ್ನುವುದು ಸಮುದಾಯವೊಂದರ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುತ್ತಿದೆ. ಆರ್ಥಿಕತೆ ಪ್ರಸ್ತುತ ಮುಂದುವರಿಕೆ ಹಾಗೂ ಹಿಂದುಳಿದಿರುವಿಕೆಯ

ಮೇಲೆ ಪ್ರಭಾವ ಬೀರುತ್ತದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡಂತೆ ಹಕ್ಕಿಪಿಕ್ಕಿಯರ ಆರ್ಥಿಕ ಅಧಿಕಾರ ನಿರ್ಧರಿಸುವ ಫಲವತ್ತಾದ ಭೂಮಿ ಸಿಗದೇ ಇರುವ ಕಾರಣಕ್ಕೆ ಆ ರೀತಿಯಾದ ಅಧಿಕಾರದಿಂದ ದೂರ ಉಳಿದಿವೆ. ನಿತ್ಯವೂ ಕೂಲಿಮಾಡಿ ದುಡಿದು ತಿನ್ನಬೇಕಾದ ಪರಿಸ್ಥಿತಿ ಇವರದ್ದು. ಸಾಂಪ್ರದಾಯಿಕ ಕೂಲಿ ಆಧುನಿಕ ಕೃಷಿ ವ್ಯವಸ್ಥೆ ಅವರ ಜೀವನ ವಿಧಾನವನ್ನು ಮತ್ತು ಆರ್ಥಿಕ ಬದುಕನ್ನು ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುವಲ್ಲಿ ವಿಫಲವಾಗಿವೆ.

ಹಕ್ಕಿಪಿಕ್ಕಿಯರು ತಮ್ಮ ಜೀವನ ವಿಧಾನಕ್ಕಾಗಿ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅವರಲ್ಲಿ ಬಹುಪಾಲು ಜನರ ಆರ್ಥಿಕತೆ ಅಲ್ಪಸಂಖ್ಯಾತ ಬಂಡವಾಳ ಶಾಹಿಗಳ ಮೇಲೆ ನಿರ್ಧರಿತವಾಗುತ್ತದೆ. ದುಡಿದರೆ ಕೂಲಿ ಇಲ್ಲದೇ ಹೋದರೆ ಉಪವಾಸ, ದುಡಿತ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುವ ಬಹುಮುಖ್ಯ ಅಂಶವಾಗಿದೆ. ಹಕ್ಕಿಪಿಕ್ಕಿಯರಲ್ಲಿ ಸಾಕ್ಷರತೆ ಪ್ರಮಾಣ ಪ್ರಾರಂಭದಲ್ಲಿ ತುಂಬಾ ಕಡಿಮೆಯಾಗಿತ್ತು. ಪ್ರಸ್ತುತ ದಿನಗಳಲ್ಲಿ ಸಾಕ್ಷರತೆ ಪ್ರಮಾಣ ಗಣನೀಯವಾಗಿ ಸುಧಾರಣೆಯಾಗುತ್ತಿದೆ ಆದರೂ ಮುಂದಿನ ಹಂತದ ಉನ್ನತ ಶಿಕ್ಷಣ ಪಡೆಯುವಲ್ಲಿ ಯಶಸ್ವಿಯಾಗುತ್ತಿಲ್ಲ. ಇದಕ್ಕೆ ಬಡತನವೂ ಕಾರಣವಾಗಿದೆ. ಕಾಲಬದಲಾದಂತೆ ಶಿಕ್ಷಣದಲ್ಲಿ ನಗರೀಕರಣ, ಕೈಗಾರೀಕರಣದ ಪ್ರಭಾವದಿಂದಾಗಿ ಹಕ್ಕಿಪಿಕ್ಕಿಯರ ಆಚರಣೆಗಳು ರೂಢಿ ಸಂಪ್ರದಾಯಗಳು, ಬದಲಾಗುತ್ತಾ ಹೊಸ ರೂಪವನ್ನು ಪಡೆದಿವೆ. ಕೆಲವು ಸಂಪ್ರದಾಗಳು, ಆಚರಣೆಗಳು, ಮಾಯವಾಗಿವೆ. ಆಧುನಿಕ ಶಿಕ್ಷಣ ವ್ಯವಸ್ಥೆ, ಉದ್ಯೋಗ, ಆಸ್ತಿ, ಅಂತಸ್ತು ಪಡೆಯಬೇಕೆಂಬ ಮನೋಭಾವನೆ ಬೆಳೆದಿದೆ. ಆದರೂ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುವ ಆಸ್ತಿ ಇವರಿಗೆ ಇದುವರೆಗೂ ದೊರೆಯದೇ ಇರುವುದು ಕಂಡುಬರುತ್ತದೆ. ಸರ್ಕಾರದ ಯೋಜನೆಗಳ ಅನ್ವಯ ಹಕ್ಕಿಪಿಕ್ಕಿಯರಿಗೆ ಸಿಗಬೇಕಾದ ಭೂಮಿ, ನೀರಾವರಿ ಸೌಲಭ್ಯ, ಪಂಪ್‌ಸೆಟ್, ಪುನರ್‌ವಸತಿ ಯೋಜನೆ, ಆಶ್ರಯ ಯೋಜನೆ, ಜನತಾ ಯೋಜನೆಗಳು, ಕೇವಲ ಯೋಜನೆಗಳಾಗಿ ಉಳಿದಿವೆಯೆ ವಿನಹಃ ಕಾರ್ಯರೂಪಕ್ಕೆ ಬಂದಿಲ್ಲ.

ಕೆಳಸಮುದಾಯಗಳಿಗೆ ಶತಮಾನಗಳಿಂದ ದೇಶದ ಸಾಮಾಜಿಕ ವ್ಯವಸ್ಥೆಯು ಜೀವನದ ವಿವಿಧ ರಂಗಗಳಲ್ಲಿ ಸಮಾನ ಅವಕಾಶಗಳನ್ನು ನಿರಾಕರಿಸುತ್ತಲೇ ಬಂದಿದೆ. ಸಂವಿಧಾನಾತ್ಮಕವಾಗಿರುವ ಹಕ್ಕುಗಳು ಬಹುತೇಕ ಹಕ್ಕಿಪಿಕ್ಕಿ ಸಮುದಾಯದವರಿಗೆ ಸಾಮಾಜಿಕ ಸ್ಥಾನಮಾನದಲ್ಲಿ ಗಮನಾರ್ಹವಾದ ಬದಲಾವಣೆ ತಂದಿಲ್ಲ. ವೇದಗಳ ಕಾಲದಿಂದಲೂ ಅಸ್ಪೃಶ್ಯತೆ, ಅಸಮಾನತೆಯನ್ನು ನಿರ್ಮೂಲನೆ ಮಾಡಲು ಸಾಧ್ಯವಾಗಿಲ್ಲ. ಅನೇಕ ದಶಕಗಳಿಂದಲೂ ತುಳಿತಕ್ಕೆ ಒಳಗಾದ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಯನ್ನು ನೀಡಬೇಕೆಂಬ ಶೈಕ್ಷಣಿಕ ಮತ್ತು ಆರ್ಥಿಕ ಅವಲಂಬನೆ ರೂಪಿಸುವಲ್ಲಿ ಸರ್ಕಾರಿ ಯೋಜನೆಗಳು ಸೂಕ್ತವಾಗಿ ರೂಪಿತವಾಗಬೇಕು. ಶೈಕ್ಷಣಿಕ ಕ್ಷೇತ್ರದಲ್ಲಿ ಹಕ್ಕಿಪಿಕ್ಕಿಯ ಸ್ತ್ರೀ ಪುರುಷರಿಗೆ ಮೀಸಲಾತಿಯನ್ವಯ ಮುಂದಿನ ಶಿಕ್ಷಣಕ್ಕೆ ಅಗತ್ಯವಾಗಿ ಸಹಕಾರ ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ಸರ್ಕಾರಿ ಯೋಜನೆಗಳು ಪುನರ್ ವಸತಿ ಯೋಜನೆಗಳು ಅಭಿವೃದ್ಧಿ ಹೆಸರಿನಲ್ಲಿ ಬುಡಕಟ್ಟುಗಳನ್ನು ಒಕ್ಕಲೆಬ್ಬಿಸುವ ಕಾರ್ಯ ನಿಲ್ಲುವಂತಾಗಬೇಕು.

ಅಧ್ಯಯನದ ಫಲಿತಗಳು

ಎಂ.ಫಿಲ್ ನಿಬಂಧನಕ್ಕೆ ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆ ಎಂಬ ವಿಯ ಆಯ್ದುಕೊಂಡಿದ್ದು, ಅಧ್ಯಯನದ ವ್ಯಾಪ್ತಿಯು ಕೇವಲ ಒಂದು ಕಾಲೋನಿಗೆ ಸಿಮೀತಗೊಳಿಸಿಕೊಂಡಿದ್ದೇನೆ. ಕಂಪ್ಲಿ ಪಟ್ಟಣದ ಕಾಲೋನಿಯೊಂದರಲ್ಲಿ ನೆಲೆಸಿರುವ ಹಕ್ಕಿಪಿಕ್ಕಿ ಸಮುದಾಯದವರನ್ನು ಸಂದರ್ಶನ ಮಾಡುವಾಗ ನಿರ್ದಿಷ್ಟ ಪ್ರಶ್ನಾವಳಿಯನ್ನು ರೂಪಿಸಿಕೊಳ್ಳಲಾಗಿತ್ತು. ಈ ಪ್ರಶ್ನಾವಳಿಯಿಂದ ಪಡೆದಂತಹ ಮಾಹಿತಿಯನ್ನು ಸ್ಪಷ್ಟವಾಗಿ ಅವಲೋಕಿಸಿದಾಗ ಮತ್ತು ಈ ಸಂದರ್ಶನದಿಂದ ತಿಳಿದುಬಂದತಹ ಪ್ರಮುಖವಾದ ಅಂಶಗನ್ನು ಫಲಿತ ಗಳಲ್ಲಿ ದಾಖಲಿಸಲಾಗಿದೆ.

- ಹಕ್ಕಿಪಿಕ್ಕಿ ಕಾಲೋನಿಯ ಪರಿಸರದಲ್ಲಿ ಬದಲಾವಣೆಗಲಾಗುತ್ತವೆ ಮತ್ತು ಸುತ್ತಲಿನ ಸಮುದಾಯಗಳ ಪ್ರಭಾವದಿಂದಾಗಿ ತಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಬದಲಾಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.
- ಇವರು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ ಹಾಗೂ ಯಾರೂ ಸಹ ಪಿತ್ರಾರ್ಜಿತ ಆಸ್ತಿ ಹೊಂದಿಲ್ಲ.
- ದುಡಿಮೆಯ ದೃಷ್ಟಿಯಲ್ಲಿ ಸ್ತ್ರೀ ಪುರುಷರಲ್ಲಿ ಸಮಾನ ಭಾವನೆ ಇದೆ.
- ಜೀವನೋಪಾಯಕ್ಕಾಗಿ ಹಲವು ವೃತ್ತಿಗಳನ್ನು ಅನುಸರಿಸುತ್ತಿದ್ದಾರೆ.
- ಇವರು ಹೆಚ್ಚು ಕಾಲ ಮೂಲ ವೃತ್ತಿಯನ್ನೇ ಅನುಸರಿಸಿದ್ದರ ಫಲವಾಗಿ ತಮ್ಮ ಸಾಮಾಜಿಕ ಸ್ಥಾನಮಾನವನ್ನು ಉನ್ನತೀಕರಿಸಿಕೊಳ್ಳಲು ವಿಫಲರಾಗಿದ್ದಾರೆ.
- ಸ್ವಂತ ಆಸ್ತಿಗಳನ್ನು ಹೊಂದಿರದ ಇವರು ಕೃಷಿ ಕೂಲಿಗಳಾಗಿ ಬದುಕುತ್ತಿದ್ದಾರೆ.
- ಕಾಲೋನಿಯವರಲ್ಲಿ ಮಹಿಳೆಯರಿಗೆ ಶಿಕ್ಷಣ ಕೊಡಿಸುವುದೇ ಅಪರೂಪ. ಒಂದು ವೇಳೆ ಶಾಲೆಗೆ ಕಳುಹಿಸಿದರೂ ಅವರು ಋತುಮತಿಯಾದ ನಂತರ ಶಾಲೆ ಬಿಡಿಸಿಬಿಡುತ್ತಾರೆ.
- ಇಂದಿಗೂ ಕೂಡ ಇವರನ್ನು ಅಸ್ಪೃಶ್ಯರಂತೆ ಕಾಣಲಾಗುತ್ತದೆ. ಮೇಲ್ವರ್ಗದವರ ಮನೆಯ ಸ್ವಚ್ಛತೆಯ ಕೆಲಸವೆಲ್ಲಾ ಇವರದೇ. ಆದರೂ ಮನೆಯ ಒಳಗಡೆ ಇವರಿಗೆ ಪ್ರವೇಶ ನಿಷೇಧವಿರುವುದು ಸಂದರ್ಶನದಿಂದ ತಿಳಿದುಬಂದಿದೆ.
- ಪ್ರಸ್ತುತ ಸಾಮಾಜಿಕ ಪರಿಸರಕ್ಕೆ ತಕ್ಕಂತೆ ಈ ಬುಡಕಟ್ಟಿನವರು ತಮ್ಮ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಕೇಂದ್ರ ಕುಟುಂಬಗಳು ಹೆಚ್ಚಾಗಿ ಕಂಡುಬರುತ್ತವೆ.
- ಇವರಲ್ಲಿ ಇನ್ನು ಸಹ ಅಲೆಮಾರಿ ಬದುಕು ಸಂಪೂರ್ಣ ಹೋಗಿಲ್ಲ.
- ಕಾಲೋನಿಯಲ್ಲಿನ ಬಹುತೇಕ ವಿಧವೆಯರು ವಿಧವಾ ವೇತನ, ವೃದ್ಧರ ವೃದ್ಧಾಪ್ಯವೇತನ ಪಡೆಯುವಲ್ಲಿ ವಿಫಲರಾಗಿದ್ದಾರೆ.

- ಕಾಲೋನಿಯಲ್ಲಿ ಮಹಿಳೆಯರಿಗೆ ಸಾರ್ವಜನಿಕ ಶೌಚಾಲಯ, ಅಂಗನವಾಡಿ ಶಾಲೆ, ಗ್ರಂಥಾಲಯ, ನ್ಯಾಯಬೆಲೆ ಅಂಗಡಿಗಳು ಇಲ್ಲದೇ ಇರುವುದರಿಂದ ಅವಶ್ಯಕವಾಗಿ ಇವುಗಳ ನಿರ್ಮಾಣ ಕಾರ್ಯ ನಡೆಯಬೇಕಿದೆ. ಹಾಗೆಯೇ 'ಪ್ರಾಥಮಿಕ ಆರೋಗ್ಯ ಕೇಂದ್ರದ ಅವಶ್ಯಕತೆ ಇದೆ.
- ಕಾಲೋನಿಯಲ್ಲಿ ಪ್ರತಿಶತ ಎಲ್ಲರ ಮನೆಗಳಲ್ಲಿ ಮೊಬೈಲ್ ಪೋನುಗಳಿವೆ. ಹಾಗೆಯೇ ಕೆಲವು ಮನೆಗಳಲ್ಲಿ ಟಿ.ವಿ.ಗಳಿವೆ.
- ಶ್ರೀಮಂತ ಭೂಮಾಲಿಕರು ಅನಕ್ಷರಸ್ಥರಾದ ಹಕ್ಕಿಪಿಕ್ಕಿಯರ ಭೂಮಿಯನ್ನು ಅತಿಕ್ರಮಣ ಮಾಡಿ ಕೊಂಡಿದ್ದಾರೆ.
- ಇವರ ಮೇಲೆ ಆಧುನೀಕರಣ ಮತ್ತು ಜಾಗತೀಕರಣದ ಪ್ರಭಾವ ಬೀರಿದೆ.
- ಸಮುದಾಯದವರು ಒಂದೆಡೆ ಸೇರಲು ಸಮುದಾಯ ಭವನವಿಲ್ಲ.
- ಕಾಲೋನಿಯಲ್ಲಿ ಒಳಚರಂಡಿ ವ್ಯವಸ್ಥೆ ಆಗಬೇಕಾಗಿದೆ.
- ಈ ಸಮುದಾಯದ ಯುವಕರಲ್ಲಿ ಸಾಮಾಜಿಕ ಜಾಗ್ರತೆ ಮೂಡಿಸಬೇಕು.
- ಸರ್ಕಾರದ ಯಾವುದೇ ಅಭಿವೃದ್ಧಿಯೋಜನೆಗಳು ಆ ಸಮುದಾಯದವರಿಗೆ ಹೆಚ್ಚು ಆದ್ಯತೆ ನೀಡಬೇಕು.
- ಕಂಪ್ಲಿ ಪಟ್ಟಣ ಪ್ರದೇಶವಾದ್ದರಿಂದ ರುದ್ರಭೂಮಿಯ ಸಮಸ್ಯೆ ಕಂಡುಬರುತ್ತದೆ.
- ಮಹಿಳಾ ಸ್ವ-ಸಹಾಯ ಗುಂಪುಗಳನ್ನು ಸ್ಥಾಪಿಸಿ ಅವರಿಗೆ ಕರಕುಶಲ ತರಬೇತಿಗಳನ್ನು ನೀಡುವ ಕಾರ್ಯಕ್ರಮಗಳು ಆಗಬೇಕಿದೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು

೨. ಮಾಹಿತಿದಾರರ ವಿವರ

೩. ಅಂಕಿ ಅಂಶಗಳ ಪಟ್ಟಿ

೪. ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

೧. ಉಷಾ ಪಾಟಕ್, ವೇಷಭೂಷಣ ಪ್ರಸಾಧನ, ಹೈಪಾಜೆ ಪ್ರಕಾಶನ, ಮೈಸೂರು, ೨೦೦೫

೨. ಕಟ್ಟಿ ಎ.ಆರ್., ಭಾರತೀಯ ಸಮಾಜ ಅಧ್ಯಯನ, ವಿಜಯ ಪಬ್ಲಿಕೇಷನ್ಸ್, ಗದಗ, ೧೯೯೦

೩. ಕಾಳೇಗೌಡ ನಾಗವಾರ, ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

೪. ಕೇಶವನ್ ಪ್ರಸಾದ್ ಕೆ. ಮರಟ್ಟಿ, ಗಂಗಾಧರ ದೈವಜ್ಞ (ಸಂ) ಬುಡಕಟ್ಟು ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೧೩

೫. ಕುಮುದ ಬಿ ಸುಶೀಲಪ್ಪ, ಹಕ್ಕಿಪಿಕ್ಕಿಯರು, ಕನ್ನಡ ಭಾರತಿ ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ೨೦೦೪

೬. ಖಂಡೋಬಾ ಪಿ.ಕೆ., ಗಿರಿಜನ ಸಿರಿ, ಖಂಡೋಬ ಅಭಿನಂದನಾ ಸಮಿತಿ, ೨೦೦೩

೭. ಚಂದ್ರಶೇಖರ ಟಿ.ಆರ್., ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೭

೮. ಚಲುವರಾಜು, ಜುಂಜಪ್ಪನ ಮಹಾಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೭

೯. ಚಿನ್ನಸ್ವಾಮಿ ಸೊಸಲೆ ಎನ್., ದಲಿತರ ಬದುಕು ಮೆಲಕು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೧೩

೧೦. ಡೊಮಿನಿಕ್, ಜಾಗತೀಕರಣ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು, ಸಖಿ ಪ್ರಕಾಶನ, ಹೊಸಪೇಟೆ, ೨೦೦೭

೧೧. ತಾರಿಹಳ್ಳಿ ಹನುಮಂತಪ್ಪ, ಮಾನವ ಮತ್ತು ಸಾಂಸ್ಕೃತಿಕ ಪಲ್ಲಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೨೦೦೨

೧೨. ತಾರಿಹಳ್ಳಿ ಹನುಮಂತಪ್ಪ, ಕರ್ನಾಟಕ ಬುಡಕಟ್ಟು ಸಮುದಾಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೧೦

೧೩. ದೇವೇಂದ್ರ ಕುಮಾರ ಹಕಾರಿ, ಸಂಧ್ಯಾ ರೆಡ್ಡಿ ಕೆ.ಆರ್., (ಸಂ) ಗ್ರಾಮೀಣ ಉಡುಗೆ ತೊಡುಗೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೦

೧೪. ನಂಜಮ್ಮಣ್ಣಿ ಎಂ., ಭಾರತೀಯ ಸಾಮಾಜಿಕ ಸಂಸ್ಥೆಗಳು, ನಿರ್ದೇಶಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೩

೧೫. ನಾರಾಯಣ ವಿಶ್ವ ಎಂ., ಸಮಾಜಶಾಸ್ತ್ರ, ಚೇತನ ಬುಕ್ ಹೌಸ್, ೧೯೮೭

೧೬. ನಾಯಕ ಡಿ.ಬಿ., ದೇಸಿ ಸಂಸ್ಕೃತಿ, ಬಂಜಾರ ಪ್ರಕಾಶನ, ಗುಲಬರ್ಗಾ, ೨೦೦೨

೧೭. ನರಸಿಂಹ ಸ್ವಾಮಿ ಕೆ.ಎಸ್., (ಅನು) ಮೂಲ: ವೆರಿಯರ್ ಎಲ್ವಿನ್, ಪ್ರಪಂಚದ ಬಾಲ್ಯದಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್, ಮೈಸೂರು, ೧೯೬೫

೧೮. ಪ್ರಶಾಂತ್ ಹೆಚ್.ಡಿ., ಜನಸಮುದಾಯ ಸಂಪುಟ, ಕರ್ನಾಟಕ ರಾಜ್ಯಕೋಶ–೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦

೧೯. ಪ್ರಹ್ಲಾದ ಬೆಟಗೇರಿ, ಅಡವಿಚೆಂಚರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೨೦. ಪ್ರಭಾಕರ ಎ.ಎಸ್., ಚಂದ್ರಕಾಂತ ಟಿ.ಎನ್., (ಸಂ) ಡೊಂಬರು : ಒಂದು ಚಾರಿತ್ರಿಕ ಹಿನ್ನೋಟ, ಸಿದ್ದಾರ್ಥ ಪ್ರಕಾಶನ, ಹೊಸಪೇಟೆ, ೨೦೦೬

೨೧. ಪ್ರಭಾಕರ ಎ.ಎಸ್., ಆದಿವಾಸಿ ಆಖ್ಯಾನ, ಸಿದ್ದಾರ್ಥ ಪ್ರಕಾಶನ, ಹೊಸಪೇಟೆ, ೨೦೦೬

೨೨. ಫ್ರೆಡರಿಕ್ ಏಂಗಲ್ಸ್, ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯಗಳ ಉಗಮ, ೧೮೮೯

೨೩. ಪಾಟೀಲ ಎಸ್.ಸಿ., ಕರ್ನಾಟಕ ಜನಪದ ಚಿತ್ರಕಲೆ, ಶ್ರೀ ಜಗದ್ಗುರು ತೊಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೩

೨೪. ಪಾಟೀಲ. ಎಸ್.ಸಿ., ಹಚ್ಚೆ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡಭವನ, ೨೦೦೪

೨೫. ಬರಗೂರು ರಾಮಚಂದ್ರಪ್ಪ (ಸಂ), ಶ್ರೀನಿವಾಸ ರಾಜು ಬಿ., ಬಸವರಾಜು ಕಾಲ್ಗುಡಿ (ಸಂ) ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೦೨

೨೬. ಭಂಡಾರಿ ಆರ್.ಎ., ವರ್ಣದಿಂದ ವರ್ಗದ ಕಡೆಗೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩

೨೭. ಭೈರಪ್ಪ ಕೆ., ಸಮಾಜಶಾಸ್ತ್ರ, ಸಾಮಾಜಿಕ ಕ್ರಮ ಮತ್ತು ಸಾಮಾಜಿಕ ಬದಲಾವಣೆ ಪ್ರಕಾಶನ ಸಾಹಿತ್ಯ ಸುಬ್ಬರಾವ್, ೧೯೯೨

೨೮. ಮಹಾದೇವ ಸಿ., ಕರ್ನಾಟಕ ಪುರಾತತ್ವ ಶೋಧ, ಶ್ರೀ ಲಕ್ಷ್ಮಿ ಪ್ರಕಾಶನ ಶ್ರೀರಂಗಪಟ್ಟಣ, ೨೦೦೧

೨೯. ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

೩೦. ಮೇತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೬

೩೧. ಮಹಾದೇವ ಸಿ., ಸುಬ್ಬಣ್ಣ ರೈ ಎ., ಮಾಧವ ಪೆರಾಜೆ, ಹೊಸಪೇಟೆ ತಾಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨

೩೨. ಯರ್ರಪ್ಪ ಡಿ., ಅಲೆಮಾರಿ ಕುರುಬ,

೩೩. ರಮೇಶ ಸ.ಚಿ., ಶಿಕಾರಿ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೫

೩೪. ರಮೇಶ ಸ.ಚಿ., ಅಲೆಮಾರಿಗಳ ಸ್ಥಿತಿಗತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೫

೩೫. ರಾಧಾಕೃಷ್ಣ ಸರ್ವಪಲ್ಲಿ, ಯುಗಯಾತ್ರೆ, ಭಾರತೀಯ ಸಂಸ್ಕೃತಿ, ಸಂಪುಟ–೧, ೧೯೭೦

೩೬. ರುದ್ರಪ್ಪ ರ.ಹ., ಬಂಗಿದೊಡ್ಡ ಮಂಜುನಾಥ (ಸಂ) ಕಂಪ್ಲಿ, ಭುವನೇಶ್ವರಿ ಪ್ರಕಾಶನ, ಕನ್ನಡ ಹಿತರಕ್ಷಕ ಸಂಘ ಕಂಪ್ಲಿ, ೨೦೦೫

೩೭. ರಾಜಪ್ಪ ದಳವಾಯಿ, ಹಕ್ಕಿಪಿಕ್ಕಿಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೩೮. ಲಕ್ಷ್ಮಣ್ ತೆಲಗಾವಿ, ಸ್ಥಳೀಯ ಚರಿತ್ರೆ ಅಧ್ಯಯನ ತಾತ್ವಿಕತೆ ಮತ್ತು ಸ್ವರೂಪ, ೨೦೦೭

೩೯. ಲಕ್ಕಿಪೃಥ್ವಿರಾಜ್, ಶಿಕಾರಿರಾಮು ಎಚ್.ಪಿ., ಪಾರ್ಧಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮

೪೦. ಲಕ್ಕಪ್ಪಗೌಡ ಹೆಚ್.ಜೆ., (ಸಂ), ಕರ್ನಾಟಕ ಬುಡಕಟ್ಟುಗಳು ಸಂಪುಟ–೨, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ೨೦೦೦

೪೧. ಶಂಕರರಾವ್ ಚ.ನಾ., ಸಮಾಜಶಾಸ್ತ್ರದ ಮೂಲತತ್ವಗಳು, ಜೈಭಾರತ ಪ್ರಕಾಶನ, ೨೦೧೦

English Books

1. Bhat, Chandrashekar, Social Adjustment and change the wadders, in Misra P.K., and K.C. Malhothra (Ed.) Indian Nomads Culcuttsa: Anthropological Survey of India, 1982

2. Committee on Plan Projects (Ed) Tribal and Peasent Economics, New York, Natural Histroy press 1967

3. Enthaven R.E., The Tribes and Castes of Bombay, Vol-III, Bombay Government of Bombay Presidence, 1992

4. Eliwin Veerier, Leaves from the Jungle, Delhi Oxford University, Press, Bombay, Culcutta, Madras, 1992

5. Evans Prsfehard E.E., Kinship and the Local Community among the NEVER A.R. Radclitte Brown and D. Forle (ed) Atricum Systems of Kinship and Marriage, Oxford University, Press, 1990

6. Ghurirye G.S., The Sheduleds Tribes, Bombay Popular prakash on 1959

7. Ghurrye G.S., Caste and Race in India, Bombay Popolur, 1990

8. Governament of Mysore, Mysore Gazetter, Bellary (dist) , 1972

9. Havanoor L.G., Karnataka Backward Class Commission Report

10. Herskovit M.J., Cultural Anthropology Abridged revision of and his works, 1974

11. Iyer A.K., Tribes and Castes of Cochin, New Delhi, COSMO Publication, 1987

12. Mann R.S. Hakkipikki Trapper and Seller (Calcutta) Anthropological Survey of India, 1980

13. Malinowski B.A., Scientific Theory of Culture Chapel Hill, North Carolina University Press, 1944

14. Nanjundaiah H.V., and L.K. Ananthakrishna Iyer, The Mysore Tribes and Castes, Vol-II, Mysore University of Mysore Press, 1928

15. Radliffe Brown A.R., Structure and Fonction in Primitive Socieity, London, The English Language Books Society and Cohen and west Ltd., 1964.

16. Ramachandra Guha, Savaging the Civilized, Oxford University, press, 2001

17. Spochr, A. Changing Kinship Systems, Anthropologic Series Feld Mus Nat Host XXXIII No. 1, 1947

18. Thurston Edger, Enthnographic Notes in Southern India, Madras Governement press, 1909

19. Thruston Edgar, Castes and Tribes of Southern India, Vol-IV, Madrass Press, 1909

20. Triabl World Verrior Elwen An Autobiography, Oxford University, Third Edition, 1997

ooo

21. Weber Max The Theory of Economic and Social Organization, (Tr) by A.M. Henderson and Talcutt Persons, Glenive Frce press, 1947

22. Singh K.S., (Ed) Lama Kathu in Tribal and Folk Tredition of India Birendranth Datta, Anthropological Survey of India, 1998

23. Srinivas M.N., Caste in Modern India, Media Promters and Publishers Pvt. Ltd., Bombay, 1992

24. Stephen Fuchs, At the Bottom of Indian Society, Munshiram Manoharlal Publisher Pvt., Ltd., 1981

25. John S., Sociology 4th (Ed) Macionis, Prentice Hall Enzle Word clitts, New Jersy, 1993

26. Ravi Prasad D.M., Changealogy, Maitrega publications Warangal, 1996

27. Sociology champion/Hastings/Harris, University of Tehhejee, New York.

Gezetters

1. Bellary District Gazetter
2. India Gazetter
3. Karnatka State Gazetter
4. Kannada-English Dictionary

ನಿಘಂಟುಗಳು

೧. ಇಂಗ್ಲಿಷ್ ಕನ್ನಡ ನಿಘಂಟು, ಮೈಸೂರು ವಿಶ್ವವಿದ್ಯಾಲಯ, ೧೯೮೫

೨. ಕನ್ನಡ ಇಂಗ್ಲಿಷ್ ನಿಘಂಟು, ರೇವರೆಂಡ್ ಎಫ್ ಕಿಟಲ್, ಏಷಿಯಾನ್ ಎಜುಕೇಷನ್ ಸರ್ವಿಸಸ್, ನ್ಯೂಡೆಲ್ಲಿ, ಮದ್ರಾಸ್, ೧೯೯೩

೩. ಕನ್ನಡ ರತ್ನಕೋಶ

೪. ಸಂಕ್ಷಿಪ್ತ ಕನ್ನಡ ನಿಘಂಟು

ಮಾಹಿತಿದಾರರ ವಿವರA

ಕ್ರ.ಸಂ.	ಹೆಸರು ಮತ್ತು ವಿಳಾಸ	ಲಿಂಗ	ವಯಸ್ಸು	ಬೆಡಗು	ಉದ್ಯೋಗ
೧.	ಶಿಕಾರಿ ರಾಮು ತಂದೆ ಕಂಸಪ್ಪ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಗಂ	೫೦	ಸಾವಂಡಿಯಾ	ಗ್ರಂಥಾಲಯ ಪಾಲಕ
೨.	ಶ್ರೀಕಾಂತ್ ತಂದೆ ಯಲ್ಲಪ್ಪ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಗಂ	೫೦	ಖೋಡಿಯಾರ	ಅಧ್ಯಕ್ಷರು
೩.	ಪೂಜಾರಿ ಈರು ತಂದೆ ಜಲ್ಲು ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಗಂ	೫೫	ಕೊರಬಿಯಾ	ಪೂಜಾರಿ
೪.	ಸೀತಮ್ಮ ಗಂ. ಪೂಜಾರಿ ಈರು ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಹೆ	೫೩	ಕೊರಬಿಯಾ	ಕೂಲಿ
೫.	ರತ್ನಮ್ಮ ಗಂ. ಯಲ್ಲಪ್ಪ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಹೆ	೭೦	ಖೋಡಿಯಾರ	ಕೂಲಿ
೬	ನಾಗರಾಜ ತಂದೆ ಅಂಜಿನಪ್ಪ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಗಂ	೩೦	ಸಾವಂಡಿಯಾ	ಕೂಲಿ
೭	ಪುತುನಾ ತಂದೆ ಅಂಜಿನಪ್ಪ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಗಂ	೪೦	ಸಾವಂಡಿಯಾ	ಕೂಲಿ
೮.	ಮಹಾಲಕ್ಷ್ಮೀ ಗಂಡ ಅಂಜನಿ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಹೆ	೩೫	ಸಾವಂಡಿಯಾ	ಕೂಲಿ
೯.	ಸುಶೀಲಮ್ಮ ಗಂಡ ಸುರೇಶ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಹೆ	೩೦	ಸಾವಂಡಿಯಾ	ಕೂಲಿ
೧೦.	ಲತಾ ಗಂ. ಮೋಹನ್ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಹೆ	೪೦	ಖೋಡಿಯಾರ	ಗೃಹಿಣಿ
೧೧.	ಗಿರಿಜಮ್ಮ ಗಂ. ಕಸ್ತೂರಿ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಹೆ	೫೩	ಸಾವಂಡಿಯಾ	ಕೂಲಿ
೧೨.	ಪೂಜಾರಿ ಶಂಕ್ರ ತಂದೆ ಜಲ್ಲು ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಗಂ	೫೨	ಕೊರಬಿಯಾ	ಪೂಜಾರಿ

ಕ್ರಸಂ.	ಹೆಸರು ಮತ್ತು ವಿಳಾಸ	ಲಿಂಗ	ವಯಸ್ಸು	ಬೆಡಗು	ಉದ್ಯೋಗ
೧೩.	ಸುಗುಣಮ್ಮ ಗಂ. ಗಲ್ಲು ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಹೆ	೫೦	ಕೊರಬಿಯಾ	ಕೂಲಿ
೧೪.	ಶೋಭಾ ಗಂ. ರಾಮಾಂಜನಿ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಹೆ	೪೫	ಕೊರಬಿಯಾ	ಕೂಲಿ
೧೫.	ಪದ್ಮನಾಭ ತಂದೆ ರಾಮು ಸಂತೆ ಮೈದಾನ, ಬಳ್ಳಾರಿ	ಗಂ	೩೮	ಖೋಡಿಯಾರ	ಪೆಂಟರ್
೧೬.	ನೀಲಮ್ಮ ಗಂ. ರುದ್ರಪ್ಪ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಹೆ	೩೦	ಸಾವಂಡಿಯಾ	ಕೂಲಿ
೧೭.	ರಾಜಕುಮಾರ ತಂದೆ ಶಿವಪ್ಪ ಕೊಟಾಲ ರಸ್ತೆ, ಕಂಪ್ಲಿ	ಗಂ	೪೮	ಲಿಂಗಾಯತ	ಶಿಕ್ಷಕರು
೧೮.	ಶಿಕಾರಿ ಮಾರೆಪ್ಪ ತಂದೆ ಬಾಲಪ್ಪ ಕಾರಿಗನೂರು	ಗಂ	೬೦	ಸಾವಂಡಿಯಾ	ಈರ
೧೯.	ಶಿವಪ್ಪ ತಂದೆ ನಿಂಗಪ್ಪ ಕಾರಿಗನೂರು	ಗಂ	೪೦	ಹರಖತೀಯಾ	ಕೂಲಿ
೨೦.	ಸೋಮವ್ವ ಗಂ. ಮಾರಪ್ಪ ಕಾರಿಗನೂರು	ಹೆ	೪೮	ಹರಖತೀಯಾ	ಕೂಲಿ
೨೧.	ನಿಂಗಪ್ಪ ಸೆಟ್ಲಮೆಂಟ್, ಗದಗ	ಗಂ	೫೮	ಪಿಂಪಳಾಜಾ	ಪೂಜಾರಿ
೨೨.	ನೇಚಪ್ಪ ಸೆಟ್ಲಮೆಂಟ್, ಗದಗ	ಗಂ	೬೨	ಪಿಂಪಳಾಜಾ	ಪೂಜಾರಿ
೨೩.	ಯಮುನವ್ವ ಗಂ. ನೇಚಪ್ಪ ಸೆಟ್ಲಮೆಂಟ್, ಗದಗ	ಹೆ	೫೮	ಪಿಂಪಳಾಜಾ	ಕೂಲಿ
೨೪.	ಜಲಾಲ್ ಮಚಪ್ಪ ಕಟ್ಟಿಮನಿ ತಿಮ್ಮಾಪುರ, ಗದಗ	ಗಂ	೬೦	ಪಿಂಪಳಾಜಾ	ಸಮಾಜ ಸೇವಕರು
೨೫.	ಕವಲ ತಂದೆ ಧನ್ಯ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಗಂ	೪೦	ಖೋಡಿಯಾರ	ಸಮಾಜ ಸೇವಕರು

ಕ್ರ.ಸಂ.	ಹೆಸರು ಮತ್ತು ವಿಳಾಸ	ಲಿಂಗ	ವಯಸ್ಸು	ಬೆಡಗು	ಉದ್ಯೋಗ
೨೬.	ಗಂಗು ತಂದೆ ಅಂಬು ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಗಂ	೩೫	ಕೊರಬಿಯಾ	ಕಟ್ಟಿಮನೆಗೌಡ
೨೭.	ಮಾರುತಿ ತಂದೆ ಸಂದರ್ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಗಂ	೩೪	ಕೊರಬಿಯಾ	ಕೂಲಿ
೨೮.	ನಾಗೇಶ್ ತಂದೆ ಭೈರಪ್ಪ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಗಂ	೩೭	ಕೊರಬಿಯಾ	ಕೂಲಿ
೨೯.	ಬಾಲಪ್ಪ ತಂದೆ ಚವ್ಹಾಣ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಗಂ	೪೦	ಕೊರಬಿಯಾ	ಕೂಲಿ
೩೦.	ರಾಜಮ್ಮ ಗಂಡ ಭೈರಪ್ಪ ಹಕ್ಕಿಪಿಕ್ಕಿ ಕಾಲೋನಿ, ಕಂಪ್ಲಿ	ಹೆ	೪೭	ಕೊರಬಿಯಾ	ಕೂಲಿ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ –೫೮೩ ೨೭೬

ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಬದಲಾವಣೆ (ಕಂಪ್ಲಿಯ ಹಕ್ಕಿಪಿಕ್ಕಿ ಕಾಲೋನಿಯನ್ನು ಅನುಲಕ್ಷಿಸಿ)

೧. ಸಾಮಾನ್ಯ ಮಾಹಿತಿ

ಎ. ಸಮೀಕ್ಷೆಯ ದಿನಾಂಕ

ಬಿ. ಒಳಪಂಗಡ :

ಸಿ. ಬೆಡಗು :

ಡಿ. ಮಾತೃಭಾಷೆ

ಇ. ಮನೆದೇವರು / ದೈವ

ಇ. ಕುಲಚಿಹ್ನೆ

ಎಫ್. ಮನೆತನದ ಹೆಸರು

ಜಿ. ಕು.ಗ್ರಾಮ / ಗ್ರಾಮ / ನಗರ

ಎಚ್. ವಾರ್ಡ್

ಐ. ಪಂಚಾಯತಿ

ಜೆ. ತಾಲೂಕು

ಕೆ. ಜಿಲ್ಲೆ

ಎಲ್. ಭೂಹಿಡುವಳಿ (ಎಕರೆಗಳಲ್ಲಿ)

೧. ಒಣ :

೨. ನೀರಾವರಿ :

೧೧. ವೈಯಕ್ತಿಕ ಮಾಹಿತಿ

ಕ್ರ.ಸಂ.	ಸದಸ್ಯರ ಹೆಸರುಗಳು	ಸಂಬಂಧ	ಲಿಂಗ	ವಯಸ್ಸು	ಶಿಕ್ಷಣ	ವೈವಾಹಿಕ ಸ್ಥಾನಮಾನ	ಕಸಬು	ಸರ್ಕಾರಿ ಸೌಲಭ್ಯಗಳು ( )			
								ಓಟಿನಕಾರ್ಡ	ವಿಧವಾ ವೇತನ	ಅಂಗವಿಕಲ	ಶಿಷ್ಯವೇತನ
೧		ಮುಖ್ಯಸ್ಥ/ಮುಖ್ಯಸ್ಥರು									
೨											
೩											
೪											
೫											
೬											
೭											
೮											
೯											
೧೦											
೧೧											
೧೨											

ಒ. ಪಶುಸಂಪತ್ತು (ಸಂಖ್ಯೆಗಳಲ್ಲಿ)

೧. ಎತ್ತು, ಹೋರಿ :

೨. ಆಕಳು, ಕರು :

೩. ಎಮ್ಮೆ, ಕೋಣ :

೪. ಕುರಿ :

೫. ಮೇಕೆ :

೬. ಕೋಳಿ :

ಪಿ. ಮನೆ ವಿವರ

೧. ಗುಡಿಸಲು

೨. ಟಿನ್‌ಮನೆ

೩. ದಾಬಾ ಮಾಳಿಗೆ

೪. ಆರ್.ಸಿ.ಸಿ.

೫. ಹೆಂಚಿನ ಮನೆ

೬. ಆಶ್ರಯ ಮನೆ

೭. ಬಾಡಿಗೆ ಮನೆ

ಕ್ಯೂ. ಇತರೆ ಸೌಲಭ್ಯಗಳು

೧. ಪಡಿತರ ಚೀಟಿ

೨. ಗ್ಯಾಸ್

೩. ನಲ್ಲಿ

೪. ಶೌಚಾಲಯ

೫. ಸ್ನಾನಗೃಹ

೬. ಸೈಕಲ್

೭. ರೇಡಿಯೋ

೮. ಟೇಪ್ ರಿಕಾರ್ಡರ್

೯. ಟಿ.ವಿ.

೧೦. ದೂರವಾಣಿ

೧೧. ಮೋಟರ್ ಸೈಕಲ್

೧೨. ಇತರೆ

ಮಾರ್ಗದರ್ಶಕರು

ಡಾ. ಚಲುವರಾಜು, ಸಹಪ್ರಾಧ್ಯಾಪಕರು

ಸಂಶೋಧಕರು

ನಾಗೇಶ ಎಂ

ಮಾಹಿತಿ ದಾಖಲೆದಾರರ ಸಹಿ ಮತ್ತು ವಿಳಾಸ

ಅಂಕಿಅಂಶಗಳು ೧: ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯದ ಬೆಡಗುವಾರು, ಲಿಂಗವಾರು ಜನಸಂಖ್ಯೆ ಹಾಗೂ ವಯೋಮಾನ

ಕ್ರ.ಸಂ.	ಬೆಡಗುಗಳು	ಕುಟುಂಬ	ಜನಸಂಖ್ಯೆ			ವಯೋಗುಂಪು														
						೦ - ೫			೬ - ೧೭			೧೮-೪೦			೪೧-೬೦			೬೧ಮೇಲ್ಪಟ್ಟು		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಇಕೋತಿಯಾ	೫	೧೮	೧೫	೩೩	೭	೩	೧೦	೪	೫	೯	೫	೮	೧೩	೧		೧	೧		೧
೨	ಕೋರಬಿಯಾ	೪೧	೯೯	೧೦೪	೨೦೩	೧೩	೧೫	೨೮	೨೦	೩೨	೫೨	೫೨	೪೭	೯೯	೧೦	೭	೧೭	೩	೪	೭
೩	ಖೋಡಿಯಾರ	೨೦	೫೪	೫೦	೧೦೪	೪	೫	೧೦	೨೨	೧೫	೩೭	೨೧	೨೩	೪೪	೬	೫	೧೧		೨	೨
೪	ಪಿಂಪಳಜಾ	೭	೧೮	೨೩	೪೧	೫	೫	೧೦	೫	೯	೧೪	೫	೭	೧೨	೩	೨	೫			
೫	ಸಾವಂಡಿಯಾ	೨೩	೬೫	೭೨	೧೩೭	೧೧	೧೩	೨೪	೧೮	೧೬	೩೪	೨೭	೩೪	೬೧	೯	೮	೧೭	೧		೧
	ಒಟ್ಟು	೯೬	೨೫೪	೨೬೪	೫೧೮	೪೦	೪೧	೮೨	೬೯	೭೭	೧೪೬	೧೧೦	೧೧೯	೨೨೯	೨೯	೨೨	೫೧	೫	೬	೧೧

ಅಂಕಿಅಂಶಗಳು ೨: ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯದ ಬೆಡಗುವಾರು, ಲಿಂಗವಾರು ವೈವಾಹಿಕ ಸ್ಥಾನಮಾನ ಹಾಗೂ ಶೈಕ್ಷಣಿಕ ಮಟ್ಟ

ಕ್ರ.ಸಂ.	ಬೆಡಗುಗಳು	ಕುಟುಂಬ	ವೈವಾಹಿಕ ಸ್ಥಾನಮಾನ									ಶೈಕ್ಷಣಿಕ ಮಟ್ಟ														
			ಅವಿವಾಹಿತ			ಮದುವೆಯಾದ			ವಿಧುರ ಮತ್ತು ವಿಧವೆಯರು			ಪ್ರಾಥಮಿಕ			ಮಾಧ್ಯಮಿಕ			ಪ್ರೌಢಶಾಲೆ			ಪದವಿಪೂರ್ವ			ಇತರೆ		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಇಕೋತಿಯಾ	೫	೧೩	೧೦	೨೩	೫	೫	೧೦				೨	೨	೪	೪	೧	೫		೧	೧						
೨	ಕೋರಬಿಯಾ	೪೧	೫೭	೫೫	೧೧೨	೪೦	೪೦	೮೦	೨	೯	೧೧	೧೦	೬	೧೬	೨	೨	೪	೬		೬						
೩	ಖೋಡಿಯಾರ	೨೦	೩೪	೨೩	೫೭	೨೦	೨೦	೪೦		೭	೭	೬	೬	೧೨	೯	೩	೧೨	೧೦	೨	೧೨						
೪	ಪಿಂಪಳಜಾ	೭	೧೦	೧೪	೨೪	೭	೭	೧೪	೧	೨	೩	೫	೧	೬	೧	೧	೨		೧	೧						
೫	ಸಾವಂಡಿಯಾ	೨೩	೩೫	೩೬	೭೧	೨೮	೨೮	೫೬	೨	೮	೧೦	೫	೮	೧೩	೬	೩	೯	೬		೬	೧		೧			
ಒಟ್ಟು		೯೬	೧೪೯	೧೩೮	೨೮೭	೧೦೦	೧೦೦	೨೦೦	೫	೨೬	೩೧	೨೮	೨೩	೫೧	೨೨	೧೦	೩೨	೨೨	೪	೨೬	೧		೧			

ಅಂಕಿಅಂಶಗಳು ೩: ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯದ ಬೆಡಗುವಾರು, ಲಿಂಗವಾರು ವಿವಿಧ ಬಗೆಯ ಕಸುಬುಗಳು

ಕ್ರ.ಸಂ.	ಬೆಡಗುಗಳು	ಕುಟುಂಬ	ಕಸುಬುಗಳು																									
			ಕೃಷಿ			ಕೃಷಿಕೂಲಿ			ಧಾರ್ಮಿಕ ಭಿಕ್ಷಾಟನೆ			ದಿನಗೂಲಿ			ಗಾರೆಕೆಲಸ			ಹಂದಿ ಸಾಕಾಣಿಕೆ			ಸರ್ಕಾರಿ			ತಾತ್ಕಾಲಿಕ			ಇತರೆ		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಇಕೋತಿಯಾ	೫				೬	೭	೧೨		೨	೨													೧		೧			
೨	ಕೋರಬಿಯಾ	೪೧				೪೩	೬೩	೧೦೬	೨	೩	೫	೩		೩	೨೨	೧	೨೩											೧	೧
೩	ಮೋಡಿಯಾರ	೨೦				೧೮	೨೭	೪೫		೧	೧	೧		೧	೮		೮	೧	೧	೨	೨		೨						
೪	ಪಿಂಪಳಜಾ	೭				೬	೧೧	೧೭		೨	೨				೨		೨												
೫	ಸಾವಂಡಿಯಾ	೨೩				೨೮	೪೬	೭೪							೧೨		೧೨				೧		೧						
	ಒಟ್ಟು	೯೬				೧೦೧	೧೫೪	೨೫೪	೨	೮	೧೦	೪		೪	೪೪	೧	೪೫	೧	೧	೨	೩		೩	೧		೧		೧	೧

ಅಂಕಿಅಂಶಗಳು ೪: ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯದ ಬೆಡಗುವಾರು, ಲಿಂಗವಾರು ಸರ್ಕಾರಿ ಸೌಲಭ್ಯಗಳು ಹಾಗೂ ಭೂಹಿಡುವಳಿ, ಪಶುಸಂಪತ್ತು

ಕ್ರ.ಸಂ.	ಬೆಡಗುಗಳು	ಕುಟುಂಬ	ಸರ್ಕಾರಿ ಸೌಲಭ್ಯಗಳು												ಭೂ ಹಿಡುವಳಿ ಗುಂಟೆಗಳಲ್ಲಿ				ಪಶುಸಂಪತ್ತು						
			ಕುಟುಂಬ ಯೋಜನೆ			ಓಟಿನ ಕಾರ್ಡ್			ವಿಧವಾವೇತನ			ಅಂಗವಿಕಲ													
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಒಣ	ನೀರಾವರಿ	ಒಟ್ಟು	ಭೂರಹಿತ	ಎತ್ತು	ಆಕಳು	ಎಮ್ಮೆ	ಕುರಿ	ಮೇಕೆ	ಕೋಳಿ	ಹಂದಿ
೧	ಇಕೋತಿಯಾ	೫				೬	೫	೧೧										೫							
೨	ಕೋರಬಿಯಾ	೪೧				೪೩	೪೩	೮೬		೨	೨							೪೧							
೩	ಖೋಡಿಯಾರ	೨೦				೧೬	೧೯	೩೫										೨೦							೩೦
೪	ಪಿಂಪಳಜಾ	೭				೮	೯	೧೭										೭							
೫	ಸಾವಂಡಿಯಾ	೨೩				೨೩	೨೫	೪೮				೧		೧				೨೩							
	ಒಟ್ಟು	೯೬				೯೬	೧೦೧	೧೯೭		೨	೨	೧		೧				೯೬							೩೦

ಅಂಕಿಅಂಶಗಳು ೫: ಕಂಪ್ಲಿ ಹಕ್ಕಿಪಿಕ್ಕಿ ಸಮುದಾಯದ ಬೆಡಗುವಾರು ಮನೆಗಳ ಮಾದರಿ ಮತ್ತು ಇತರೆ ಸೌಲಭ್ಯಗಳು

ಕ್ರ.ಸಂ.	ಬೆಡಗುಗಳು	ಕುಟುಂಬ	ಮನೆಗಳ ಮಾದರಿ								ನಿವೇಶನ		ಮನೆ		ವಿದ್ಯುತ್		ಸೌಲಭ್ಯಗಳು					
			ಗುಡಾರ	ಗುಡಿಸಲು	ಟಿನ್	ಮಾಳಿಗೆ	ಆರ್.ಸಿ.ಸಿ	ಹಂಚಿನ	ಜನತಾ	ಬಾಡಿಗೆ	ಸ್ವಂತದ್ದು	ಸರ್ಕಾರ	ಸ್ವಂತದ್ದು	ಸರ್ಕಾರ	ಸ್ವಂತದ್ದು	ಸರ್ಕಾರ	ಪಡಿತರ ಚೀಟಿ	ಸ್ನಾನಗೃಹ	ಸೈಕಲ್	ರೇಡಿಯೋ	ಟೇಪರಿಕಾರ್ಡ	ಟಿ.ವಿ.
೧	ಇಕೋತಿಯಾ	೫		೧				೪			೫		೪		೨	೧	೪	೨				೩
೨	ಕೋರಬಿಯಾ	೪೧	೪	೧೨		೧	೨	೨೦		೨	೩೮		೩೦	೧	೧೫	೮	೩೬	೧೬	೬		೧	೧೭
೩	ಖೋಡಿಯಾರ	೨೦	೩			೧	೧೧	೩		೨	೧೫		೧೫		೧೩	೨	೧೬	೧೧	೨		೩	೧೧
೪	ಪಿಂಪಳಜಾ	೭		೨		೨	೧	೨			೭		೭		೧	೩	೬	೪	೧			೩
೫	ಸಾವಂಡಿಯಾ	೨೩	೧	೫		೧	೩	೧೦		೩	೧೯		೧೬		೧೨	೪	೧೯	೧೪	೨		೨	೧೪
	ಒಟ್ಟು	೯೬	೮	೨೦		೫	೧೭	೩೯		೭	೮೪		೭೨	೧	೪೩	೧೮	೮೧	೪೭	೧೧		೬	೪೮

ಛಾಯಾಚಿತ್ರಗಳು



ಕಂಪ್ಲಿ ಹಕ್ಕಿಪಿಕ್ಕಿಯರ ವಸತಿ ಪ್ರದೇಶದ ನೋಟ



ಮೂಲಭೂತ ಸೌಕರ್ಯಗಳಿಲ್ಲದ ಹಕ್ಕಿಪಿಕ್ಕಿಯರ ನೆಲೆ



ವಸತಿ ನಿರ್ಗತಿಕ ಸ್ಥಿತಿ ಹಕ್ಕಿಪಿಕ್ಕಿಯರ ಗುಡಾರ ಗುಡಿಸಲುಗಳು



ಪಶುಪಾಲನೆಯಲ್ಲಿ ತೊಡಗಿರುವ ಕೆಲವು ಹಕ್ಕಿಪಿಕ್ಕಿ ಕುಟುಂಬಗಳು



ಹಕ್ಕಿಪಿಕ್ಕಿಯರ ಪಾರಂಪರಿಕ ಮದುವೆ ಆಚರಣೆ



ಹಬ್ಬ ಆಚರಣೆಗೆ ಸಂಬಂಧಪಟ್ಟಂತೆ ಸಮುದಾಯದ ಧಾರ್ಮಿಕ
ವ್ಯಕ್ತಿಯೊಡನೆ ಚರ್ಚಿಸುತ್ತಿರುವುದು(ಬಂತುಕೆ ಕೇಳುವುದು)



ಶವಸಂಸ್ಕಾರದಲ್ಲಿ ಭಾಗಿಯಾದ ವ್ಯಕ್ತಿಗಳು ಹೆಗಲು ಇಳಿಸುವ
ಆಚರಣೆಯಲ್ಲಿ ತೊಡಗಿರುವುದು



ಸತ್ತ ವ್ಯಕ್ತಿಯ ಆತ್ಮಕ್ಕೆ ಅನ್ನ ನೀರು ಸಮರ್ಪಿಸುವ ಆಚರಣೆಯ ಕ್ರಮ





ತಾಷಾರಾಮ್ ಡೊಳ್ಳು ವಾದ್ಯ ಕಲೆಯಲ್ಲಿ ನಿರತ ಹಕ್ಕಿಪಿಕ್ಕಿ ಯುವಕರು



ಜಿಲ್ಲೆಯ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಹಕ್ಕಿಪಿಕ್ಕಿ ನೃತ್ಯಕಲಾ ತಂಡ



ರಾಜ್ಯಮಟ್ಟದಲ್ಲಿ ಪ್ರದರ್ಶನ ನೀಡಿದ ಕಲಾ ತಂಡ



ಹಕ್ಕಿಪಿಕ್ಕಿ ವಸತಿನೆಲೆಯಲ್ಲಿ ಹೊಸದಾಗಿ ನಿರ್ಮಾಣಗೊಂಡ ತುಳುಜಾ ಭವಾನಿ ದೇವಸ್ಥಾನ.



ದಕ್ಷಿಣ ಭಾರತದ ಹಕ್ಕಿಪಿಕ್ಕಿಯರ ಪ್ರಮುಖ ದೈವ ದಂಡಿನ ದುರುಗಮ್ಮ



ದಂಡಿನ ದುರುಗಮ್ಮದೇವಿಯ ಪಾರಂಪರಿಕ ಪೂಜಾರಿ ಮನೆತನದವರು



ದಂಡಿನ ಮೇಳ-ಗದಗ ನಾಗಸಮುದ್ರದ ದುರುಗಮ್ಮನ ಜಾತ್ರೆಯಲ್ಲಿ
ಪಾಲ್ಗೊಳ್ಳಲು ಬಹುದೂರದಿಂದ ಬಂದಿರುವ ಹಕ್ಕಿಪಿಕ್ಕಿಯರು
ನಿರ್ಮಿಸಿಕೊಂಡ ತಾತ್ಕಾಲಿಕ ಗುಡಾರಗಳು



ಆಚರಣೆಯಲ್ಲಿ ಪಾಲ್ಗೊಂಡಿರುವ ಭಕ್ತರು ದುರುಗಮ್ಮದೇವಿಗೆ
ದೀರ್ಘದಂಡ ನಮಸ್ಕಾರ ಸಲ್ಲಿಸುತ್ತಿರುವುದು.



ದಂಡಿನ ದುರುಗಮ್ಮದೇವಿಯ ಗದ್ದಿಗೆ ನಿರ್ಮಿಸಿರುವ ನಾಗಸಮುದ್ರದ
ಮುಖ್ಯಸ್ಥಳ.



ದೇವರಿಗೆ ಮಧ್ಯ ನೈವೇದ್ಯ ಮಾಡಲು ಸಿದ್ದಗೊಳಿಸಿರುವುದು



ಜಾತ್ರೆಯಲ್ಲಿ ಹಚ್ಚೆಹಾಕಿಸಿಕೊಳ್ಳುತ್ತಿರುವ ಹಕ್ಕಿಪಿಕ್ಕಿ ಸಮುದಾಯದ ಬಾಲಕ



ಕಂಪ್ಲಿಯ ಪೂಜಾರಿ ಈರು ಅವರನ್ನು ಸಂದರ್ಶಿಸುತ್ತಿರುವ ಸಂಶೋಧಕ.